27	VIJAYAPUR	ALIYABAD-II	Shri Gaibusab D Galagali	36	0.21	25.00	Manufacturing of Batteries	11.06.2014
28	VIJAYAPUR	ALIYABAD-II	Shri Abubakar R Bagwan	37	0.48	25.00	Cold Storage	08.07.2013
29	VIJAYAPUR	ALIYABAD-II	Shri Dundappa P Ankola	43 & 81	0.50	25.00	Manufacture of Plastic Pouches &	31.10.2012
30	VIJAYAPUR	ALIYABAD-II	Shri Dyamanagouda S.Kuriyavar	44 & 80	0.41	25.00	Plastic Pouches	20.09.2013

31	VIJAYAPUR	ALIYABAD-II	Akkubai ratansing Pawar	45 & 79	0.50	25.00	Rice Mill	30.07.2013
32	VIJAYAPUR	ALIYABAD-II	Shri Jenu Chokallu Jadhav	46	0.23	25.00	Decorticating of groundnut seeds &	08.04.2013
33	VIJAYAPUR	ALIYABAD-II	Shri Ganapathi .C.Jadhav	47 & 77	0.47	25.00	Decorticating of groundnut seeds &	08.04.2013
34	VIJAYAPUR	ALIYABAD-II	Shri Dhanaseelan Kirubaharan Nadar	48 & 49, 75 & 76	0.81	25.00	Ware House	22.01.2014
35	VIJAYAPUR	ALIYABAD-II	Shri Siddappa G Awaji	50	0.25	25.00	Maize Corn Flakes	12.06.2014
36	VIJAYAPUR	ALIYABAD-II	Shri Balaji.M.Rathod	51	0.25	25.00	Plywood Block	29.02.2016
37	VIJAYAPUR	ALIYABAD-II	Smt Renuka Shivaji Kolurgi	52	0.17	25.00	Stove Sperta Chap, Steel Wayasor	10.06.2014
38	VIJAYAPUR	ALIYABAD-II	M/s Shreya Gruha Udyog Smt Sudharani Girish Nidoni	54	0.12	25.00	Food Processing Project , Roti Making	30.03..2019
39	VIJAYAPUR	ALIYABAD-II	Shri Lalu Punnu Chavan	55 & 70	0.50	25.00	Ware House	30.07.2013
40	VIJAYAPUR	ALIYABAD-II	M/s Ashirwad Enterprises Shri Venkatraj Bhimasing Chavan	56	0.25	25.00	Ware House	30.01.2014
41	VIJAYAPUR	ALIYABAD-II	Shri Shantappa Siddappa Menasinkai	57	0.25	25.00	Decorticating of Groundnut Seeds	27.05.2013
42	VIJAYAPUR	ALIYABAD-II	Shri Mallangouda B Patil	58	0.25	25.00	Rice Mill	20.09.2013
43	VIJAYAPUR	ALIYABAD-II	Shri Adamsanb .M. Mulsavalagi	59	0.30	25.00	Decorticating seeds	27.05.2013
44	VIJAYAPUR	ALIYABAD-II	Smt Geeta Vinod Jigajinagi	60 to 65	2.00	25.00	Warehouse	27.08.2013
45	VIJAYAPUR	ALIYABAD-II	Mr Alekar Raheman	66	0.31	25.00	Tress Grill	28.12.2012
46	VIJAYAPUR	ALIYABAD-II	Shri Basavraj G Nuchhi	67 to 68	0.49	25.00	Ware House	19.12.2011

47	VIJAYAPUR	ALIYABAD-II	Shri Ravichandra H Naik	69	0.26	25.00	Ware House	05.06.2014
48	VIJAYAPUR	ALIYABAD-II	Shri Revansidappa M Mannur	72	0.25	25.00	Noodles	10.07.2014
49	VIJAYAPUR	ALIYABAD-II	Shri Venkatesh Hemachandra Kiranagi	73	0.25	25.00	Shuttle Cock Broom Brushes	23.06.2014
50	VIJAYAPUR	ALIYABAD-II	Shri Anaraya S Biradar	74	0.25	25.00	Dry Grapes Processing and	12.06.2014

51	VIJAYAPUR	ALIYABAD-II	Shri Babu Chokallu Jadhav	78	0.23	25.00	Decorticating of groundnut seeds &	08.04.2013
52	VIJAYAPUR	ALIYABAD-II	Shri Bhimappa A Chabanoor	81/P	0.15	25.00	Plastic Pots & Plastic Items	12.06.2014
53	VIJAYAPUR	ALIYABAD-II	M/s Balaji Dal Mill	83	2.00	25.00	Dal Mill	29.12.2010
54	VIJAYAPUR	ALIYABAD-II	Shri Vinod M Khed	84	0.25	25.00	Dall & Sortex Mill	15.04.2015
55	VIJAYAPUR	ALIYABAD-II	Smt Sujata laxman Doddamani	85 & 96	0.47	25.00	Hallow Bricks & Cement tiles	08.10.2013
56	VIJAYAPUR	ALIYABAD-II	Shri Kesu Pomu Jadhav	86 & 95	0.47	25.00	Decorticating of groundnut seeds &	21.09.2013
57	VIJAYAPUR	ALIYABAD-II	Penshibao Wang	88 to 94	1.63	25.00	Toor Dall Manufacturing	21.03.2013
58	VIJAYAPUR	ALIYABAD-II	M/s Shivapadma Enterpries Shri Kaviraj S Naik	97	0.21	25.00	Ware House	31.01.2014
59	VIJAYAPUR	ALIYABAD-II	M/s Hemachandra Garments	98/A & 98/B	1.42	25.00	Readymade Garments	07.12.2018
60	VIJAYAPUR	ALIYABAD-II	Smt Uma N Hiremath	98/B	0.27	25.00	Decorticating of Groundnut seeds	02.07.2014
61	VIJAYAPUR	ALIYABAD-II	M/s Om Sai Malik	98/C	1.57	25.00	Logistics Warehouse With Cold Storage	07.12.2018
62	VIJAYAPUR	ALIYABAD-II	Shri Arun Govind Karjol	104 & 105	0.71	25.00	Corn Flakes	22.07.2013
63	VIJAYAPUR	ALIYABAD-II	Smt Shridevi Umesh Karjol	106 & 107	0.73	25.00	Raisin Processing & Cold Storage	22.07.2013
64	VIJAYAPUR	ALIYABAD-II	Shri. Vinayak J Kamble	108 to 110	1.37	25.00	Ware House	01.08.2013
65	VIJAYAPUR	ALIYABAD-II	Shri Ganapati Nagappa Honmore	111 to 113	1.14	25.00	Textile Products	12.08.2013
66	VIJAYAPUR	ALIYABAD-II	Prashant I Durga	114	0.44	25.00	Gunny Bags	07.06.2015

67	VIJAYAPUR	ALIYABAD-II	Somashekar Masuti	115	0.44	25.00	Dall Mill	17.04.2015
68	VIJAYAPUR	ALIYABAD-II	Shri Mohansing Dhansing Rathod	116	1.38	25.00	Dall Mill & Sortex Mill	23.01.2014
69	VIJAYAPUR	ALIYABAD-II	Shri Praveen Somashekar Kudagi	117 & 118	0.90	25.00	Ware House	30.01.2013
70	VIJAYAPUR	ALIYABAD-II	Shri Manjunath .K. Mundewadi	119	0.25	25.00	Food Processing	11.03.2015
71	VIJAYAPUR	ALIYABAD-II	Kum Uma Vittalrao Rajagiri	120	0.50	25.00	Agro Products	25.02.2015
72	VIJAYAPUR	ALIYABAD-II	Shri Suresh.T. Angadi	123	0.25	25.00	PVC & Wood Moulded Doors	08.04.2015
73	VIJAYAPUR	ALIYABAD-II	Shri Suresh Dharmu Pawar	124	0.25	25.00	Manufacture of Readymade	23.06.2014
74	VIJAYAPUR	ALIYABAD-II	Shri Chidhanaling C Hiremath	125 & 126	0.45	25.00	Ware House	10.07.2013
75	VIJAYAPUR	ALIYABAD-II	M/s Mallikarjun Industries Shri Siddappa Shivappa Utnal	127	0.25	25.00	Ware House	01.02.2014
76	VIJAYAPUR	ALIYABAD-II	Smt Renuka Nagesh Talikoti	128 & 129	0.45	25.00	Ware House	31.10.2013
77	VIJAYAPUR	ALIYABAD-II	Shri vasantkumar .R. Nayak	130, 131, 132	1.65	25.00	Seeds Processing	04.12.2014
78	VIJAYAPUR	ALIYABAD-II	M/ Majesty Foods Shri Chandrashekar M Mudalagiri	133	0.25	25.00	Ice Cream Cones Waffer Biscuits	22.01.2014
79	VIJAYAPUR	ALIYABAD-II	Shri Avinash Mallikarjun Bilagundi	134 to 139	1.25	25.00	Dall & Sortex Mill	06.01.2014
80	VIJAYAPUR	ALIYABAD-II	M/s Etco Denim Pvt Ltd	226, 229, 237, 238, 239	100	5	Textile Yarn and Denim Fabric	08.07.2010

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
ಬೆಂಗಳೂರು–01.

ಕರ್ನಾಟಕ ಸರ್ಕಾರ

ಸಂಖ್ಯೆ: ಆನಾಸ 90 ಡಿಆರ್ಎ 2020(ಇ-ಆಫೀಸ್)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ, ನೆಲಮಹಡಿ,
ಬೆಂಗಳೂರು, ದಿನಾಂಕ:11.03.2020.

06
13/3/20

ಇವರಿಂದ,

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಇಲಾಖೆ,

ಇವರಿಗೆ,

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ
ವಿಧಾನಸೌಧ.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ರೇವಣ್ಣ ಹೆಚ್.ಡಿ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂ:1743ಕ್ಕೆ ಉತ್ತರ ಒದಗಿಸುವ ಬಗ್ಗೆ.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ರೇವಣ್ಣ ಹೆಚ್.ಡಿ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂ:1743ಕ್ಕೆ ಉತ್ತರದ 350 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ತಮಗೆ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ವಿ.ವೆಂಕಟೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ
ಆಹಾರ, ನಾಗರೀಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಇಲಾಖೆ.

ಪ್ರತಿಯನ್ನು ಮಾಹಿತಿಗಾಗಿ:

1. ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನ ಶಾಸ್ತ್ರ ಇಲಾಖಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನ ಶಾಸ್ತ್ರ ಇಲಾಖೆ, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕಿ. ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನ ಶಾಸ್ತ್ರ ಇಲಾಖೆ, ವಿಕಾಸಸೌಧ, ಬೆಂಗಳೂರು
4. ಸರ್ಕಾದರ ಅಧೀನ ಕಾರ್ಯದರ್ಶಿ, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನ ಶಾಸ್ತ್ರ ಇಲಾಖೆ, ವಿಕಾಸಸೌಧ, ಬೆಂಗಳೂರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1743

ವಿಧಾನ ಸಭೆಯ ಸದಸ್ಯರ ಹೆಸರು : ಶ್ರೀ ರೇವಣ್ಣ ಹೆಚ್.ಡಿ (ಹೊಳೇ ನರಸೀಪುರ)

ಉತ್ತರಿಸಬೇಕಾದ ದಿನಾಂಕ : 13.03.2020

ಉತ್ತರಿಸುವ ಸಚಿವರು : ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ಹಾಸನ ಜಿಲ್ಲೆಯ 07 ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಿಂದ ಪಡಿತರ ಚೀಟಿಗಳನ್ನು ಪಡೆದಿರುವ ಫಲಾನುಭವಿಗಳ ಸಂಖ್ಯೆಯೆಷ್ಟು; (ವಿಧಾನಸಭಾ ಕ್ಷೇತ್ರಾವಾರು ಸಂಪೂರ್ಣ ಮಾಹಿತಿ ನೀಡುವುದು)	ಹಾಸನ ಜಿಲ್ಲೆಯ 07 ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಿಂದ ಪಡಿತರ ಚೀಟಿಗಳನ್ನು ಪಡೆದಿರುವ ಫಲಾನುಭವಿಗಳ ವಿವರ ಈ ಕೆಳಕಂಡಂತಿದೆ.

ಕ್ರ.ಸಂ.	ವಿಧಾನಸಭಾ ಕ್ಷೇತ್ರ	ಪಡಿತರ ಚೀಟಿಗಳನ್ನು ಪಡೆದಿರುವ ಫಲಾನುಭವಿಗಳ ಸಂಖ್ಯೆ			
		ಅಂತ್ಯೋದಯ ಪ.ಚೀ.ಫಲಾನುಭವಿಗಳ ಸಂಖ್ಯೆ	ಆದ್ಯತಾ ಪ.ಚೀ.ಫಲಾನುಭವಿಗಳ ಸಂಖ್ಯೆ	ಆದ್ಯತೇತರ ಪ.ಚೀ.ಫಲಾನುಭವಿಗಳ ಸಂಖ್ಯೆ	ಒಟ್ಟು
1.	ಅರಕಲಗೂಡು	16819	204623	3591	225033
2.	ಅರಸೀಕೆರೆ	13986	212635	3831	230452
3.	ಬೇಲೂರು	14071	185611	2863	202545
4.	ಶ್ರವಣಬೆಳಗೊಳ	14288	201240	5448	220976
5.	ಹಾಸನ	9854	175900	14283	200037
6.	ಹೊಳೆನರಸೀಪುರ	16967	210063	8401	235431
7.	ಸಕಲೇಶಪುರ	15161	177512	6983	199656
	ಒಟ್ಟು	101146	1367584	45400	1514130

ಕ್ರ. ಸಂ	ಪ್ರಶ್ನೆ	ಉತ್ತರ
ಆ	ಜಿಲ್ಲೆಯ ವ್ಯಾಪ್ತಿಯಲ್ಲಿ ಪಡಿತರ ಚೀಟಿಗಳನ್ನು ಹಂಚಲು ಬಾಕಿ ಇರುವ ಫಲಾನುಭವಿಗಳ ಸಂಖ್ಯೆಯೆಷ್ಟು; (ವಿಧಾನಸಭಾ ಕ್ಷೇತ್ರಾವಾರು ಸಂಪೂರ್ಣ ಮಾಹಿತಿ ನೀಡುವುದು)	ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಪಡಿತರ ಚೀಟಿಗಳನ್ನು ಹಂಚಲು ಬಾಕಿ ಇರುವ ಫಲಾನುಭವಿಗಳ ವಿವರ ಈ ಕೆಳಕಂಡಂತಿದೆ.

ಕ್ರ.ಸಂ	ವಿಧಾನಸಭಾ ಕ್ಷೇತ್ರ	ಪಡಿತರ ಚೀಟಿಗಳನ್ನು ಹಂಚಲು ಬಾಕಿ ಇರುವ ಫಲಾನುಭವಿಗಳ ಸಂಖ್ಯೆ	
		ಆದ್ಯತಾ ಪ.ಚೀ ಕೋರಿರುವ ಅರ್ಜಿಗಳ ಸಂಖ್ಯೆ	ಆದ್ಯತೇತರ ಪ.ಚೀ ಕೋರಿರುವ ಅರ್ಜಿಗಳ ಸಂಖ್ಯೆ
1	ಅರಕಲಗೂಡು	297	14
2	ಅರಸೀಕೆರೆ	152	15
3	ಬೇಲೂರು	233	4

4	ಶ್ರವಣಬೆಳಗೊಳ	222	13
5	ಹಾಸನ	895	67
6	ಹೊಳೆನರಸೀಪುರ	14	4
7	ಸಕಲೇಶಪುರ	252	22
	ಒಟ್ಟು	2065	139

ಇ	ಸದರಿ ಜಿಲ್ಲಾ ವ್ಯಾಪ್ತಿಯಡಿ ಪಡಿತರ ಚೀಟಿಗಳನ್ನು ಪಡೆಯಲು ಬಾಕಿ ಇರುವ ಅರ್ಜಿಗಳನ್ನು ಎಷ್ಟು ದಿನಗಳಲ್ಲಿ ವಿಲೇವಾರಿ ಮಾಡಿ ವಿತರಿಸಲಾಗುವುದು; ಈ ಪಡಿತರ ಚೀಟಿಯನ್ನು ಹಂಚಿಕೆ ಮಾಡಲು ಸರ್ಕಾರ ನಿಗದಿಪಡಿಸಿರುವ ಮಾನದಂಡಗಳೇನು? (ಸಂಪೂರ್ಣ ಮಾಹಿತಿ ನೀಡುವುದು)	ಪಡಿತರ ಅರ್ಜಿಗಳನ್ನು 45 ದಿನಗಳ ಒಳಗಾಗಿ ವಿಲೇವಾರಿ ಮಾಡಲಾಗುವುದು. ಸರ್ಕಾರಿ ಆದೇಶ ಸಂಖ್ಯೆ: ಆನಾಸ 116 ಡಿಆರ್ ಎ 2015, ಬೆಂಗಳೂರು, ದಿನಾಂಕ: 25/03/2017 ಮತ್ತು 20.05.2017ರಂತೆ ಈ ಕೆಳಕಂಡ ಹೊರಗಿಡುವ ಮಾನದಂಡಗಳನ್ವಯ, ಆದ್ಯತಾ ಪಡಿತರ ಚೀಟಿ ಪಡೆಯಬಹುದು. 1. ವೇತನವನ್ನು ಗಣನೆಗೆ ತೆಗೆದುಕೊಳ್ಳದೆ ಎಲ್ಲಾ ಖಾಯಂ ನೌಕರರು ಅಂದರೆ, ಸರ್ಕಾರದ ಅಥವಾ ಸರ್ಕಾರದಿಂದ ಅನುದಾನವನ್ನು ಪಡೆಯುತ್ತಿರುವ ಸಂಸ್ಥೆಗಳು ಅಥವಾ ಸರ್ಕಾರಿ ಪ್ರಾಯೋಜಿತ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು/ಮಂಡಳಿಗಳು/ನಿಗಮಗಳು/ಸ್ವಾಯತ್ತ ಸಂಸ್ಥೆಗಳು ಇತ್ಯಾದಿ: ಒಳಗೊಂಡಂತೆ ಆದಾಯ ತೆರಿಗೆ/ಸೇವಾ ತೆರಿಗೆ/ ವ್ಯಾಟ್/ವೃತ್ತಿ ತೆರಿಗೆ ಪಾವತಿಸುವ ಎಲ್ಲಾ ಕುಟುಂಬಗಳು. 2. ಗ್ರಾಮೀಣ ಪ್ರದೇಶದಲ್ಲಿ 3 ಹೆಕ್ಟೇರ್ ಒಣಭೂಮಿ ಅಥವಾ ತತ್ಸಮಾನ ನೀರಾವರಿ ಭೂಮಿ ಹೊಂದಿರುವ ಕುಟುಂಬಗಳು ಅಥವಾ ಗ್ರಾಮೀಣ ಪ್ರದೇಶವನ್ನು ಹೊರತುಪಡಿಸಿ ನಗರ ಪ್ರದೇಶದಲ್ಲಿ 1000 ಚದರ ಅಡಿಗಿಂತಲೂ ಹೆಚ್ಚಿನ ವಿಸ್ತೀರ್ಣದ ಪಕ್ಕಾ ಮನೆಯನ್ನು ಸ್ವಂತವಾಗಿ ಹೊಂದಿರುವ ಕುಟುಂಬಗಳು. 3. ಜೀವನೋಪಾಯಕ್ಕಾಗಿ ಸ್ವತಃ ಓಡಿಸುವ ಒಂದು ವಾಣಿಜ್ಯ ವಾಹನವನ್ನು ಅಂದರೆ ಟ್ರ್ಯಾಕ್ಟರ್, ಮ್ಯಾಕ್ಸಿಕ್ಯಾಬ್, ಟ್ಯಾಕ್ಸಿ ಇತ್ಯಾದಿಗಳನ್ನು ಹೊಂದಿದ ಕುಟುಂಬವನ್ನು ಹೊರತುಪಡಿಸಿ, ನಾಲ್ಕು ಚಕ್ರದ ವಾಹನಗಳನ್ನು ಹೊಂದಿರುವ ಎಲ್ಲಾ ಕುಟುಂಬಗಳು. 4. ಕುಟುಂಬದ ವಾರ್ಷಿಕ ಆದಾಯವು ರೂ.1.20 ಲಕ್ಷ ಹಾಗೂ ಹೆಚ್ಚಿಗೆ ಇರುವ ಕುಟುಂಬಗಳು. ಮೇಲಿನ ಮಾನದಂಡಗಳ ಕ್ರಮ ಸಂಖ್ಯೆ 4ರ ವಾರ್ಷಿಕ ವರಮಾನದ ವಿವರಗಳನ್ನು ಕಂದಾಯ ಇಲಾಖೆಯಿಂದಲೇ ಆನ್ ಲೈನ್ ವ್ಯವಸ್ಥೆಯ ಮೂಲಕ ಪಡೆದು ದಾಖಲಿಸಲಾಗುತ್ತದೆ. ಸರ್ಕಾರವು ಆದ್ಯತಾ (ಪಿಹೆಚ್ ಹೆಚ್) ಪಡಿತರ ಚೀಟಿಗಳನ್ನು ವಿತರಿಸಲು ಮೇಲ್ಕಂಡ ಮಾನದಂಡಗಳನ್ನು ನಿಗದಿಪಡಿಸಲಾಗಿದೆ. ಸದರಿ ಮಾನದಂಡಗಳನ್ವಯ ಆಹಾರ ನಿರೀಕ್ಷಕರು ಸ್ಥಳ ಪರಿಶೀಲನೆ ನಡೆಸಿ ಆದ್ಯತಾ (ಪಿಹೆಚ್ ಹೆಚ್) ಪಡಿತರ ಚೀಟಿಗಳನ್ನು ವಿತರಿಸುತ್ತಿರುತ್ತಾರೆ.

ಆನಾಸ 90 ಡಿಆರ್ ಎ 2020 (ಇ-ಆಫೀಸ್)

(ಕೆ.ಗೋಪಾಲಯ್ಯ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕರ್ನಾಟಕ ಸರ್ಕಾರ

ಸಂಖ್ಯೆ: ಆನಾಸ 89 ಡಿಆರ್‌ಎ 2020(ಇ-ಆಫೀಸ್)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ, ನೆಲಮಹಡಿ,
ಬೆಂಗಳೂರು, ದಿನಾಂಕ:11.03.2020.

07 1734
5100
13|3|20

ಇವರಿಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಇಲಾಖೆ,

ಇವರಿಗೆ,
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ
ವಿಧಾನಸೌಧ.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ರಾಜೀವ್.ಪಿ (ಕುಡಚಿ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂ:1734ಕ್ಕೆ ಉತ್ತರ ಒದಗಿಸುವ ಬಗ್ಗೆ.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ರಾಜೀವ್.ಪಿ (ಕುಡಚಿ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂ:1734ಕ್ಕೆ ಉತ್ತರದ 350 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ತಮಗೆ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ವಿ.ವೆಂಕಟೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ
ಆಹಾರ, ನಾಗರೀಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಇಲಾಖೆ.

ಪ್ರತಿಯನ್ನು ಮಾಹಿತಿಗಾಗಿ:

1. ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನ ಶಾಸ್ತ್ರ ಇಲಾಖಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನ ಶಾಸ್ತ್ರ ಇಲಾಖೆ, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕಿ. ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನ ಶಾಸ್ತ್ರ ಇಲಾಖೆ, ವಿಕಾಸಸೌಧ, ಬೆಂಗಳೂರು
4. ಸರ್ಕಾದರ ಅಧೀನ ಕಾರ್ಯದರ್ಶಿ, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನ ಶಾಸ್ತ್ರ ಇಲಾಖೆ, ವಿಕಾಸಸೌಧ, ಬೆಂಗಳೂರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1734

ವಿಧಾನ ಸಭೆಯ ಸದಸ್ಯರ ಹೆಸರು : ಶ್ರೀ ರಾಜೀವ್ ಪಿ (ಕುಡಚಿ)

ಉತ್ತರಿಸಬೇಕಾದ ದಿನಾಂಕ : 13.03.2020

ಉತ್ತರಿಸುವ ಸಚಿವರು : ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ಬೆಳಗಾವಿ ಜಿಲ್ಲೆಯಲ್ಲಿ ಬಿ.ಪಿ.ಎಲ್ ಪಡಿತರ ಚೀಟಿ ಕೋರಿ ಅರ್ಜಿ ಸಲ್ಲಿಸಿದವರ ಸಂಖ್ಯೆ ಹಾಗೂ ಎಷ್ಟು ಜನರಿಗೆ ಬಿ.ಪಿ.ಎಲ್. ಪಡಿತರ ಚೀಟಿ ಹಂಚಿಕೆಯಾಗಿದೆ; (ಮತಕ್ಷೇತ್ರವಾರು ವಿವರ ನೀಡುವುದು)	ಬೆಳಗಾವಿ ಜಿಲ್ಲೆಯಲ್ಲಿ ದಿನಾಂಕ: 08-03-2020 ರಲ್ಲಿದ್ದಂತೆ ಬಿ.ಪಿ.ಎಲ್ ಪಡಿತರ ಚೀಟಿ ಕೋರಿ ಒಟ್ಟು 39525 ಅರ್ಜಿಗಳು ಸ್ವೀಕೃತವಾಗಿದ್ದು, 23862 ಬಿಪಿಎಲ್ ಪಡಿತರ ಚೀಟಿಗಳನ್ನು ಹಂಚಿಕೆ ಮಾಡಲಾಗಿದೆ. ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.
ಆ	ಯಾವ ಮಾನದಂಡದ ಆಧಾರದಲ್ಲಿ ವಿತರಿಸಲಾಗಿದೆ; (ವಿವರ ನೀಡುವುದು)	ಬಿಪಿಎಲ್ ಕುಟುಂಬಗಳನ್ನು ಗುರುತಿಸುವ ಸಲುವಾಗಿ ರಾಜ್ಯ ಸರ್ಕಾರವು 16-08-2016, 25-03-2017 ಹಾಗೂ 20-5-2017 ರ ಆದೇಶದಲ್ಲಿ ಬಿಪಿಎಲ್ ವರ್ಗಕ್ಕೆ ಒಳಪಡದ (Exclusion Criteria) 04 ಮಾನದಂಡಗಳನ್ನು ಗುರುತಿಸಿ ಆದೇಶಿಸಿರುತ್ತದೆ. ಕೆಳಗಿನ ಈ 04 ಮಾನದಂಡಗಳಿಗೆ ಒಳಪಡದವರು ಬಿಪಿಎಲ್ ಪಡಿತರ ಚೀಟಿ ಪಡೆಯಲು ಅರ್ಹರಿರುತ್ತಾರೆ. 1. ಎಲ್ಲಾ ಖಾಯಂ ನೌಕರರು ಅಂದರೆ ಸರ್ಕಾರದ ಅಥವಾ ಸರ್ಕಾರದಿಂದ ಅನುದಾನವನ್ನು ಪಡೆಯುತ್ತಿರುವ ಸಂಸ್ಥೆಗಳು ಅಥವಾ ಸರ್ಕಾರಿ ಪ್ರಾಯೋಜಿತ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು/ ಮಂಡಳಿಗಳು/ನಿಗಮಗಳು/ಸ್ವಾಯತ್ತ ಸಂಸ್ಥೆಗಳು ಇತ್ಯಾದಿ ಒಳಗೊಂಡಂತೆ ಆದಾಯ ತೆರಿಗೆ/ಸೇವಾ ತೆರಿಗೆ/ವ್ಯಾಟ್/ವೃತ್ತಿ ತೆರಿಗೆ ಪಾವತಿಸುವ ಎಲ್ಲಾ ಕುಟುಂಬಗಳು. 2. ಗ್ರಾಮೀಣ ಪ್ರದೇಶದಲ್ಲಿ 3 ಹೆಕ್ಟೇರ್ ಒಣಭೂಮಿ ಅಥವಾ ತತ್ಸಮಾನ ನೀರಾವರಿ ಭೂಮಿ ಹೊಂದಿರುವ ಕುಟುಂಬಗಳು ಅಥವಾ ಗ್ರಾಮೀಣ ಪ್ರದೇಶದಲ್ಲಿ ಹೊರತುಪಡಿಸಿ ನಗರ ಪ್ರದೇಶಗಳಲ್ಲಿ 1000 ಚದರ ಅಡಿಗಿಂತಲೂ ಹೆಚ್ಚಿನ ವಿಸ್ತೀರ್ಣದ ಪಕ್ಕಾ ಮನೆಯನ್ನು ಸ್ವಂತವಾಗಿ ಹೊಂದಿರುವ ಕುಟುಂಬಗಳು.

<table>
<tr><td></td><td></td><td>3. ಜೀವನೋಪಾಯಕ್ಕಾಗಿ ಸ್ವತಃ ಓಡಿಸುವ ಒಂದು ವಾಣಿಜ್ಯ ವಾಹನವನ್ನು ಅಂದರೆ ಟ್ರ್ಯಾಕ್ಟರ್, ಮ್ಯಾಕ್ಸಿಕ್ಯಾಬ್, ಟ್ಯಾಕ್ಸಿ ಇತ್ಯಾದಿಗಳನ್ನು ಹೊಂದಿದ ಕುಟುಂಬಗಳನ್ನು ಹೊರತುಪಡಿಸಿ ನಾಲ್ಕು ಚಕ್ರದ ವಾಹನವನ್ನು ಹೊಂದಿರುವ ಎಲ್ಲಾ ಕುಟುಂಬಗಳು.
4. ಕುಟುಂಬದ ವಾರ್ಷಿಕ ಆದಾಯವು ರೂ.1.20 ಲಕ್ಷಗಿಂತ ಹೆಚ್ಚಿಗೆ ಇರುವ ಕುಟುಂಬಗಳು.</td></tr>
<tr><td>ಇ</td><td>ಬಿ.ಪಿ.ಎಲ್ ಪಡಿತರ ಚೀಟಿ ಹೊಂದಿದವರಿಗೆ ಯಾವ ಯಾವ ಪ್ರಮಾಣದಲ್ಲಿ ಆಹಾರ ಧಾನ್ಯಗಳನ್ನು ನೀಡಲಾಗುತ್ತಿದೆ; (ವಿವರ ನೀಡುವುದು)</td><td>ಪ್ರತಿ ಮಾಹೆ ವಿತರಿಸುತ್ತಿರುವ ಪಡಿತರ ಅಕ್ಕಿ ಪ್ರಮಾಣ:-
<table>
<tr><th>ಪಡಿತರ ಚೀಟಿ ವರ್ಗ</th><th>ಪ್ರತಿ ಮಾಹೆ ಅಕ್ಕಿ ಪ್ರಮಾಣ ಕೆ.ಜಿ.ಗಳಲ್ಲಿ</th><th>ದರ ರೂ.ಗಳಲ್ಲಿ</th></tr>
<tr><td>ಅಂತ್ಯೋದಯ</td><td>35ಕೆ.ಜಿ ಪ್ರತಿ ಪಡಿತರ ಚೀಟಿಗೆ</td><td rowspan="2">ಉಚಿತ</td></tr>
<tr><td>ಆದ್ಯತಾ ಬಿಪಿಎಲ್)</td><td>7 ಕೆ.ಜಿ ಪ್ರತಿ ಸದಸ್ಯರಿಗೆ</td></tr>
</table></td></tr>
<tr><td>ಈ</td><td>ರಾಯಭಾಗ ತಾಲ್ಲೂಕಿನಲ್ಲಿ ಆಹಾರ ಧಾನ್ಯ ಪೂರೈಕೆಯಲ್ಲಿ ಅಕ್ರಮ ಎಸಗಿರುವ ಹಾಗೂ ದಾಖಲಾಗಿರುವ ಪ್ರಕರಣಗಳ ಸಂಖ್ಯೆ ಎಷ್ಟು ಹಾಗೂ ಅಂತಹವರ ವಿರುದ್ಧ ಕೈಗೊಂಡಿರುವ ಕ್ರಮಗಳೇನು? (ಪೂರ್ಣ ಮಾಹಿತಿ ನೀಡುವುದು)</td><td>ರಾಯಭಾಗ ತಾಲ್ಲೂಕಿನ ನ್ಯಾಯಬೆಲೆ ಅಂಗಡಿ ಸಂಖ್ಯೆ:120ರಲ್ಲಿ ನಿಗಧಿತ ಪ್ರಮಾಣದ ಪಡಿತರ ಅಕ್ಕಿ ವಿತರಿಸುತ್ತಿಲ್ಲವೆಂದು ಹಾಗೂ ತೂಕದಲ್ಲಿ ಮೋಸ ಮಾಡುತ್ತಿರುವುದಾಗಿ ಸದರಿ ನ್ಯಾಯಬೆಲೆ ಅಂಗಡಿಯ ಪಡಿತರ ಚೀಟಿದಾರರು ನೀಡಿರುವ ದೂರಿನ ಮೇರೆಗೆ ವಿಚಾರಣೆಯನ್ನು ಕಾಯ್ದಿರಿಸಿ ನ್ಯಾಯಬೆಲೆ ಅಂಗಡಿ ಪ್ರಾಧಿಕಾರವನ್ನು ಅಮಾನತ್ತಿನಲ್ಲಿ ಇಡಲಾಗಿದೆ. ಸದರಿ ನ್ಯಾಯ ಬೆಲೆ ಅಂಗಡಿಯ ಪಡಿತರ ಚೀಟಿದಾರರಿಗೆ ಪಡಿತರ ವಿತರಣೆಗೆ ಪರ್ಯಾಯ ವ್ಯವಸ್ಥೆಯನ್ನು ಮಾಡಲಾಗಿದೆ. ಪ್ರಸ್ತುತ ಸದರಿ ಪ್ರಕರಣವು ಜಿಲ್ಲಾಧಿಕಾರಿಗಳ ನ್ಯಾಯಾಲಯದ ಮುಂದೆ ವಿಚಾರಣೆಯಲ್ಲಿದೆ.</td></tr>
</table>

ಆನಾಸ 89 ಡಿಆರ್ ಎ 2020 (ಇ-ಆಫೀಸ್)

(ಕೆ.ಗೋಪಾಲಯ್ಯ)

ಆಹಾರ, ನಾಗರಿಕ ಸರಬರಾಜು ಮತ್ತು

ಗ್ರಾಹಕರ ವ್ಯವಹಾರಗಳ ಹಾಗೂ

ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

LAQ : 1734

ಅನುಬಂಧ

ಬೆಳಗಾವಿ ಜಿಲ್ಲೆಯಲ್ಲಿ ದಿನಾಂಕ:08.03.2020ರಲ್ಲಿದ್ದಂತೆ ಬಿ.ಪಿ.ಎಲ್ ಪಡಿತರ ಚೀಟಿ ಕೋರಿ ಅರ್ಜಿ ಸಲ್ಲಿಸಿದವರ ಹಾಗೂ ಬಿ.ಪಿ.ಎಲ್ ಪಡಿತರ ಚೀಟಿ ಹಂಚಿಕೆಯಾದ ಮತಕ್ಷೇತ್ರವಾರು ವಿವರ ಈ ಕೆಳಗಿನಂತಿದೆ.

ಕ್ರ. ಸಂ	ಮತಕ್ಷೇತ್ರ	ಸ್ವೀಕೃತ ಅರ್ಜಿಗಳ ಸಂಖ್ಯೆ	ಪಡಿತರ ಚೀಟಿ ನೀಡಿದ ಸಂಖ್ಯೆ	ತಿರಸ್ಕರಿಸಿದ ಅರ್ಜಿಗಳ ಸಂಖ್ಯೆ	ಒಟ್ಟು ವಿಲೇವಾರಿ ಮಾಡಿದ ಅರ್ಜಿಗಳ ಸಂಖ್ಯೆ	ಬಾಕಿ ಉಳಿದಿರುವ ಅರ್ಜಿಗಳ ಸಂಖ್ಯೆ
1	ಬೆಳಗಾವಿ (ಉ)	1836	671	158	829	1007
2	ಬೆಳಗಾವಿ (ದ)	2027	996	149	1145	882
3	ಬೆಳಗಾವಿ (ಗ್ರಾ)	2974	1814	97	1911	1063
4	ಖಾನಾಪೂರ	1663	682	105	787	876
5	ಹುಕ್ಕೇರಿ	1300	834	66	900	400
6	ಯ.ಮರಡಿ	2121	1408	46	1454	667
7	ಬೈಲಹೊಂಗಲ	1812	1204	134	1338	474
8	ಕಿತ್ತೂರು	1880	1103	117	1220	660
9	ಸವದತ್ತಿ	1569	500	442	942	627
10	ರಾಮದುರ್ಗ	2305	2029	66	2095	210
11	ಗೋಕಾಕ	3402	1607	194	1801	1601
12	ಅರಭಾಂವಿ	1559	761	178	939	620
13	ಚಿಕ್ಕೋಡಿ	2421	2233	103	2336	85
14	ನಿಪ್ಪಾಣಿ	2742	2121	95	2216	526
15	ರಾಯಭಾಗ	2008	1717	183	1900	108
16	ಕುಡಚಿ	2441	1208	169	1377	1064
17	ಅಥಣಿ	3344	2002	18[illegible]	2187	1157
18	ಕಾಗವಾಡ	2121	972	177	1149	972
	ಒಟ್ಟು	39525	23862	2664	26526	12999

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 45 ಯುಎಂಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 13.03.2020

08
Stad
13/3/20
@: 9:40 AM

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ವಿಧಾನ ಸಭೆಯ ಸದಸ್ಯರಾದ ಶ್ರೀ ಬಂಡೆಪ್ಪ ಖಾಶೆಂಪುರ (ಬೀದರ್ ದಕ್ಷಿಣ) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1934 ಕ್ಕೆ ಉತ್ತರಿಸುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆಯ ಸದಸ್ಯರಾದ ಶ್ರೀ ಬಂಡೆಪ್ಪ ಖಾಶೆಂಪುರ (ಬೀದರ್ ದಕ್ಷಿಣ) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1934 ಕ್ಕೆ ಉತ್ತರದ 350 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಎಸ್. ದಿವಾಕರ್)
ಶಾಖಾಧಿಕಾರಿ (ಮಂಡಳಿ ಶಾಖೆ),
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	1934
ಸದಸ್ಯರ ಹೆಸರು	:	ಶ್ರೀ ಬಂಡೆಪ್ಪ ಖಾಶೆಂಪುರ್ (ಬೀದರ್ ದಕ್ಷಿಣ)
ಉತ್ತರಿಸಬೇಕಾದ ದಿನಾಂಕ	:	13-03-2020.
ಉತ್ತರಿಸಬೇಕಾದವರು	:	ನಗರಾಭಿವೃದ್ಧಿ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿರುವ ನಗರಸಭೆಗಳ ಸಂಖ್ಯೆ ಎಷ್ಟು ಹಾಗೂ ಅವುಗಳು ಯಾವುವು;	ರಾಜ್ಯದಲ್ಲಿ ಒಟ್ಟು 59 ನಗರಸಭೆಗಳಿರುತ್ತವೆ. ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.
ಆ)	ಸದರಿ ಎಲ್ಲಾ ನಗರಸಭೆಗಳ ವ್ಯಾಪ್ತಿಯಲ್ಲಿ ಒಳಚರಂಡಿ (ಯು.ಜಿ.ಡಿ) ವ್ಯವಸ್ಥೆಯನ್ನು ಕಲ್ಪಿಸಲಾಗಿದೆಯೇ; (ಪೂರ್ಣ ವಿವರ ನೀಡುವುದು)	ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ರಾಜ್ಯದಲ್ಲಿನ 21 ನಗರಸಭೆಗಳಲ್ಲಿ ಒಳಚರಂಡಿ (ಯು.ಜಿ.ಡಿ) ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ. ಕೆ.ಯು.ಐ.ಡಿ.ಎಫ್.ಸಿ. ವತಿಯಿಂದ ಎಡಿಬಿ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮದಡಿ (ಎನ್‌ಕೆಯುಎಸ್‌ಐಪಿ) ಆಯ್ಕೆ ಮಾಡಿದ 25 ಪಟ್ಟಣಗಳ ಪೈಕಿ 11 ನಗರಸಭೆಗಳ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆಗಾಗಿ ಕಲ್ಪಿಸಲಾಗಿದೆ. ವಿವರ ಕೆಳಗಿನಂತಿದೆ:

ಕ್ರ.ಸಂ	ನಗರಸಭೆ	ಷರಾ
1	ರಾಣೆಬೆನ್ನೂರು	ಕಾಮಗಾರಿ ಪೂರ್ಣಗೊಂಡಿದೆ. ದೋಷ ನಿವಾರಣಾ ಅವಧಿಯಲ್ಲಿರುತ್ತದೆ.
2	ಹಾವೇರಿ	ಕಾಮಗಾರಿ ಪೂರ್ಣಗೊಂಡಿದೆ. ದೋಷ ನಿವಾರಣಾ ಅವಧಿಯಲ್ಲಿರುತ್ತದೆ.
3	ಜಮಖಂಡಿ	ಕಾಮಗಾರಿ ಪೂರ್ಣಗೊಂಡು, ನಗರಸಭೆಗೆ ಹಸ್ತಾಂತರಿಸಲಾಗಿದೆ.
4	ಇಳಕಲ್	ಕಾಮಗಾರಿ ಪೂರ್ಣಗೊಂಡಿದೆ. ದೋಷ ನಿವಾರಣಾ ಅವಧಿಯಲ್ಲಿ ಕಂಡು ಬಂದ ದೋಷವನ್ನು ಸರಿಪಡಿಸುವ ಕಾರ್ಯ ಪ್ರಗತಿಯಲ್ಲಿದೆ.
5	ಗೋಕಾಕ್	ಕಾಮಗಾರಿ ಪೂರ್ಣಗೊಂಡು, ನಗರಸಭೆಗೆ ಹಸ್ತಾಂತರಿಸಲಾಗಿದೆ.
6	ಬೀದರ್	ಕಾಮಗಾರಿ ಪೂರ್ಣಗೊಂಡಿದೆ. ಮುಂದುವರೆದ ದೋಷ ನಿವಾರಣಾ ಅವಧಿಯಲ್ಲಿ ಕಂಡು ಬಂದ ದೋಷವನ್ನು ಸರಿಪಡಿಸುವ ಕಾರ್ಯ ಪ್ರಗತಿಯಲ್ಲಿದೆ.
7	ಚಾಮರಾಜನಗರ	ಕಾಮಗಾರಿ ಪೂರ್ಣಗೊಂಡು, ನಗರಸಭೆಗೆ ಹಸ್ತಾಂತರಿಸಲಾಗಿದೆ.
8	ರಾಯಚೂರು	ಕಾಮಗಾರಿ ಪೂರ್ಣಗೊಂಡು, ನಗರಸಭೆಗೆ ಹಸ್ತಾಂತರಿಸಲಾಗಿದೆ.
9	ರಬಕವಿ-ಬನಹಟ್ಟಿ	ಕಾಮಗಾರಿ ಪೂರ್ಣಗೊಂಡು ಯೋಜನೆಯಲ್ಲಿ ಖರೀದಿಸಿರುವ ಜನರೇಟರ್ ಉಪಯೋಗಿಸಿಕೊಂಡು ಎಸ್.ಟಿ.ಪಿ ಯನ್ನು ಪ್ರಾಯೋಗಿಸಲಾಗುತ್ತಿದೆ.

ಕ್ರಸಂ	ಪ್ರಶ್ನೆ	ಉತ್ತರ
		<table><tr><td>10</td><td>ಸಿಂಧನೂರು</td><td>ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ.</td></tr><tr><td>11</td><td>ಹೊಸಪೇಟೆ</td><td>ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ.</td></tr></table> ಏಷಿಯನ್ ಡೆವಲೆಪಮೆಂಟ್ ಬ್ಯಾಂಕ್ (ಎಡಿಬಿ) ನೆರವಿನಡಿಯಲ್ಲಿ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣಾ ಹೂಡಿಕೆ ಕಾರ್ಯಕ್ರಮದಡಿಯಲ್ಲಿ (ಕೆಐಯುಡಬ್ಲೂಎಂಐಪಿ) ಹರಿಹರ ನಗರ ಸಭೆ ವ್ಯಾಪ್ತಿಯಲ್ಲಿ ಒಳಚರಂಡಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ. <u>ವಿಶ್ವ ಬ್ಯಾಂಕ್ ನೆರವಿನ ಕರ್ನಾಟಕ ಪೌರ ಸುಧಾರಣ ಯೋಜನೆ (ಕೆಎಮ್‌ಆರ್‌ಪಿ)</u> • ವಿಶ್ವ ಬ್ಯಾಂಕ್ ನೆರವಿನ ಕರ್ನಾಟಕ ಪೌರ ಸುಧಾರಣ ಯೋಜನೆಯ (ಕೆಎಮ್‌ಆರ್‌ಪಿ) ಪೌರಬಂಡವಾಳ ಹೂಡಿಕೆ ಘಟಕದಡಿ ರಾಜ್ಯದ ಆಯ್ದ 7 ನಗರಸಭೆಗಳಲ್ಲಿ ಒಳಚರಂಡಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ. (ಅ) ಚಿಕ್ಕಬಳ್ಳಾಪುರ ನಗರದಲ್ಲಿ ಪೂರ್ಣ ಪ್ರಮಾಣದಲ್ಲಿ ಒಳಚರಂಡಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ ಪ್ರಸ್ತುತ ತಿಪಟೂರು ನಗರದಲ್ಲಿ ಹಂತ-2ರ ಒಳಚರಂಡಿ ಯೋಜನೆಯನ್ನು ರಾಜ್ಯ ಸರ್ಕಾರದ ಅನುದಾನದಲ್ಲಿ ಕೈಗೊಂಡು ಭೌತಿಕವಾಗಿ ಪೂರ್ಣಗೊಳಿಸಲಾಗಿರುತ್ತದೆ. (ಆ) ದೊಡ್ಡಬಳ್ಳಾಪುರ, ಹರಿಹರ ನಗರಗಳಲ್ಲಿ ಪ್ರಮುಖ/ಜನನಿಬಿಡ ಪ್ರದೇಶಗಳ ವ್ಯಾಪ್ತಿಯಲ್ಲಿ ಅನುಷ್ಠಾಗೊಳಿಸಲಾಗಿದ್ದು ಹಾಗೂ ಭದ್ರಾವತಿ ನಗರದಲ್ಲಿ ಶೇ.65 ರಷ್ಟು ಕಾಮಗಾರಿಯನ್ನು ಅನುಷ್ಠಾನಗೊಳಿಸಿದ್ದು, ನಂತರ ಗುತ್ತಿಗೆಯನ್ನು ರದ್ದುಗೊಳಿಸಲಾಗಿರುತ್ತದೆ. (ಇ) ಚಿಂತಾಮಣಿ ಮತ್ತು ಹಾಸನ ನಗರಗಳಲ್ಲಿ ಒಳಚರಂಡಿ ಮಿಸಿಂಗ್ ಲಿಂಕ್ಸ್ ಕಾಮಗಾರಿಯನ್ನು ಮಾತ್ರ ಅನುಷ್ಠಾಗೊಳಿಸಲಾಗಿದೆ. • ಭದ್ರಾವತಿ ನಗರದಲ್ಲಿ ಒಳಚರಂಡಿ ಕಾಮಗಾರಿಯ ಶೇ.65% ಪ್ರಗತಿಯಾಗಿದ್ದು, ಗುತ್ತಿಗೆದಾರರ ವೈಫಲ್ಯದಿಂದ ಗುತ್ತಿಗೆಯನ್ನು ದಿನಾಂಕ: 25.10.2018 ರಂದು ರದ್ದುಗೊಳಿಸಲಾಗಿರುತ್ತದೆ. ಬಾಕಿ ಕಾಮಗಾರಿಗಳನ್ನು ಮುಕ್ತಾಯಗೊಳಿಸಲು ಅಗತ್ಯವಾದ ರೂ.21.06 ಕೋಟಿಗಳ ಹೆಚ್ಚುವರಿ ಅನುದಾನವನ್ನು ಕೋರಿ ಕರ್ನಾಟಕ ಮೂಲಸಸೌಲಭ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮದಿಂದ ಸ್ವೀಕೃತವಾಗಿರುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. ನಗರವಾರು ಪೂರ್ಣ ವಿವರಗಳನ್ನು ಅನುಬಂಧ-3 ರಲ್ಲಿ ನೀಡಲಾಗಿದೆ.
ಇ)	ನಗರ ಸಭೆಗಳಲ್ಲಿ ಒಳಚರಂಡಿ ತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದಂತೆ ಯಾವ ರೀತಿಯ ವ್ಯವಸ್ಥೆಯನ್ನು ಕೈಗೊಳ್ಳಲಾಗಿದೆ;	ಒಳಚರಂಡಿ ಕಾಮಗಾರಿ ಹಾಗೂ STP ಘಟಕಗಳು ಪೂರ್ಣಗೊಂಡಿರುವ ನಗರಸಭೆಗಳಲ್ಲಿ, ಗುತ್ತಿಗೆದಾರರಿಗೆ ನಿಗದಿತ ಅವಧಿಗೆ ನಿರ್ವಹಣೆ ಜವಾಬ್ದಾರಿ ವಹಿಸಲಾಗುತ್ತಿದೆ. ಸದರಿ ಅವಧಿ ಮುಕ್ತಾಯಗೊಂಡ ನಂತರ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಲಾಗುತ್ತಿದೆ. ನಂತರ ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಯ ವತಿಯಿಂದಲೇ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ನಿಗದಿಪಡಿಸಿರುವ ಮಾನದಂಡಗಳ ಪ್ರಕಾರ ನಿರ್ವಹಣೆ ಮಾಡಲಾಗುತ್ತಿದೆ. ಕರ್ನಾಟಕ ನಗರ ನೀರು ಸರಬರಾಜು ಮಂಡಳಿಯ ವತಿಯಿಂದ ಅಳವಡಿಸಲಾಗಿರುವ ಮಲಿನ ನೀರಿನ ಶುದ್ಧೀಕರಣ ಘಟಕಗಳ ಪೈಕಿ ಕೆಲವು ಘಟಕಗಳನ್ನು ಮಂಡಳಿಯಿಂದ ನಿರ್ವಹಿಸಲಾಗುತ್ತಿದೆ. ಪ್ರಸ್ತುತ ಒಳಚರಂಡಿ ವ್ಯವಸ್ಥೆಯಿರದ ನಗರ ಸಭೆಗಳಲ್ಲಿ ಸೆಪ್ಟಿಕ್ ಟ್ಯಾಂಕ್‌ನ್ನು ಅಳವಡಿಸಿಕೊಂಡಿರುತ್ತಾರೆ. ಸೆಪ್ಟಿಕ್ ಟ್ಯಾಂಕ್‌ನಿಂದ ಕಲ್ಮಷ ತ್ಯಾಜ್ಯವನ್ನು ಸಕ್ಷನ್ ಮತ್ತು ಜೆಟ್ಟಿಂಗ್ ಯಂತ್ರಗಳ ಮೂಲಕ ವಿಲೇವಾರಿ ಮಾಡಲಾಗುತ್ತಿದೆ.

ಕ್ರಸಂ	ಪ್ರಶ್ನೆ	ಉತ್ತರ
		ಕೆಯುಐಡಿಎಫ್‌ಸಿ ವತಿಯಿಂದ ಕೈಗೊಂಡ ತ್ಯಾಜ್ಯ ವಿಲೇವಾರಿ ಘಟಕದ ನಿರ್ವಹಣೆಯನ್ನು ಈ ಕೆಳಕಂಡಂತೆ ನಿರ್ವಹಿಸಲಾಗುತ್ತಿದೆ. 1. ಎಡಿಬಿ ನೆರವಿನ ಯೋಜನೆಗಳಲ್ಲಿ, ಗುತ್ತಿಗೆದಾರರಿಂದ ನಿರ್ಮಿಸಿದ ಎಸ್‌ಬಿಆರ್ ತಾಂತ್ರಿಕದ ತ್ಯಾಜ್ಯ ವಿಲೇವಾರಿ ಘಟಕಗಳನ್ನು ಅದೇ ಗುತ್ತಿಗೆದಾರರಿಂದಲೇ 3 ವರ್ಷಗಳ ವರೆಗೆ ನಿರ್ವಹಣೆಗೆ ಜವಾಬ್ದಾರಿ ಹೊಂದಿರುತ್ತಾರೆ, ತದನಂತರ ಸಂಬಂಧಪಟ್ಟ ಸ್ಥಳೀಯ ಸಂಸ್ಥೆ ನಿರ್ವಹಣೆ ಜವಾಬ್ದಾರಿ ನಿರ್ವಹಿಸುತ್ತದೆ. 2. ಎಡಿಬಿ ನೆರವಿನ ಯೋಜನೆಗಳಲ್ಲಿ, ಎಫ್‌ಎಪಿಎಲ್ ಮಾದರಿಯ ತ್ಯಾಜ್ಯ ವಿಲೇವಾರಿ ಘಟಕಗಳನ್ನು ಕಾಮಗಾರಿ ಸಂಪೂರ್ಣಗೊಂಡ ನಂತರ ಅದೇ ಗುತ್ತಿಗೆದಾರರಿಂದಲೇ 1 ವರ್ಷ ದೋಷ ನಿವಾರಣೆ ಮಾತ್ರ ಇದ್ದು, ನಿರ್ವಹಣೆ ಜವಾಬ್ದಾರಿಯನ್ನು ಸಂಬಂಧಿಸಿದ ಸ್ಥಳೀಯ ಸಂಸ್ಥೆ ನಿರ್ವಹಿಸುತ್ತದೆ. 3. ವಿಶ್ವ ಬ್ಯಾಂಕ್ ನೆರವಿನ ಅಡಿಯಲ್ಲಿ ಗುತ್ತಿಗೆದಾರರಿಂದ ನಿರ್ಮಿಸಿದ ಎಸ್‌ಬಿಆರ್ ತಾಂತ್ರಿಕದ ತ್ಯಾಜ್ಯ ವಿಲೇವಾರಿ ಘಟಕಗಳನ್ನು ಅದೇ ಗುತ್ತಿಗೆದಾರರಿಂದಲೇ 6 ವರ್ಷಗಳ ವರೆಗೆ ನಿರ್ವಹಣೆಗೆ ಜವಾಬ್ದಾರಿ ಹೊಂದಿರುತ್ತಾರೆ. ತದನಂತರ ಸಂಬಂಧಪಟ್ಟ ಸ್ಥಳೀಯ ಸಂಸ್ಥೆ ನಿರ್ವಹಣೆ ಜವಾಬ್ದಾರಿ ನಿರ್ವಹಿಸುತ್ತದೆ.
ಈ)	ನಗರಸಭೆಗಳಲ್ಲಿನ ಒಳಚರಂಡಿ ತ್ಯಾಜ್ಯವನ್ನು ವಿಲೇ ಮಾಡಲು ಸಂಸ್ಕರಣಾ ಘಟಕಗಳನ್ನು ಯಾವ ನಗರಗಳಲ್ಲಿ ಸ್ಥಾಪಿಸಲಾಗಿದೆ; (ಮಾಹಿತಿಯನ್ನು ಒದಗಿಸುವುದು)	ಕರ್ನಾಟಕ ನಗರ ನೀರು ಸರಬರಾಜು ಮಂಡಳಿ ವತಿಯಿಂದ ಒಳಚರಂಡಿ ವ್ಯವಸ್ಥೆ ಕಲ್ಪಿಸಿರುವ 21 ನಗರಸಭೆಗಳಲ್ಲಿ ಮಲಿನ ನೀರಿನ ಶುದ್ಧೀಕರಣ ಘಟಕಗಳನ್ನು ನಿರ್ಮಿಸಲಾಗಿದೆ. 4 ನಗರಸಭೆಗಳಲ್ಲಿ ಮಲಿನ ನೀರಿನ ಶುದ್ಧೀಕರಣ ಘಟಕಗಳನ್ನು ನಿರ್ಮಿಸಲಾಗುತ್ತಿದೆ. ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ. ಎನ್‌ಕೆಯುಎಸ್‌ಐಪಿ ಯೋಜನೆಯಡಿ ಕೈಗೆತ್ತಿಗೊಂಡಿರುವ 11 ನಗರಸಭೆ ವ್ಯಾಪ್ತಿಯಲ್ಲಿ ಈ ಕೆಳಕಂಡಂತೆ ಎಸ್.ಟಿ.ಪಿ ಘಟಕ ನಿರ್ಮಿಸಲಾಗಿದೆ.

ಕ್ರಸಂ	ನಗರಸಭೆ	ಸಾಮರ್ಥ್ಯ (ಎಂಎಲ್‌ಡಿ)	ಷರಾ
1	ರಾಣೆಬೆನ್ನೂರು	7.5 + 7.5 (ಎಫ್‌ಎಪಿಎಲ್ ಮಾದರಿ)	ಕಾಮಗಾರಿ ಪೂರ್ಣಗೊಂಡಿದೆ. ದೋಷ ನಿವಾರಣಾ ಅವಧಿಯಲ್ಲಿರುತ್ತದೆ.
2	ಹಾವೇರಿ	4.71 (ಎಫ್‌ಎಪಿಎಲ್ ಮಾದರಿ)	ಕಾಮಗಾರಿ ಪೂರ್ಣಗೊಂಡಿದೆ. ದೋಷ ನಿವಾರಣಾ ಅವಧಿಯಲ್ಲಿರುತ್ತದೆ.
3	ಜಮಖಂಡಿ	7.6 (ಎಫ್‌ಎಪಿಎಲ್ ಮಾದರಿ)	ಕಾಮಗಾರಿ ಪೂರ್ಣಗೊಂಡು, ನಗರಸಭೆಗೆ ಹಸ್ತಾಂತರಿಸಲಾಗಿದೆ.
4	ಇಳಕಲ್	8 (ಎಫ್‌ಎಪಿಎಲ್ ಮಾದರಿ)	ಕಾಮಗಾರಿ ಪೂರ್ಣಗೊಂಡಿದೆ. ದೋಷ ನಿವಾರಣಾ ಅವಧಿಯಲ್ಲಿ ಕಂಡು ಬಂದ ದೋಷವನ್ನು ಸರಿಪಡಿಸುವ ಕಾರ್ಯ ಪ್ರಗತಿಯಲ್ಲಿದೆ.
5	ಗೋಕಾಕ್	8.7 (ಎಫ್‌ಎಪಿಎಲ್ ಮಾದರಿ)	ಕಾಮಗಾರಿ ಪೂರ್ಣಗೊಂಡು, ನಗರಸಭೆಗೆ ಹಸ್ತಾಂತರಿಸಲಾಗಿದೆ.
6	ಬೀದರ್	17.26 (ಎಫ್‌ಎಪಿಎಲ್ ಮಾದರಿ)	ಕಾಮಗಾರಿ ಪೂರ್ಣಗೊಂಡಿದೆ. ಮುಂದುವರೆದ ದೋಷ ನಿವಾರಣಾ ಅವಧಿಯಲ್ಲಿ ಕಂಡು ಬಂದ ದೋಷವನ್ನು ಸರಿಪಡಿಸುವ

ಕ್ರ.ಸಂ	ಪ್ರಶ್ನೆ	ಉತ್ತರ

			ಕಾರ್ಯ ಪ್ರಗತಿಯಲ್ಲಿದೆ.
7	ಚಾಮರಾಜನಗರ	9 (ಎಫ್‌ಎಎಲ್ ಮಾದರಿ)	ಕಾಮಗಾರಿ ಪೂರ್ಣಗೊಂಡು, ನಗರಸಭೆಗೆ ಹಸ್ತಾಂತರಿಸಲಾಗಿದೆ.
8	ರಾಯಚೂರು	20 + 8 (ಎಫ್‌ಎಎಲ್ ಮಾದರಿ)	ಕಾಮಗಾರಿ ಪೂರ್ಣಗೊಂಡು, ನಗರಸಭೆಗೆ ಹಸ್ತಾಂತರಿಸಲಾಗಿದೆ.
9	ರಬಕವಿ-ಬನಹಟ್ಟಿ	9.2 (ಎಸ್‌ಬಿಆರ್ ಮಾದರಿ)	ಕಾಮಗಾರಿ ಪೂರ್ಣಗೊಂಡು ಯೋಜನೆಯಲ್ಲಿ ಖರೀದಿಸಿರುವ ಜನರೇಟರ್ ಉಪಯೋಗಿಸಿಕೊಂಡು ಎಸ್.ಟಿ.ಪಿ ಯನ್ನು ಪ್ರಾಯೋಗಿಸಲಾಗುತ್ತಿದೆ.
10	ಸಿಂಧನೂರು	12 (ಎಎಸ್‌ಪಿ ಮಾದರಿ)	ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ.
11	ಹೊಸಪೇಟೆ	27 (ಎಎಸ್‌ಪಿ ಮಾದರಿ)	ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ.

ಕ್ರ.ಸಂ	ಪ್ರಶ್ನೆ	ಉತ್ತರ
ಉ)	ಇಲ್ಲದಿದ್ದಲ್ಲಿ, ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು ಸರ್ಕಾರಕ್ಕಿರುವ ತೊಂದರೆಗಳೇನು ಹಾಗೂ ಯಾವ ಕಾಲಮಿತಿಯೊಳಗೆ ಪ್ರಾರಂಭಿಕ ಹಂತದಲ್ಲಿ ಎಷ್ಟು ಘಟಕಗಳನ್ನು ಎಲ್ಲೆಲ್ಲಿ ಸ್ಥಾಪಿಸಲಾಗುವುದು? (ಮಾಹಿತಿಯನ್ನು ಒದಗಿಸುವುದು)	ಸಂಸ್ಕರಣಾ ಘಟಕಗಳಿಲ್ಲದ ನಗರಸಭೆಗಳಲ್ಲಿ ಸಂಸ್ಕರಣಾ ಘಟಕಗಳನ್ನು ಹಣಕಾಸು ಲಭ್ಯತೆ ಆಧಾರದ ಮೇಲೆ ಹಂತ ಹಂತವಾಗಿ ಕೈಗೊಳ್ಳಲಾಗುವುದು. ಮುಂದುವರೆದು ಮಧ್ಯಂತರ ಪರಿಹಾರವಾಗಿ ವಿಕೇಂದ್ರೀಕರಣ ವ್ಯವಸ್ಥೆಯಡಿ ಮೊದಲನೇ ಹಂತದಲ್ಲಿ ಪೌರಾಡಳಿತ ನಿರ್ದೇಶನಾಲಯದ ವತಿಯಿಂದ ರಾಜ್ಯದ ಈ ಕೆಳಕಂಡ 07 ನಗರಸಭೆಗಳ ವ್ಯಾಪ್ತಿಯಲ್ಲಿ ಕಲ್ಮಷ ತ್ಯಾಜ್ಯ ಸಂಸ್ಕರಿಸುವ ಘಟಕಗಳನ್ನು **(Faecal Sludge Treatment Plant)** ಸ್ಥಾಪಿಸಲು ಯೋಜಿಸಲಾಗಿದೆ.

ಕ್ರ.ಸಂ	ಜಿಲ್ಲೆ	ನಗರಸಭೆ
1	ಬೆಳಗಾವಿ	ನಿಪ್ಪಾಣಿ
2	ಉತ್ತರಕನ್ನಡ	ಶಿರಸಿ
3	ಯಾದಗಿರಿ	ಶಹಪುರ
4	ಬೀದರ್	ಬಸವಕಲ್ಯಾಣ
5	ಕಲ್ಬುರ್ಗಿ	ಶಹಾಬಾದ
6	ಬಳ್ಳಾರಿ	ಸಿರಗುಪ್ಪ
7	ಚಿಕ್ಕಬಳ್ಳಾಪುರ	ಗೌರಿಬಿದನೂರು

ಸಂಖ್ಯೆ: ನಅಇ 45 ಯುಎಂಎಸ್ 2020

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

ಅನುಬಂಧ-1

ರಾಜ್ಯದಲ್ಲಿನ ನಗರಸಭೆಗಳ ಪಟ್ಟಿ

ಕ್ರಸಂ	ಜಿಲ್ಲೆಯ ಹೆಸರು	ನಗರಸಭೆ
1.	ಬೆಂಗಳೂರು ನಗರ	ಹೆಬ್ಬಗೋಡಿ
2.	ಬೆಂಗಳೂರು (ಗ್ರಾಂ)	ದೊಡ್ಡಬಳ್ಳಾಪುರ
		ಹೊಸಕೋಟೆ
		ನೆಲಮಂಗಲ
3.	ರಾಮನಗರ	ರಾಮನಗರ
		ಚನ್ನಪಟ್ಟಣ
		ಕನಕಪುರ
4.	ತುಮಕೂರು	ತಿಪಟೂರು
		ಶಿರಾ
5.	ಕೋಲಾರ	ಕೋಲಾರ
		ಕೆಜಿಎಫ್
		ಮುಳಬಾಗಿಲು
6.	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ
		ಚಿಂತಾಮಣಿ
		ಶಿಡ್ಲಘಟ್ಟ
		ಗೌರಿಬಿದನೂರು
7.	ಚಿತ್ರದುರ್ಗ	ಚಿತ್ರದುರ್ಗ
		ಚಳ್ಳಕೆರೆ
		ಹಿರಿಯೂರು
8.	ದಾವಣಗೆರೆ	ಹರಿಹರ
9.	ಶಿವಮೊಗ್ಗ	ಭದ್ರಾವತಿ
		ಸಾಗರ
10.	ಮೈಸೂರು	ಹುಣಸೂರು
		ನಂಜನಗೂಡು
11.	ಚಾಮರಾಜನಗರ	ಚಾಮರಾಜನಗರ
		ಕೊಳ್ಳೇಗಾಲ
12.	ಮಂಡ್ಯ	ಮಂಡ್ಯ
13.	ಹಾಸನ	ಹಾಸನ
		ಅರಸೀಕೆರೆ
14.	ಕೊಡಗು	ಮಡಿಕೇರಿ
15.	ಚಿಕ್ಕಮಗಳೂರು	ಚಿಕ್ಕಮಗಳೂರು

ಕ್ರ.ಸಂ.	ಜಿಲ್ಲೆಯ ಹೆಸರು	ನಗರಸಭೆ
16	ದಕ್ಷಿಣ ಕನ್ನಡ	ಉಳ್ಳಾಲ
		ಪುತ್ತೂರು
17.	ಉಡುಪಿ	ಉಡುಪಿ
18.	ಬೆಳಗಾವಿ	ನಿಪ್ಪಾಣಿ
		ಗೋಕಾಕ
19.	ಉತ್ತರಕನ್ನಡ	ಕಾರವಾರ
		ಶಿರಸಿ
		ದಾಂಡೇಲಿ
20.	ವಿಜಯಾಪುರ	–
21.	ಬಾಗಲಕೋಟೆ	ಬಾಗಲಕೋಟೆ
		ರಬಕವಿ–ಬನಹಟ್ಟಿ
		ಜಮಖಂಡಿ
		ಇಳಕಲ್ಲ
		ಮುಧೋಳ
22.	ಧಾರವಾಡ	–
23.	ಗದಗ	ಗದಗ ಬೆಟಗೇರಿ
24.	ಹಾವೇರಿ	ಹಾವೇರಿ
		ರಾಣೇಬೆನ್ನೂರು
25.	ಕಲಬುರ್ಗಿ	ಶಹಾಬಾದ
26.	ಯಾದಗಿರಿ	ಯಾದಗಿರಿ
		ಶಹಾಪುರ
		ಸುರಪುರ
27.	ರಾಯಚೂರು	ರಾಯಚೂರು
		ಸಿಂಧನೂರು
28.	ಕೊಪ್ಪಳ	ಕೊಪ್ಪಳ
		ಗಂಗಾವತಿ
29.	ಬೀದರ್	ಬೀದರ
		ಬಸವಕಲ್ಯಾಣ
30.	ಬಳ್ಳಾರಿ	ಹೊಸಪೇಟೆ
		ಸಿರುಗುಪ್ಪ
	ಒಟ್ಟು	59

ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು.

ಅನುಬಂಧ-2

Statement showing the status of the UGD in CMCs of Karnataka where the Board implemented the UGD System

Sl. No.	Name of the Urban Local Bodies	Population as per 2011 Census	Designed capacity of Sewage Treatment Plant Constructed (in MLD)	Designed capacity of Ongoing Sewage Treatment Plant (in MLD)
1	Arsikere	53216	12.00	
2	Bagalkote	111933	12.50	
3	Bhadravathi	151102	11.30	
4	Bidar	216020	17.26	
5	Chickamagalur	118401	20.00	
6	Chintamani	76068	6.40	
7	Chitradurga	145853	20.00	
8	Gadag-betageri	172612	29.77	
9	Gangavathi	114642	3.72	
10	Hassan	155006	13.00	
11	Hoskote	56980		8.52
12	Hospet	206167	27.00	
13	Hunsur	50865	3.89	
14	Kanakapura	54014	6.29	
15	Kolar	138462	10.16	
16	Kollegal	57149	3.30	
17	Mandya	137358	18.52	
18	Mudhol	52199	9.06	
19	Mulbagilu	57276	6.30	
20	Nanjangud	50598	7.00	
21	Raichur	234073	48.86	
22	Ramanagara	95167	7.57	
23	Robertsonpet	162230		5.00
24	Sagar	54550		9.00
25	Sira	57554		10.80
	Total	2779495	293.9	33.32

admin\Desktop\LAQ_1934_Annexure_UGD_CMC.xls

1934

ಅನುಬಂಧ-3

ಅನುಬಂಧ-1

ವಿಷಯ: ವಿಧಾನಸಭೆಯ ಸದಸ್ಯರಾದ ಶ್ರೀ. ಬಂಡೆಪ್ಪ ಖಾಶೆಂಪುರ್ (ಬೀದರ್ ದಕ್ಷಿಣ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 1934 ಕ್ಕೆ ಉತ್ತರ:

ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ಪೌರ ಸುಧಾರಣಾ ಯೋಜನೆಯಡಿ ಆಯ್ದ ಪಟ್ಟಣಗಳಲ್ಲಿ ಕೈಗೆತ್ತಿಕೊಂಡಿರುವ ಕಾಮಗಾರಿಗಳ ವಿವರ

ಕ್ರ.ಸಂ	ಪಟ್ಟಣದ ಹೆಸರು	ರೂ. ಕೋಟಿಗಳಲ್ಲಿ		ಕಾಮಗಾರಿಯ ವಿವರಗಳು	ಷರಾ
		ಗುತ್ತಿಗೆ ಮೊತ್ತ	ಖರ್ಚಾದ ಮೊತ್ತ		
1.	ತಿಪಟೂರು ನಗರಸಭೆ	17.96	17.96	(ಎ) ಒಳಚರಂಡಿ ವ್ಯವಸ್ಥೆ • ಒಳಚರಂಡಿ ಜಾಲದ ಉದ್ದ: 45ಕಿ.ಮಿ • ಮ್ಯಾನ್ ಹೋಲ್: 1505 ಸಂಖ್ಯೆ • 6 ಎಂಎಲ್‌ಡಿ ಎಸ್‌ಬಿಆರ್ ಟೆಕ್ನಾಲಜಿ (12 ಎಂಎಲ್‌ಡಿಗೆ ಅಪ್‌ಗ್ರೇಡೆಬಲ್) • ಮನೆ ಸಂಪರ್ಕ ಜೋಡಣೆ:4800 ಸಂ.	(ವ್ಯಾಪ್ತಿ ಪ್ರದೇಶ ಶೇ.100% ಭಾಗ)
		18.30	18.73	(ಬಿ)6 ಎಂಎಲ್‌ಡಿ ಎಸ್‌ಬಿಆರ್ ಟೆಕ್ನಾಲಜಿ (12 ಎಂಎಲ್‌ಡಿಗೆ ಅಪ್‌ಗ್ರೇಡೆಬಲ್)	ಕಾಮಗಾರಿ ಪೂರ್ಣಗೊಂಡಿರುತ್ತದೆ
		24.15	16.05	ಹಂತ-2 ರ ಒಳಚರಂಡಿ ಮುಂದುವರೆದ ಕೆಎಂಆರ್‌ಪಿ- ರಾಜ್ಯ ಸರ್ಕಾರದ ಅನುದಾನ • ಒಳಚರಂಡಿ ಜಾಲದ ಉದ್ದ: 79.5 ಕಿ.ಮಿ • ಮ್ಯಾನ್ ಹೋಲ್ : 3076 ಸಂಖ್ಯೆ • ಮನೆ ಸಂಪರ್ಕ ಜೋಡಣೆ: 1200 ಸಂ. • ವೆಟ್‌ವೆಲ್- 1 ಸಂಖ್ಯೆ	ಕಾಮಗಾರಿಯು ಪೂರ್ಣಗೊಂಡಿರುತ್ತದೆ
2.	ದೊಡ್ಡಬಳ್ಳಾಪುರ ನಗರಸಭೆ	28.78	28.78	• ಒಳಚರಂಡಿ ಜಾಲದ ಉದ್ದ: 120.70 ಕಿ.ಮಿ • ಮ್ಯಾನ್ ಹೋಲ್ : 4993 • ರೊಚ್ಚು ಸಂಸ್ಕರಣಾ ಘಟಕದ ಸಾಮರ್ಥ್ಯ : 12 ಎಂ.ಎಲ್.ಡಿ. • ಮನೆ ಸಂಪರ್ಕ ಜೋಡಣೆ : 14000	(ವ್ಯಾಪ್ತಿ ಪ್ರದೇಶ ಶೇ.60% ಭಾಗ) ಕಾಮಗಾರಿ ಪೂರ್ಣಗೊಂಡಿರುತ್ತದೆ
3.	ಚಿಕ್ಕಬಳ್ಳಾಪುರ ನಗರಸಭೆ	27.84	27.11	• ಒಳಚರಂಡಿ ಜಾಲದ ಉದ್ದ: 79.44 ಕಿ.ಮಿ • ಮ್ಯಾನ್ ಹೋಲ್ : 3226 • ರೊಚ್ಚು ಸಂಸ್ಕರಣಾ ಘಟಕದ ಸಾಮರ್ಥ್ಯ : 10 ಎಂ.ಎಲ್.ಡಿ. • ಮನೆ ಸಂಪರ್ಕ ಜೋಡಣೆ :12500 ಸಂಖ್ಯೆ	(ವ್ಯಾಪ್ತಿ ಪ್ರದೇಶ ಶೇ.100% ಭಾಗ) ಕಾಮಗಾರಿ ಪೂರ್ಣಗೊಂಡಿರುತ್ತದೆ
4.	ಚಿಂತಾಮಣಿ ನಗರಸಭೆ	1.80	1.51	(ಮಿಸ್ಸಿಂಗ್‌ಲಿಂಕ್ಸ್) • ಒಳಚರಂಡಿ ಜಾಲದ ಉದ್ದ: 14.69 ಕಿ.ಮಿ	ಕಾಮಗಾರಿ ಪೂರ್ಣಗೊಂಡಿರುತ್ತದೆ
5.	ಭದ್ರಾವತಿ ನಗರಸಭೆ	23.30	16.60	• ಒಳಚರಂಡಿ ಜಾಲದ ಉದ್ದ: 52 ಕಿ.ಮಿ • ಮ್ಯಾನ್ ಹೋಲ್ : 1510 • ಮನೆ ಸಂಪರ್ಕ ಜೋಡಣೆ : 10000	(ವ್ಯಾಪ್ತಿ ಪ್ರದೇಶ ಶೇ.37.14% ಭಾಗ) ಕಾಮಗಾರಿಯು ಶೇ.65% ಪ್ರಗತಿಯಾಗಿದ್ದು ಗುತ್ತಿಗೆದಾರರ ವೈಫಲ್ಯದಿಂದ ಗುತ್ತಿಗೆಯನ್ನು ದಿನಾಂಕ: 25.10.2018 ರಂದು ರದ್ದುಗೊಳಿಸಲಾಗಿರುತ್ತದೆ. ಬಾಕಿ ಕಾಮಗಾರಿಗಳನ್ನು ಮುಕ್ತಾಯಗೊಳಿಸಲು

ಸಂಖ್ಯೆ	ಪಟ್ಟಣದ ಹೆಸರು	ರೂ. ಕೋಟಿಗಳಲ್ಲಿ		ಕಾಮಗಾರಿಯ ವಿವರಗಳು	ಷರಾ
		ಗುತ್ತಿಗೆ ಮೊತ್ತ	ಖರ್ಚಾದ ಮೊತ್ತ		
					ಅಗತ್ಯವಾದ ರೂ.21.06 ಕೋಟಿಗಳ ಹೆಚ್ಚುವರಿ ಅನುದಾನವನ್ನು ಕೋರಿ ಸರ್ಕಾರಕ್ಕೆ ದಿನಾಂಕ: 14.2.2020 ರಂದು ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.
6.	ಹಾಸನ ನಗರಸಭೆ	4.40	3.28	(ಮಿಸಿಂಗ್‌ಲಿಂಕ್ಸ್) • ಒಳಚರಂಡಿ ಜಾಲದ ಉದ್ದ: 38 ಕಿ.ಮಿ	ಕಾಮಗಾರಿ ಪೂರ್ಣಗೊಂಡಿರುತ್ತದೆ
7.	ಹರಿಹರ ನಗರಸಭೆ	24.40	23.65	ಉಳಿಕೆ ಕಾಮಗಾರಿ – ಒಳಚರಂಡಿ ವ್ಯವಸ್ಥೆ • ಒಳಚರಂಡಿ ಜಾಲದ ಉದ್ದ:23.90 ಕಿ.ಮಿ • ಮ್ಯಾನ್ ಹೋಲ್: 678 • ಮನೆ ಸಂಪರ್ಕ ಜೋಡಣೆ: 5940	ಕಾಮಗಾರಿ ಪೂರ್ಣಗೊಂಡಿರುತ್ತದೆ.

ವ್ಯವಸ್ಥಾಪಕ ನಿರ್ದೇಶಕರು
ಕೆಯುಐಡಿಎಫ್‌ಸಿ.

ಕರ್ನಾಟಕ ಸರ್ಕಾರ

ಸಂಖ್ಯೆ ಸಿಐ 128 ಎಂಎಂಎನ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ 12.03.2020.

09
S/o2d
13/3/20

ಇಂದ
ಸರ್ಕಾರದ ಪ್ರಧಾನ ಕಾರ್ಯದರ್ಶಿ,
(ಎಂ.ಎಸ್.ಎಂ.ಇ., ಜವಳಿ ಮತ್ತು ಗಣಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಇವರಿಗೆ,
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ
ವಿಧಾನಸೌಧ

ಮಾನ್ಯರೇ,

ವಿಷಯ : ಮಾನ್ಯ ವಿಧಾನ ಸಭೆ ಸದಸ್ಯರಾದ ಡಾ॥ ಶ್ರೀನಿವಾಸಮೂರ್ತಿ ಕೆ. (ನೆಲಮಂಗಲ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 960ಕ್ಕೆ ಉತ್ತರ ಒದಗಿಸುವ ಕುರಿತು.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ ಪ್ರಶಾವಿಸ/15ನೇವಿಸ/6ಅ/ಪ್ರ.ಸಂ.960/ ದಿನಾಂಕ 02.03.2020.

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಕೋರಿರುವಂತೆ ಮಾನ್ಯ ಮಾನ್ಯ ವಿಧಾನ ಸಭೆ ಸದಸ್ಯರಾದ ಡಾ॥ ಶ್ರೀನಿವಾಸಮೂರ್ತಿ ಕೆ. (ನೆಲಮಂಗಲ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 960ಕ್ಕೆ ಸರ್ಕಾರದ ಉತ್ತರದ ಕನ್ನಡ ಭಾಷೆಯ 350 ಹಾಗೂ ಆಂಗ್ಲ ಭಾಷೆ 25 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ

(ಶಿವಪ್ರಕಾಶ)
ಪೀಠಾಧಿಕಾರಿ (ಗಣಿ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	690
ಸದಸ್ಯರ ಹೆಸರು	ಡಾ॥ ಶ್ರೀನಿವಾಸಮೂರ್ತಿ ಕೆ. (ನೆಲಮಂಗಲ)
ಉತ್ತರಿಸಬೇಕಾದ ದಿನಾಂಕ	13.03.2020.
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಸಚಿವರು

ಕ್ರ.ಸಂ	ಪ್ರಶ್ನೆಗಳು	ಉತ್ತರ
ಅ)	ನೆಲಮಂಗಲ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಕ್ರಷರ್ ಗಳ ಸಂಖ್ಯೆ ಹಾಗೂ ಕಾರ್ಯ ನಿರ್ವಹಿಸುತ್ತಿರುವ ಕ್ರಷರ್‌ಗಳೆಷ್ಟು; (ಮಾಲೀಕತ್ವದ ಹಾಗೂ ಕ್ರಷರ್‌ಗಳ ಸರ್ವೆ ನಂಬರ್ ಸಮೇತ ವಿಸ್ತೀರ್ಣದ ಸಂಪೂರ್ಣ ವಿವರ ಒದಗಿಸುವುದು.	ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕಿನ ವ್ಯಾಪ್ತಿಯಲ್ಲಿ ಒಟ್ಟು 06 ಕ್ರಷರ್ ಘಟಕಗಳಿಗೆ ಲೈಸೆನ್ಸ್ ನೀಡಲಾಗಿರುತ್ತದೆ. ವಿವರಗಳನ್ನು <u>ಅನುಬಂಧದಲ್ಲಿ</u> ಲಗತ್ತಿಸಿದೆ. ನೆಲಮಂಗಲ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಮಾಗಡಿ ತಾಲ್ಲೂಕಿನ ಸೋಲೂರು ಹೋಬಳಿ ಒಳಪಟ್ಟಿದ್ದು, ಈ ಹೋಬಳಿಯ ವ್ಯಾಪ್ತಿಯಲ್ಲಿ ಯಾವುದೇ ಕ್ರಷರ್‌ಗಳು ಇರುವುದಿಲ್ಲ.
ಆ)	ಅಧಿಕೃತ ಪರವಾನಿಗೆ ಪಡೆದು ನಡೆಸುತ್ತಿರುವ ಕ್ರಷರ್‌ಗಳ ಸಂಖ್ಯೆ ಎಷ್ಟು (ವಿವರ ನೀಡುವುದು)	ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕಿನ ವ್ಯಾಪ್ತಿಯಲ್ಲಿ ಒಟ್ಟು 6 ಕ್ರಷರ್ ಘಟಕಗಳಿಗೆ ಅಧಿಕೃತವಾಗಿ ಪರವಾನಗಿ ನೀಡಲಾಗಿರುತ್ತದೆ.
ಇ)	ಸದರಿ ಕ್ರಷರ್‌ಗಳಿಂದ ಸರ್ಕಾರಕ್ಕೆ ಬರುತ್ತಿರುವ ತೆರಿಗೆ ಪ್ರಮಾಣವೆಷ್ಟು ಹಾಗೂ ಈ ತೆರಿಗೆಯಿಂದ ಅಭಿವೃದ್ಧಿಪಡಿಸಿದ ಗ್ರಾಮಗಳೆಷ್ಟು? (ವಿವರ ನೀಡುವುದು)	ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 36 ರಂತೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಅಧಿಕೃತವಾಗಿ ಪರವಾನಿಗೆ ಪಡೆದ ಗುತ್ತಿಗೆದಾರರು ಗುತ್ತಿಗೆ ಪ್ರದೇಶದಲ್ಲಿ ತೆಗೆಯುವ ಉಪ ಖನಿಜವನ್ನು ಸಾಗಾಣಿಕೆ ಮಾಡುವ ಮುನ್ನ ರಾಜಧನ, ಜಿಲ್ಲಾ ಖನಿಜ ಪ್ರತಿಷ್ಠಾನ ವಂತಿಕೆ ಪಾವತಿಸಿ ಖನಿಜ ಸಾಗಾಣಿಕೆ ಪರವಾನಿಗೆ ಪಡೆಯಬೇಕಾಗಿರುತ್ತದೆ. ನಿಯಮಗಳಲ್ಲಿ ಕ್ರಷರ್ ಮಾಲೀಕರಿಂದ ರಾಜಧನ ಸಂಗ್ರಹಣೆಗೆ ಅವಕಾಶವಿರುವುದಿಲ್ಲ. ಕ್ರಷರ್ ಘಟಕದ ಮಾಲೀಕರು ಅಧಿಕೃತ ಕಲ್ಲು ಗಣಿ ಗುತ್ತಿಗೆದಾರರಿಂದ ಕಚ್ಚಾ ಕಟ್ಟಡ ಕಲ್ಲನ್ನು ಪಡೆದು ಕ್ರಷರ್ ಘಟಕದಲ್ಲಿ ಅಂತಿಮ ಉತ್ಪನ್ನಗಳಾದ ಎಂ-ಸ್ಯಾಂಡ್, 40mm, 20mm, 12mm, ಮತ್ತು 6mm ಜಲ್ಲಿಯನ್ನು ಉತ್ಪಾದಿಸಿ, ಸದರಿ ಅಂತಿಮ ಉತ್ಪನ್ನವನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಸೆಕೆಂಡರಿ ಪರವಾನಿಗೆ ಪಡೆದು ಸಾಗಾಣಿಕೆ ಮಾಡಬೇಕಾಗಿರುತ್ತದೆ. ಅಂತಿಮ ಉತ್ಪನ್ನವನ್ನು ಸಾಗಾಣಿಕೆ ಮಾಡಲು ರಾಜಧನ ಪಾವತಿಸುವಂತಿಲ್ಲ. ಆದರೆ ಸೆಕೆಂಡರಿ ಖನಿಜ ರವಾನೆ ಪರವಾನಿಗೆ (MDP) ಪಡೆಯಲು ವಿಶೇಷ ರಕ್ಷಣಾತ್ಮಕ ಪರವಾನಿಗೆ ಪ್ರತಿ ಹಾಳೆಗಳಿಗೆ ರೂ.10/-ನ್ನು ಪಾವತಿಸಿ ಅಂತಿಮ ಉತ್ಪನ್ನವನ್ನು ಸಾಗಾಣಿಕೆ ಮಾಡಬೇಕಾಗಿರುತ್ತದೆ.

		ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಗಣಿ ಬಾಧಿತ ಪ್ರದೇಶ ಹಾಗೂ ಜನರ ಕಲ್ಯಾಣ ಅಭಿವೃದ್ಧಿಗಾಗಿ ಪ್ರಧಾನ ಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಯೋಜನೆ (PMKKKY) ಮಾರ್ಗಸೂಚಿಗಳನ್ವಯ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ಅಡಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ (ತಿದ್ದುಪಡಿ) ನಿಯಮಗಳು, 2018ರ ನಿಯಮ 18 ರಂತೆ, ಡಿಎಂಎಫ್ ನಿಧಿಯಲ್ಲಿ ಸಂಗ್ರಹಿಸಿದ ಒಟ್ಟು ಮೊತ್ತದಲ್ಲಿ ಶೇ 10 ರಷ್ಟು ಮೊತ್ತ ಎನ್ಡೋಮೆಂಟ್‌ಗಾಗಿ, ಶೇ.5 ಆಡಳಿತಾತ್ಮಕ ವೆಚ್ಚಕ್ಕಾಗಿ ಹಾಗೂ ಉಳಿದ 85% ರಲ್ಲಿ ಶೇ 60:40 ಅನುಪಾತದಂತೆ ಈ ಕೆಳಕಂಡ ಕಾರ್ಯಗಳಿಗೆ ಬಳಸಲಾಗುತ್ತಿದೆ. ಶೇ 60 ರ ಅನುಪಾತದಲ್ಲಿ **High Priority Areas**ಗೆ 1) ಕುಡಿಯುವ ನೀರು 2) ಪರಿಸರ ಮಾಲಿನ್ಯ ತಡೆಗಟ್ಟುವಿಕೆ ನಿಯಂತ್ರಣ ಕಾರ್ಯಗಳಿಗೆ 3) ಆರೋಗ್ಯ, 4) ಶಿಕ್ಷಣ 5) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಂಬಂಧ ಕಾರ್ಯಕ್ರಮ 6) ವಯಸ್ಸಾದ ಮತ್ತು ಅಂಗವಿಕಲ ವ್ಯಕ್ತಿಗಳ ಕಲ್ಯಾಣ 7) ಕೌಶಲ್ಯಅಭಿವೃದ್ಧಿ, 8) ನೈರ್ಮಲ್ಯತೆ. ಶೇಕಡ 40ರ ಅನುಪಾತದಲ್ಲಿ **Other Priority Areas**ಗೆ 1) ಭೌತಿಕ ಮೂಲ ಸೌಕರ್ಯ, 2) ನೀರಾವರಿ, 3) ಶಕ್ತಿ ಮತ್ತು ನೀರಿನ ಅಭಿವೃದ್ಧಿ, 4) ಗಣಿಗಾರಿಕೆ ಜಿಲ್ಲೆಗಳಲ್ಲಿ ಪರಿಸರ ಗುಣಮಟ್ಟ ಹೆಚ್ಚಿಸುವುದು. ಫೆಬ್ರವರಿ–2020ರ ಅಂತ್ಯದವರೆಗೆ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ಅಡಿಯಲ್ಲಿ ರೂ. 1701.53 ಲಕ್ಷ ಸಂಗ್ರಹಿಸಿದ್ದು, ಅದರಲ್ಲಿ ದೇವನಹಳ್ಳಿ ತಾಲ್ಲೂಕಿಗೆ ರೂ. 37.54 ಲಕ್ಷ, ದೊಡ್ಡಬಳ್ಳಾಪುರ ತಾಲ್ಲೂಕಿಗೆ ರೂ. 35.50 ಲಕ್ಷ, ಹೊಸಕೋಟೆ ತಾಲ್ಲೂಕಿಗೆ ರೂ. 37.50 ಲಕ್ಷ ಹಾಗೂ ನೆಲಮಂಗಲ ತಾಲ್ಲೂಕಿಗೆ ರೂ. 34.00 ಲಕ್ಷಗಳು ಒಟ್ಟು **ರೂ.144.54** ಲಕ್ಷಗಳ ಅಭಿವೃದ್ಧಿ ಕಾರ್ಯಗಳಿಗೆ ಕ್ರಿಯಾ ಯೋಜನೆ ತಯಾರಿಸಲಾಗಿರುತ್ತದೆ.

--3

ಇದರಲ್ಲಿ ನೆಲಮಂಗಲ ತಾಲ್ಲೂಕಿನ ಈ ಕೆಳಕಂಡ ಗ್ರಾಮಗಳ ಅಭಿವೃದ್ಧಿ ಕಾಮಗಾರಿಗಳಿಗೆ ತಯಾರಿಸಿದ ಕ್ರಿಯಾ ಯೋಜನೆಗಳು ಅನುಮೋದನೆಗೊಂಡಿದ್ದು, ಅನುಷ್ಠಾನ ಹಂತದಲ್ಲಿರುತ್ತವೆ.

ಗ್ರಾಮದ ಹೆಸರು	ಕಾಮಗಾರಿಯ ಹೆಸರು	ಮೊತ್ತ (ಲಕ್ಷಗಳಲ್ಲಿ)
ಕಲ್ಲನಾಯಕನ ಹಳ್ಳಿ	ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿ	4.50
ಬೀರಗೊಂಡನ ಹಳ್ಳಿ	ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿ	1.50
ತಡಸೀಘಟ್ಟ	ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿ	1.00
ಚಿಕ್ಕಣ್ಣನಹಳ್ಳಿ	ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿ ಮತ್ತು ಅಂಗನವಾಡಿ ಮತ್ತು ಸರ್ಕಾರಿ ಪ್ರಾಥಮಿಕ ಶಾಲೆ	4.50
ಓಬಳಾಪುರ	ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿ	3.00
ತ್ಯಾಮಗೊಂಡ್ಲು	ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿ	4.50
ಮಾಕೇನಹಳ್ಳಿ	ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿ ಮತ್ತು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕುಡಿಯುವ ನೀರು ಮತ್ತು ಶೌಚಾಲಯ	3.00
ಕೆಂಗಲ್	ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿ	3.00
ಎಲೆಕ್ಯಾತನಹಳ್ಳಿ	ಸರ್ಕಾರಿ ಪ್ರೌಢಶಾಲೆ ಮತ್ತು ಹಿರಿಯ ಪ್ರಾಥಮಿಕ ಶಾಲೆ ಕುಡಿಯುವ ನೀರು ಮತ್ತು ಶೌಚಾಲಯ ಮತ್ತು ಅಂಗನವಾಡಿ ಕಾಪೌಂಡ್	9.00
ಒಟ್ಟು		**34.00**

ಸಂಖ್ಯೆ: ಸಿಐ 128 ಎಂಎಂಎನ್ 2020

(ಸಿ.ಸಿ. ಪಾಟೀಲ)
ಗಣಿ ಮತ್ತು ಭೂವಿಜ್ಞಾನ ಸಚಿವರು.

ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು ವ್ಯಾಪ್ತಿಯಲ್ಲಿನ ಜಲ್ಲಿ ಕ್ರಷರ್ ಘಟಕಗಳ ವಿವರ

ಅನುಬಂಧ–1

ಕ್ರ ಸಂ.	ಕ್ರಷರ್ ಘಟಕದ ಮಾಲೀಕರ ಹೆಸರು ಮತ್ತು ವಿಳಾಸ	ILMS ನ ನೋಂದಣಿ ಸಂಖ್ಯೆ	ಗ್ರಾಮ	ಸರ್ವೆ ನಂ	ವಿಸ್ತೀರ್ಣ	ಫಾರಂ–C ಲೈಸನ್ಸ್ ನೀಡಿರುವ ದಿನಾಂಕ	ಷರಾ
1	ಮೆ॥ ಸ್ಯಾಂಡ್‌ರಾಕ್ ಅಗ್ರಿಗೇಟ್ಸ್ ಪ್ರೈ.ಲಿ., ಪಾ: ಶ್ರೀ ಹರ್ಷ ಮತ್ತು ಇತರರು ನಂ. 196, 8ನೇ ಕ್ರಾಸ್, 1ನೇ ಮೇನ್ ರಸ್ತೆ, ಕೆಂಗೇರಿ ಸೆಟ್‌ಲೈಟ್ ಟೌನ್, ಬೆಂಗಳೂರು 60	BLRSC17	ಕೆ.ಜಿ. ಜಾಜೂರು	31/1 & 32/1	4-14	25.11.2017	ಚಾಲ್ತಿ
2	ಮೆ॥ ಎಸ್.ಎಲ್.ಆರ್. ಅಕ್ಷಾ ಎಂ–ಸ್ಯಾಂಡ್ ಅಗ್ರಿಗೇಟ್ಸ್, ಪಾಲುದಾರರು: ಮಹೇಶ್ವರಪ್ಪ, ನಂ. 222, ಹಂಸ ನಿಲಯ, 1ನೇ ಮಹಡಿ, 50 ಫೀಟ್ ರೋಡ್, ಬಾಲಾಜಿ ಲೇಔಟ್, ಬೆಂಗಳೂರು 56	BLRSC23	ಮಾಕೇನಹಳ್ಳಿ	58/4	2-11	28.07.2018	ಚಾಲ್ತಿ
3	ಮೆ॥ ಸೂರ್ಯ ಇನ್‌ಫ್ರಾ, ಪಾ: ಹಿಮಾಂಶು ಗುಪ್ತ ಮತ್ತು ಇತರರು ನಂ. ಎಫ್407, 4ನೇ ಮಹಡಿ, ಅರ್ಯ ಹಜ್ ಹೋಪ್, ವೈಟ್ ಫೀಲ್ಡ್, ಬೆಂಗಳೂರು 06	BLRSC25	ಮಾಕೇನಹಳ್ಳಿ	62/1B & 62/3	1-26	28.07.2018	ಚಾಲ್ತಿ
4	ಫಾಸ್ಟ್‌ವೆಲ್ ಡೆಲ್‌ಕಾಮ್ ಪ್ರೈ.ಲಿ., ನಿ: ಶ್ರೀನಿವಾಸ ಗುಪ್ತ, 793, ಕೆಟಗರಿ ಎಂಐಜಿ 2, ಕರ್ನಾಟಕ ಹೌಸಿಂಗ್ ಬೋರ್ಡ್, ಸೂರ್ಯನಗರ (ಚಂದ್ರಾಪುರ ವೃತ್ತ ಹತ್ತಿರ) ಅಂಕೋಲಾ ತಾಲ್ಲೂಕು 560081	BLRSC23	ಮಾಕೇನಹಳ್ಳಿ	47	2-00	03.01.2019	ಚಾಲ್ತಿ
5	ಶ್ರೀ ವಿನಾಯಕ ಸ್ಟೋನ್ ಕ್ರಷರ್, ಪಾರ್ಟನರ್: ವಿಶ್ವಾಸ್ .ಎನ್ ಮತ್ತು ಇತರರು, ಸ.ನಂ. 49/3, 49/5, 49/6, ಮಾಕೇನಹಳ್ಳಿ ಗ್ರಾಮ, ಸೋಂಪುರ ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು.	BLRSC28	ಮಾಕೇನಹಳ್ಳಿ	49/3, 49/5 & 49/6	2-20	06.02.2019	ಚಾಲ್ತಿ
6	ಬಿ. ಜಿ. ಎಸ್. ಕನ್‌ಸ್ಟ್ರಕ್ಷನ್ಸ್, ಪ್ರೊ: ಶ್ರೀ ಸುಂದರಂ, ನಂ. 187, ಲಿಂಕ್ ರೋಡ್, ಮಲ್ಲೇಶ್ವರಂ, ಬೆಂಗಳೂರು 560003	BLRSC32	ಎಲೇಕ್ಯಾತನಹಳ್ಳಿ	50	3-00	02.08.2019	ಚಾಲ್ತಿ

CI 128 MMN 2020

Deputy Director (Min. Admn)
Dept. of Mines & Geology
Bangalore-560001

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 20 ಎಲ್ಎಕ್ಯೂ / ~~ಎಲ್‌ಸಿಕ್ಯೂ~~ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ 12-03-2020

10
Stad
15/3/20

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ / ~~ಪರಿಷತ್~~,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ:- ಕರ್ನಾಟಕ ವಿಧಾನ ಸಭೆ / ~~ಪರಿಷತ್~~ ಸದಸ್ಯರಾದ ಶ್ರೀ ಬಾಲಕೃಷ್ಣ. ಸಿ.ಎನ್. ಇವರ ಚುಕ್ಕೆ ಗುರುತಿನ / ~~ಗುರುತಿಲ್ಲದ~~ ಪ್ರಶ್ನೆ ಸಂಖ್ಯೆ: 1155 ಕ್ಕೆ ಉತ್ತರ ನೀಡುವ ಬಗ್ಗೆ.

.----

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆ/ ~~ಪರಿಷತ್ತಿನ~~ ಸದಸ್ಯರಾದ ಶ್ರೀ . ಬಾಲಕೃಷ್ಣ. ಸಿ.ಎನ್. (ಶ್ರವಣ ಬೆಳಗೊಳ) ಇವರು ಮಂಡಿಸಿರುವ ಚುಕ್ಕೆ ಗುರುತಿನ / ~~ಗುರುತಿಲ್ಲದ~~ ಪ್ರಶ್ನೆ ಸಂಖ್ಯೆ:. 1155. ಕ್ಕೆ ಉತ್ತರವನ್ನು ತಯಾರಿಸಿದ್ದು, ಇದರ 350 ಪ್ರತಿಗಳನ್ನು ಇದರೊಂದಿಗೆ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

for [signature]

(ಎ.ವಿಜಯಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	1155
ಸದಸ್ಯರ ಹೆಸರು	:	ಶ್ರೀ ಬಾಲಕೃಷ್ಣ ಸಿ.ಎನ್. (ಶ್ರವಣಬೆಳಗೊಳ)
ಉತ್ತರಿಸುವ ದಿನಾಂಕ	:	13.03.2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕ.ಸಂ.	ಪ್ರಶ್ನೆ	ಉತ್ತರ
(ಅ)	ಶ್ರವಣಬೆಳಗೊಳವನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಶ್ರವಣಬೆಳಗೊಳ ಗ್ರಾಮ ಪಂಚಾಯತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಇರುವುದಿಲ್ಲ.
(ಆ)	ಹಾಗಿದಲ್ಲಿ ಯಾವಾಗ ಮೇಲ್ದರ್ಜೆಗೇರಿಸಲು ಸರ್ಕಾರ ನಿರ್ಧರಿಸಿದೆ?	ಕರ್ನಾಟಕ ಪುರಸಭೆಗಳ ಅಧಿನಿಯಮ 1964ರ ಕಲಂ 3, 9 ಮತ್ತು 349 ಗಳನ್ವಯ ಗ್ರಾಮ ಪಂಚಾಯಿತಿಯಿಂದ ಪಟ್ಟಣ ಪಂಚಾಯಿತಿಯನ್ನಾಗಿ ಪರಿವರ್ತಿಸಲು ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುವುದು. 1. ಆ ಗ್ರಾಮ ಪಂಚಾಯಿತಿಯ ಪ್ರದೇಶದ ಜನಸಂಖ್ಯೆ 10,000ಕ್ಕೆ ಕಡಿಮೆ ಇಲ್ಲದಂತೆ ಹಾಗೂ 20,000 ಕ್ಕೆ ಹೆಚ್ಚಿಲ್ಲದಂತಿರಬೇಕು, 2. ಅಂತಹ ಪ್ರದೇಶದ ಜನಸಂಖ್ಯೆಯ ಜನಸಾಂದ್ರತೆಯು ಆ ಪ್ರದೇಶದ ಒಂದು ಚದುರ ಕಿ.ಮೀ. ವಿಸ್ತೀರ್ಣಕ್ಕೆ 400 ಕ್ಕಿಂತ ಕಡಿಮೆ ಇಲ್ಲದಿರುವುದು, 3. ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗಾವಕಾಶಗಳ ಶೇಕಡಾವಾರು ಪ್ರಮಾಣವು ಒಟ್ಟು ಉದ್ಯೋಗದ ಪ್ರಮಾಣಕ್ಕಿಂತ ಶೇ.50 ಕ್ಕಿಂತ ಕಡಿಮೆ ಇಲ್ಲದಿರುವುದು. ಆದರೆ, ದಿನಾಂಕ 19.03.2015 ರಂದು ನಡೆದ ಸಚಿವ ಸಂಪುಟ ಸಭೆಯ ತೀರ್ಮಾನದನ್ವಯ 15,000 ಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯಿತಿಗಳನ್ನು ಮಾತ್ರ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಕ್ರಮವಹಿಸಲಾಗಿದೆ. 2011 ರ ಜನಗಣತಿಯನುಸಾರ ಶ್ರವಣಬೆಳಗೊಳ ಗ್ರಾಮ ಪಂಚಾಯತಿಯ ಜನಸಂಖ್ಯೆಯು 6,485 ಇದ್ದು, ಗ್ರಾಮ ಪಂಚಾಯಿತಿಯಿಂದ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಕನಿಷ್ಠ ಜನಸಂಖ್ಯೆ ಹೊಂದಿಲ್ಲವಾದ್ದರಿಂದ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಅವಕಾಶವಿರುವುದಿಲ್ಲ.

ಸಂಖ್ಯೆ: ನಅಇ 20 ಎಲ್‌ಎಕ್ಯೂ 2020

(ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ
ಮತ್ತು ರೇಷ್ಮೆ ಸಚಿವರು

(11) Stord 13/3/20

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1894
ವಿಧಾನ ಸಭೆಯ ಸದಸ್ಯರ ಹೆಸರು : ಶ್ರೀ ನಾಗೇಂದ್ರ ಎಲ್ (ಚಾಮರಾಜ)
ಉತ್ತರಿಸಬೇಕಾದ ದಿನಾಂಕ : 13.03.2020
ಉತ್ತರಿಸುವ ಸಚಿವರು : ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ಕಳೆದ ಮೂರು ವರ್ಷಗಳಲ್ಲಿ ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬಿಪಿಎಲ್ ಕಾರ್ಡ್ ಗಳಿಗಾಗಿ ಬಂದ ಒಟ್ಟು ಅರ್ಜಿಗಳೆಷ್ಟು ಹಾಗೂ ಎಷ್ಟು BPL ಕಾರ್ಡ್ ಗಳನ್ನು ವಿತರಿಸಲಾಗಿದೆ;	ಕಳೆದ ಮೂರು ವರ್ಷಗಳಲ್ಲಿ ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಆದ್ಯತಾ (ಪಿ.ಹೆಚ್.ಹೆಚ್) ಪಡಿತರ ಚೀಟಿಗಾಗಿ 3,733 ಅರ್ಜಿಗಳು ಸ್ವೀಕರಿಸಲಾಗಿದ್ದು, ಈ ಪೈಕಿ 2,309 ಆದ್ಯತಾ (ಪಿ.ಹೆಚ್.ಹೆಚ್) ಪಡಿತರ ಚೀಟಿಗಳನ್ನು ವಿತರಿಸಲಾಗಿದೆ.
ಆ	ಇಂತಹ ಅರ್ಜಿಗಳಲ್ಲಿ ಎಷ್ಟನ್ನು ತಿರಸ್ಕರಿಸಲಾಗಿದೆ; ತಿರಸ್ಕರಿಸಲು ಕಾರಣಗಳೇನು;	ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ 1,143 ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಸದರಿ ಅರ್ಜಿದಾರರ ಹೆಸರು ಬೇರೆ ಕಾರ್ಡಿನಲ್ಲಿ ಇದ್ದ ಕಾರಣ, ಒಂದೇ ಕುಟುಂಬಕ್ಕೆ ಎರಡು ಕಾರ್ಡು ನೀಡಲು ಅವಕಾಶವಿಲ್ಲದ ಕಾರಣ ಹಾಗೂ ಸರ್ಕಾರವು ನಿಗದಿಪಡಿಸಿರುವ ಮಾನದಂಡಗಳಿಗೆ ಒಳಪಡದಿರುವಂತಹ ಸಂದರ್ಭಗಳಲ್ಲಿ ಅರ್ಜಿಗಳನ್ನು ತಿರಸ್ಕರಿಸಲಾಗಿದೆ.
ಇ	ಬಿಪಿಎಲ್ ಕಾರ್ಡ್ ನ್ನು ನೀಡಲು ಸರ್ಕಾರ ಅನುಸರಿಸುತ್ತಿರುವ ಮಾನದಂಡಗಳಾವುವು ಹಾಗೂ ಸದರಿ ಕಾರ್ಡ್ ಬಳಕೆದಾರರಿಗೆ ಯಾವ ಯಾವ ಸವಲತ್ತುಗಳು ದೊರೆಯುತ್ತಿವೆ? (ವಿವರ ನೀಡುವುದು)	ಸರ್ಕಾರಿ ಆದೇಶ ಸಂಖ್ಯೆ: ಆನಾಸ 116 ಡಿಆರ್ ಎ 2015, ಬೆಂಗಳೂರು, ದಿನಾಂಕ: 25/03/2017 ಮತ್ತು 20/05/2017 ರಂತೆ ಈ ಕೆಳಕಂಡ ಹೊರಗಿಡುವ ಮಾನದಂಡಗಳನ್ನು ಆಧರಿಸಿ, ಆದ್ಯತಾ ಪಡಿತರ ಚೀಟಿ ಪಡೆಯಬಹುದು. 1. ವೇತನವನ್ನು ಗಣನೆಗೆ ತೆಗೆದುಕೊಳ್ಳದೆ ಎಲ್ಲಾ ಖಾಯಂ ನೌಕರರು ಅಂದರೆ, ಸರ್ಕಾರದ ಅಥವಾ ಸರ್ಕಾರದಿಂದ ಅನುದಾನವನ್ನು ಪಡೆಯುತ್ತಿರುವ ಸಂಸ್ಥೆಗಳು ಅಥವಾ ಸರ್ಕಾರಿ ಪ್ರಾಯೋಜಿತ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು/ಮಂಡಳಿಗಳು/ ನಿಗಮಗಳು/ಸ್ವಾಯತ್ತ ಸಂಸ್ಥೆಗಳು ಇತ್ಯಾದಿ: ಒಳಗೊಂಡಂತೆ ಆದಾಯ ತೆರಿಗೆ/ಸೇವಾ ತೆರಿಗೆ/ ವ್ಯಾಟ್/ವೃತ್ತಿ ತೆರಿಗೆ ಪಾವತಿಸುವ ಎಲ್ಲಾ ಕುಟುಂಬಗಳು.

	2. ಗ್ರಾಮೀಣ ಪ್ರದೇಶದಲ್ಲಿ 3 ಹೆಕ್ಟೇರ್ ಒಣಭೂಮಿ ಅಥವಾ ತತ್ಸಮಾನ ನೀರಾವರಿ ಭೂಮಿ ಹೊಂದಿರುವ ಕುಟುಂಬಗಳು ಅಥವಾ ಗ್ರಾಮೀಣ ಪ್ರದೇಶವನ್ನು ಹೊರತುಪಡಿಸಿ ನಗರ ಪ್ರದೇಶದಲ್ಲಿ 1000 ಚದರ ಅಡಿಗಿಂತಲೂ ಹೆಚ್ಚಿನ ವಿಸ್ತೀರ್ಣದ ಪಕ್ಕಾ ಮನೆಯನ್ನು ಸ್ವಂತವಾಗಿ ಹೊಂದಿರುವ ಕುಟುಂಬಗಳು. 3. ಜೀವನೋಪಾಯಕ್ಕಾಗಿ ಸ್ವತಃ ಓಡಿಸುವ ಒಂದು ವಾಣಿಜ್ಯ ವಾಹನವನ್ನು ಅಂದರೆ ಟ್ರಾಕ್ಟರ್, ಮ್ಯಾಕ್ಸಿಕ್ಯಾಬ್, ಟ್ಯಾಕ್ಸಿ ಇತ್ಯಾದಿಗಳನ್ನು ಹೊಂದಿದ ಕುಟುಂಬವನ್ನು ಹೊರತುಪಡಿಸಿ, ನಾಲ್ಕು ಚಕ್ರದ ವಾಹನಗಳನ್ನು ಹೊಂದಿರುವ ಎಲ್ಲಾ ಕುಟುಂಬಗಳು. 4. ಕುಟುಂಬದ ವಾರ್ಷಿಕ ಆದಾಯವು ರೂ.1.20 ಲಕ್ಷ ಹಾಗೂ ಹೆಚ್ಚಿಗೆ ಇರುವ ಕುಟುಂಬಗಳು. ಆಹಾರ ಇಲಾಖೆಯಿಂದ ಪ್ರತಿ ಅಂತ್ಯೋದಯ ಪಡಿತರ ಚೀಟಿಗೆ 35 ಕೆ.ಜಿ. ಅಕ್ಕಿ ಉಚಿತವಾಗಿ, ಆದ್ಯತಾ ಪಡಿತರ ಚೀಟಿ (ಪಿಹೆಚ್ ಹೆಚ್) ಯ ಪ್ರತಿ ಸದಸ್ಯರಿಗೆ ತಲಾ 7 ಕೆ.ಜಿ ಅಕ್ಕಿಯನ್ನು ಉಚಿತವಾಗಿ ವಿತರಿಸಲಾಗುತ್ತಿದೆ.

ಆನಾಸ 91 ಡಿಆರ್ ಎ 2020 (ಇ-ಆಫೀಸ್)

(ಕೆ.ಗೋಪಾಲಯ್ಯ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1894
ವಿಧಾನ ಸಭೆಯ ಸದಸ್ಯರ ಹೆಸರು : ಶ್ರೀ ನಾಗೇಂದ್ರ ಎಲ್ (ಚಾಮರಾಜ)
ಉತ್ತರಿಸಬೇಕಾದ ದಿನಾಂಕ : 13.03.2020
ಉತ್ತರಿಸುವ ಸಚಿವರು : ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ಕಳೆದ ಮೂರು ವರ್ಷಗಳಲ್ಲಿ ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬಿಪಿಎಲ್ ಕಾರ್ಡ್ ಗಳಿಗಾಗಿ ಬಂದ ಒಟ್ಟು ಅರ್ಜಿಗಳೆಷ್ಟು ಹಾಗೂ ಎಷ್ಟು BPL ಕಾರ್ಡ್ ಗಳನ್ನು ವಿತರಿಸಲಾಗಿದೆ;	ಕಳೆದ ಮೂರು ವರ್ಷಗಳಲ್ಲಿ ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಆದ್ಯತಾ (ಪಿ.ಹೆಚ್.ಹೆಚ್) ಪಡಿತರ ಚೀಟಿಗಾಗಿ 3,733 ಅರ್ಜಿಗಳು ಸ್ವೀಕರಿಸಲಾಗಿದ್ದು, ಈ ಪೈಕಿ 2,309 ಆದ್ಯತಾ (ಪಿ.ಹೆಚ್.ಹೆಚ್) ಪಡಿತರ ಚೀಟಿಗಳನ್ನು ವಿತರಿಸಲಾಗಿದೆ.
ಆ	ಇಂತಹ ಅರ್ಜಿಗಳಲ್ಲಿ ಎಷ್ಟನ್ನು ತಿರಸ್ಕರಿಸಲಾಗಿದೆ; ತಿರಸ್ಕರಿಸಲು ಕಾರಣಗಳೇನು;	ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ1,143 ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಸದರಿ ಅರ್ಜಿದಾರರ ಹೆಸರು ಬೇರೆ ಕಾರ್ಡಿನಲ್ಲಿ ಇದ್ದ ಕಾರಣ, ಒಂದೇ ಕುಟುಂಬಕ್ಕೆ ಎರಡು ಕಾರ್ಡು ನೀಡಲು ಅವಕಾಶವಿಲ್ಲದ ಕಾರಣ ಹಾಗೂ ಸರ್ಕಾರವು ನಿಗದಿಪಡಿಸಿರುವ ಮಾನದಂಡಗಳಿಗೆ ಒಳಪಡದಿರುವಂತಹ ಸಂದರ್ಭಗಳಲ್ಲಿ ಅರ್ಜಿಗಳನ್ನು ತಿರಸ್ಕರಿಸಲಾಗಿದೆ.
ಇ	ಬಿಪಿಎಲ್ ಕಾರ್ಡ್ ನ್ನು ನೀಡಲು ಸರ್ಕಾರ ಅನುಸರಿಸುತ್ತಿರುವ ಮಾನದಂಡಗಳಾವುವು ಹಾಗೂ ಸದರಿ ಕಾರ್ಡ್ ಬಳಕೆದಾರರಿಗೆ ಯಾವ ಯಾವ ಸವಲತ್ತುಗಳು ದೊರೆಯುತ್ತಿವೆ? (ವಿವರ ನೀಡುವುದು)	ಸರ್ಕಾರಿ ಆದೇಶ ಸಂಖ್ಯೆ: ಆನಾಸ 116 ಡಿಆರ್ ಎ 2015, ಬೆಂಗಳೂರು, ದಿನಾಂಕ: 25/03/2017 ಮತ್ತು 20/05/2017 ರಂತೆ ಈ ಕೆಳಕಂಡ ಹೊರಗಿಡುವ ಮಾನದಂಡಗಳನ್ನು ಆಧರಿಸಿ, ಆದ್ಯತಾ ಪಡಿತರ ಚೀಟಿ ಪಡೆಯಬಹುದು. 1. ವೇತನವನ್ನು ಗಣನೆಗೆ ತೆಗೆದುಕೊಳ್ಳದೆ ಎಲ್ಲಾ ಖಾಯಂ ನೌಕರರು ಅಂದರೆ, ಸರ್ಕಾರದ ಅಥವಾ ಸರ್ಕಾರದಿಂದ ಅನುದಾನವನ್ನು ಪಡೆಯುತ್ತಿರುವ ಸಂಸ್ಥೆಗಳು ಅಥವಾ ಸರ್ಕಾರಿ ಪ್ರಾಯೋಜಿತ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು/ಮಂಡಳಿಗಳು/ ನಿಗಮಗಳು/ಸ್ವಾಯತ್ತ ಸಂಸ್ಥೆಗಳು ಇತ್ಯಾದಿ: ಒಳಗೊಂಡಂತೆ ಆದಾಯ ತೆರಿಗೆ/ಸೇವಾ ತೆರಿಗೆ/ ವ್ಯಾಟ್/ವೃತ್ತಿ ತೆರಿಗೆ ಪಾವತಿಸುವ ಎಲ್ಲಾ ಕುಟುಂಬಗಳು.

		2. ಗ್ರಾಮೀಣ ಪ್ರದೇಶದಲ್ಲಿ 3 ಹೆಕ್ಟೇರ್ ಒಣಭೂಮಿ ಅಥವಾ ತತ್ಸಮಾನ ನೀರಾವರಿ ಭೂಮಿ ಹೊಂದಿರುವ ಕುಟುಂಬಗಳು ಅಥವಾ ಗ್ರಾಮೀಣ ಪ್ರದೇಶವನ್ನು ಹೊರತುಪಡಿಸಿ ನಗರ ಪ್ರದೇಶದಲ್ಲಿ 1000 ಚದರ ಅಡಿಗಿಂತಲೂ ಹೆಚ್ಚಿನ ವಿಸ್ತೀರ್ಣದ ಪಕ್ಕಾ ಮನೆಯನ್ನು ಸ್ವಂತವಾಗಿ ಹೊಂದಿರುವ ಕುಟುಂಬಗಳು. 3. ಜೀವನೋಪಾಯಕ್ಕಾಗಿ ಸ್ವತಃ ಓಡಿಸುವ ಒಂದು ವಾಣಿಜ್ಯ ವಾಹನವನ್ನು ಅಂದರೆ ಟ್ರಾಕ್ಟರ್, ಮ್ಯಾಕ್ಸಿಕ್ಯಾಬ್, ಟ್ಯಾಕ್ಸಿ ಇತ್ಯಾದಿಗಳನ್ನು ಹೊಂದಿದ ಕುಟುಂಬವನ್ನು ಹೊರತುಪಡಿಸಿ, ನಾಲ್ಕು ಚಕ್ರದ ವಾಹನಗಳನ್ನು ಹೊಂದಿರುವ ಎಲ್ಲಾ ಕುಟುಂಬಗಳು. 4. ಕುಟುಂಬದ ವಾರ್ಷಿಕ ಆದಾಯವು ರೂ.1.20 ಲಕ್ಷ ಹಾಗೂ ಹೆಚ್ಚಿಗೆ ಇರುವ ಕುಟುಂಬಗಳು. ಆಹಾರ ಇಲಾಖೆಯಿಂದ ಪ್ರತಿ ಅಂತ್ಯೋದಯ ಪಡಿತರ ಚೀಟಿಗೆ 35 ಕೆ.ಜಿ. ಅಕ್ಕಿ ಉಚಿತವಾಗಿ, ಆದ್ಯತಾ ಪಡಿತರ ಚೀಟಿ (ಪಿಹೆಚ್ ಹೆಚ್) ಯ ಪ್ರತಿ ಸದಸ್ಯರಿಗೆ ತಲಾ 7 ಕೆ.ಜಿ ಅಕ್ಕಿಯನ್ನು ಉಚಿತವಾಗಿ ವಿತರಿಸಲಾಗುತ್ತಿದೆ.

ಆನಾಸ 91 ಡಿಆರ್ ಎ 2020 (ಇ-ಆಫೀಸ್)

(ಕೆ.ಗೋಪಾಲಯ್ಯ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 43 ಯುಎಂಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 13.03.2020

12
Staa
13/3/20
@ 1-9.40 AM

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ವಿಧಾನ ಸಭೆಯ ಸದಸ್ಯರಾದ ಶ್ರೀ ಸುರೇಶ್ ಗೌಡ (ನಾಗಮಂಗಲ) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 689 ಕ್ಕೆ ಉತ್ತರಿಸುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆಯ ಸದಸ್ಯರಾದ ಶ್ರೀ ಸುರೇಶ್ ಗೌಡ (ನಾಗಮಂಗಲ) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 689 ಕ್ಕೆ ಉತ್ತರದ 350 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಎಸ್. ದಿವಾಕರ್)
ಶಾಖಾಧಿಕಾರಿ (ಮಂಡಳಿ ಶಾಖೆ),
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು	:	ಶ್ರೀ. ಸುರೇಶ್‌ಗೌಡ, (ನಾಗಮಂಗಲ)
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	689
ಉತ್ತರಿಸಬೇಕಾದ ದಿನಾಂಕ	:	13.03.2020.
ಉತ್ತರಿಸಬೇಕಾದವರು	:	ಮಾನ್ಯ ನಗರಾಭಿವೃದ್ಧಿ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬೆಳ್ಳೂರು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಸಮಗ್ರ ಒಳಚರಂಡಿ ನಿರ್ಮಾಣ ಯೋಜನೆಗೆ ಅಂದಾಜು ವೆಚ್ಚ ತಯಾರಿಸಲಾಗಿದೆಯೇ; (ವಿವರ ನೀಡುವುದು)	ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಬೆಳ್ಳೂರು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಸಮಗ್ರ ಒಳಚರಂಡಿ ನಿರ್ಮಾಣ ಯೋಜನೆಯ ರೂ.44.00 ಕೋಟಿಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ದಿನಾಂಕ: 12.03.2020ರಂದು ಪ್ರಸ್ತಾವನೆ ಸ್ವೀಕೃತವಾಗಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ.
ಆ)	ಪ್ರಸ್ತುತ ಸದರಿ ಯೋಜನೆಯು ಯಾವ ಹಂತದಲ್ಲಿದೆ ಹಾಗೂ ಸದರಿ ಯೋಜನೆಯ ಮಂಜೂರಾತಿ ನೀಡುವಲ್ಲಿ ವಿಳಂಬಕ್ಕೆ ಕಾರಣಗಳೇನು? (ವಿವರ ನೀಡುವುದು).	

ಸಂಖ್ಯೆ: ನಅಇ 43 ಯುಎಂಎಸ್ 2020

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ರೇಷ್ಮೆ 27 ರೇಕೃವಿ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 12-03-2020

ಇವರಿಂದ:
ಸರ್ಕಾರದ ಕಾರ್ಯದರ್ಶಿ,
ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ,
ಬಹುಮಹಡಿ ಕಟ್ಟಡ, ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ,s
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ವಿಷಯ: ವಿಧಾನ ಸಭೆ ಸದಸ್ಯರಾದ ಶ್ರೀ ಅಜಯ್‌ಧರ್ಮಸಿಂಗ್ ಡಾ|| ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1891 ಕ್ಕೆ ಉತ್ತರ ಒದಗಿಸುವ ಕುರಿತು.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ವಿಧಾನ ಸಭೆ ಸದಸ್ಯರಾದ ಶ್ರೀ ಅಜಯ್‌ಧರ್ಮಸಿಂಗ್ ಡಾ|| ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1891 ಕ್ಕೆ ಉತ್ತರದ 350 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳಹಿಸಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ. ಹಾಗೂ ಉತ್ತರದ SOFT COPY ಹಾಗೂ ಪ್ರಶ್ನೆಗಳ ಶಾಖೆಯ email ID :dsqb-kla-kar@nic.in ಗೆ ಕಳುಹಿಸಲಾಗಿದೆ.

ತಮ್ಮ ನಂಬುಗೆಯ,

(ಹೆಚ್.ವನಿತ)
ಸರ್ಕಾರದ ಅಧೀನ ಕಾರ್ಯದರ್ಶಿ
ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ (ರೇಷ್ಮೆ)

ಪ್ರತಿ ಮಾಹಿತಿಗಾಗಿ:

1. ಮಾನ್ಯ ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರ ಆಪ್ತ ಕಾರ್ಯದರ್ಶಿ ರವರಿಗೆ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿಗಳು, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:	1891
ಸದಸ್ಯರ ಹೆಸರು:	ಶ್ರೀ.ಅಜಯ್‌ಧರ್ಮಸಿಂಗ್ ಡಾ||
ಉತ್ತರಿಸುವ ದಿನಾಂಕ:	13-03-2020
ಉತ್ತರಿಸುವವರು:	ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

	ಪ್ರಶ್ನೆಗಳು	ಉತ್ತರ
ಅ	ಜೇವರ್ಗಿ ತಾಲ್ಲೂಕಿನಲ್ಲಿ ಭೀಮಾನದಿ ಹಾದು ಹೋಗುವುದರಿಂದ ತಾಲ್ಲೂಕಿನಲ್ಲಿ ರೇಷ್ಮೆ ಬೆಳೆ ಉತ್ತೇಜನಕ್ಕೆ ಸರಕಾರ ಯಾವ ಕ್ರಮ ಕೈಗೊಂಡಿದೆ;	ಜೇವರ್ಗಿ ತಾಲ್ಲೂಕಿನ ಭೀಮಾ ನದಿ ವ್ಯಾಪ್ತಿಗೆ ಸಂಬಂಧಪಟ್ಟಂತೆ ರೇಷ್ಮೆ ಇಲಾಖೆಯಿಂದ ಯಾವುದೇ ವಿಶೇಷ ಕಾರ್ಯಕ್ರಮ ಇರುವುದಿಲ್ಲ. ನೀರಾವರಿ ಸೌಲಭ್ಯಗಳಿರುವ ರೈತರನ್ನು ರೇಷ್ಮೆ ಕೃಷಿ ಮಾಡಲು ಉತ್ತೇಜಿಸಲಾಗುತ್ತಿದೆ. ಮುಂದುವರೆದು, ರೇಷ್ಮೆ ಇಲಾಖೆಯಿಂದ ರೇಷ್ಮೆ ಕೃಷಿ ಅಭಿವೃದ್ಧಿಗಾಗಿ ಈ ಕೆಳಕಂಡ ಸಹಾಯಧನ ಹಾಗೂ ಪ್ರೋತ್ಸಾಹಧನ ಸೌಲಭ್ಯಗಳನ್ನು ರೇಷ್ಮೆ ಬೆಳೆಗಾರರಿಗೆ ಒದಗಿಸಲಾಗುತ್ತಿದೆ. 1. ಸುಧಾರಿತ ಹಿಪ್ಪುನೇರಳೆ ತೋಟ ಬೆಳೆಯಲು, ನರ್ಸರಿ ಬೆಳೆಸಲು ಸಹಾಯಧನ ಹಾಗೂ ತಾಂತ್ರಿಕ ಮಾಹಿತಿ ಒದಗಿಸಲಾಗುತ್ತಿದೆ. 2. ಹಿಪ್ಪುನೇರಳೆ ತೋಟಕ್ಕೆ ಟ್ರಂಚಿಂಗ್ – ಮಲ್ಚಿಂಗ್ ಮಾಡಲು ಸಹಾಯಧನ ಹಾಗೂ ತಾಂತ್ರಿಕ ಮಾಹಿತಿ. 3. ಹಿಪ್ಪುನೇರಳೆ ತೋಟಕ್ಕೆ ಹನಿ ನೀರಾವರಿ ಅಳವಡಿಕೆಗೆ ಶೇ.90ರಷ್ಟು ಸಹಾಯಧನ. 4. ಹಿಪ್ಪುನೇರಳೆ ತೋಟದ ಮಣ್ಣಿನ ಫಲವತ್ತತೆಗಾಗಿ ಜೈವಿಕಗೊಬ್ಬರ ಬಳಕೆ, ಹಿಪ್ಪುನೇರಳೆ ಸೊಪ್ಪಿನ ಇಳುವರಿ ಹಾಗೂ ಗುಣಮಟ್ಟ ಹೆಚ್ಚಿಸುವ ಸಲುವಾಗಿ ಸಸ್ಯ ಸಂವರ್ಧಕ ಹಾಗೂ ಬೇರು ಕೊಳೆ ನಿಯಂತ್ರಣಕ್ಕಾಗಿ ಸಹಾಯಧನ. 5. ಹಿಪ್ಪುನೇರಳೆ ಮರ ಕೃಷಿ ಪದ್ಧತಿ ಉತ್ತೇಜನಕ್ಕಾಗಿ ಸಹಾಯಧನ. 6. ರೇಷ್ಮೆ ಹುಳು ಸಾಕಾಣಿಕೆ ಮನೆ/ಮೌಂಟಿಂಗ್ ಹಾಲ್ ನಿರ್ಮಾಣಕ್ಕೆ ಸಹಾಯಧನ. 7. ಸೋಂಕು ನಿವಾರಕಗಳ ಪೂರೈಕೆ ಮತ್ತು ಸಲಕರಣೆಗಳಿಗೆ ಸಹಾಯಧನ ಹಾಗೂ ತಾಂತ್ರಿಕ ಮಾಹಿತಿ. 8. ರೋಟರಿ ಚಂದ್ರಿಕೆಗಳ ಖರೀದಿಗೆ ಸಹಾಯಧನ 9. ದ್ವಿತಳಿ ಚಾಕಿ ವೆಚ್ಚಕ್ಕೆ ಸಹಾಯಧನ. 10. ಚಾಕಿ ಸಾಕಾಣಿಕಾ ಕೇಂದ್ರದ ಸ್ಥಾಪನೆಗೆ / ಸಲಕರಣೆಗಳಿಗೆ ಸಹಾಯಧನ. 11. ನೂತನ ತಾಂತ್ರಿಕತೆಗಳ ಅಳವಡಿಕೆಗೆ ರೈತರಿಗೆ ತರಬೇತಿ ಮತ್ತು ಕಾರ್ಯಾಗಾರ. 12. ರೇಷ್ಮೆ ಗೂಡಿನ ಧಾರಣೆ ಕುಸಿತ ಸಂದರ್ಭದಲ್ಲಿ ರೇಷ್ಮೆ ಬೆಳೆಗಾರರಿಗೆ ರಕ್ಷಣಾತ್ಮಕ ದರ ನೀಡಲಾಗುತ್ತಿದೆ. 13. ದ್ವಿತಳಿ ಬಿತ್ತನೆ ಬೆಳೆಗಾರರು ಹಾಗೂ ಮೈಸೂರು ಬಿತ್ತನೆ ಬೆಳೆಗಾರರು ಬೆಳೆಯುವ ಬಿತ್ತನೆ ಗೂಡಿಗೆ ಪ್ರೋತ್ಸಾಹಧನ / ಬೋನಸ್ ನೀಡಲಾಗುತ್ತಿದೆ. 14. ರೇಷ್ಮೆ ಬಿತ್ತನೆ ಬೆಳೆಗಾರರಿಗೆ ಉತ್ಪಾದಕತೆ ಮತ್ತು ಗುಣಮಟ್ಟ ಆಧರಿಸಿ ಬಿತ್ತನೆ ಗೂಡಿಗೆ ಪ್ರೋತ್ಸಾಹಧನ ನೀಡಲಾಗುತ್ತಿದೆ. 15. ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ (ಜೇವರ್ಗಿ ಸೇರಿದಂತೆ) ಉತ್ಪಾದಿಸುವ ದ್ವಿತಳಿ ರೇಷ್ಮೆ ಗೂಡಿಗೆ ಕೆ.ಜಿ.ಗೆ ರೂ.10/-ರಂತೆ ಸಾಗಾಣಿಕೆ ವೆಚ್ಚ.

ಆ	ಸದರಿ ಪ್ರದೇಶದಲ್ಲಿ ರೇಷ್ಮೆ ಬೆಳೆಯಲು ಸರಕಾರಕ್ಕೆ ಯಾವುದಾದರು ಪ್ರಸ್ತಾವನೆ ಬಂದಿದೆಯೇ;	ಈ ಪ್ರದೇಶದಲ್ಲಿ ರೇಷ್ಮೆ ಬೆಳೆಯಲು ರೈತರು ಮುಂದೆ ಬಂದಿರುತ್ತಾರೆ. ಭೀಮಾ ನದಿ ದಂಡೆಯ ಪ್ರದೇಶದಲ್ಲಿ ಪ್ರಸಕ್ತ ವರ್ಷದಲ್ಲಿ ಹೊಸದಾಗಿ 25 ಎಕರೆ ಪ್ರದೇಶದಲ್ಲಿ ರೇಷ್ಮೆ ಬೆಳೆಯಲು 16 ರೇಷ್ಮೆ ಬೆಳೆಗಾರರಿಗೆ ರೂ.6,22,500/-ಗಳ ಸಹಾಯಧನ ನೀಡಲಾಗಿದೆ.
ಇ	ಬಂದಿದ್ದಲ್ಲಿ ರೈತರಿಗೆ ರೇಷ್ಮೆ ಬೆಳೆ ಬೆಳೆಯಲು ಸಹಾಯಧನದ ಸೌಲಭ್ಯ ನೀಡಲಾಗುತ್ತಿದೆಯೇ;	
ಈ	ಹಾಗಿದ್ದಲ್ಲಿ, ಇದಕ್ಕಾಗಿ ಎಷ್ಟು ಹಣ ಮೀಸಲಿರಿಸಲಾಗಿದೆ;	ರೇಷ್ಮೆ ಇಲಾಖೆಯು ವಿವಿಧ ಫಲಾನುಭವಿ ಆಧಾರಿತ ಯೋಜನೆ/ ಕಾರ್ಯಕ್ರಮಗಳಡಿ ಆಯಾ ತಾಲ್ಲೂಕಿನ ಫಲಾನುಭವಿಗಳ ಆಯ್ಕೆಗೆ ಅನುಗುಣವಾಗಿ ಬೇಡಿಕೆ ಮತ್ತು ಅನುದಾನ ಲಭ್ಯತೆಗೆ ಅನುಗುಣವಾಗಿ ಹಣ ಬಿಡುಗಡೆ ಮಾಡಲಾಗುತ್ತಿದೆ.
ಉ	ರಾಜ್ಯದಲ್ಲಿ ಬೆಳೆದ ರೇಷ್ಮೆ ಬೆಳೆಗೆ ಎಷ್ಟು ಬೆಂಬಲ ಬೆಲೆ ನೀಡಲಾಗು ತ್ತಿದೆ ಹಾಗೂ ಇದರಿಂದ ರೈತರಿಗೆ ಪ್ರಯೋಜನವಾಗುತ್ತಿದೆಯೇ? (ವಿವರ ನೀಡುವುದು)	ರಾಜ್ಯದಲ್ಲಿ ರೇಷ್ಮೆ ಬೆಳೆಗಾರರು ಬೆಳೆದ ರೇಷ್ಮೆ ಗೂಡಿಗೆ ಬೆಂಬಲ ಬೆಲೆ ನೀಡುವ ಕಾರ್ಯಕ್ರಮವಿರುವುದಿಲ್ಲ. ಆದರೆ, ರೇಷ್ಮೆ ಗೂಡಿನ ಧಾರಣೆಯು ಕುಸಿತಗೊಂಡ ಸಂದರ್ಭದಲ್ಲಿ ರಕ್ಷಣಾತ್ಮಕ ದರವನ್ನು ನೀಡುವ ಮೂಲಕ ರೇಷ್ಮೆ ಬೆಳೆ ಬೆಳೆಯಲು ಪ್ರೋತ್ಸಾಹಿಸಲಾಗುತ್ತಿದೆ. ದ್ವಿತಳಿ ರೇಷ್ಮೆ ಗೂಡಿನ ದರ ಪ್ರತಿ ಕೆ.ಜಿ.ಗೆ ರೂ.260/- ಹಾಗೂ ಮಿಶ್ರತಳಿ ಗೂಡಿನ ದರ ಪ್ರತಿ ಕೆ.ಜಿ.ಗೆ ರೂ.220/-ಕ್ಕಿಂತ ಕಡಿಮೆಯಾದಾಗ ಪ್ರತಿ ಕೆ.ಜಿ. ದ್ವಿತಳಿ ಬಿತ್ತನೆ ಗೂಡಿಗೆ ಗರಿಷ್ಠ ರೂ.50/- ಹಾಗೂ ಪ್ರತಿ ಕೆ.ಜಿ. ಮಿಶ್ರತಳಿ ಗೂಡಿಗೆ ಗರಿಷ್ಠ ರೂ.40/-ಗಳಿಗೆ ಮೀರದಂತೆ ರಕ್ಷಣಾತ್ಮಕ ದರ ನೀಡಲು ಕ್ರಮವಹಿಸಲಾಗುತ್ತಿದೆ.

ರೇಷ್ಮೆ 27 ರೇಕ್ರುವಿ 2020

(ನಾರಾಯಣಗೌಡ)

ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ, ಡಾ. ಬಿ. ಆರ್. ಅಂಬೇಡ್ಕರ್ ರಸ್ತೆ,
ಬೆಂಗಳೂರು –560001. ದೂ. 22034319

ಸಂಖ್ಯೆ: ಸಿಐ 34 ಸಿಎಸ್‌ಸಿ 2020 ದಿನಾಂಕ: 12.03.2020.

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
(ಎಂ.ಎಸ್.ಎಂ.ಇ. & ಗಣಿ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ವಿಕಾಸಸೌಧ, ಬೆಂಗಳೂರು–01.

14
Starred
13/3/20

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ,
ವಿಧಾನಸೌಧ, ಬೆಂಗಳೂರು–01.

ಮಾನ್ಯರೆ,

ವಿಷಯ: ಮಾನ್ಯ ಕರ್ನಾಟಕ ವಿಧಾನಸಭೆ ಸದಸ್ಯರಾದ ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 987ಕ್ಕೆ ಉತ್ತರಿಸುವ ಬಗ್ಗೆ.

* * * * *

ಮಾನ್ಯ ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 987ಕ್ಕೆ ದಿನಾಂಕ: 13.03.2020 ರಂದು ಕರ್ನಾಟಕ ವಿಧಾನಸಭೆ, ವಿಧಾನಸೌಧ, ಬೆಂಗಳೂರು, ಇಲ್ಲಿ ಉತ್ತರಿಸಬೇಕಾಗಿದ್ದು, ಸದರಿ ಪ್ರಶ್ನೆಯ ಉತ್ತರಗಳ 350 ಪ್ರತಿಗಳನ್ನು ಈ ಪತ್ರದೊಂದಿಗೆ ಕಳುಹಿಸಿಕೊಡಲು ನಿರ್ದೇಶಿತಳಾಗಿದ್ದೇನೆ.

ತಮ್ಮ ನಂಬುಗೆಯ,

Sumathi S 12/03/2020
(ಸುಮತಿ ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ (ಸಪ್ರಕೈ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಪ್ರತಿಯನ್ನು ಮಾಹಿತಿಗಾಗಿ:

1. ಮಾನ್ಯ ಮುಖ್ಯಮಂತ್ರಿಗಳ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು–01.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, (ಎಂ.ಎಸ್.ಎಂ.ಇ. & ಗಣಿ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸ ಸೌಧ, ಬೆಂಗಳೂರು–01.
3. ಸರ್ಕಾರದ ಅಧೀನ ಕಾರ್ಯದರ್ಶಿ (ಸಮನ್ವಯ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು–01.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 987
ಸದಸ್ಯರ ಹೆಸರು : ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)
ಉತ್ತರಿಸಬೇಕಾದ ದಿನಾಂಕ : 13.03.2020.
ಉತ್ತರಿಸುವವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕ್ರಂ.ಸ.	ಪ್ರಶ್ನೆ	ಉತ್ತರ	Answer
ಅ)	ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಸ್ಥಾಪನೆಗೊಂಡಿರುವ ಮಧ್ಯಮ ಕೈಗಾರಿಕೆಗಳೆಷ್ಟು; (ಜಿಲ್ಲಾವಾರು ವಿವರಗಳನ್ನೊದಗಿಸುವುದು)	ಕಳೆದ ಮೂರು ವರ್ಷಗಳಲ್ಲಿ (2016–17 ರಿಂದ 2019–20 ರವರೆಗೆ) ಒಟ್ಟು 491 ಮಧ್ಯಮ ಕೈಗಾರಿಕೆಗಳು ಸ್ಥಾಪನೆಗೊಂಡಿರುತ್ತವೆ. ಜಿಲ್ಲಾವಾರು ವಿವರಗಳನ್ನು **ಅನುಬಂಧದಲ್ಲಿ ಲಗತ್ತಿಸಿದೆ.**	During the last 3 years (2016-17 to 2018-19)491 medium scale industries have been established in the State. District wise details are enclosed in Annexure.
ಆ)	ಸದರಿ ಮಧ್ಯಮ ಕೈಗಾರಿಕೆಗಳು ಹೂಡಿರುವ ಬಂಡವಾಳ ಹಾಗೂ ಆ ಮೂಲಕ ಸೃಷ್ಟಿಸಿದ ಉದ್ಯೋಗಗಳ ಪ್ರಮಾಣವೆಷ್ಟು; (ವಿವರ ನೀಡುವುದು)	ಸದರಿ ಮಧ್ಯಮ ಕೈಗಾರಿಕೆಗಳು ರೂ.3,30,424.00 ಲಕ್ಷ ಬಂಡವಾಳ ಹೂಡಿದ್ದು, 23,409 ಜನರಿಗೆ ಉದ್ಯೋಗವಾಕಾಶ ಕಲ್ಪಿಸಿರುತ್ತವೆ. ಜಿಲ್ಲಾವಾರು ವಿವರಗಳನ್ನು **ಅನುಬಂಧದಲ್ಲಿ ಲಗತ್ತಿಸಿದೆ.**	These medium scale industries have invested Rs 3,30,424.00 lakhs and provided employment to 23,409 persons. District-wise details are enclosed in Annexure.
ಇ)	ಮಧ್ಯಮ ಕೈಗಾರಿಕೆಗಳ ಸ್ಥಾಪನೆಗಾಗಿ ಸರ್ಕಾರದ ಪ್ರೋತ್ಸಾಹಕ ಯೋಜನೆಗಳಾವುವು?	ಕರ್ನಾಟಕ ಕೈಗಾರಿಕಾ ನೀತಿ 2014–19 ರ ಪ್ರಕಾರ ಮಧ್ಯಮ ಕೈಗಾರಿಕೆಗಳಿಗೆ ಈ ಕೆಳಗಿನ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ನೀಡಲಾಗುತ್ತದೆ. 1. ಬಂಡವಾಳ ಹೂಡಿಕೆ ಸಹಾಯಧನ 2. ಮುದ್ರಾಂಕ ಶುಲ್ಕ ವಿನಾಯಿತಿ 3. ನೊಂದಣಿ ಶುಲ್ಕ ರಿಯಾಯಿತಿ 4. ಭೂಪರಿವರ್ತನಾ ಶುಲ್ಕ ಮರುಪಾವತಿ 5. ತ್ಯಾಜ್ಯ ಸಂಸ್ಕರಣಾ ಘಟಕ ಸ್ಥಾಪನೆಗೆ ಸಹಾಯಧನ–ತಯಾರಿಕಾ ಎಂಎಸ್‌ಎಂಇಗಳಿಗೆ 6. ವಿದ್ಯುತ್ ತೆರಿಗೆ ವಿನಾಯಿತಿ– ತಯಾರಿಕಾ ಎಂಎಸ್‌ಎಂಇಗಳಿಗೆ 7. ತಂತ್ರಜ್ಞಾನ ಉನ್ನತೀಕರಣ, ಗುಣಮಟ್ಟ ಪ್ರಮಾಣಪತ್ರ– ತಯಾರಿಕಾ ಎಂಎಸ್‌ಎಂಇಗಳಿಗೆ • ತಂತ್ರಜ್ಞಾನ ಉನ್ನತೀಕರಣಕ್ಕೆ ಪಡೆದ	As per "Karnataka Industrial Policy 2014-19", the following incentives and concessions are offered to the Medium scale industries. 1. Investment Promotion Subsidy 2. Exemption from Stamp Duty 3. Concessional Registration Charges 4. Reimbursement of Land Conversion Fee 5. Subsidy for Setting up Effluent Treatment Plant (ETP)- Manufacturing MSMEs 6. Exemption from Tax on Electricity Tariff -MSME

ಕ್ರಂ.ಸ.	ಪ್ರಶ್ನೆ	ಉತ್ತರ	Answer
ಅ	ರಾಜ್ಯದಲ್ಲಿ ಸಹಕಾರ ಬ್ಯಾಂಕುಗಳ ಮೂಲಕ ರೈತರಿಗೆ ಸಹಾಯಧನ ಸಹಿತ ಮತ್ತು ಸಹಾಯಧನ ರಹಿತ ಸಾಲ ಸೌಲಭ್ಯ ನೀಡಲು ಇರುವಂತಹ ವಿವಿಧ ಯೋಜನೆಗಳಾವವು (ಸಂಪೂರ್ಣ ವಿವರ ಒದಗಿಸುವುದು)	ರಾಜ್ಯದಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಮತ್ತು ಪಿಕಾರ್ಡ್ ಬ್ಯಾಂಕುಗಳ ಮೂಲಕ ಸರ್ಕಾರದಿಂದ ಬಡ್ಡಿ ಸಹಾಯಧನ ನೀಡುವ ಮೂಲಕ ರೈತರಿಗೆ ನೀಡುತ್ತಿರುವ ಸಾಲದ ಸೌಲಭ್ಯಗಳು ಈ ಕೆಳಗಿನಂತಿವೆ. 1. **ಶೂನ್ಯ ಬಡ್ಡಿ ದರದಲ್ಲಿ ಬೆಳೆ ಸಾಲ ನೀಡುವ ಯೋಜನೆ** – ರೂ.3.00 ಲಕ್ಷಗಳ ವರೆಗಿನ ಬೆಳೆ ಸಾಲವನ್ನು ಶೂನ್ಯ ಬಡ್ಡಿ ದರ ಅನ್ವಯವಾಗುವಂತೆ ನೀಡುವ ಯೋಜನೆ. 2. **ಶೇ.3 ರ ಬಡ್ಡಿ ದರದಲ್ಲಿ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲ ನೀಡುವ ಯೋಜನೆ** – ರೂ.10.00 ಲಕ್ಷಗಳ ವರೆಗಿನ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲವನ್ನು ಶೇ..3 ರ ಬಡ್ಡಿ ದರ ಅನ್ವಯವಾಗುವಂತೆ ರೈತರಿಗೆ ನೀಡುವ ಯೋಜನೆ. 3. **ಗೃಹ ಲಕ್ಷಿ ಯೋಜನೆ** – ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಆಭರಣಗಳನ್ನು ಅಡವಿಟ್ಟುಕೊಂಡು ರೂ.2.00 ಲಕ್ಷಗಳವರೆಗಿನ ಬೆಳೆ ಸಾಲವನ್ನು ಶೇ.3 ರ ಬಡ್ಡಿ ದರದಲ್ಲಿ ವಿತರಿಸುವ ಯೋಜನೆ. ಸಹಕಾರ ಬ್ಯಾಂಕುಗಳು ಸರ್ಕಾರದ ಸಹಾಯಧನ ಇಲ್ಲದೇ ಈ ಕೆಳಕಂಡ ಸಾಮಾನ್ಯ ಕೃಷಿಯೇತರ ಸಾಲಗಳನ್ನು ವಿತರಿಸುತ್ತಿವೆ. 1. ವಾಹನ ಸಾಲ 2. ಗೃಹ ನಿರ್ಮಾಣ ಸಾಲ 3. ಬಂಗಾರದ ಸಾಲ 4. ಕೃಷಿ ಉತ್ಪನ್ನಗಳನ್ನು ಅಡವಿಟ್ಟುಕೊಂಡು ಅಡಮಾನ ಸಾಲ ಇನ್ನೂ ಮುಂತಾದವು
ಆ	ಸಹಕಾರ ಬ್ಯಾಂಕುಗಳಲ್ಲಿ ರೈತರು ಸರಿಯಾದ ದಾಖಲೆಗಳನ್ನು ನೀಡಿ ಸಾಲ ಪಡೆಯಲು ಅರ್ಜಿ ಸಲ್ಲಿಸಿದ್ದರೂ, ನಿಗದಿತ ಸಮಯದಲ್ಲಿ ಸಾಲ ಸೌಲಭ್ಯ ನೀಡದೇ ತೊಂದರೆಯುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು (ವಿವರ ನೀಡುವುದು)	ಹೌದು. ಕೆಲವು ರೈತರ ವಾಸ ಸ್ಥಳ ಮತ್ತು ಜಮೀನು ಬೇರೆ ಬೇರೆ ಸಂಘಗಳ ವ್ಯಾಪ್ತಿಯಲ್ಲಿದ್ದು, ಅಂತಹ ರೈತರಿಗೆ ಸಾಲ ವಿತರಿಸಲು ವಿಳಂಬವಾಗಿರುತ್ತದೆ. ರೈತರ ಆದಾಯವನ್ನು ಹೆಚ್ಚಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಪ್ರಧಾನ ಮಂತ್ರಿ ಕಿಸಾನ್(PM KISAN) ಯೋಜನೆಯ ಫಲಾನುಭವಿಗಳ ಪಟ್ಟಿಯನ್ನು ಎಲ್ಲಾ ಡಿಸಿಸಿ ಬ್ಯಾಂಕುಗಳಿಗೆ ಅಪೆಕ್ಸ್ ಬ್ಯಾಂಕಿನ ಮೂಲಕ ಕಳುಹಿಸಿ ಖಾತೆ ಹೊಂದಿದ ರೈತರನ್ನು ಸಂಪರ್ಕಿಸಿ ಕಿಸಾನ್ ಕ್ರೆಡಿಟ್ ಕಾರ್ಡ್‌ಗಳನ್ನು ವಿತರಿಸಲು ದಿ.8-2-2020 ರಿಂದ ದಿ.29-02-2020 ರ ವರೆಗೆ ವಿಶೇಷ ಪ್ರಚಾರವನ್ನು ಹಮ್ಮಿಕೊಳ್ಳಲಾಗಿದ್ದು, ಈ ಅವಧಿಯಲ್ಲಿ

		ಅರ್ಹ ಫಲಾನುಭವಿಗಳಿಂದ ಅರ್ಜಿ ಪಡೆದು 70,000 ಕಿಸಾನ್ ಕ್ರೆಡಿಟ್ ಕಾರ್ಡ್ ವಿತರಿಸಲು ಸಂಬಂಧಿಸಿದ ಎಲ್ಲಾ ಅಧಿಕಾರಿಗಳಿಗೆ ಗುರಿ ನಿಗದಿಪಡಿಸಿ ಅದರಂತೆ ಸಾಲ ಮಂಜೂರು ಮಾಡಲು ಕ್ರಮ ವಹಿಸಲಾಗಿದೆ.
ಇ	ನಿಗದಿತ ಸಮಯದಲ್ಲಿ ರೈತರಿಗೆ ಸಾಲ ಸೌಲಭ್ಯ ನೀಡಲು ಅನುಕೂಲವಾಗುವಂತೆ ಸರ್ಕಾರದಿಂದ ನಿರ್ದೇಶನ ನೀಡಲಾಗಿದೆಯೇ; (ಆದೇಶದ ಪ್ರತಿಯೊಂದಿಗೆ ವಿವರ ನೀಡುವುದು)	ಜಿಲ್ಲಾಧಿಕಾರಿಗಳ ಸಭೆಯಲ್ಲಿ ಹಾಗೂ ಡಿಸಿಸಿ ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಯಲ್ಲಿ ರೈತರಿಗೆ ಸಾಲ ಸೌಲಭ್ಯವನ್ನು ನಿಗದಿತ ಸಮಯದಲ್ಲಿ ಒದಗಿಸಲು ಸೂಚಿಸಲಾಗಿರುತ್ತದೆ. (ಪ್ರತಿ ಲಗತ್ತಿಸಿದೆ.)

ಸಂಖ್ಯೆ: ಸಿಒ 123 ಸಿಎಲ್ಎಸ್ 2020

(ಎಸ್.ಟಿ ಸೋಮಶೇಖರ್)

ಸಹಕಾರ ಸಚಿವರು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:-1874

ಕರ್ನಾಟಕ ಸರ್ಕಾರ

(ಸಹಕಾರ ಇಲಾಖೆ)

ಬಹುಮಹಡಿಗಳ ಕಟ್ಟಡ, ಬೆಂಗಳೂರು -5600052

ಸಂ: ಸಿಓ ಸಿಎಲ್ಎಸ್ / /2019-20 ದಿನಾಂಕ: 27-02-2020

ಗೆ,

1. ನಿರ್ದೇಶಕರು, ಕೃಷಿ ಇಲಾಖೆ
2. ಸಹಕಾರ ಸಂಘಗಳ ನಿಬಂಧಕರು,
3. ಸಂಚಾಲಕರು, ರಾಜ್ಯ ಬ್ಯಾಂಕರ್ಸ್ ಸಮಿತಿ
4. ಮುಖ್ಯ ಪ್ರಬಂದಕರು, ನಬಾರ್ಡ್ ಪ್ರಾಂತೀಯ ಕಚೇರಿ

ಮಾನ್ಯರೇ,

ವಿಷಯ : ಪ್ರಧಾನ ಮಂತ್ರಿ ಕಿಸಾನ್(PM KISAN) ಫಲಾನುಭವಿಗಳಿಗೆ ಕಿಸಾನ್ ಕ್ರೆಡಿಟ್ ಕಾರ್ಡ್ ವಿತರಿಸುವ ಬಗ್ಗೆ

ಉಲ್ಲೇಖ : 1. ಕೇಂದ್ರ ಸರ್ಕಾರದ ಕೃಷಿ, ಸಹಕಾರ ಮತ್ತು ರೈತ ಕಲ್ಯಾಣ ಇಲಾಖೆ, ಸುತ್ತೋಲೆ ಸಂಖ್ಯೆ 1-20/2018-ಕ್ರೆಡಿಟ್-I(ಪಾರ್ಟ್-1) ದಿ.6-02-2020

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ರೈತರ ಆದಾಯವನ್ನು ಹೆಚ್ಚಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಪ್ರಧಾನ ಮಂತ್ರಿ ಕಿಸಾನ್(PM KISAN) ಯೋಜನೆಯಲ್ಲಿನ ಫಲಾನುಭವಿಗಳಿಗೆ ಕಿಸಾನ್ ಕ್ರೆಡಿಟ್ ಕಾರ್ಡ್‌ಗಳನ್ನು ವಿತರಿಸಲು ದಿ.8-2-2020 ರಿಂದ ದಿ.29-02-2020 ರ ವರೆಗೆ ವಿಶೇಷ ಪ್ರಚಾರವನ್ನು ಹಮ್ಮಿಕೊಳ್ಳಲಾಗಿದ್ದು, ಈ ಅವಧಿಯಲ್ಲಿ ಅರ್ಹ ಫಲಾನುಭವಿಗಳಿಂದ ಅರ್ಜಿ ಪಡೆದು ಕಿಸಾನ್ ಕ್ರೆಡಿಟ್ ಕಾರ್ಡ್ ವಿತರಿಸಲು ಉಲ್ಲೇಖ 1 ರ ಸುತ್ತೋಲೆಯಲ್ಲಿ ಸೂಚಿಸಲಾಗಿದೆ.

ಈ ಕುರಿತು ಕರ್ನಾಟಕ ರಾಜ್ಯದಲ್ಲಿ ಸುಮಾರು 4 ಲಕ್ಷ ಪ್ರಧಾನ ಮಂತ್ರಿ ಕಿಸಾನ್(PM KISAN) ಫಲಾನುಭವಿಗಳಿಗೆ ಕಿಸಾನ್ ಕ್ರೆಡಿಟ್ ಕಾರ್ಡ್ ವಿತರಿಸಲು ಗುರಿಯನ್ನು ಹೊಂದಲಾಗಿದ್ದು, ಇದುವರೆಗೆ ಸುಮಾರು 1.50 ಲಕ್ಷ ರೈತರಿಗೆ ಮಾತ್ರ ಕಾರ್ಡ್ ವಿತರಿಸಲಾಗಿದೆ.

ಈ ಬಗ್ಗೆ ದಿ.26-02-2020 ರಂದು ಕಾರ್ಯದರ್ಶಿ, ಕೇಂದ್ರ ಸರ್ಕಾರದ ಕೃಷಿ, ಸಹಕಾರ ಮತ್ತು ರೈತ ಕಲ್ಯಾಣ ಇಲಾಖೆ ರವರೊಂದಿಗೆ ನಡೆದ ವಿಡಿಯೋ ಸಂವಾದದಲ್ಲಿ ದಿ.29-02-2020 ರಂದು ಮಾನ್ಯ ಪ್ರಧಾನ ಮಂತ್ರಿಗಳಿಂದ ಆಯ್ದ ಫಲಾನುಭವಿಗಳಿಗೆ ಕೆಸಿಸಿ ಕಾರ್ಡ್ ವಿತರಿಸುವ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರದಿಂದ ಆಯೋಜಿಸಲಾಗಿದ್ದು, ಈ ಅವಧಿಯೊಳಗೆ ಗುರಿಯನ್ನು ತಲುಪಲು ಮತ್ತು ದಿ.29-02-2020 ರಂದು ಜಿಲ್ಲಾ ಮಟ್ಟದಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಂಡು ಆಯ್ದ ಅರ್ಹ ಫಲಾನುಭವಿಗಳಿಗೆ ಕೆಸಿಸಿ ಕಾರ್ಡ್ ವಿತರಿಸಲು ಸೂಚಿಸಲಾಗಿದೆ.

ಈ ಕುರಿತು ಈ ಕೆಳಕಂಡ ಕ್ರಮಗಳನ್ನು ಜರುಗಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಗಿದೆ.

1. ಕೃಷಿ ಇಲಾಖೆಯಲ್ಲಿನ ರೈತರ ಸಂಪರ್ಕ ಕೇಂದ್ರಗಳಲ್ಲಿ ಪ್ರಧಾನ ಮಂತ್ರಿ ಕಿಸಾನ್(PM KISAN) ಫಲಾನುಭವಿಗಳನ್ನು [illegible] ಸಂಪರ್ಕಿಸಿ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಭರ್ತಿ ಮಾಡಿ ಸಂಬಂಧಪಟ್ಟ ಬ್ಯಾಂಕುಗಳಿಗೆ ಕಳುಹಿಸಲು ಕ್ರಮ ಜರುಗಿಸುವುದು.

2. [illegible]

3. [illegible]

4. [illegible]

5. [illegible]

[illegible]

[illegible]

ಕರ್ನಾಟಕ ಸರ್ಕಾರ

ಸಂಖ್ಯೆ: ಆನಾಸ 78 ಡಿಆರ್ಎ 2020(ಇ-ಆಫೀಸ್)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ, ನೆಲಮಹಡಿ,
ಬೆಂಗಳೂರು, ದಿನಾಂಕ:11.03.2020.

ಇವರಿಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಇಲಾಖೆ,

128
U/S
13/3/20

ಇವರಿಗೆ,
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ
ವಿಧಾನಸೌಧ.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಶಿವಲಿಂಗೇಗೌಡ ಕೆ.ಎಂ(ಅರಸೀಕೆರೆ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ:684ಕ್ಕೆ ಉತ್ತರ ಒದಗಿಸುವ ಬಗ್ಗೆ.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಶಿವಲಿಂಗೇಗೌಡ ಕೆ.ಎಂ(ಅರಸೀಕೆರೆ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ:684ಕ್ಕೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ತಮಗೆ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ವಿ.ವೆಂಕಟೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ
ಆಹಾರ, ನಾಗರೀಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಇಲಾಖೆ.

ಪ್ರತಿಯನ್ನು ಮಾಹಿತಿಗಾಗಿ:

1. ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನ ಶಾಸ್ತ್ರ ಇಲಾಖಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನ ಶಾಸ್ತ್ರ ಇಲಾಖೆ, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕಿ. ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನ ಶಾಸ್ತ್ರ ಇಲಾಖೆ, ವಿಕಾಸಸೌಧ, ಬೆಂಗಳೂರು
4. ಸರ್ಕಾದರ ಅಧೀನ ಕಾರ್ಯದರ್ಶಿ, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನ ಶಾಸ್ತ್ರ ಇಲಾಖೆ, ವಿಕಾಸಸೌಧ, ಬೆಂಗಳೂರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	684
ವಿಧಾನ ಸಭೆಯ ಸದಸ್ಯರ ಹೆಸರು	:	ಶ್ರೀ ಶಿವಲಿಂಗೇಗೌಡ ಕೆ.ಎಂ (ಅರಸೀಕೆರೆ)
ಉತ್ತರಿಸಬೇಕಾದ ದಿನಾಂಕ	:	13.03.2020
ಉತ್ತರಿಸುವ ಸಚಿವರು	:	ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ನ್ಯಾಯಬೆಲೆ ಅಂಗಡಿಗಳಲ್ಲಿ ಬಯೋಮೆಟ್ರಿಕ್ ಯೋಜನೆ ಜಾರಿಗೆ ತಂದಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ಜನವರಿ-2020 ರ ಮಾಹೆಯಲ್ಲಿ ಮಾತ್ರ ಸರ್ವರ್‌ನ ತಾಂತ್ರಿಕ ದೋಷದಿಂದ ದಿನಾಂಕ: 21.01.2020 ರಿಂದ ತಿಂಗಳ ಕೊನೆಯವರೆಗೆ ನ್ಯಾಯಬೆಲೆ ಅಂಗಡಿಗಳಲ್ಲಿ ಸಂಪೂರ್ಣವಾಗಿ ಪಡಿತರವನ್ನು ಆನ್ ಲೈನ್ ನಲ್ಲಿ ವಿತರಿಸಲು ಆಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಸರ್ವರ್ ಸಮಸ್ಯೆ ಇರುವ ನ್ಯಾಯಬೆಲೆ ಅಂಗಡಿಗಳಲ್ಲಿ ಆಫ್ ಲೈನ್ ಮೂಲಕ ಪಡಿತರ ಚೀಟಿದಾರರ ಸಹಿ ಪಡೆದು ಪಡಿತರ ವಿತರಿಸಲಾಗಿರುತ್ತದೆ. ವಿತರಿಸಲಾದ ಮಾಹಿತಿಯನ್ನು ನಂತರ ಆನ್ ಲೈನ್ ನಲ್ಲಿ ಅಪ್ ಲೋಡ್ ಮಾಡಲಾಗಿರುತ್ತದೆ. ಪ್ರಸ್ತುತ ಪರಿಹರಿಸಲಾಗಿದ್ದು, ಫೆಬ್ರವರಿ-2020ರ ಮಾಹೆಯಿಂದ ಪಡಿತರ ವಿತರಣೆಯಲ್ಲಿ ಯಾವುದೇ ಸಮಸ್ಯೆ ಇರುವುದಿಲ್ಲ.
ಆ	ಒಂದೇ ಗ್ರಾಮದಲ್ಲಿ ಹೆಚ್ಚುವರಿ ನ್ಯಾಯಬೆಲೆ ಅಂಗಡಿಗಳನ್ನು ತೆರೆದಿದ್ದು; 4 ರಿಂದ 5 ಕಿ.ಮೀ ಅಂತರದ ಗ್ರಾಮದವರು ಪಡಿತರವನ್ನು ಪಡೆಯಲು ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಇ	ಬಂದಿದ್ದಲ್ಲಿ, ಅವುಗಳನ್ನು ಪರಿಹಾರ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ಸಾರ್ವಜನಿಕ ವಿತರಣಾ ಪದ್ಧತಿ ಕಾಯ್ದೆ 2016ರನ್ವಯ ಪಟ್ಟಣ ಪ್ರದೇಶದಲ್ಲಿ ಕನಿಷ್ಟ 800 ಪಡಿತರ ಚೀಟಿಗಳು ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ಕನಿಷ್ಟ 500 ಪಡಿತರ ಚೀಟಿಗಳನ್ನು ಹೊಂದಿದ್ದಲ್ಲಿ ಹೊಸದಾಗಿ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲು ಅವಕಾಶ ಕಲ್ಪಿಸಲಾಗಿದೆ. ವಿಶೇಷ ಸಂದರ್ಭಗಳಲ್ಲಿ 100 ಪಡಿತರ ಚೀಟಿಗಳವರೆಗೆ ನ್ಯಾಯಬೆಲೆ ಅಂಗಡಿ ನೀಡಲು ಸಹ ಅವಕಾಶವನ್ನು ಕಲ್ಪಿಸಲಾಗಿದೆ.

ಆನಾಸ 78 ಡಿಆರ್ ಎ 2020 (ಇ-ಆಫೀಸ್)

(ಕೆ.ಗೋಪಾಲಯ್ಯ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕರ್ನಾಟಕ ಸರ್ಕಾರ

ಸಿಒ 18 ಸಿಹೆಚ್‌ಎಸ್ 2020(ಇ)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:12.03.2020.

ಇಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಸಹಕಾರ ಇಲಾಖೆ,
ಬೆಂಗಳೂರು-01.

73
13/3/20

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ: ಶ್ರೀ ಕುಮಾರಸ್ವಾಮಿ ಹೆಚ್.ಕೆ (ಸಕಲೇಶಪುರ) ಮಾನ್ಯ ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1879ಕ್ಕೆ ಉತ್ತರಿಸುವ ಬಗ್ಗೆ.

ಉಲ್ಲೇಖ: ತಮ್ಮ ಪತ್ರ ಸಂಖ್ಯೆ:ಪ್ರಶಾವಿಸ/15ನೇವಿಸ/6ಅ/ಪ್ರ.ಸಂ.1879/2020, ದಿ:03-03-2020.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಕುಮಾರಸ್ವಾಮಿ ಹೆಚ್.ಕೆ (ಸಕಲೇಶಪುರ) ಮಾನ್ಯ ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1879ಕ್ಕೆ ಮಾನ್ಯ ಸಹಕಾರ ಸಚಿವರು ದಿ:13-03-2020ರಂದು ಉತ್ತರಿಸಬೇಕಾಗಿರುವುದರಿಂದ ಸದರಿ ಪ್ರಶ್ನೆಗೆ ಸಂಬಂಧಿಸಿದಂತೆ ಉತ್ತರವನ್ನು ಸಿದ್ಧಪಡಿಸಿ 120 ಉತ್ತರದ ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

ತಮ್ಮ ನಂಬುಗೆಯ,

12/3/2020
(ಮನೋರಮ ಡಿ.ಸಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರ ಹೆಸರು	:	ಶ್ರೀ ಕುಮಾರಸ್ವಾಮಿ ಹೆಚ್.ಕೆ (ಸಕಲೇಶಪುರ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1879.
ಉತ್ತರಿಸಬೇಕಾದ ದಿನಾಂಕ	:	13.03.2020.
ಉತ್ತರಿಸಬೇಕಾದ ಸಚಿವರು	:	ಸಹಕಾರ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಪೋಲೀಸ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ವತಿಯಿಂದ ನಿವೇಶನಗಳನ್ನು ನೀಡಲು ಹಾಸನ ನಗರದ ಸುತ್ತಮುತ್ತಲಿನ ಜಮೀನುಗಳನ್ನು ಅನಧಿಕೃತವಾಗಿ ಖರೀದಿಸಿ, ಬಡಾವಣೆಗಳನ್ನು ನಿರ್ಮಾಣ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಪೋಲೀಸ್ ಅಧಿಕಾರಿಗಳ ಮತ್ತು ಸಿಬ್ಬಂದಿಯವರ ಗೃಹ ನಿರ್ಮಾಣ ಸಹಕಾರ ಸಂಘದ ವತಿಯಿಂದ ನಿವೇಶನಗಳನ್ನು ಸದಸ್ಯರಿಗೆ ಒದಗಿಸಲು ಹಾಸನ ತಾಲ್ಲೂಕಿನ ದೊಡ್ಡಪುರ ಚಿಟ್ಟನಹಳ್ಳಿ ಗ್ರಾಮಗಳಲ್ಲಿ ಬರುವ ವಿವಿಧ ಸರ್ವೆ ನಂಬರ್‌ಗಳ ಜಮೀನುಗಳನ್ನು ಜಮೀನು ಮಾಲೀಕರಿಂದ ಭೂ–ಅಭಿವೃದ್ಧಿದಾರರ ಮೂಲಕ ಖರೀದಿಸಿ, ಟರ್ನ್ ಕೀ ಆಧಾರದ ಮೇಲೆ ಬಡಾವಣೆಯನ್ನು ನಿರ್ಮಿಸಲು ಸಂಘವು ಉದ್ದೇಶಿಸಿರುತ್ತದೆ.
ಆ)	ಪೋಲೀಸ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘವು ಅಧಿಕೃತವಾಗಿ ನೋಂದಾಯಿತ ಸಂಘವೇ; ಸದರಿ ಸಂಘವು ಪೋಲೀಸ್ ನೌಕರರಲ್ಲದ ಖಾಸಗಿಯವರೊಂದಿಗೆ ಸೇರಿ ಭೂ ಮಾಫಿಯ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ಸಂಪೂರ್ಣ ಮಾಹಿತಿ ನೀಡುವುದು);	ಪೋಲೀಸ್ ಅಧಿಕಾರಿಗಳ ಮತ್ತು ಸಿಬ್ಬಂದಿಯವರ ಗೃಹ ನಿರ್ಮಾಣ ಸಹಕಾರ ಸಂಘವನ್ನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಹಾಗೂ ನಿಯಮಗಳು 1960 ರ ಅವಕಾಶಗಳಡಿ ನೋಂದಾಯಿಸಲಾಗಿರುತ್ತದೆ. ಸಂಘವು ಖಾಸಗಿಯವರೊಂದಿಗೆ ಭೂ ಮಾಫಿಯಾ ನಡೆಸುತ್ತಿರುವ ಸಂಬಂಧ ಯಾವುದೇ ದೂರು ಸ್ವೀಕೃತವಾಗಿರುವುದಿಲ್ಲ.
ಇ)	ಸದರಿ ಸಂಘವು ಇದುವರೆಗೆ ಹಾಸನ ನಗರದ ಸುತ್ತ–ಮುತ್ತ ಎಷ್ಟು ಎಕರೆ ಜಮೀನುಗಳನ್ನು ಖರೀದಿಸಿದೆ; ಎಷ್ಟು ಎಕರೆ ಜಮೀನಿನಲ್ಲಿ ಈಗಾಗಲೇ ಅತಿಕ್ರಮಣ ಮಾಡಿ ಸರ್ಕಾರ ನಿಯಮಾನುಸಾರ ಉದ್ಯಾನವನ, ಶಾಲೆ, ರಸ್ತೆ ಮತ್ತು ಚರಂಡಿ, ಒಳಚರಂಡಿ ಇನ್ನಿತರ ಮೂಲ ಸೌಕರ್ಯಗಳನ್ನು ಕಲ್ಪಿಸಿ ಎಷ್ಟು ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ, ಹಾಗೂ ನಿಯಮಾನುಸಾರ ಸರ್ಕಾರದ ಅನುಮತಿ ಹಾಗೂ ನಿಯಮಾವಳಿಗಳನ್ನು ಪಾಲಿಸಲಾಗಿದೆಯೇ; ನಿಯಮಗಳನ್ನು ಉಲ್ಲಂಘಿಸಿದ್ದಲ್ಲಿ, ಸದರಿ ಸಹಕಾರ ಸಂಘದ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು (ಸಂಪೂರ್ಣ ಮಾಹಿತಿ ನೀಡುವುದು);	ಸಂಘವು ಇದುವರೆವಿಗೆ ಹಾಸನ ತಾಲ್ಲೂಕು, ಕಸಬಾ ಹೋಬಳಿಯ ದೊಡ್ಡಪುರ ಚಿಟ್ಟನಹಳ್ಳಿ ಗ್ರಾಮಗಳಲ್ಲಿ ಬರುವ ವಿವಿಧ ಸರ್ವೇ ನಂಬರ್‌ಗಳಲ್ಲಿ ಬರುವ 21 ಎಕರೆ ಜಮೀನನ್ನು ಖರೀದಿಸಿರುವುದಾಗಿ ವರದಿಸಿದೆ. ಜಮೀನಿನಲ್ಲಿ ಅತಿಕ್ರಮಣ ಮಾಡಿ ಉದ್ಯಾನವನ, ಶಾಲೆ, ರಸ್ತೆ, ಚರಂಡಿ, ಒಳಚರಂಡಿ ಇನ್ನಿತರ ಮೂಲ ಸೌಕರ್ಯಗಳನ್ನು ರಚಿಸಿರುವುದು ವರದಿಯಾಗಿಲ್ಲ. ಸಂಘವು ಈವರೆವಿಗೆ ಬಡಾವಣೆ ನಕ್ಷೆ ಅನುಮೋದನೆಗಾಗಿ ಕೋರಿ ಸಕ್ಷಮ ಪ್ರಾಧಿಕಾರಕ್ಕೆ ಪ್ರಸ್ತಾವ ಸಲ್ಲಿಸಿರುವುದಿಲ್ಲ. ಈ ವರೆವಿಗೂ ಯಾವುದೇ ನಿವೇಶನವನ್ನು ಹಂಚಿಕೆ ಮಾಡಿರುವುದಿಲ್ಲ. ಸಂಘವು ನಿಯಮಗಳನ್ನು ಉಲ್ಲಂಘಿಸಿರುವ ಬಗ್ಗೆ ಈವರೆವಿಗೆ ವರದಿಯಾಗಿರುವುದಿಲ್ಲ.
ಈ)	ಸದರಿ ಸಂಘದ ವತಿಯಿಂದ ಖಾಸಗಿಯವರಿಗೆ ನಿವೇಶನ ಹಂಚಿಕೆ ಮಾಡುತ್ತಿದ್ದು, ಖಾಸಗಿಯವರಿಗೆ ನಿವೇಶನ ಕೊಂಡುಕೊಳ್ಳಲು ಕೋರಿಕೆ ಪತ್ರ ಕಳುಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಈ ರೀತಿ ಖಾಸಗಿಯವರಿಗೆ ನಿವೇಶನ ನೀಡಲು ಸಂಘದಲ್ಲಿ ಉಪನಿಯಮಗಳಲ್ಲಿ ಅವಕಾಶವಿದೆಯೇ, ನಿವೇಶನ ಹಂಚಿಕೆ ಬಗ್ಗೆ ಸಹಕಾರಿ ನಿಯಮಾವಳಿಗಳೇನು (ಸಂಪೂರ್ಣ ಮಾಹಿತಿ ನೀಡುವುದು);	ಸಂಘದ ವತಿಯಿಂದ ಈವರೆವಿಗೆ ಯಾವುದೇ ಸದಸ್ಯರಿಗೆ ನಿವೇಶನ ಹಂಚಿಕೆ ಮಾಡಿರುವುದಿಲ್ಲ. ಸಂಘದ ನೋಂದಾಯಿತ ಬೈಲಾ ಸಂಖ್ಯೆ: 6 ರಂತೆ ಅಧಿನಿಯಮದ ಪ್ರಕಾರ ಅರ್ಹರಾಗಿರುವ ಪೋಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ/ನಿವೃತ್ತರಾಗಿರುವ ಯಾವುದೇ ಅಧಿಕಾರಿ ಮತ್ತು ಸಿಬ್ಬಂದಿಯವರು ಹಾಗೂ ಸಂಘದ ಸದಸ್ಯತ್ವ ಬಯಸುವ ಯಾವುದೇ ವ್ಯಕ್ತಿ ಸಂಘದ ಸದಸ್ಯತ್ವ ಪಡೆಯಲು ಅವಕಾಶವಿರುತ್ತದೆ. ಈ ರೀತಿ ಇತರೆ ಸದಸ್ಯರ ಮಿತಿಯು ಶೇ.15ನ್ನು ಮೀರುವಂತಿಲ್ಲ.

		ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 30-ಬಿ ರನ್ವಯ ಸರ್ಕಾರ ಹಾಗೂ ಸಹಕಾರ ಸಂಘಗಳ ನಿಬಂಧಕರು ಹೊರಡಿಸಿರುವ ನಿರ್ದೇಶನಗಳಂತೆ ಸಂಘವು ನೈಜ ಸದಸ್ಯರ ಹಾಗೂ ನಿವೇಶನ ಠೇವಣಿದಾರರ ಪಟ್ಟಿಗಳನ್ನು ಸಿದ್ಧಪಡಿಸಿ ಸಹಕಾರ ಸಂಘಗಳ ನಿಬಂಧಕರಿಂದ ಅನುಮೋದನೆ ಪಡೆದುಕೊಂಡು ನಿವೇಶನಗಳನ್ನು ಸದಸ್ಯರಿಗೆ ಹಂಚಿಕೆ ಮಾಡಬೇಕಾಗಿರುತ್ತದೆ.

ಸಂಖ್ಯೆ: ಸಿಒ 18 ಸಿಹೆಚ್‌ಎಸ್ 2020(ಅ)

(ಎಸ್ ಟಿ ಸೋಮಶೇಖರ್)

ಸಹಕಾರ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಒ 125 ಸಿಎಲ್ಎಸ್ 2020 (ಇ-ಕಡತ)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 12.03.2020

ಇಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಸಹಕಾರ ಇಲಾಖೆ,
ಬೆಂಗಳೂರು-01

ಇವರಿಗೆ:

ಕಾರ್ಯದರ್ಶಿ, (ಪ್ರ)
ಕರ್ನಾಟಕ ವಿಧಾನ ಸಭೆ,
ಸಚಿವಾಲಯ, ವಿಧಾನ ಸೌಧ.

114
U/S
13/3/20

ಮಾನ್ಯರೆ,

ವಿಷಯ : ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ರಂಗನಾಥ್.ಹೆಚ್.ಡಿ. (ಕುಣಿಗಲ್) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1940 ಕ್ಕೆ ಉತ್ತರ ನೀಡುವ ಬಗ್ಗೆ.

***

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ರಂಗನಾಥ್.ಹೆಚ್.ಡಿ (ಕುಣಿಗಲ್) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1940 ಕ್ಕೆ ಸಂಬಂಧಿಸಿದಂತೆ, ಉತ್ತರದ 100 ಪ್ರತಿಯನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿತಳಾಗಿದ್ದೇನೆ.

ತಮ್ಮ ನಂಬುಗೆಯ,

(ಮನೋರಮ ಡಿ.ಸಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರು	:	ಡಾ॥ ರಂಗನಾಥ್ ಹೆಚ್.ಡಿ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1940
ಉತ್ತರಿಸಬೇಕಾದ ದಿನಾಂಕ	:	13.03.2020

ಪ್ರಶ್ನೆ	ಉತ್ತರ
ಕುಣಿಗಲ್ ತಾಲ್ಲೂಕಿನಲ್ಲಿರುವ ಸಹಕಾರ ಸಂಘಗಳಲ್ಲಿ (ಸೊಸೈಟಿ, ಯು.ಎಸ್.ಎಸ್.ಎನ್, ಹಾಲು ಉತ್ಪಾದಕರ ಸಂಘ ಇತರೆ) ಷೇರು ನೀಡುವುದರಲ್ಲಿ ತಾರತಮ್ಯ ಮಾಡಲಾಗುತ್ತಿರುವುದರಿಂದ ಸಾಮಾನ್ಯ ವರ್ಗಕ್ಕೆ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮವೇನು ?	ಹೌದು. ದಿನಾಂಕ:15-06-2019 ರಂದು ಜಿಲ್ಲಾ ಮಟ್ಟದ ಕೆ.ಡಿ.ಪಿ. ಸಭೆಯಲ್ಲಿ ಈ ವಿಷಯವು ಪ್ರಸ್ತಾಪವಾಗಿರುತ್ತದೆ. ಈ ಕುರಿತು ದಿನಾಂಕ:08-07-2019 ರಂದು ಸಹಕಾರ ಸಂಘಗಳ ಉಪ ನಿಬಂಧಕರು, ತುಮಕೂರು ಇವರು ಕುಣಿಗಲ್ ತಾಲ್ಲೂಕಿಗೆ ಸಂಬಂಧಿಸಿದ 12 ಹಾಲು ಉತ್ಪಾದಕರ ಸಹಕಾರ ಸಂಘಗಳ ಕಾರ್ಯದರ್ಶಿಗಳ ಸಭೆಯನ್ನು ಕರೆದು ಅವುಗಳ ಕಾರ್ಯವ್ಯಾಪ್ತಿಯಲ್ಲಿ ವಾಸಿಸುವ ಸದಸ್ಯತ್ವ ಕೋರಿ ಬರುವ ಅರ್ಹರಿಗೆ ಸದಸ್ಯತ್ವನ್ನು ಹಾಗೂ ಸಂಘದಿಂದ ದೊರೆಯುವ ಸೌಲಭ್ಯಗಳನ್ನು ನೀಡಲು ನಿರ್ದೇಶನ ನೀಡಲಾಗಿರುತ್ತದೆ.

ಸಂಖ್ಯೆ: ಸಿಒ 125 ಸಿಎಲ್ಎಸ್ 2020

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು)

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ, ಡಾ. ಬಿ. ಆರ್. ಅಂಬೇಡ್ಕರ್ ರಸ್ತೆ,
ಬೆಂಗಳೂರು – 560001.
ದೂ. 080-22034625 ಫ್ಯಾಕ್ಸ್: 080-22353932

ಸಂಖ್ಯೆ: ಸಿಐ 66 ಎಸ್‌ಪಿಐ 2020

ದಿನಾಂಕ 12.03.2020

100
13/3/20

ಇವರಿಂದ,
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ವಿಕಾಸಸೌಧ,
ಬೆಂಗಳೂರು-01.

ಇವರಿಗೆ,
ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ,
ಅಂಚೆ ಪೆಟ್ಟಿಗೆ ಸಂಖ್ಯೆ: 5074,
ವಿಧಾನಸೌಧ, ಬೆಂಗಳೂರು-01.

ಮಾನ್ಯರೇ,

ವಿಷಯ: ಕರ್ನಾಟಕ ವಿಧಾನಸಭಾ ಸದಸ್ಯರಾದ ಶ್ರೀಮತಿ ಪೂರ್ಣಿಮಾ ಕೆ. (ಹಿರಿಯೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ. 1849ಕ್ಕೆ ಉತ್ತರಿಸುವ ಬಗ್ಗೆ.

ಉಲ್ಲೇಖ: ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ ಇವರ ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/6ಅ/ಪ್ರ.ಸಂ.1849/2020, ದಿ. 03.03.2020.

*****

ದಿನಾಂಕ 13.03.2020 ರಂದು ಉತ್ತರಿಸಬೇಕಾದ ಮೇಲ್ಕಾಣಿಸಿದ ವಿಧಾನಸಭೆಯ ಪ್ರಶ್ನೆಗೆ ಉತ್ತರಗಳ 100 ಪ್ರತಿಗಳನ್ನು ಈ ಮೂಲಕ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

G. Nagarathnamma 12/3/2020
(ನಾಗರತ್ನಮ್ಮ .ಜಿ)
ಪೀಠಾಧಿಕಾರಿ (ತಾಂತ್ರಿಕ ಕೋಶ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1849
ವಿಧಾನ ಸಭೆಯ ಸದಸ್ಯರ ಹೆಸರು : ಶ್ರೀಮತಿ ಪೂರ್ಣಿಮಾ ಕೆ. (ಹಿರಿಯೂರು)
ಉತ್ತರಿಸುವವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು
ಉತ್ತರಿಸುವ ದಿನಾಂಕ : 13.03.2020.

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಹಿರಿಯೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಇದುವರೆಗೆ ಪ್ರಾರಂಭಿಸಲಾಗಿರುವ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳೆಷ್ಟು;	ಹಿರಿಯೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಇಲ್ಲಿಯವರೆಗೆ 09 ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಪ್ರಾರಂಭವಾಗಿರುತ್ತವೆ.
ಆ	ಹಾಗಿದ್ದಲ್ಲಿ, ಸದರಿ ಕೈಗಾರಿಕೆಗಳಿಗೆ ಎಷ್ಟು ವಿಸ್ತೀರ್ಣದ ಭೂಮಿಯನ್ನು ಮಂಜೂರು ಮಾಡಲಾಗಿದೆ; ಕೈಗಾರಿಕೆಗಳನ್ನು ಸ್ಥಾಪಿಸಲು ಭೂಮಿಯನ್ನು ಕೈಗಾರಿಕೋದ್ಯಮಗಳಿಗೆ ಹಂಚಿಕೆ ಮಾಡಲು ಇಲಾಖೆಯ ನಿಯಮಗಳನ್ನು ಪಾಲಿಸಲಾಗುತ್ತಿದೆಯೇ;	ಸದರಿ 09 ಕೈಗಾರಿಕೆಗಳಿಗೆ 219.25 ಎಕರೆ ಜಮೀನನ್ನು ಹಂಚಿಕೆ ಮಾಡಲಾಗಿದೆ. ವಿವರಗಳನ್ನು **ಅನುಬಂಧ-1**ರಲ್ಲಿ ಲಗತ್ತಿಸಿದೆ. ಸನ್ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯ ರಾಜ್ಯ ಉನ್ನತ ಮಟ್ಟದ ಅನುಮೋದನಾ ಸಮಿತಿ (ಎಸ್‌ಎಚ್‌ಎಲ್‌ಸಿಸಿ) ಮತ್ತು ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಅಧ್ಯಕ್ಷತೆಯ ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ (ಎಸ್‌ಎಲ್‌ಎಸ್‌ಡಬ್ಲ್ಯೂಸಿಸಿ) ಗಳಲ್ಲಿ ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಅರ್ಜಿ ಸಲ್ಲಿಸುವ ಪ್ರಸ್ತಾಪಗಳಿಗೆ ಅನುಮೋದನೆ ನೀಡಲಾಗುವುದರ ಅನ್ವಯ ಕೆಐಎಡಿಬಿ ಕೈಗಾರಿಕಾ ಪ್ರದೇಶಗಳಲ್ಲಿ ಭೂಮಿಯನ್ನು ಕೆಐಎಡಿ ಮಂಡಳಿಯ ಹಂಚಿಕೆ ನಿಯಮಗಳನ್ವಯ ಹಂಚಿಕೆ ಮಾಡಲಾಗುವುದು ಹಾಗೂ ಅರ್ಜಿದಾರರ ಕೋರಿಕೆಯಂತೆ ಹಲವು ಪ್ರಸ್ತಾಪಗಳಿಗೆ ಕರ್ನಾಟಕ ಭೂ-ಸುಧಾರಣೆ ಕಾಯ್ದೆಯ ಕಲಂ 109 ರಡಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಸಹ ಯೋಜನಾ ಪ್ರವರ್ತಕರುಗಳಿಗೆ ಅನುಮತಿ ನೀಡಲಾಗುವುದು.
ಇ	ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಹಿರಿಯೂರು ಕ್ಷೇತ್ರದಲ್ಲಿ ಪ್ರಾರಂಭಿಸಲು ಸರ್ಕಾರ ಕೈಗೊಂಡ ನಿರ್ಣಯಗಳೇನು;	2014-19ರ ಕೈಗಾರಿಕಾ ನೀತಿಯಡಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸ್ಥಾಪನೆಗೆ ಪ್ರೋತ್ಸಾಹಿಸಲು ವಿವಿಧ ಪೋತ್ಸಾಹ ಮತ್ತು ರಿಯಾಯಿತಿಯನ್ನು ನೀಡಲು ಅವಕಾಶ ಕಲ್ಪಿಸಿದೆ.
ಈ	ಹಿರಿಯೂರು ಕ್ಷೇತ್ರದಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಹೂಡಿಕೆದಾರರು ಸರ್ಕಾರದ ಮುಂದೆ ಬಂದಿರುವರೇ (ವಿವರ ನೀಡುವುದು)?	ಪ್ರಸ್ತುತ ಯಾವುದೇ ಪ್ರಸ್ತಾವನೆಗಳು ಇರುವುದಿಲ್ಲ.

ಸಿಐ 66 ಎಸ್‌ಪಿಐ 2020

(ಜಗದೀಶ್ ಶೆಟ್ಟರ್)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಸಾರ್ವಜನಿಕ ಉದ್ದಿಮೆಗಳ ಸಚಿವರು

Statement showing the details of Allotment made in favour of SUC cases (Large & Medium) at Chitradurga Dist, Hiriyur Taluk

LAQ No 1849 (Smt. Poornima K Hiriyuru)

Sl. No	Name of the Single Unit Complex	Activity	Name of the District / Taluk & Village	Investment (Rs. Lakhs)	Employment	lAND ALLOTED		Remarks
						KIADB	KLR ACT	
CHITRADURGA DISTRICT:								
1	M/s. Power Grid Corporation of India.	440/220 KV Sub Station.	Beerenahalli & Konikere Village, Hiriyur Taluk, Chithradurga Dist	7500.00	30	53.05	0	Implemented
2	M/s. R.K. Power Gen (P) Ltd.,	Power Gen.	Myakaluranahalli Babbur Village, Hiriyur Taluk	9000.00	150	76.32	0	Implemented
3	M/s. V.S.L.. Steel Ltd.,	Pig Iron	Paramenahalli & Doddagatta Village Hiriyur Taluk	1100.00	150	21.28	0	Implemented
4	Binary Apperal Private Limited	Ready Made Garment	K R Halli,Nh-48, Hiriyur Tq	4500.00	2800	0	35	Implemented
5	M/s. Golden Feeds Private Limited	Poultry Feeds	Anesidri, Hiriyur Tq	1500.00	20	0	5	Implemented
6	Sneha Poultry Feeds	Poultry Feeds	Anesidri, Hiriyur Tq	3000.00	30	0	7	Implemented
7	Rajashri Food Private Limited	Poultry Feeds	Metikurke, Hiriyur Tq	3000.00	60	0	10	Implemented
8	Entire Ceramics	Ceramic Tiles	Maradihalli, Hiriyur Tq	8000.00	120	0	6	Implemented
9	Komal Feeds	Poultry Feeds	Metikurke, Hiriyur Tq	2800.00	30	0	5	Implemented
			Total	**40400.00**	**3390**	**151.25**	**68**	

ಕರ್ನಾಟಕ ಸರ್ಕಾರ

ಸಂಖ್ಯೆ: ಸಾಉಇ 3 ಎಲ್ ಎ ಸಿ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:10-03-2020.

157
4/5
13/3/20

ಇಂದ,
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಾರ್ವಜನಿಕ ಉದ್ದಿಮೆಗಳ ಇಲಾಖೆ,
ಬೆಂಗಳೂರು-560001

ಗೆ,
ಕಾರ್ಯದರ್ಶಿ(ಪ್ರ),
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ, ಬೆಂಗಳೂರು-560001

ವಿಷಯ:- ಕರ್ನಾಟಕ ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಉಮಾನಾಥ ಎ.ಕೋಟ್ಯಾನ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ.1729 ಕ್ಕೆ ಉತ್ತರ ಒದಗಿಸುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಉಮಾನಾಥ ಎ.ಕೋಟ್ಯಾನ್ ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1729 ಕ್ಕೆ ಸಂಬಂಧಿಸಿದ ಉತ್ತರದ 100 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ, ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

M. Gopalakrishna

(ಎಂ.ಗೋಪಾಲಕೃಷ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಾರ್ವಜನಿಕ ಉದ್ದಿಮೆಗಳ ಇಲಾಖೆ.

ಪ್ರತಿ:

1. ಮಾನ್ಯ ಸಾರ್ವಜನಿಕ ಉದ್ದಿಮೆಗಳ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಾರ್ವಜನಿಕ ಉದ್ದಿಮೆಗಳ ಇಲಾಖೆ ರವರ ಆಪ್ತ ಕಾರ್ಯದರ್ಶಿ
3. ಸರ್ಕಾರದ ಉಪ ಕಾರ್ಯದರ್ಶಿ, ಸಾರ್ವಜನಿಕ ಉದ್ದಿಮೆಗಳ ಇಲಾಖೆ

ಕರ್ನಾಟಕ ಸರ್ಕಾರ

ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1729

ಸದಸ್ಯರ ಹೆಸರು : ಶ್ರೀ ಉಮಾನಾಥ ಎ.ಕೋಟ್ಯಾನ್

ಉತ್ತರಿಸಬೇಕಾದ ದಿನಾಂಕ : 13-03-2020

ಕ್ರ.ಸಂ.	ಪ್ರಶ್ನೆಗಳು	ಉತ್ತರ
ಅ	ರಾಜ್ಯದಲ್ಲಿರುವ ಸಾರ್ವಜನಿಕ ಉದ್ದಿಮೆಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)	ಕರ್ನಾಟಕ ರಾಜ್ಯದಲ್ಲಿ ಸಾರ್ವಜನಿಕ ಉದ್ದಿಮೆಗಳ ವ್ಯಾಪ್ತಿಯಲ್ಲಿ ಒಟ್ಟು 60 ಸಾರ್ವಜನಿಕ ಉದ್ಯಮಗಳಿವೆ; (ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.)
ಆ	ಎಷ್ಟು ಉದ್ದಿಮೆಗಳು ನಷ್ಟವನ್ನು ಅನುಭವಿಸುತ್ತಿವೆ; ಅವುಗಳ ಬಲವರ್ಧನೆಗಾಗಿ ಕೈಗೊಂಡ ಕ್ರಮಗಳೇನು;	19 ಸಾರ್ವಜನಿಕ ಉದ್ದಿಮೆಗಳು 2018-19 ನೇ ಆರ್ಥಿಕ ವರ್ಷದ ಅಂತ್ಯದಲ್ಲಿ ನಷ್ಟದಲ್ಲಿವೆ. ಇವುಗಳಲ್ಲಿ 14 ಉದ್ದಿಮೆಗಳು ರಾಜ್ಯದ ಸಾರ್ವಜನಿಕರಿಗೆ ಮೂಲಭೂತ ಸೌಕರ್ಯ ನೀಡುವ ಉದ್ದಿಮೆಗಳಾಗಿವೆ. ನಷ್ಟದಲ್ಲಿರುವ ಸಾರ್ವಜನಿಕ ಉದ್ದಿಮೆಗಳ ಬಲವರ್ಧನೆಗಾಗಿ, ಸಾರ್ವಜನಿಕ ಉದ್ದಿಮೆಗಳ ಇಲಾಖೆಯು, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಮುಖಾಂತರ ನಷ್ಟದಲ್ಲಿರುವ ಉದ್ದಿಮೆಗಳ ಮೌಲ್ಯಮಾಪನ ನಡೆಸಿ, ಸದರಿ ಪ್ರಾಧಿಕಾರವು ಸೂಚಿಸುವ ಕ್ರಮಗಳನ್ನು ಕಾರ್ಯಗತಗೊಳಿಸಿ, ಉದ್ದಿಮೆಗಳ ಬಲವರ್ಧನೆಗೆ ಕ್ರಮವಹಿಸುತ್ತಿದೆ.
ಇ	ಸಾರ್ವಜನಿಕ ಉದ್ದಿಮೆ ವಲಯದ ಮೂಲಕ ಸೃಷ್ಟಿಸಿರುವ ಉದ್ಯೋಗಾವಕಾಶಗಳ ಪ್ರಮಾಣವೆಷ್ಟು?	ಈ 60 ಸಾರ್ವಜನಿಕ ಉದ್ದಿಮೆಗಳಲ್ಲಿ ಒಟ್ಟು ಸುಮಾರು 2,02,692 ಜನರಿಗೆ ಉದ್ಯೋಗಾವಕಾಶ ಸೃಷ್ಟಿಸಿರುತ್ತದೆ.

(ಜಗದೀಶ್ ಶೆಟ್ಟರ್)

ಸಾರ್ವಜನಿಕ ಉದ್ದಿಮೆಗಳ ಸಚಿವರು

ಅನುಬಂಧ -

ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ವ್ಯಾಪ್ತಿಗೆ ಬರುವ 60 ನಿಗಮ/ಮಂಡಳಿಗಳ ಪಟ್ಟಿ

ಕ್ರಮ ಸಂ.	ಸಾರ್ವಜನಿಕ ಉದ್ದಿಮೆಗಳು
1.	ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ.
2.	ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ.
3.	ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ.
4.	ದಿ ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿಮಿಟೆಡ್.
5.	ಮೈಸೂರು ಪೈಯಿಂಟ್ಸ್ & ವಾರ್ನಿಷ್ ಲಿಮಿಟೆಡ್.
6.	ಮೈಸೂರು ಕಾಗದ ಕಾರ್ಖಾನೆ ನಿಯಮಿತ.
7.	ಮೈಸೂರು ಸಕ್ಕರೆ ಕಂಪನಿ ನಿಯಮಿತ.
8.	ಎನ್.ಜಿ.ಇ.ಎಫ್ (ಹುಬ್ಬಳ್ಳಿ) ನಿಯಮಿತ.
9.	ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ.
10.	ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ.
11.	ಕರ್ನಾಟಕ ಮಿನರಲ್ಸ್ ನಿಯಮಿತ.
12.	ಕರ್ನಾಟಕ ವಿದ್ಯುತ್ ನಿಗಮ ನಿಯಮಿತ.
13.	ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ.
14.	ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ.
15.	ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ.
16.	ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ.
17.	ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ.
18.	ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ.
19.	ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ.
20.	ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ.
21.	ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ.
22.	ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ.
23.	ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್.
24.	ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್.
25.	ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ.
26.	ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ.
27.	ಅರಣ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆ (ನಿ.)
28.	ಕಾವೇರಿ ನೀರಾವರಿ ನಿಗಮ ನಿಯಮಿತ.
29.	ಕರ್ನಾಟಕ ನೀರಾವರಿ ನಿಗಮ ನಿಯಮಿತ.
30.	ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ.
31.	ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ.
32.	ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ.
33.	ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ.
34.	ಕರ್ನಾಟಕ ರಾಜ್ಯ ಜವಳಿ ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ.
35.	ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್.
36.	ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ.
37.	ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ.
38.	ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ.
39.	ಕರ್ನಾಟಕ ಗೇರು ಅಭಿವೃದ್ಧಿ ನಿಗಮ ನಿಯಮಿತ.
40.	ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿ ನಿಯಮಿತ.

41.	ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ ನಿಯಮಿತ.
42.	ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ.
43.	ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ.
44.	ಡಾ॥ ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ.
45.	ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ.
46.	ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ.
47.	ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ.
48.	ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ.
49.	ಡಾ॥ ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ.
50.	ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ.
51.	ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ.
52.	ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ.
53.	ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ.
54.	ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ.
55.	ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ.
56.	ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ.
57.	ಡಿ. ದೇವರಾಜ ಅರಸು ಟ್ರಕ್ ಟರ್ಮಿನಲ್ಸ್ ಲಿಮಿಟೆಡ್.
58.	ಕರ್ನಾಟಕ ರಾಜ್ಯ ಉಗ್ರಾಣ ನಿಗಮ.
59.	ಶ್ರೀ ಕಂಠೀರವ ಸ್ಟುಡಿಯೋ ನಿಯಮಿತ.
60.	ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ.

ಕರ್ನಾಟಕ ಸರ್ಕಾರ

ಸಂಖ್ಯೆ ಸಿಐ 145 ಎಂಎಂಎನ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ 10.03.2020.

ಇಂದ
ಸರ್ಕಾರದ ಪ್ರಧಾನ ಕಾರ್ಯದರ್ಶಿ,
(ಎಂ.ಎಸ್.ಎಂ.ಇ., ಜವಳಿ ಮತ್ತು ಗಣಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಇವರಿಗೆ,
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ
ವಿಧಾನಸೌಧ

ಮಾನ್ಯರೇ,

ವಿಷಯ : ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಮಸಾಲ ಜಯರಾಮ್ (ತುರುವೇಕೆರೆ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1871ಕ್ಕೆ ಉತ್ತರ ಒದಗಿಸುವ ಕುರಿತು

ಉಲ್ಲೇಖ: ತಮ್ಮ ಪತ್ರ ಸಂಖ್ಯೆ ಪ್ರಶಾವಿಸ/15ನೇವಿಸ/6ಅ/ಪ್ರ.ಸಂ.1871/ ದಿನಾಂಕ 02.03.2020.

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಕೋರಿರುವಂತೆ ಮಾನ್ಯ ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಮಸಾಲ ಜಯರಾಮ್ (ತುರುವೇಕೆರೆ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1871ಕ್ಕೆ ಸರ್ಕಾರದ ಉತ್ತರದ 100 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ

(ಶಿವಪ್ರಕಾಶ)
ಪೀಠಾಧಿಕಾರಿ (ಗಣಿ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1871
ಸದಸ್ಯರ ಹೆಸರು	ಶ್ರೀ ಮಸಾಲ ಜಯರಾಮ್ (ತುರುವೇಕೆರೆ)
ಉತ್ತರಿಸಬೇಕಾದ ದಿನಾಂಕ	13.03.2020
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ತುಮಕೂರು ಜಿಲ್ಲೆಯ ತುರುವೇಕೆರೆ ವಿಧಾನಸಭಾ ವ್ಯಾಪ್ತಿಯಲ್ಲಿ ಕಲ್ಲುಗಣಿ ನಡೆಸಲು ಅನುಮತಿ ಕೋರಿರುವ ಪ್ರಸ್ತಾವನೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; (ಅನುಮತಿ ನೀಡಲಾಗಿರುವ / ಪಡೆದಿರುವವರ ವಿವರ ಮತ್ತು ಹಂಚಿಕೆ ಮಾಡಲಾಗಿರುವ ಜಮೀನಿನ ವಿವರ ನೀಡುವುದು)	ತುರುವೇಕೆರೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪ್ರಸ್ತುತ ಯಾವುದೇ ಕಲ್ಲುಗಣಿ ಗುತ್ತಿಗೆಗಳು ಚಾಲ್ತಿಯಲ್ಲಿರುವುದಿಲ್ಲ. ದಿನಾಂಕ 08.06.2016 ರಂದು ಮೆ॥ ಡಿ.ಆರ್.ಎನ್. ಇನ್ಫ್ರಾಸ್ಟ್ರಕ್ಚರ್ ಪ್ರಾಜೆಕ್ಟ್ ರವರಿಗೆ ರಸ್ತೆ ಕಾಮಗಾರಿ ಉದ್ದೇಶಕ್ಕಾಗಿ 03 ವರ್ಷಗಳ ಅವಧಿಗೆ ಕಲ್ಲುಗಣಿ ಗುತ್ತಿಗೆ ಸಂಖ್ಯೆ 870ನ್ನು 04ಎಕರೆ–00ಗುಂಟೆ ಪ್ರದೇಶದಲ್ಲಿ ಮಂಜೂರು ಮಾಡಿದ್ದು, ಪ್ರಸ್ತುತ ಸದರಿ ಗುತ್ತಿಗೆ ಅವಧಿಯು ಮುಕ್ತಾಯವಾಗಿರುತ್ತದೆ. ಕಲ್ಲುಗಣಿ ಗುತ್ತಿಗೆ ಸಂಖ್ಯೆ 870ರ ಗುತ್ತಿಗೆದಾರರು ಗುತ್ತಿಗೆ ಮಂಜೂರಾದ ದಿನಾಂಕ 08.06.2016 ರಿಂದ ರೂ.1,75,35,000/– ರಾಜಧನವನ್ನು ಪಾವತಿಸಿರುತ್ತಾರೆ. ಕರ್ನಾಟಕ ಉಪ ಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ಜಾರಿಯಾಗುವ ಪೂರ್ವದಲ್ಲಿ ಕಲ್ಲುಗಣಿ ಗುತ್ತಿಗೆ ಕೋರಿ 22 ಅರ್ಜಿಗಳು ಸ್ವೀಕೃತವಾಗಿದ್ದು, ಇವುಗಳ ಪೈಕಿ 18 ಅರ್ಜಿಗಳು ನಿಯಮ 8–ಬಿ ರಂತೆ ಗುತ್ತಿಗೆ ಮಂಜೂರಾತಿಗೆ ಅನರ್ಹ ಅರ್ಜಿಗಳಾಗಿದ್ದು, ಸದರಿ ಅರ್ಜಿಗಳನ್ನು ತಿರಸ್ಕರಿಸಿ ಅರ್ಜಿದಾರರಿಗೆ ಹಿಂಬರಹ ನೀಡಲಾಗಿದೆ. 04 ಅರ್ಜಿಗಳು ಗುತ್ತಿಗೆ ಮಂಜೂರಾತಿಗೆ ಅರ್ಹ ಅರ್ಜಿಗಳಾಗಿರುತ್ತವೆ. ರಾಷ್ಟ್ರೀಯ ಹೆದ್ದಾರಿ 206ರ ಕಾಮಗಾರಿಗೆ ಅವಶ್ಯವಿರುವ ಕಟ್ಟಡ ಕಲ್ಲನ್ನು ಪಡೆಯಲು ಮೆ॥ ವಿಶ್ವ ಎಂಟರ್ ಪ್ರೈಸಸ್ ರವರು ಕರ್ನಾಟಕ ಉಪ ಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ನಿಯಮ 3–ಬಿ ರಂತೆ ಕೋಳಘಟ್ಟ ಗ್ರಾಮದ ಸರ್ವೆ ನಂ. 55ರಲ್ಲಿನ 10–00 ಎಕರೆ ಪ್ರದೇಶದಲ್ಲಿ ಕಲ್ಲುಗಣಿ ಗುತ್ತಿಗೆ ಕೋರಿ ದಿನಾಂಕ 09.05.2019 ರಂದು ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಪ್ರದೇಶದಲ್ಲಿ ಕಲ್ಲುಗಣಿ ಗುತ್ತಿಗೆ ಮಂಜೂರಾತಿಗೆ ಜಿಲ್ಲಾ ಟಾಸ್ಕ್ ಫೋರ್ಸ್ (ಗಣಿ) ಸಮಿತಿಯಿಂದ ಶಿಫಾರಸ್ಸು ಮಾಡಲಾಗಿದ್ದು, ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ಕಲ್ಲುಗಣಿ ಗುತ್ತಿಗೆ ಮಂಜೂರಾತಿ ಕೋರಿರುವ ಅರ್ಜಿಗಳ ವಿವರಗಳನ್ನು <u>ಅನುಬಂಧದಲ್ಲಿ</u> ಲಗತ್ತಿಸಿದೆ.
ಆ)	ಇಂದರಿಂದ ಸರ್ಕಾರಕ್ಕೆ ಬರುತ್ತಿರುವ ರಾಜಧನವೆಷ್ಟು? (ವಿವರ ನೀಡುವುದು)	

ಸಂಖ್ಯೆ: ಸಿಐ 145 ಎಂಎಂಎನ್ 2020

(ಸಿ.ಸಿ. ಪಾಟೀಲ)
ಗಣಿ ಮತ್ತು ಭೂವಿಜ್ಞಾನ ಸಚಿವರು

ಅನುಬಂಧ

ಕೆ.ಎಂ.ಎಂ.ಸಿ.ಆರ್–1994 ತಿದ್ದುಪಡಿ, ದಿನಾಂಕ: 12.08.2016 ರಂತೆ ಬಾಕಿ ಇರುವ ಅರ್ಜಿಗಳ ವಿವರ

ಕ್ರಸಂ	ಅರ್ಜಿದಾರರ/ ಗುತ್ತಿಗೆದಾರರ ಹೆಸರು	ಕಲ್ಲುಗಣಿ ಗುತ್ತಿಗೆ ಅರ್ಜಿ ಸಂಖ್ಯೆ & ದಿನಾಂಕ	ತಾಲ್ಲೂಕು	ಗ್ರಾಮ	ಸರ್ವೆ ನಂ.	ವಿಸ್ತೀರ್ಣ (ಎ–ಗು)	ಖನಿಜದ ವಿಧ	ಭೂಮಿ ವಿಧ
1	ಟಿ. ಮಹಾಲಿಂಗಯ್ಯ	ಕಗಗುಅ–195/2014–15 03.02.2015	ತುರುವೇಕೆರೆ	ವರಹಸಂದ್ರ	148	2–00	ಕಟ್ಟಡಕಲ್ಲು	ಗೋಮಾಳ
2	ಮೆ॥ ಮಂಜುನಾಥ ಕನ್‌ಸ್ಟ್ರಕ್ಷನ್ಸ್	ಕಗಗುಅ–98/2015–16 29.12.2015	ತುರುವೇಕೆರೆ	ಕಲ್ಲನಾಗತೀಹಳ್ಳಿ	41	12–20	ಕಟ್ಟಡಕಲ್ಲು/ಎಂ–ಸ್ಯಾಂಡ್	ಗೋಮಾಳ
3	ಮೆ॥ ಮಂಜುನಾಥ ಕನ್‌ಸ್ಟ್ರಕ್ಷನ್ಸ್	ಕಗಗುಅ–99/2015–16 29.12.2015	ತುರುವೇಕೆರೆ	ಕಲ್ಲನಾಗತೀಹಳ್ಳಿ	41	11–00	ಕಟ್ಟಡಕಲ್ಲು/ಎಂ–ಸ್ಯಾಂಡ್	ಗೋಮಾಳ
4	ಕೆ. ಸುಬಾಷ್ ಚಂದ್ರ ಕಾರಂತ್	ಕಗಗುಅ–06/2016–17 12.04.2016	ತುರುವೇಕೆರೆ	ಕಲ್ಲನಾಗತೀಹಳ್ಳಿ	41	7–00	ಕಟ್ಟಡಕಲ್ಲು/ಎಂ–ಸ್ಯಾಂಡ್	ಗೋಮಾಳ
	ಕೆ.ಎಂ.ಎಂ.ಸಿ.ಆರ್–1994 ರ ತಿದ್ದುಪಡಿ 2016 ರ ನಿಯಮ 3(ಬಿ) ರಂತೆ ರಸ್ತೆ ಕಾಮಗಾರಿಗಾಗಿ ಸಲ್ಲಿಸಿರುವ ಅರ್ಜಿ ವಿವರ							
1	ಮೆ॥ ವಿಶ್ವ ಎಂಟರ್ ಪ್ರೈಸಸ್ , ಪ್ರೋ: ವಿಸ್ವನಾಥ್ ಆರ್	ಕಗಗುಅ 03/2019–20 ದಿಆಂಕ: 09.05.2019	ತುರುವೇಕೆರೆ	ಕೋಳಘಟ್ಟ	55	10–00	ಕಟ್ಟಡಕಲ್ಲು	ಗೋಮಾಳ

ಉಪ ನಿರ್ದೇಶಕರು (ಖ.ಆ)
ಗಣಿ ಮತ್ತು ಭೂವಿಜ್ಞಾನ ಇಲಾಖೆ,
ಖನಿಜ ಭವನ, ಬೆಂಗಳೂರು.

CI 145 MMN 2020

File No. CI/51/IAP/2020-ID-C&I SEC

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಐ 51 ಐಎಪಿ(ಇ) 2020

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ 12.03.2020.

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ (ಪ್ರ),
ಕರ್ನಾಟಕ ವಿಧಾನ ಸಭೆ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಕುಮಾರಸ್ವಾಮಿ ಹೆಚ್.ಕೆ. (ಸಕಲೇಶಪುರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1748ಕ್ಕೆ ಉತ್ತರಿಸುವ ಕುರಿತು.

---*---

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಕುಮಾರಸ್ವಾಮಿ ಹೆಚ್.ಕೆ. (ಸಕಲೇಶಪುರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1748ಕ್ಕೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಎನ್. ಕುಮಾರ್) 12/3/2020
ಸರ್ಕಾರದ ಅಧೀನ ಕಾರ್ಯದರ್ಶಿ (ಕೈ.ಅ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1748
2. ಸದಸ್ಯರ ಹೆಸರು : ಶ್ರೀ ಕುಮಾರಸ್ವಾಮಿ ಹೆಚ್.ಕೆ. (ಸಕಲೇಶಪುರ)
3. ಉತ್ತರಿಸುವ ದಿನಾಂಕ : 13.03.2020
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	ದಿನಾಂಕ: 30.10.1995ರಲ್ಲಿ ಹಾಸನ ನಗರಕ್ಕೆ ಹೊಂದಿಕೊಂಡಿರುವ ಗ್ರಾಮಗಳಾದ ಬಿ.ಕಾಟೀಹಳ್ಳಿ, ತಿಮ್ಮನಹಳ್ಳಿ ಹಾಗೂ ಇತರೆ ಸುತ್ತಮುತ್ತ ಗ್ರಾಮಗಳಲ್ಲಿ ಕೆ.ಐ.ಎ.ಡಿ.ಬಿ. ವತಿಯಿಂದ ಇಂಡಸ್ಟ್ರಿಯಲ್ ಡೆವೆಲಪ್‌ಮೆಂಟ್‌ಗಾಗಿ ಇಂಡಸ್ಟ್ರಿಯಲ್ ಗ್ರೋತ್ ಸೆಂಟರ್‌ನ್ನು ಸ್ಥಾಪಿಸಿರುವುದು ನಿಜವೇ;	ಹೌದು.
ಆ.	1995ರಿಂದ ಕೆ.ಐ.ಎ.ಡಿ.ಬಿ. ವತಿಯಿಂದ ಇಂಡಸ್ಟ್ರಿಯಲ್ ಡೆವೆಲಪ್‌ಮೆಂಟ್ ಇಂಡಸ್ಟ್ರಿಯಲ್ ಗ್ರೋತ್ ಸೆಂಟರ್‌ಗೆ ಎಷ್ಟು ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿದೆ (ವಿವರ ನೀಡುವುದು)	ಕೆ.ಐ.ಎ.ಡಿ.ಬಿ. ವತಿಯಿಂದ ಹಾಸನ ಜಿಲ್ಲೆ, ಹಾಸನ ಗ್ರೋತ್‌ಸೆಂಟರ್ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಲು ತಿಮ್ಮನಹಳ್ಳಿ ಮತ್ತು ಉಪ್ಪನಹಳ್ಳಿ ಗ್ರಾಮಗಳ ಒಟ್ಟು 61-32 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿದೆ.
ಇ.	ಹಾಗಿದ್ದಲ್ಲಿ, ಸದರಿ ಭೂಮಿಯನ್ನು ಯಾವ ಯಾವ ವಿಧದ ಕಾರ್ಖಾನೆಗಳನ್ನು ಸ್ಥಾಪಿಸಲು, ಯಾವ ಯಾವ ಸಂಸ್ಥೆಗೆ ಪ್ಲಾಟ್‌ಗಳನ್ನು ಹಂಚಿಕೆ ಮಾಡಲು ಸ್ವಾಧೀನಪಡಿಸಿಕೊಳ್ಳಲಾಗಿದೆ; ಹಂಚಿಕೆಯಾಗದೆ ಖಾಲಿ ಉಳಿದಿರುವ ಪ್ಲಾಟ್‌ಗಳೆಷ್ಟು; (ವಿವರ ನೀಡುವುದು)	ಕೆ.ಐ.ಎ.ಡಿ.ಬಿ.ಯು ಹಾಸನ ಜಿಲ್ಲೆ, ಬಿ.ಕಾಟೀಹಳ್ಳಿ ಮತ್ತು ತಿಮ್ಮನಹಳ್ಳಿ ಕೈಗಾರಿಕಾ ಪ್ರದೇಶಗಳಲ್ಲಿ ವಿವಿಧ ಕಾರ್ಖಾನೆಗಳನ್ನು ಸ್ಥಾಪಿಸಲು ಹಂಚಿಕೆ ಪಡೆದಿರುವ ಘಟಕಗಳ ವಿವರ ಆ ಸಂಸ್ಥೆಗಳು ಸ್ಥಾಪಿಸಿರುವ ಉದ್ಯಮಗಳ ಸಂಪೂರ್ಣ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ. ಮುಂದುವರೆದು, ಸದರಿ ಕೈಗಾರಿಕಾ ಪ್ರದೇಶಗಳಲ್ಲಿ ಯಾವುದೇ ನಿವೇಶನಗಳು ಹಂಚಿಕೆಯಾಗದೇ ಖಾಲಿ ಉಳಿದಿರುವುದಿಲ್ಲ.
ಈ.	ಸದರಿ ಇಂಡಸ್ಟ್ರಿಯಲ್ ಗ್ರೋತ್ ಸೆಂಟರ್‌ನಲ್ಲಿ ಹಂಚಿಕೆ ಮಾಡಲಾಗಿರುವ ಕಾರ್ಖಾನೆಗಳ / ಸಂಸ್ಥೆಗಳ ವಿವರ ಮತ್ತು ವಿಳಾಸ ಹಾಗೂ ಆ ಸಂಸ್ಥೆಗಳು ಸ್ಥಾಪಿಸಿರುವ ಉದ್ಯಮಗಳ ಸಂಪೂರ್ಣ ಮಾಹಿತಿ ನೀಡುವುದು;	

ಉ.	ಸದರಿ ಭೂಸ್ವಾಧೀನಪಡಿಸಿಕೊಂಡಿರುವ ಜಮೀನಿನಲ್ಲಿ ಕಾರ್ಖಾನೆಗಳನ್ನು ನಿರ್ಮಾಣ ಮಾಡಲು ವಿವಿಧ ಸಂಸ್ಥೆಗಳಿಗೆ ಹಂಚಿಕೆಯಾಗಿರುವ ಪ್ಲಾಟ್‌ಗಳಲ್ಲಿ ಕಾರ್ಖಾನೆಗಳನ್ನು / ಉದ್ಯಮಗಳನ್ನು ನಿಯಮಾನುಸಾರ ಭೂಮಿಯನ್ನು ಉಪಯೋಗಿಸಿಕೊಂಡು ಸ್ಥಾಪಿಸಲಾಗಿದೆಯೇ?	ನಿವೇಶನ ಹಂಚಿಕೆ ಪಡೆದ ಯೋಜನಾ ಪ್ರವರ್ತಕರು ತಾವು ಹಂಚಿಕೆ ಪಡೆದ ಉದ್ದೇಶಿತ ಯೋಜನೆಗಾಗಿ ನಿಯಮಾನುಸಾರ ಭೂಮಿಯನ್ನು ಉಪಯೋಗಿಸಿಕೊಂಡು, ಉದ್ಯಮಗಳನ್ನು ಸ್ಥಾಪಿಸಿರುತ್ತಾರೆ.
ಊ.	ಹಾಗಿಲ್ಲದಿದ್ದಲ್ಲಿ, ಕೆ.ಐ.ಎ.ಡಿ.ಬಿ.ಯ ನಿಯಮಗಳನ್ನು ಪಾಲಿಸದೆ ಹಂಚಿಕೆ ಮಾಡಲಾದ ಪ್ಲಾಟ್‌ಗಳನ್ನು ಉಪಯೋಗಿಸಿಕೊಳ್ಳದಿದ್ದಲ್ಲಿ ಅಂತಹ ಕಾರ್ಖಾನೆಗಳ ಮಾಲೀಕರ / ಉದ್ಯಮಿಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು)	ಅಂತಹ ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ.
ಋ.	ಸದರಿ ಭೂಸ್ವಾಧೀನಪಡಿಸಿಕೊಂಡಿರುವ ಭೂಮಿಯಲ್ಲಿ ಹಂಚಿಕೆಯಾಗಿರುವ ಪ್ಲಾಟ್‌ಗಳನ್ನು ಇತರರಿಗೆ ಪರಭಾರೆ / ಬಾಡಿಗೆ ನೀಡಲು ಹಂಚಿಕೆ ನಿಯಮಗಳಲ್ಲಿ ಅವಕಾಶವಿರುತ್ತದೆಯೇ; ಒಂದು ವೇಳೆ, ಕೆ.ಐ.ಎ.ಡಿ.ಬಿ. ನಿಯಮಗಳನ್ನು ಉಲ್ಲಂಘಿಸಿ ಬೇರೆಯವರಿಗೆ ಪರಭಾರೆ / ಬಾಡಿಗೆ ನೀಡಿದ್ದಲ್ಲಿ ಅಂತಹ ಕಾರ್ಖಾನೆಗಳ ಮಾಲೀಕರ / ಉದ್ಯಮಿಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಮಾಲೀಕರ / ಉದ್ಯಮಿಗಳ ವಿಳಾಸವಾರು ಸಂಪೂರ್ಣ ಮಾಹಿತಿ ನೀಡುವುದು)	ಕೆ.ಐ.ಎ.ಡಿ.ಬಿ. ವತಿಯಿಂದ ಕೈಗಾರಿಕಾ ನಿವೇಶನ ಹಂಚಿಕೆ ಪಡೆದು ಗುತ್ತಿಗೆ ಕರಾರು ಪತ್ರ ನೆರವೇರಿಸಿಕೊಳ್ಳುವ ಗುತ್ತಿಗೆ ಕರಾರಿನ ನಿಯಮಾನುಸಾರ ಹಂಚಿಕೆದಾರರು ಒಳಗುತ್ತಿಗೆ ನೀಡುವ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರದಿಂದ ಪೂರ್ವಾನುಮತಿಯನ್ನು ಪಡೆದು ಬೇರೊಬ್ಬ ಉದ್ದಿಮೆದಾರರಿಗೆ ಪರಭಾರೆ/ ಬಾಡಿಗೆ ನೀಡಲು ಅವಕಾಶವಿರುತ್ತದೆ.

ಸಂಖ್ಯೆ: ಸಿಐ 51 ಐಎಪಿ(ಇ) 2020

(ಜಗದೀಶ್ ಶೆಟ್ಟರ್)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಸಾರ್ವಜನಿಕ ಉದ್ದಿಮೆಗಳ ಸಚಿವರು

1748 (6)

(1)

KARNATAKA INDUSTRIAL AREAS DEVELOPMENT BOARD, ZONAL OFFICE, HASSAN

STATEMENT SHOWING THE DETAILS OF ALLOTMENT MADE AT B.KATIHALLI Industrial Area, HASSAN.

ಅನುಬಂಧ-ಅ

Sl. No.	Name of the Industry & Address of the Allottee	Plot No.	Extent in Sqmtr.	Date of Allotment	Date of PC issued	Nature of Product	Project Cost (Rs. Lakhs)	Power requirement	Water requirement (In ltrs. Per day)	Employment	Stage of Implementation	Remarks / Action Taken
1	2	3	4	5	6	7	8	9	10	11	12	13
1.	M/s. Karnataka State Pollution Control Board, Deputy Environmental Officer, B.M.Road, B.Katihalli I.A., Hassan.	1-A (CA)	1678.00	22-2-1995	04.09.1997	Office building	--	--	500	-	Under production	--
2.	M/s. Karnataka Small Industries Marketing Corporation Ltd., The Branch Manager, Sampige road, I, Hassan.	1-B (CA)	2711.40	16-12-99	14.11.2000	Office building	--	--	--	10	Under production	Sale deed Executed.
3	M/s. Basaveshwara Engg. Works, No.789, Govt. Hospital road, Hassan.	2A	2342.00	12-06-93	22.07.1995	Gen Engg. & Steel furniture.	6.1	15HP	800	4	Under production	Sale deed Executed.
4	M/s. Bavani Marbles & Granites, Prop: Sri C.Nagaraju, B.Katihalli I.A., B.M.Road, Hassan.	2B	1984.00	19-3-1992	13.08.2002	Marble cutting, Granite cutting & polishing	5.82	16HP	2000	4	Under production	Sale deed Executed.
5	M/s. Kothari Marbles & granite Ind., Prop: B.Sunil Kothari, Chikkabasti road, Hassan.	2B-1 Add	1893.00	21-12-99	21.12.1999	-Do-	27.00	40HP	5000	15	Under production	--
6	M/s. Shilpa Engg. Consultants Prop: Sri C.Nagaraju, Old Municipal Office road, Venkateshwara Buldg, Its floor, Hassan.	2-C	1916.00	06.7.1991	08.01.2012	-Do-	5.82	40HP	2000	12	Under production	Sale deed Executed.

Secretary-I
Karnataka Industrial Areas Development Board
Bengaluru - 560 001

1	2	3	4	5	6	7	8	9	10	11	12	13
7	M/s. Hassan Nirmithi Kendra, Plot No.3&4, B.Katihalli I.A., B.M.Road, Hassan.	3 & 4	8088.00	11-12-91	30.03.1992	Nirmithi Kendra	9.71	5HP	1000	40	Under Production	--
8	M/s. Malnad Oils & Extraction Pvt Ltd., Plot No.5, B.Katihalli I.A., Hassan.	5	6809.00	21-10-86	04.11.1988	Edible oil	66.57	150KV	2000	36	Under Production	--
9	M/s. United Furniture Products, Proptx: Smt.K.R.Anusooya, No.798, S.C.Hospital road, Hassan.	6-C	1332.00	30-11-94	26.02.1996	Steel furniture	4.5	15HP	1000	5	Under Production	Sale deed Executed.
10	M/s. Ham shine Electronics & Energy, Prop: H.T.Hamsaraj, Dharshan House, No.927-A, Its Floor, 9th cross, I, Hassan.	7-A1	1003.00	14-9-1994	29.12.1998	Solar equipment	18.96	10HP	250	5	Under Production	Sale deed executed.
11	M/s. Ham shine Electronics & Energy, Prop: H.T.Hamsaraj, Dharshan House, No.927-A, Its Floor, 9th cross, I, Hassan.	7-A2	1011.00	15-9-1994	07.11.2007	Solar equipment	17.35	15HP	300	9	Under Production	-
12	M/s. Tulasi Gunny Products, Proptx: Smt.Sajjana Bai, Chikkabasti road, Hassan.	7-A3	2030.00	30-11-1994	03.01.1996	Gunny bags	6.26	10HP	500	6	Under production	--
13	M/s. Kothari Marbles, Prop: Sri Rameshkumar, Kothari complex, Chikkabasti road, Hassan.	7-A4 & A5	2885.00	23-1-1996/ 31.3.99	28.01.2000	Marble cutting	20.25	40HP	5000	15	Under Production	--
14	M/s. Poly windows Sri K.Vageshkumar, No.5766, H.B.Coloney, Ravindranagar, Hassan.	7-B	2020.00	20-6-1989	03.07.1990	Poly windows, Doors and polythin Films, and Bag	11.5	8HP	700	5	Under Production	--
15	M/s. D.I.T.C., B.Katihalli I.A., B.M.Road, Hassan.	8&21-P	17017.00	31.07.1985	13.09.2002	Training centre	--	50HP	500	48	Under Production	--
16	M/s. Rashmi Tiles Prop: Sri.C.R.Shankar, A&M Estates, Balupete Post, Hassan.	9	6548.25	15-3-1985	19.09.1985	Cement Blocks	26.83	10HP	1000	6	Under Production	Sale Deed Executed
17	M/s. Manjunatha Tyres, B.Katihalli I.A., B.M.Road, Hassan.	10	2088.00	20-12-1984	03.05.1985	Tyre Retarding	4.6	25KV	2000	7	Under Production	Sale Deed Executed
18	M/s. V.L.R. Plastics Prop: H.R.Mohankumar, Plot No.11, B.Katihally I.A., B.M.Road, Hassan.	11	1995.00	01-10-89	28.01.2000	Plastic product	17.19	25HP	1500	8	Under Production	Sale Deed Executed

Secretary-I
Karnataka Industrial Areas Development Board
Bengaluru - 560 001

(3)

1	2	3	4	5	6	7	8	9	10	11	12	13
19	M/s. Standard Plastic Containers, Sri A.M.Ramachandra, B.Katihally I.A., B.M.Road, Hassan.	12	2026.00	23-5-1984	02.10.1984	Processing of old plastic in to plastic etc.	4	25HP	800	8	Under Production	Sale Deed Executed
20	M/s. Swastik Trading Company, Prop: M.Ajithkumar, Santhepet, B.M.Road, Hassan.	13-A	1942.00	22-12-2000	22.12.2000	Aluminium Utensils	4.8	40HP	5000	6	Under Production	Sale Deed Executed
21	M/s Sati Manorathnal Granites & Marbles Prop: Sri M.Babulal Kothari, D.No.MIG-17, 2nd cross, Kuvempu Nagar, Hassan.	13-B	3098.00	19.2.2004	28.09.2004	Granite/Marbles cutting & polishing	24	60HP	1000	50	Under Production	Sale Deed Executed
22	M/s Janatha Garments Prop: Sri A.M.Vasanth Madhava S/o A.C.Munivenkate Gowda, C/o Janatha Hospital, R.C. Road, Hassan.	13-C	2055.00	21.4.2007	24.04.2002	Readymade Garments	13.8	03HP	500	25	Under Production	--
23	Sri H.N.Nanjunda Setty, Proprietor, Vasavi Nilaya, Shankaripuram, Hassan.	14	2020.00	27-9-1991 /24.1.05	09.07.1992	Storing of Kerosene	6.58	10HP	300	5	Under Production	Sale Deed executed
24	M/s. Rashmi Enterprises Prop: Sri Krishnegowda, No.5070, Ravindranagar, Hassan.	15	3013.00	02-04-98	26.06.1989	Gober gas plant, Agri Eqpt.	1.6	10HP	300	6	Under Production	Sale Deed executed
25	M/s. Ashok Aluminium Industries, Plot No.16, B.Katihalli I.A., B.M.Road, Hassan.	16	2207.00	14-10-1985	13.06.1986	Aluminium Utensils	1.25	10HP	500	6	Under Production	Sale Deed executed
26	M/s. Karthick Hallow Concrete Blocks Industries, Proptx: Madhu Sudhana, S/o H.Subramanya, No.1548, Saraswathipuram, Hassan.	17-A	1115.00	15-9-1994	26.09.2007	Concrete Cement Hallow Blocks	3	10HP	3000	9	Under Production	--
27	M/s. Quality Seat Covers Industries, Proptx: Smt.H.K.Sharadha, No.13, Pampa road, 2nd cross, Vidyanagar, Hassan.	17-B	1011.00	28-10-1993	16.09.1994	Seat Covers & leather bags	0.5	2HP	100	6	Under production	Sale deed executed.

Secretary-1
Karnataka Industrial Areas Development Board
Bengaluru - 560 001

(4)

1	2	3	4	5	6	7	8	9	10	11	12	13
28	M/s. Y.N Pattabi Associates, No.116, 6th cross, Lower palace Orchards, Bangalore-03.	18	2115.00	13-5-1987	04.03.1992	Distilled Water	2.5	10HP	1500	5	Under production	Sale deed executed.
29	M/s Shankar General Engg. Works, Prop: Sri S.Thyagaraju, Plot No.19 A&B, B.Katihally I.A., B.M.Road, Hassan.	19-A & B	3349.00	26-10-1993	07.04.2000	Gen Eng. Works	8.65	10HP	570	10	Under production	Sale Deed executed.
30	M/s. Habeeb Exports, Prop: Sri Habeeb-Ur-Rehman, No.21, Rohini complex, Hassan.	20	1780.00	25-11-03	25.11.2003	Cutting processing of granite items	55	80HP	1000	30	Under production	Sale Deed executed.
31	M/s. Ajay Industries, Prop: Sri P.N.Ajay, No.668, 6th main, 7th cross, Indiranagar, Bangalore-8.	21	2226.00	21-10-1993	24.11.1993	Cement Blocks	2.6	5HP	1000	6	Under production	Sale Deed executed.
32	M/s Janatha Industries, Smt. K.R.Jayalakshmi Gowda, W/o Dr.MunivenkateGowda Priyadharshini, Rakshanapuram, Hassan.	21-B	3124.00	20.6.2006	29.06.2006	Mineral Water	32.15	30 HP	6000	10	Under Production	--
33	M/s. Naveen Mechanized Laundry Unit, Prop: Sri. Sridhar, Plot No.22-A1, B.Katihally I.A., B.M.Road, Hassan.	22-A 1	755.00	03-07-91	16.10.2004	Mechanized Laundry Unit	3.3	10HP	1000	40	Under Production	Sale deed executed
34	M/s Sree Sathya Sai Granites, Proptx: Smt. Lalitha, D.No.EWS-643, Kuvempunagar, Hassan.	22-A2	1234.72	14.10.2004	16.10.2004	Granite cutting & polishing	20	60HP	--	8	Under Production	Sale deed executed
35	M/s. Empire Steel furniture & Fabrication, Prop: Sri C.B.Shashikumar, Real Estate Agent, Megha Circulating Library, Arlepet, Hassan.	22-B	1172.00	02-09-01	27.04.2001	Steel furniture & fabrication works.	15.85	20HP	500	8	Under Production	Sale deed Executed
36	M/s. Sri Devi Fabrics, Partner: Ujwalkumar Sinha, Plot No.22-C, B.Katihally I.A., Hassan.	22-C	1908.00	04-03-93	24.03.1994	Poultry Feeds	1.19	27HP	500	8	Under production	Sale deed executed.

Secretary-I
Karnataka Industrial Area Development Board
Bengaluru - 560 001

(5)

1	2	3	4	5	6	7	8	9	10	11	12	13
37	M/s Elke Plast, Prop: Sri L.K.Venkatesh, No.341, N.S.Palya, 9th K.M.Bannerugatta road, Bangalore-76.	23-A1 & A2	2006.00	12-08-95	18.03.1996	Injection Moulded plastic components	13.38	15HP	200	5	Under production	Sale deed executed.
38	M/s. Nagesh Genl. Engg. Industries, Prop: C.H. Nagesh, Chalanahalli Village, Harihara Pura Post, H.N. Pura, Hassan District.	23-B	1001.00	12-02-94	13.02.1996	Leather Foot wares & garments	6.2	10HP	1500	6	Under production	--
39	M/s. Uma Industries, Plot No.24-A, B.Katihally I.A., B.M.Road, Hassan.	24-A	2019.00	08-08-91	03.11.1994	Polythin Bags tapes & sheets	9.71	20HP	100	10	Under production	Sale deed executed.
40	M/s. Ashoka Fibers & Engg. Fabrication, Proptx: B.N.Hemalatha, Plot No.24-B, B.Katihally I.A., Hassan.	24-B	1992.00	25-2-1994	20.11.1995	Fiber equipments & water tank	16.4	10HP	500	10	Under production	Sale deed executed.
41	M/s. Manjunatha Concrete Industry, Prop: H.A. Kiran S/o H.T.Annaji, Sri Durga, I, Hassan.	25	4524.00	12-02-94	20.04.1996	Cement concrete products	29.5	28HP	2000	16	Under production	Sale deed executed.
42	M/s. Someshwari Oil Industries, Sri K.N.Vishvas, Plot No.26, B.Katihally I.A., B.M.Road, Hassan.	26	4047.00	11-05-93	23.05.1994	Edible oil products	26.6	57HP	500	47	Under production	Latter issued for payment of DLC for Sale deed
43	M/s. Ranganatha Industries Prop: Sri H.R.Manujantha S/o Sri B.Rajegowda, No.6128, D.R.Layout, Hassan.	27	3080.00	02-10-95	18.11.1995	Gen. Engg. Works	8.5	25HP	200	9	Under Production	--
44	M/s. Casino Creations Prop: V.A.Nagendraprasad, Near Bhanu Theater, B.M.Road, Hassan.	28	2032.00	27-10-1993	27.06.1994	Hoy-Joy Soft Drinks	7	5HP	3500	12	Under Production	Sale deed executed.
45	M/s. Hemavathi Gas Agencies, Sri Ranga Complex, Sampige road, Hassan.	29-A	978.00	27-1-1997	14.08.1997	L.P.G. storage Godown	17.57	28HP	1000	20	Under Production	Sale deed executed.
46	M/s. Sri Devi Enterprises, Proptx: K.V.Leelavathi, No.820, 3rd cross, Hassan.	29-B	1027.00	10-05-93	16.09.1994	Screen printing	4.65	--	200	3	Under Production	Sale deed executed.

Secretary-I
Karnataka Industrial Areas Development Board
Bengaluru - 560 001

(6)

1	2	3	4	5	6	7	8	9	10	11	12	13
47	M/s. Samrudh Industries Prop: B.N.Laxmikanth, Plot No.30, B.Katihally I.A., Hassan.	30	4500.00	26-10-1993	09.06.1994	Coir curling	8.8	35HP	4000	18	Under Production	Sale deed executed.
48	M/s. Oriental Granite & Marbles, Prop: Smt.B.Haseena, W/o H.S.Abdul Hafeez Sayed, Al-Habeeb, Shankarmutt road, Hassan.	30-B	3668.00	12-01-94	04.03.1995	Granite Slabs Cutting & polishing	97.2	20HP	30000	17	Under Production	Sale deed executed.
49	M/s. Renuka Enterprises, Proptx: Smt.Shanthamma W/o Late T.V.Murthy, No.90, Behind LIC colony, Bheemajyothinagar, Bangalore.	30-B1	1020.00	11-10-94	26.12.1995	Hawaii chappals	9.35	2HP	500	18	Not working	Unit is Under Sick / Notice issued
50	M/s. Nittur Associates, Shed No.C-I, Industrial Estate, Hassan.	30-B2	1012.00	14-12-1994	18.11.1995	Gen. Engg. Works GLS Lamps	7.27	25HP	1000	5	Under Production	Sale deed executed
51	M/s. Granite Industrial Corporation Pvt Ltd., Plot No.30-C, B.Katihally I.A., B.M.Road, Hassan.	30-C	5362.00	12-01-94	04.03.1995	Granite tiles & polishing	54.32	135HP	20000	44	Under Production	Sale deed executed
52	M/s. Banashree Constructions Prop: Mohanshetty, Plot No.31-A, B.Katihally I.A., Hassan.	31-A	1992.00	07-03-89	26.12.1989	Concrete Structure products	0.96	10HP	1000	8	Under Production	Sale deed executed
53	M/s. Perfect Cold Storage, Plot No.31-B, B.Katihalli I.A., B.M.Road, Hassan.	31-B	2016.00	10-07-92	21.12.1992	Cold storage	42	48KVA	1200	8	Under Production	Sale deed executed.
54	M/s. Pooja Industries, Plot No.32&33, B.Katihally I.A., B.M.Road, Hassan.	32 & 33	15052.00	12-04-90	05.05.1991	Cutting & polishing of granite slabs	276	10HP	500	3	Under Production	Sale deed executed
55	M/s. Shree Rama Granites & Marbles, Prop: Sri Krishnegowda, Sri Ranga complex, Sampige road, I, Hassan.	34 & 35-P	3355.00	29-1-2003	29.01.2003	Granite marbles, tiles & processing of Kadapa marbles	27.5	60HP	3000	5	Under Production	Sale deed executed (Auctioned)
56	M/s. The Director, E.S.I.C., No.10, Binny Fields, Binnypet, Bangalore-23.	38&39	4894.00	30-7-1986	04.12.1991	Dispensary	--	25HP	5000	--	Under Production	Sale deed executed

Secretary-I
Karnataka Industrial Areas Development Board
Bengaluru - 560 001

(7)

1	2	3	4	5	6	7	8	9	10	11	12	13
57	M/s. Aswabharamma, Enterprises, Partner: Smt. Deepthi Prasad, Near CKS School, B.M. Road, Cross, Hassan.	40-A	1006.00	10-06-93	23.08.1994	Potato Chips /Mushrooms	1.5	25HP	200	12	Under Production	--
58	M/s. Sri Krishna Enterprises, Plot No.40-B, B.Katihally I.A., B.M.Road, Hassan.	40-B	971.00	30-11-1994	31.01.2008	General Engineering	11.5	5HP	500	18	Under Production	Sale deed Executed
59	M/s. Jessy Petroleum, Edwin Kamraj V. Plot No.40-C, B.Katihally I.A., B.M. Road, Hassan.	40-C	1754.00	16-11-1994	21.11.1994	Lubrigent oils & grees manufactur	9.62	75HP	500	10	Under Production	Sale deed Executed
60	M/s. P.G. Industries Prop: H.A.Vasanthkumar, S/o P.Annaiah, No.1612/1, N.R.Extn, Hassan.	40-D	2555.00	25-3-1997	05.07.1997	Gen. Engg works	13.53	30HP	1000	11	Under Production	Sale deed Executed
61	M/s. Mahesh Trading Company, Prop: Sri Mahesh R Kanani, Girilila Building, No: 16/18, Ist Floor, Backside Champagalli cross lane, Mumbai-02.	40-E	3623.00	24-10-1994/17.6.2004	20.10.1995	General Engineering Work shop	--	25HP	250	6	Under Production	Sale deed Executed
62	M/s. M.L. Mosaics, Proptx: Smt.P.S.Lalitha, Plot No.41, B.Katihally I.A., B.M.Road, Hassan.	41	4047.00	19-4-1994	23.06.1994	Hallow Cement Blocks	5.25	10HP	3000	8	Under Production	Sale Deed executed.
63	M/s. Sangameshwara Industries, Prop: D.S.Jayakiran, C/o Form Movers, P.B. No. 52, Behind Sandal koti, I, Hassan.	42	4137.00	30-11-1994	09.10.1995	Coir cutting rope	17.81	75HP	500	7	Under Production	Sale Deed executed.
64	M/s. Sri Rama Mosaic Flooring, Plot No. 43-A, B.Katehalli I.A., B.M.Road, Hassan.	43-A	1996.00	17-11-1996	22.01.1997	Mosaic flooring tiles	1.2	10HP	6000	13	Under Production	Sale Deed executed.
65	M/s. Bhadra Cement & Allied Products, Plot No.43-B, B.Katihally I.A., B.M.Road, Hassan.	43-B	1806.00	17-6-1991	06.11.1995	Cement pipes & Mosaic Tiles	15	3KVA	1000	10	Under Production	Sale Deed executed.
66	M/s. The Executive Engineer (Ele), KPTCL, O&M Division, Hassan.	44 & 48-B	11582.00	06-07-95	15.06.1995	Sub Station (11KV)	---	--	--	19	Under Production	Govt. unit/ Sale Deed Notice Issued

Secretary-I
Karnataka Industrial Areas Development Board

(8)

1	2	3	4	5	6	7	8	9	10	11	12	13
67	M/s. Such Silks International Limited, Prop: Sri Hiran Hegde, Plot No.45, B.Katihally I.A., Arsikere road, Hassan.	45	60228.00	14-11-1985	13.02.1986	Silk Ties & Silk Tie Fabrics	1424	35HP	10000	6	Not working	Sale Deed executed.
68	M/s. Arun Prestressed Concrete Products Pvt. Ltd, Plot No.46, 47&48-A, B.Katihally I.A., Hassan.	46,47 & 48-A	32486.00	17-12-1992	02.01.1993	P.V.C. Pipes, Hume Steel pipes	68	245HP	6000	130	Under production	Sale deed executed
69	The Managing Director, M/s Mysore Minerals Limited., Regional Office, No. 39, Mahatma Gandhi road, Bangalore-1.	21,19,7 P	56658.00	16.02.1984	03.05.1985	Granite cutting & polishing	--	--	--	--	Under production	Sale deed executed
70	M/s United Education Society, Smt.Anusooya W/o C.M.Chandrashekar, I, Govt. Hospital road, Hassan.	CA-1(P)	3434.00	21.1.2002	01.07.2002	Education	--	--	--	--	Under production	Absoluted sale deed executed
71	M/s Sri Aravinda Education Society, Sri.B.K. Ranga swamy, Secretary, Hassan.	C.A. 6(P)	2155.00	21.1.2002	02.08.2002	Education	--	--	--	--	Under production	Absoluted sale deed executed
72	M/s Mangala Education Trust, Sampige Road, I, Hassan.	1-A& CCB-CA	2526.00	8.10.2004	03.01.2005	Education	--	--	--	--	Under production	Absoluted sale deed executed
73	M/s P.G.Charitable Trust, Prop: Dr.Honnegowda, P.G.Hospital, H.N.Pura.	6-P (CA)	709.00	8.10.2004	17.01.2005	---	--	--	--	--	Under production	Absoluted sale deed executed
74	M/s Manjunath Logistics Infra, Prop: Sri H.A.Kiran, Sri Govind, SBM Colony, Hassan	45-B	12760.00	18.03.2013	02.04.2013	Logistic Facility Supporting to Industry	950.00	50 Kva	15 KLD	46	Under construction	Implementatino period expired on 01.11.2015, Grant of extenstion of time for implementation of project.

Secretary-I
Karnataka Industrial Areas Development Board
Bengaluru - 560 001

(5)

KARNATAKA INDUSTRIAL AREAS DEVELOPMENT BOARD, ZONAL OFFICE, HASSAN

STATEMENT SHOWING THE DETAILS OF ALLOTMENT MADE AT THIMMANAHALLI Industrial Area, HASSAN.

ಅನುಬಂಧ–ಅ

Sl. No.	Name of the Industry & Address of the Allottee	Plot No.	Extent in Sqmtr.	Date of Allotment	Date of PC issued	Nature of Product	Project Cost (Rs. Lakhs)	Power requirement	Water requirement (In ltrs. Per day)	Employment	Stage of Implementation	Remarks / Action Taken
1	2	3	4	5	6	7	8	9	10	11	12	13
1	M/s Yagachi Technologies Pvt Ltd ,Unit-III, Electronic City, Phase-II, Hosur Road, Bangalore-100.	3, 4 & 5	80981.00	15.5.06	15.12.06	Transformers & Electronic assembles	510	775 KVA	20000	3250	Under Production	--
2	M/s NDRK Institute of Technology, Opp. Hotel Apoorva, Harsha Mahal Road, Hassan.	7 & 8	40470.00	17.10.07	14.12.07	Software Technology Park	2850	200 KVA	15000	750	Under Production	--
3	M/s Vasundara Automation & Engg. Service Pvt. Ltd., Director: R.Arun, No.40/10/B, Bovi Colony, Byrasandra, Jaya Nagara, Ist Block East, Bangalrore-001.	1-C	3854.00	30.05.08	02.04.09	Warehouse	61.7	100HP	2000	53	Under Production	-
4	M/s U.S.Associates, Prop: Sapna.G. D/o S.Gidde Gowda, Behind PWD colony, Hassan.	1-D	8005.00	31.05.08	16.10.08	Software Development	99.5	50HP	5000	23	Under Production	-
5	M/s Circuit Technology Partner: K.N. Shuresh & Y.N. Mashes No. 979, Shriganda, IInd Cross, IVth Block, K. R.S. Gowda Extension H.M.T. Layout, Nagasandra (P), Nelakadiravahalli, Bangalore-073.	6(P)	4002.00	05.06.09	25.01.10	Printed Circuit Boards	33.2	120HP	2500	30	Under Production	--

Secretary-I
Karnataka Industrial Areas Development Board
Bengaluru - 560 001

Sl. No.	Name of the Industry & Address of the Allottee	Plot No.	Extent in Sqmtr.	Date of Allotment	Date of PC issued	Nature of Product	Project Cost (Rs. Lakhs)	Power requirement	Water requirement (In ltrs. Per day)	Employment	Stage of Implementation	Remarks / Action Taken
6	M/s Suryakiran Charitable Trust, Hoysala Hospitals, Vishweswaraiah Road, Vidya Nagar, Hassan. Mb No: 9448061866	2 & 11-P	24283.00	25.7.09	6.8.10	Center for Palliative care for cancer and rehabilitation and education for mentally and physically challenged persons	550	220 KVA	75000	150	Under Construction	Extension time expired on 01.02.2020
7	M/s Malnad Hotel, Partners: Smt. M.S. Anasuya, Plot No.32, KSSIDC Industrial Estate, Arsikere Road, Hassan	11	4897.00	30.03.10	31.5.10	Establishment of Hotel	118	25 KVA	20000	22	Building plat not submitted for approval Plot is vacant	Land Litigation
8	M/s Yagachi Institute of Technology, Yagachi Education & Research Trust (R), Bhadridhama, opp. Hotel Apoorva, Harsha Mahal Road, Hassan.	6-A	8086.00	27.09.10	12.12.11	Engineering college	1518	200 KVA	100000	300	Building plan approved	Activity yet to be start
9	M/s Lumber Treatment & Processing Industry, No: 59, Yamuna Bhai Road, Madhavanagar, Bangalore: 001 Mob No: 9844016549	2-PI/A	9429.51	30.09.2014	31.10.2014	Panel Board	200	200 KW	12000	100	Under Construction	

Secretary-I
Karnataka Industrial Areas Development Board
Bengaluru - 560 001

Sl. No.	Name of the Industry & Address of the Allottee	Plot No.	Extent in Sqmtr.	Date of Allotment	Date of PC issued	Nature of Product	Project Cost (Rs. Lakhs)	Power requirement	Water requirement (In ltrs. Per day)	Employment	Stage of Implementation	Remarks / Action Taken
10	M/s Bharath Plywood Industries Part: Sri Praveen Kumar Chopra, #59, yamuna Bhai Road, Madhavanagar, Bangalore-001 Mob No: 9844016549	2-P1/B	10522.20	30.09.2014	31.10.2014	Plywood & Black Boards	175	200 KW	12000	100	Building plan not yet submitted for approved	Implementation period expired on 30.10.2016
11	M/s Abhimaani Concrete Blocks & Allied Products (A Division of Abhimaani Publication Ltd), No2/4, Dr. Rajkumar Road, Rajajinagar, Bangalore: 560010	9	16188.00	19.06.2015	26.04.2016	RMC and Precast Concrete Products	1860	150HP	10000	40	Construction activity yet to be start	Building plan approved Implementation period expired on 25.04.2018
12	M/s Malnad Industries, Prop: Sri Ashraf K.A,s/o M.A Abbas, Kadlur-Kudige, Haidur Village, K.Hosakote Post & Hobli, Alur Taluk, Hassan District. Mb No: 9480110199	2A & 2C	5092.32	21.04.2016 28.03.2018	13.05.2016 03.07.2018	Wooden furniture & Interior Decoration.	91.95	20HP	3000 LPD	18	Building plan not yet submitted for approval	Implementation period expired on 12.05.2018
ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆ/ ~~ಪರಿಷತ್ತಿನ~~ ಸದಸ್ಯರಾದ ಶ್ರೀ . [illegible] ಇವರು ಮಂಡಿಸಿರುವ ಚುಕ್ಕೆ ~~ಗುರುತಿನ~~ / ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1866 ಕ್ಕೆ ಉತ್ತರವನ್ನು ತಯಾರಿಸಿದ್ದು, ಇದರ 100 ಪ್ರತಿಗಳನ್ನು ಇದರೊಂದಿಗೆ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,
A. Vijayakumar
12.03.2020
(ಎ.ವಿಜಯಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1866

ಸದಸ್ಯರ ಹೆಸರು : ಶ್ರೀ ರಘುಪತಿ ಭಟ್ ಕೆ. (ಉಡುಪಿ)

ಉತ್ತರಿಸುವ ದಿನಾಂಕ : 13.03.2020

ಉತ್ತರಿಸುವ ಸಚಿವರು : ಮಾನ್ಯ ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕ.ಸಂ.	ಪ್ರಶ್ನೆ	ಉತ್ತರ
(ಅ)	ಉಡುಪಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬಹ್ಮಾವರವು ತಾಲ್ಲೂಕು ಕೇಂದ್ರವಾಗಿ ರಚನೆಗೊಂಡಿದ್ದು, ನಗರವಾಗಿ ಬೆಳೆಯುತ್ತಿದ್ದು, ಈ ಭಾಗದಲ್ಲಿನ ಹಂದಾಡಿ, ಚಾಂತುರು, ವಾರಂಬಳ್ಳಿ ಮತ್ತು ಹಾಡಿ ಇವುಗಳನ್ನೂ ಜೊತೆಗೂಡಿಸಿ ಪುರಸಭೆ ಮಾಡುವುದರ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು; (ವಿವರ ನೀಡುವುದು)	ಉಡುಪಿ ಜಿಲ್ಲೆ ಬ್ರಹ್ಮಾವರ ಪರಿಸರದ ಚಾಂತಾರು, ಹೇರೂರು ಹಾಗೂ ವಾರಂಬಳ್ಳಿ ಗ್ರಾಮ ಪಂಚಾಯಿತಿಯನ್ನು ಒಟ್ಟುಗೂಡಿಸಿ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಬಗ್ಗೆ ಪ್ರಸ್ತಾವನೆ ಸ್ವೀಕೃತವಾಗಿದ್ದು, ಕರ್ನಾಟಕ ಪುರಸಭೆಗಳ ಅಧಿನಿಯಮ 1964ರನ್ವಯ ಪರಿಶೀಲನೆಯಲ್ಲಿರುತ್ತದೆ. ಮುಂದುವರೆದು, ಬ್ರಹ್ಮಾವರ ತಾಲ್ಲೂಕು ಕೇಂದ್ರದ ಭಾಗದಲ್ಲಿನ ಹಂದಾಡಿ, ಚಾಂತುರು, ವಾರಂಬಳ್ಳಿ ಮತ್ತು ಹಾಡಿ ಇವುಗಳನ್ನು ಜೊತೆಗೂಡಿಸಿ ಪುರಸಭೆ ಮಾಡುವುದರ ಕುರಿತು ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ.
(ಆ)	ಉಡುಪಿ ಜಿಲ್ಲೆಯ ಕಾಪುವಿನಲ್ಲಿ ಪುರಸಭೆ ನಿರ್ಮಾಣವಾದಂತೆ ಬಹ್ಮಾವರದಲ್ಲಿಯೂ ಕೂಡ ಪುರಸಭೆ ಕೂಡಲೇ ನಿರ್ಮಿಸುವಲ್ಲಿ ಸರ್ಕಾರ ಕೈಗೊಂಡ ಕ್ರಮವೇನು?	ಬ್ರಹ್ಮಾವರವನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸುವ ಬಗ್ಗೆ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ. ಪ್ರಸ್ತಾವನೆ ಸ್ವೀಕೃತವಾದಲ್ಲಿ ನಿಯಮಾನುಸಾರ ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು.

		ಮುಂದುವರೆದು, ಕೇಂದ್ರ ಜನಗಣತಿ ನಿರ್ದೇಶನಾಲಯ, ಭಾರತ ಸರ್ಕಾರದ ದಿನಾಂಕ:16.09.2019ರ ಪತ್ರದನ್ವಯ 2021ರ ಜನಗಣತಿ ಕಾರ್ಯಾಚರಣೆಯ ಅವಧಿಯಾದ ದಿನಾಂಕ:01.01.2020 ರಿಂದ 31.03.2021ರವರೆಗೆ ಅಸ್ಥಿತ್ವದಲ್ಲಿರುವ ತಾಲ್ಲೂಕುಗಳ, ಗ್ರಾಮ ಪಂಚಾಯಿತಿಗಳ, ಮುನಿಸಿಪಾಲಿಟಿಗಳ ಹಾಲಿ ಆಡಳಿತಾತ್ಮಕ ಗಡಿಗಳನ್ನು (Administrative Boundaries) ಮಾರ್ಪಾಡು ಮಾಡದಂತೆ ರಾಜ್ಯ ಸರ್ಕಾರಕ್ಕೆ ಸೂಚಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ಪ್ರಸ್ತುತ ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಗಳನ್ನಾಗಿ ಹಾಗೂ ಪಟ್ಟಣ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಸಾಧ್ಯವಿರುವುದಿಲ್ಲ.

ಸಂಖ್ಯೆ: ನಅಇ 23 ಎಲ್ಎಕ್ಯೂ 2020

(ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ
ಮತ್ತು ರೇಷ್ಮೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ನಅಇ 91 ಎಸ್‌ಎಫ್ ಸಿ 2020

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 12-03-2020.

98
u/s
13/03/2020

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ಬೆಂಗಳೂರು.

ಇವರಿಗೆ,

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನಸಭೆ ಸದಸ್ಯರಾದ ಶ್ರೀ ನರೇಂದ್ರ ಆರ್. (ಹನೂರು) ರವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1417ಕ್ಕೆ ಉತ್ತರಿಸುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನಸಭೆ ಸದಸ್ಯರಾದ ಶ್ರೀ ನರೇಂದ್ರ ಆರ್. (ಹನೂರು) ರವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1417ಕ್ಕೆ ಉತ್ತರದ 350 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

ಲಲಿತಾಬಾಯಿ.ಕೆ

(ಲಲಿತಾಬಾಯಿ ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

ಪ್ರತಿ ಅಗತ್ಯ ಕ್ರಮಕ್ಕಾಗಿ:

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
2) ಸರ್ಕಾರದ ಅಧೀನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ (ಸಮನ್ವಯ).

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1417
ಸದಸ್ಯರ ಹೆಸರು	:	ಶ್ರೀ ನರೇಂದ್ರ ಆರ್. (ಹನೂರು)
ಉತ್ತರಿಸಬೇಕಾದ ದಿನಾಂಕ	:	13-03-2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ಚಾಮರಾಜನಗರ ಜಿಲ್ಲೆಯ ಹನೂರು ಪಟ್ಟಣ ಪಂಚಾಯಿತಿಗೆ ಆಡಳಿತ ಕಛೇರಿಯ ಕಟ್ಟಡ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಚಾಮರಾಜನಗರ ಜಿಲ್ಲೆಯ ಹನೂರು ಪಟ್ಟಣ ಪಂಚಾಯಿತಿಗೆ ಆಡಳಿತ ಕಛೇರಿಯ ನಿರ್ಮಾಣಕ್ಕಾಗಿ ಸರ್ಕಾರವು ಹನೂರು ಪಟ್ಟಣ ಪಂಚಾಯಿತಿ ಕಛೇರಿ ಕಟ್ಟಡ ನಿರ್ಮಾಣ ಮಾಡಲು ಆದೇಶ ಸಂಖ್ಯೆ: ನಅಇ 160 ಎಸ್.ಎಫ್.ಸಿ 2016, ದಿನಾಂಕ: 15-06-2016 ರಲ್ಲಿ ರೂ.100.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡಲಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ನಅಇ 104 ಎಸ್.ಎಫ್.ಸಿ 2017, ದಿ:21-03-2017ರಲ್ಲಿ ರೂ.100.00 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದೆ. ಹನೂರು ಪಟ್ಟಣ ಪಂಚಾಯಿತಿ ಕಟ್ಟಡ ನಿರ್ಮಾಣಕ್ಕೆ ಬಿಡುಗಡೆಯಾಗಿರುವ ರೂ.100.00 ಲಕ್ಷಗಳ ಅನುದಾನವನ್ನು ಹೊರತುಪಡಿಸಿ, ಹೆಚ್ಚುವರಿಯಾಗಿ ರೂ.250.00 ಲಕ್ಷಗಳನ್ನು ಬಿಡುಗಡೆ ಮಾಡಲು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರು ಕೋರಿರುತ್ತಾರೆ. ರಾಜ್ಯ ಸರ್ಕಾರವು ಪ್ರತಿ ವರ್ಷ ಹನೂರು ಪಟ್ಟಣ ಪಂಚಾಯ್ತಿಗೆ ಬಿಡುಗಡೆಗೊಳಿಸುವ ಎಸ್.ಎಫ್.ಸಿ ಮುಕ್ತನಿಧಿ ಮತ್ತು 14 / 15ನೇ ಹಣಕಾಸು ಆಯೋಗದ ಅನುದಾನದಡಿ ಲಭ್ಯವಾಗುವ ಮೊತ್ತದಿಂದ ಕಛೇರಿ ಕಟ್ಟಡ ಕಾಮಗಾರಿಗೆ ಅವಶ್ಯವಿರುವ ಅನುದಾನವನ್ನು ಕಾಯ್ದಿರಿಸಿಕೊಳ್ಳಲು ಮಾರ್ಗಸೂಚಿಗಳಲ್ಲಿ ಅವಕಾಶ ಕಲ್ಪಿಸಲಾಗಿದೆ.
(ಆ)	ಬಂದಿದ್ದಲ್ಲಿ ಕಟ್ಟಡವನ್ನು ನಿರ್ಮಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು)	

ಕಡತ ಸಂಖ್ಯೆ: ನಅಇ 91 ಎಸ್.ಎಫ್.ಸಿ 2020

(ನಾರಾಯಣ ಗೌಡ)
ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು
ರೇಷ್ಮೆ ಸಚಿವರು.

ಕರ್ನಾಟಕ ಸರ್ಕಾರ

ಸಂಖ್ಯೆ:ನಅಇ 93 ಸಿಎಸ್‌ಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:12-03-2020

64
U/S
13/03/2020

ಇಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,

ಇವರಿಗೆ:

ಕಾರ್ಯದರ್ಶಿಗಳು
ಕರ್ನಾಟಕ ವಿಧಾನಸಭೆ,
ವಿಧಾನ ಸೌಧ
ಬೆಂಗಳೂರು.

ಮಾನ್ಯರೆ,

ವಿಷಯ:- ವಿಧಾನಸಭೆ ಸದಸ್ಯರಾದ ಶ್ರೀ ಜ್ಯೋತಿ ಗಣೇಶ್ ಜಿ.ಬಿ (ತುಮಕೂರು ನಗರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1889 ಕ್ಕೆ ಉತ್ತರ ನೀಡುವ ಕುರಿತು.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಧಾನಸಭೆ ಸದಸ್ಯರಾದ ಶ್ರೀ ಜ್ಯೋತಿ ಗಣೇಶ್ ಜಿ.ಬಿ (ತುಮಕೂರು ನಗರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1889 ಕ್ಕೆ ಉತ್ತರದ 50 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿ ಕೊಡಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,
ಲಲಿತಾಬಾಯಿ.ಕೆ

(ಲಲಿತಾಬಾಯಿ. ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ (ಯೋಮೇಕೋ),
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1889
ಸದಸ್ಯರ ಹೆಸರು	:	ಶ್ರೀ ಜ್ಯೋತಿ ಗಣೇಶ್ ಜಿ.ಬಿ (ತುಮಕೂರು ನಗರ)
ಉತ್ತರಿಸಬೇಕಾದ ದಿನಾಂಕ	:	13-03-2020
ಉತ್ತರಿಸುವ ಸಚಿವರು	:	ಮಾನ್ಯ ನಗರಾಭಿವೃದ್ಧಿ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಕಳೆದ 3 ವರ್ಷಗಳಲ್ಲಿ ಕೇಂದ್ರ ಪುರಸ್ಕೃತ ಅಮೃತ್ ಯೋಜನೆಯಡಿ ತುಮಕೂರು ನಗರಕ್ಕೆ ಮಂಜೂರಾದ ಹಾಗೂ ಜಾರಿಗೊಳಿಸಲಾಗುತ್ತಿರುವ 24/7 ಕುಡಿಯುವ ನೀರಿನ ಯೋಜನೆಗಳ ಯಾವ ಯಾವ ಕಾಮಗಾರಿಗಳಿಗೆ ಎಷ್ಟೆಷ್ಟು ಹಣ ವ್ಯಯಿಸಲಾಗಿದೆ: ಯೋಜನೆ ಮೊತ್ತವೆಷ್ಟು:	ಕೇಂದ್ರ ಪುರಸ್ಕೃತ ಅಮೃತ್ ಯೋಜನೆಯಡಿ ತುಮಕೂರು ನಗರಕ್ಕೆ ಕುಡಿಯುವ ನೀರು ಸರಬರಾಜಿಗಾಗಿ ಒಟ್ಟು ರೂ.113.16 ಕೋಟಿಯನ್ನು ಹಂಚಿಕೆ ಮಾಡಲಾಗಿದ್ದು, ಸದರಿ ಯೋಜನೆಯಡಿ ಈ ಕೆಳಕಂಡ 3 ಕಾಮಗಾರಿಗಳನ್ನು ಕೈಗೊಂಡಿದ್ದು, ಜನವರಿ 2020ರ ಅಂತ್ಯದವರೆಗೆ ವೆಚ್ಚದ ವಿವರಗಳು ಈ ಕೆಳಕಂಡಂತಿದೆ: (ಕೆಳಗಿನ ಪಟ್ಟಿ ನೋಡಿ)
ಆ)	ಯಾವ ಯಾವ ಕಾಮಗಾರಿಗಳು ಬಾಕಿ ಇವೆ: ಯಾವಾಗ ಪೂರ್ಣಗೊಳಿಸಲಾಗುತ್ತದೆ?	ಬಾಕಿ ಇರುವ ಕಾಮಗಾರಿಗಳ ವಿವರಗಳನ್ನು **ಅನುಬಂಧ-01** ರಲ್ಲಿ ನೀಡಿದೆ.

(ಮೊತ್ತರೂ. ಲಕ್ಷಗಳಲ್ಲಿ)

ಯೋಜನೆ	ಯೋಜನಾ ಮೊತ್ತ	ವ್ಯಯಿಸಲಾದ ಹಣ
ಅಮೃತ್ ಯೋಜನೆಯಡಿಯಲ್ಲಿ ತುಮಕೂರು ನಗರಕ್ಕೆ ಕುಡಿಯುವ ನೀರಿನ ಯೋಜನೆ.	3800.00	2367.66
ಅಮೃತ್ ಯೋಜನೆಯ ಹೆಚ್ಚುವರಿ ಅನುದಾನದಡಿಯಲ್ಲಿ ತುಮಕೂರು ನಗರಕ್ಕೆ ಕುಡಿಯುವ ನೀರಿನ ಯೋಜನೆ	6488.00	4839.52
ತುಮಕೂರು ನಗರದ ನೀರು ಸರಬರಾಜು ವಿತರಣಾ ಜಾಲದ ನಿಯಂತ್ರಣಕ್ಕಾಗಿ ಸ್ಕಾಡಾ (SCADA)ವ್ಯವಸ್ಥೆ ಕಲ್ಪಿಸುವುದು.	1028.00	0.00
ಒಟ್ಟು:	11316.00	7207.18

ಸಂಖ್ಯೆ: ನಅಇ 93 ಸಿಎಸ್ಎಸ್ 2020

(ಬಿ.ಎ.ಬಸವರಾಜ)
ಮಾನ್ಯ ನಗರಾಭಿವೃದ್ಧಿ ಸಚಿವರು.

ಅನುಬಂಧ -01

ತುಮಕೂರು ನಗರದಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿವತಿಯಿಂದ ಅನುಷ್ಠಾನಿಸುತ್ತಿರುವ ಕಾಮಗಾರಿಗಳ ವಿವರ.

(ರೂ ಲಕ್ಷಗಳಲ್ಲಿ)

ಕ್ರಸಂ	ಯೋಜನೆ	ಬಾಕಿ ಮೊತ್ತ	ಬಾಕಿ ಕಾಮಗಾರಿಗಳು	ಪೂರ್ಣಗೊಳಿಸುವ ದಿನಾಂಕ
1	ಅಮೃತ್ ಯೋಜನೆಯಡಿಯಲ್ಲಿ ತುಮಕೂರು ನಗರಕ್ಕೆ ಕುಡಿಯುವ ನೀರಿನ ಯೋಜನೆ. (ಡಿ.ಎಂ.ಎ.4,7,23,24 - 4 ಸಂಖ್ಯೆ)	1468.00	ಕಾಮಗಾರಿಗಳು ಮುಕ್ತಾಯ ಗೊಂಡಿದ್ದು, ಪ್ರಾಯೋಗಿಕವಾಗಿ ನೀರು ಸರಬರಾಜು ಮಾಡಲಾಗುತ್ತಿದೆ.	ಡಿಸೆಂಬರ್ 2019ಕ್ಕೆ ಕಾಮಗಾರಿ ಪೂರ್ಣ ಗೊಂಡಿದೆ. ಆದರೆ ಸದರಿ ವಾರ್ಡ್‌ಗಳಲ್ಲಿ ರಸ್ತೆ ಅಭಿವೃದ್ಧಿ ಕೈಗೊಂಡಿರುವುದರಿಂದ ಮನೆ ಸಂಪರ್ಕಗಳ ಪುನರ್ ನಿರ್ಮಾಣ ಮಾಡಲಾಗುತ್ತಿದೆ
2	ಅಮೃತ್ ಯೋಜನೆಯ ಹೆಚ್ಚುವರಿ ಅನುದಾನದಡಿಯಲ್ಲಿ ತುಮಕೂರು ನಗರಕ್ಕೆ ಕುಡಿಯುವ ನೀರಿನ ಯೋಜನೆ	1649.00	1. ಕೊಳವೆಮಾರ್ಗ ಅಳವಡಿಕೆ-94.05 ಕಿ.ಮಿ. 2. ಗೃಹ ಸಂಪರ್ಕಗಳು- 4754 ಸಂಖ್ಯೆ 3. 5.00ಲಕ್ಷ ಲೀಟರ್ ಸಾಮರ್ಥ್ಯದ ಮೇಲ್ಮಟ್ಟದ ನೀರುಸಂಗ್ರಹಾಗಾರ -1 ಸಂಖ್ಯೆ 4. ರಸ್ತೆ ರೆಸ್ಟೋರೇಷನ್- ಕಾಂಕ್ರೀಟ್‌ರಸ್ತೆ-18.00 ಕಿ.ಮಿ. ಡಾಂಬರುರಸ್ತೆ-23.00 ಕಿ.ಮಿ.	ನವೆಂಬರ್ 2020ಕ್ಕೆ ಕಾಮಗಾರಿ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ.
3	ತುಮಕೂರು ನಗರದ ನೀರು ಸರಬರಾಜು ವಿತರಣಾ ಜಾಲದ ನಿಯಂತ್ರಣಕ್ಕಾಗಿ ಸ್ಕಾಡಾ ವ್ಯವಸ್ಥೆ ಕಲ್ಪಿಸುವುದು.	1028.00	ಕಾಮಗಾರಿಯ ವಿನ್ಯಾಸ ಹಂತದಲ್ಲಿದ್ದು, ಕಾಮಗಾರಿಯ ಭೌತಿಕ ಪ್ರಗತಿ ಪ್ರಾರಂಭಿಸ ಬೇಕಾಗಿರುತ್ತದೆ	04-09-2020
	ಒಟ್ಟು:	4109.00		

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಒ 113 ಸಿಎಲ್ಎಸ್ 2020 (ಇ-ಕಡತ)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 12.03.2020

ಇಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಸಹಕಾರ ಇಲಾಖೆ,
ಬೆಂಗಳೂರು-01

ಇವರಿಗೆ:

ಕಾರ್ಯದರ್ಶಿ, (ಪ್ರ)
ಕರ್ನಾಟಕ ವಿಧಾನ ಸಭೆ,
ಸಚಿವಾಲಯ, ವಿಧಾನ ಸೌಧ.

125
LS
13/3/2020

ಮಾನ್ಯರೆ,

ವಿಷಯ : ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಶಿವಕುಮಾರ್.ಡಿ.ಕೆ (ಕನಕಪುರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:65 ಕ್ಕೆ ಉತ್ತರ ನೀಡುವ ಬಗ್ಗೆ.

***

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಶಿವಕುಮಾರ್.ಡಿ.ಕೆ (ಕನಕಪುರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:65 ಕ್ಕೆ ಸಂಬಂಧಿಸಿದಂತೆ, ಉತ್ತರದ 100 ಪ್ರತಿಯನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿತಳಾಗಿದ್ದೇನೆ.

ತಮ್ಮ ನಂಬುಗೆಯ,
12/3/2020
(ಮನೋರಮ ಡಿ.ಸಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರು : ಶ್ರೀ ಶಿವಕುಮಾರ್ ಡಿ.ಕೆ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 65
ಉತ್ತರಿಸಬೇಕಾದ ದಿನಾಂಕ : 13.03.2020

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ವತಿಯಿಂದ ಐದು ಕೋಟಿಗೂ ಮೀರಿದ ಸಾಲವನ್ನು ಪಡೆದಿರುವ ಉದ್ಯಮಿಗಳು, ಖಾಸಗಿ ಸಂಘ ಸಂಸ್ಥೆಗಳು ಹಾಗೂ ಖಾಸಗಿ ವ್ಯಕ್ತಿಗಳೆಷ್ಟು (ವಿವರ ನೀಡುವುದು)	ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ವತಿಯಿಂದ ಐದು ಕೋಟಿಗೂ ಮೀರಿದ ಸಾಲವನ್ನು ಪಡೆದಿರುವ ಉದ್ಯಮಿಗಳು, ಖಾಸಗಿ ಸಂಘ ಸಂಸ್ಥೆಗಳು ಹಾಗೂ ಖಾಸಗಿ ವ್ಯಕ್ತಿಗಳ ವಿವರ, ಅವರಿಗೆ ನೀಡಿರುವ ಸಾಲದ ಮೊತ್ತದ ವಿವರ, ಸರಿಯಾದ ಸಮಯಕ್ಕೆ ಮರುಪಾವತಿ ಮಾಡದೇ ಬಾಕಿ ಉಳಿಸಿಕೊಂಡು ಬಂದಿರುವವರ ವಿವರ, ಸಾಲಗಾರರಿಂದ ಬಾಕಿ ವಸೂಲಿ ಮಾಡಲು ಬ್ಯಾಂಕ್ ಕೈಗೊಂಡಿರುವ ಕ್ರಮಗಳ ವಿವರಗಳನ್ನು **ಅನುಬಂಧ-1 ಮತ್ತು ಅನುಬಂಧ-2**ರಲ್ಲಿ ಲಗತ್ತಿಸಿದೆ.
ಆ)	ಈ ಪೈಕಿ ನೀಡಿರುವ ಒಟ್ಟು ಮೊತ್ತವೆಷ್ಟು (ವಿವರ ನೀಡುವುದು)	
ಇ)	ಸರಿಯಾದ ಸಮಯಕ್ಕೆ ಸಾಲ ಮರುಪಾವತಿ ಮಾಡದೇ ಬಾಕಿ ಉಳಿಸಿಕೊಂಡು ಬಂದಿರುವವರ ವಿವರಗಳನ್ನು ಒದಗಿಸುವುದು.	
ಈ)	ಸಾಲಗಾರರಿಂದ ಬಾಕಿ ವಸೂಲಿ ಮಾಡಲು ಬ್ಯಾಂಕ್ ಕೈಗೊಂಡಿರುವ ಕ್ರಮಗಳೇನು. ಎಷ್ಟು ಪ್ರಕರಣಗಳಲ್ಲಿ ಸಾಲ ತಗಾದೆ ನೋಟೀಸುಗಳನ್ನು ಕಳುಹಿಸಲಾಗಿದೆ. ಎಷ್ಟು ಪ್ರಕರಣಗಳಲ್ಲಿ ಬ್ಯಾಂಕಿನಿಂದ ಕೈಗೊಂಡ ಕ್ರಮಗಳು ಜಾರಿಯಾಗಿವೆ.	**ಸೆಕ್ಷನ್ 70 ಅಡಿಯಲ್ಲಿ ದಾವೆ ಹೂಡಲಾಗಿರುವ ವಿವರಗಳು:** (1) Construction Solutions Pvt. Ltd., (2) Bhavani Khandasari Sugars Pvt. Ltd., SARFAESI Act 2002 ಕ್ರಮ ಕೈಗೊಂಡವರ ವಿವರಗಳು: (1) Sunsmith Textiles India Pvt. Ltd., (2) Kushboo Electricals & Automation Pvt. Ltd., (3) Kay Kay Agro Process Pvt. Ltd., (4) Vaishnavi Infrastructure Corridur Enterprise (P) Ltd., (5) VINP Biologicals India Pvt. Ltd., (6) Soubhagyalaxmi Sugars Ltd., Gokak (7) Sovereign Industries Ltd., Teradal.
ಉ)	ಸಾಲ ಮರುಪಾವತಿಯಾಗಿಲ್ಲದ ಪ್ರಕರಣಗಳಲ್ಲಿ ಏಕಕಾಲಕ್ಕೆ ಮರುಪಾವತಿ ಮಾಡಿ ಋಣಮುಕ್ತರೆಂದು ಮಾನ್ಯ ಮಾಡುವ ಯಾವುದಾದರೂ ಯೋಜನೆಯನ್ನು (One Time Settlement) ಜಾರಿಗೆ ತರಲು ಬ್ಯಾಂಕು ಉದ್ದೇಶಿಸಿದೆಯೇ.	ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 ಪ್ರಕರಣ 98(ಇ) ರನ್ವಯ ಬ್ಯಾಂಕಿಗೆ ಹಣಕಾಸು ಮತ್ತು ಆಂತರಿಕ ಆಡಳಿತ ವಿಷಯಗಳನ್ನು ನಿರ್ಧರಿಸಲು ಸ್ವಾತಂತ್ರ್ಯವಿರುವ ಅವಕಾಶದಂತೆ ಬ್ಯಾಂಕಿನಲ್ಲಿ ಸುಸ್ತಿ ಸಾಲಗಳ ವಸೂಲಾತಿಗಾಗಿ "ಸುಸ್ತಿಸಾಲದ ಬಡ್ಡಿದರ ಪುನರ್ ನಿಗದಿ ಯೋಜನೆ"ಯನ್ನು ಬ್ಯಾಂಕಿನ ಆಡಳಿತ ಮಂಡಳಿಯ ನಿರ್ಣಯ ದಿನಾಂಕ:28-08-2019 ರನ್ವಯ ಕಾರ್ಯಗತಗೊಳಿಸಿ, ದಿನಾಂಕ 18.11.2019 ಸುತ್ತೋಲೆ ಹೊರಡಿಸಿದೆ. ವಿವರಗಳನ್ನು **ಅನುಬಂಧ-3**ರಲ್ಲಿ ಲಗತ್ತಿಸಿದೆ.
ಊ)	ಹಾಗಿದ್ದಲ್ಲಿ, ಅಂತಹ ಯೋಜನೆಯ ವಿವರಗಳನ್ನು ನೀಡುವುದು ಹಾಗೂ ಯಾವ ಸುಸ್ತಿದಾರರಿಗೆ ಇದರಿಂದ ಸಹಾಯವಾಗಿದೆ (ವಿವರ ನೀಡುವುದು)	

ಋ)	ಇಂತಹ ಸಂಕಷ್ಟ ಸಮಯದಲ್ಲಿ ಬ್ಯಾಂಕಿನಿಂದ ಸಾಲ ಪಡೆದವರಿಗೆ ನೆರವಾಗಲು ಭಾರತೀಯ ರಿಸರ್ವ್ ಬ್ಯಾಂಕಿನಿಂದ ಮಾರ್ಗದರ್ಶಿ ಸೂತ್ರಗಳು ಇದೆಯೇ?	RBI circular RPCD.No.RF.DIR.593/07.38.02/2001-2002 ದಿನಾಂಕ 29.04.2002ರನ್ವಯ ಠೇವಣಿಗಳು/ಸಾಲಗಳ ಮೇಲೆ ನಿಯಮಾನುಸಾರ ಬಡ್ಡಿದರ ನಿಗದಿಪಡಿಸುವ ಅವಕಾಶವಿರುತ್ತದೆ.
ಎ)	ಹಾಗಿದ್ದಲ್ಲಿ ಅವುಗಳ ಅನುಷ್ಠಾನಕ್ಕೆ ಅಪೆಕ್ಸ್ ಬ್ಯಾಂಕು ಅನುಸರಿಸುವ ಕ್ರಮಗಳೇನು?	ಬ್ಯಾಂಕು ಹೊರಡಿಸಿರುವ ಸುತ್ತೋಲೆ ದಿನಾಂಕ:18-11-2019 ರಲ್ಲಿ ವಿವರಿಸಿದೆ **(ಅನುಬಂಧ-3)**

ಸಂಖ್ಯೆ: ಸಿಒ 113 ಸಿಎಲ್ಎಸ್ 2020

(ಎಸ್.ಟಿ ಸೋಮಶೇಖರ್)

ಸಹಕಾರ ಸಚಿವರು

Annexure-I

THE KARNATAKA STATE CO-OPERATIVE APEX BANK LTD., BANGALORE

Details of Sugar advances

Position as on 31.01.2020

(Rs. In lakhs)

Sr No.	Name of the Sugar Factory	Limit Sanctioned	O/s as on 31.01.2020	Due as on 31.01.2020			Asset Clasification	Represented/Headed By	Remarks
				Principal	Interest	Total			
1	2	3	4	5	6	7	8	9	10
1	Gem Sugars Ltd	500.00	499.99	0.00	5.10	5.10	Standard Asset	Sri R Veeramani, Executive Chairman	Standard Asset
2	Badami Sugar Ltd	1066.51	1050.31	1050.31	2976.81	4027.12	01.10.07 Loss Asset	Sri B B Chimmanakatti, Chairman	For Recovery of Loan, the Bank, on 27.03.2008, has filed a Dispute under Sec 70 of KCS Act, (Old No.JRD/UBF/T-3485/2008-09 is filed new No.RCS/CRD/DISPUTE/KME-8/01/2019-20). Now the same is pending before addl. RCS (Cr.) for adjudication. The matter has stand posted for hearing on 28.04.2020. Meanwhile, the NCLT, Bengaluru Bench, by its Order dated 27.09.2019 (in C.P.(IB) No.43/BB/2019, filed by M/s Sri Arumuga Sugrs Ltd.,) has initiated Corporate Insolvency Resolution Proceedings against the sugar factory. The CIRP process is going on now and the recent meeting of Comittee of Creditors (CoC) was held on 28.02.2020.
3	Bilagi Sugars Mills Ltd	13116.00	11011.78	27.85	117.46	145.31	Standard Asset	Sri S R Patil, Opposition Leader Council	Standard Asset
4	Nirani Sugars Ltd	8500.00	8500.00	0.00	186.35	186.35	Standard Asset,	Sri Murugesh R Nirani, MLA	Standard Asset
5	Bhavani Khandasari	500.00	308.12	308.12	1062.94	1371.06	31.03.06 Loss Asset	Sri Bandeppa Kashempur, MLA	Case No.A(F&M:DIS/D2/147/2007-08) filed on 02.09.2009 under Sec 70 of KCS Act, award and EP obtained. Auction date will be notified shortly.
6	Dyanyogi Shree Shivakumar Swamiji Sugars Ltd	1000.00	998.78	998.78	115.42	1114.20	Sub Std 30.07.19	Sri Sudhir Biradar	Notice issued to repay the dues and regularise the loan A/c.
7	Bhalkeshwar Sugars Ltd., Bhalki	19015.00	16538.60	150.00	337.33	487.33	Standard Asset	Sri Prakash Khandre, CMD, Ex-MLA,	Standard Asset
8	Sri Chamundeshwari Sugars Ltd., Mandya	10000.00	9995.19	0.00	0.00	0.00	Standard Asset	Sri Srinivasa, Chairman	Standard Asset
9	Sri Balaji Sugars & Chemicals Pvt. Ltd., Bijapur	14871.00	12043.29	0.00	114.20	114.20	Standard Asset	Sri Hanumanth S Patil Sri Venkatesh S Patil	Standard Asset

For The Karnataka State
Co-Operative Apex Bank Ltd.

Manager
(A O. Loans)

Sl No.	Name of the Sugar Factory	Limit Sanctioned	O/s as on 31.01.2020	Due as on 31.01.2020			Asset Clasification	Represented/Headed By	Remarks
				Principal	Interest	Total			
1	2	3	4	5	6	7	8	9	10
10	Soubhagyalaxmi Sugars Ltd, Gokak, Belgaum	11288.00	9558.23	8886.97	4269.13	13156.10	Sub Standard Asset	Sri Ramesh Jarakhiholi, Minister for Water Resources	For recovery of Loan, the Bank has issued Demand Notice under Sec 13(2) of SARFAESI Act-2002, and also on 22.10.2019 has issued Possession Notice under rule 8(1) of Security Interest (enforcement) rules-2002. By challenging the said Notices, the sugar factory, on 21.11.2019, has filed W.P. No.115780/2019 before the Hon'ble High Court of karnataka, Dharwad bench and the same is pending before the Hon'ble High Court for adjudication. On 28.11.2019 has passed an Interim Order and stayed the operation of Possession Notice issued by the Bank, with a condition that, the Sugar Factory has to pay 50% of current dues within 9 weeks in 2 installments. As the Sugar has not complied the said Orders, the Bank has proceeded in accordance with the provisions of SARFAESI Act. Meanwhile, One, Mr. Prakash Kumar Nayak, on 09.01.2020 has filed a Writ Petition No.514/2020(PIL) before Hon'ble High Court of Karnataka, Bangalore and the Hon'ble court has posted the matter for filing of statement of objection on 13.03.2020. In the meantime, the Loanee has approached the Bank and assured to settle the Loan Amount within 6 months.
11	Sovereign Industries Ltd, Teradal, Jamkhandi	10504.00	10131.42	6038.17	4879.60	10917.77	Sub Standard Asset	Sri Shivakumar Melghan	For recovery of Loan, the Bank has issued Demand Notice under Sec 13(2) of SARFAESI Act-2002, and also, on 04.08.2018, has issued Possession Notice under rule 8(1) of Security Interest (enforcement) rules-2002. By challenging the said Notices, the sugar factory has filed W.P. Nos.106256/2018 (filed on 01.10.2018) and 100537/2019(filed on 02.01.2019) before the Hon'ble High Court of karnataka, Dharwad bench and the same is pending before the Hon'ble High Court for adjudication. Further, Our Bank, on 25.09.2019, has filed application under Sec 14 of SARFAESI Act-2002 before the Deputy commissoner, Bagalkot for taking possession of the sugar factory. The Bank has also, filed Contempt of Court Petition, vide C.C.C. No.100127/2019, before High Court of Karnataka, Dharwad bench against the Directors of the Sugar Factory. The Hon'ble Court ,on 26.02.2020, has issued notice to the accused persons.

For The Karnataka State
Co-Operative Apex Bank Ltd.

Manager
(A.O. Loans)

Sl. No.	Name of the Sugar Factory	Limit Sanctioned	O/s as on 31.01.2020	Due as on 31.01.2020 Principal	Interest	Total	Asset Clasification	Represented/Headed By	Remarks
1	2	3	4	5	6	7	8	9	10
12	Bidar Kissan Shakkar Karkhana Ltd	17000.00	13790.00	10468.75	1035.60	11504.35	Sub Standard Asset	Sri K A Aziz, Executive President	Notice issued to repay the dues and regularise the loan A/c
13	Mylar Sugars Ltd, Hoovina Hadagali, Bellary	13993.00	11550.08	88.34	126.78	215.12	Standard Asset	Sri T Ramakrisha Reddy, Chairman	Standard Asset
14	Harsha Sugars Ltd	15500.00	14071.44	0.00	220.42	220.42	Standard Asset	Smt Laxmi Hebbalkar,Chairwoman MLA,	Standard Asset
15	Manali Sugars Ltd	3000.00	3000.00	3000.00	433.33	3433.33	Sub Standard Asset	Sri J T Patil, Ex-MLA	Notice issued under Sec 13(2) of SARFAESI Act - 2002
16	Jamkhandi Sugars Ltd,	8500.00	8399.00	0.00	89.25	89.25	Standard Asset	Sri Anand S Nyamagoud, MLA	Standard Asset
17	Shri Sai priya Sugars Ltd	3400.00	3400.00	0.00	78.51	78.51	Standard Asset	Sri Murugesh R Nirani, Chairman	Standard Asset
18	MRN Cane Power (India) Ltd	3500.00	3414.95	0.00	39.17	39.17	Standard Asset	Sri Murugesh R Nirani, Chairman	Standard Asset
19	Sangamnath sugars Ltd	5500.00	2010.00	0.00	11.16	11.16	Standard Asset	Sri Manjunath Ramakrishna Kabadi, Chairman	Standard Asset
20	Athani sugars Ltd	8500.00	3500.00	0.00	11.66	11.66	Standard Asset	Sri Shrimanth B Patil, MLA	Standard Asset
21	Indian Sugar mfg. Co. Ltd.,	6000.00	1100.00	0.00	1.81	1.81	Standard Asset	Sri Ranjeet Singh B Shinde, CMD	Standard Asset
	Grand Total	175259.51	144879.18	31027.29	16124.03	47151.32			

For The Karnataka State
Co-Operative Apex Bank Ltd.

Manager
(A.O. Loans)

ANNEXURE - II

The Karnataka State Co-operative Apex Bank Ltd.,
Head Office Branch, Bangalore
Details of Project Loans (Term Loan, CCR & Over Draft Loans) as on 31-01-2020

(Rs in Lakhs)

Sl No.	Name of the Company/Loanee	Represented/Headed By		Account No.	Date of Sanction	Sanction Limit	Outstanding Amt.	Overdue as on 31-01-2020			Remarks	Asset Clasification
								Principal	Interest	Total		
1	SUNSMITH TEXTILES INDIA Pvt Ltd., No.Sy.58, Industrial Area, Majara Hosahalli, Kasabahobli, Doddaballapura-561203	1.Sri.K C Subramanya raju,Managing Director 2.Sri.Sudhakar Kushabange 3.Smt.Smitha Subramani raj	1	50/755/3	3-Feb-11	1500.00	1501.79	1501.79	4099.68	5601.47	Bank has filed a dispute U/s 70 of KCS Act, vide No.RCS/CRD/KME-8/12/2019-20 Dated.03.07.2012 for recovery of overdues and the same is pending before the Registrar of co-operative Societies for adjudication and the matter has stand posted for hearing on 06.03.2020. On the other hand bank has taken recourse under SARFAESI Act, by challenging the same, the said Company has filed SA No.176/2019. the same is pending before the The DRT. the matter has stand posted for hearing on 04.03.2020.	Doubtful
			2	13/688/6	3-Feb-11	300.00	300.00	300.00	406.96	706.96		
				Total		1800.00	1801.79	1801.79	4506.64	6308.43		

For The Karnataka State Co-Operative Apex Bank Ltd.

General Manager (HOB)
Head Office Br., Bengaluru - 18

2	KHUSHBOO ELECTRICALS & Automation Pvt Ltd., No.21/1-1, A.M.Lane, BVK Iyengar Road, Bangaore-53	1.Sri.Rajkumar Garg,Managing Director 2.Smt.Shshma Rajkumar	1	50/755/4	5-Jul-11	130.00	129.31	129.31	353.64	482.95	Bank has filed a dispute U/s 70 of KCS Act, Vide dispute No.RCS/CRD/KME-8/14/2019-20), dated 10.10.2012 the same is pending before the Additional Registrar of Co-op Societies (Credit). The matter has stand posted for Cross Examination of RW1 on 07.04.2020. Further Bank has issued 60 days demand notice under Sec 13(2) of the SARFAESI Act-2002, by challenging the same the said company has filed an Appeal in the DRT-II, Bengaluru (Diary No.1347/2019) and the same has stand posted for hearing on 06.04.2020.	Doubtful
			2	13/688/3	5-Jul-11	820.00	820.00	820.00	1260.96	2080.96		
				Total		950.00	949.31	949.31	1614.60	2563.91		
3	CONSTRUCTION SOLUTIONS Pvt Ltd., C/o Shalini.R, W/o Rajeshkumar, No.42, 3rd Floor, R.R.Plaza, 3r Cross, 8th Main, Vasanthapura, Bangalore-52	1.Sri.Rajeshkumar K Managing Director 2.Smt.Shalini R Kumar 3.Sri.Suresh T	1	50/755/9	12-Feb-10	200.00	206.30	206.3	578.36	784.66	for recovery of dues, the Bank, by filing dispute under Sec 70 of KCS Act.on 14.05.2012 Award obtained and EP. by challenging the said Award Sri.Jayaramaiah & others have preferred an appeal, vide no.263 of 2017 before the Karnataka Appellate Tribunal, Bangalore. The Hon'ble KAT, on 15.02.2018, has granted stay for execution of Award & EP. Now the matter stand posted for arguments on 06.03.2020 before the Hon'ble Tribunal.	Doubtful
			2	13/688/2	12-Feb-10	600.00	611.87	611.87	1148.04	1759.91		
				Total		800.00	818.17	818.17	1726.40	2544.57		

For The Karnataka State Co-Operative Apex Bank Ltd.

General Manager (HOB)
Head Office Br., Bengaluru - 18

4	KAY KAY AGRO PROCESS pvt Ltd., No.94-K Singeles, 12th Main, 8th Cross, MV Sadashivanagar, Bangalore	1.Sri Srinandan Singhal Managing Director 2.Smt.Asha Singhal	7	50/755/12	17-Feb-11	800.00	800.26	800.26	1643.93	2444.19	The Bank has filed dispute U/s 70 of KCS act vide no.RCS/CRD/KME-8/03/2019-20 dated 06.05.2014 the same is pending before the Additional Registrar of Co-op Societies (Credit) for Adjudication. It is pertinent to note here that the said Company by challenging the interim order of the Joint RCS (R441) dated 08.05.2015 in the Dispute and the Order of the Hon'ble KAT dated: 29.04.2016 passed in Appeal No.37/2015, has filed Writ Petition, vide no.28309-11/ 2016, before the Hon'ble High Court of Karnataka. In the the said Writ Petition the Hon'ble High Court, on 27.02.2017 & on 03.03.2017, has passed Interim Orders and directed the Respondent No.2, i.e., JRCS, not to pass the Final Orders unless permitted by this Court. On the other hand the Bank has also intiated proceeding envisaged under the SARFAESI Act by issuing Demand Notice Dated 07.01.2019 under sec 13(2) of the Act.	Doubtful
			8	50/755/13	2-Jun-11	150.00	150.00	150.00	353.65	503.65		
				Total		950.00	950.26	950.26	1997.58	2947.84		

For The Karnataka State Co-Operative Apex Bank Ltd.
General Manager (HOB)
Head Office Br., Bengaluru - 18

5	PUNAM POWERS (P) LTD., No.228, 1st Main, 1st stage, 5th Phase, 60 feet Road, Shivanagar, Bangalore-10	1.Sri.ManjunathPunam,Managing Director, 2. Smt.Rathna Punam 3.Deepak V Punam 4.Vijay Punam 5.S Nanjappa 6.Shankar Punam 7.Harish Punam	1	50/755/16	15-Sep-12	500.00	448.83	448.83	0.20	449.03	Demand notice has sent u/s 70 of KCS Act and also dicided to proceed under SARFAESI Act 2002 against the company	Doubtful
	VAISHNAVI INFRASTRUCTURE CORRIDUR ENTERPRISE(P) LTD., No.43/1, 1st floor, Next to UBI, Tumkur Road, Near APMC Yard, Yeshwanthpura, Bangalore-22	1.Sri.Sreenivas,managing Director, 2.S Uma W/o N Sreenivas	1	50/755/21	13-Mar-13	2000.00	1763.79	1716.16	2506.24	4222.40	dispute Filed under Sec 70 of KCS Act and also Award obtained from ADDL RCS (R441). Bank has also taken recourse under SARFAESI Act-2002 recovery of dues on 03.02.2020 symbollic possession Notice U/S 13(4) issued on 03.02.2020.	Doubtful
			2	13/688/23	19-Mar-13	2500.00	2490.23	2490.23	2987.33	5477.56		
				Total		4500.00	4254.02	4206.39	5493.57	9699.96		
	NANDANAVANA HOTELS AND RESORTS PVT LTD., No.-A-112, Centuary Park, 48, Richmond Road, Near Oberai Hotel, Bangalore-25	1.Sri.Muddaiah G D. Managing Director 2.J D Nanjappa	1	50/755/25	23-Nov-15	500.00	441.63	172.80	18.19	190.99	Notice sent to Regularize the a/c	Sub-Standard

For The Karnataka State Co-Operative Apex Bank Ltd.

General Manager (HOB)
Head Office Br., Bengaluru - 18

8	VINP BI LOGICALS INDIA LLp, Block A, 804, Mantri Greens, No.1, Sampige Road, Malleshwaram, Bangalore-560003	1.Sri.Vivek S Hebbar 2..Sri.Prakash G Hegde 3.Thimmaiah Sathyanarayana 4.Haadlahally Malleshgowda Sowjanya	1	50/755/26	6-Sep-16	1400.00	1401.94	655.27	390.24	1045.51	demand notice has sent u/s 70 of KCS Act and also. The Bank has issued notices under section 13(2) & 13(4) of SARFAESI Act againest the said company for recovery. Actual possession obtained on 26.02.2020. The Loanee has assured to close the loan a/c within 8 weeks. Hence, keys has been handed over to the loanee on 27.02.2020.	Sub-Standard
9	Karnataka Co-operatives & co-op society, No.8/2, 1st floor, 2nd Main Road, Beside Nandi Hospital, Chamarajpet, Bangalore-18	1.Sri.Adhisheshan gowda T C 2.Raju N S 3.Vanishree B S 4.M V Puttaswamy 5.Nagaraja Malya B 6.Sachin kumar 7.B Mallikarjuna reddy 8.Janakamma 9.Lakshmikanth M S 10.Honnegowda M 11.Veradaraj	1	50/755/27	27-Oct-17	2000.00	2000.00	99.99	103.95	203.94	Informed to update	sub-Standard
0	KNS INFRASTRUCTURE (P) LTD., No.1788/c, 9th Cross, 5th Main, RPC Layout, 2nd Stage, Vijayanagar, Bangalore-40	1.K N Surendra, Managing Director 2.Smt.Rangaswamy Sowmy 3.Sri. K N Boregowda 4. Smt.Sowmya Maheshgowda	1	13/693/1	4-Jun-16	2000.00	1977.47	1977.47	499.79	2477.26	demand notice has sent u/s 70 of KCS Act. On the other hand it is decided to proceed under SARFAESI Act 2002 against the said company.	Sub-Standard

For The Karnataka State Co-Operative Apex Bank Ltd.
General Manager (HOB)
Head Office Br., Bengaluru - 18

1	KNS OVERSEAS PVT LTD., No.1788/c, 9th Cross, 5th Main, RPC Layout, 2nd Stage, Vijayanagar, Bangalore-40	1.K N Surendra, Managing Director 2.Smt.Rangaswamy Sowmy 3.Sri. K N Boregowda	1	13/693/4	5-Dec-16	2000.00	1981.66	1981.66	557.33	2538.99	demand notice has sent u/s 70 of KCS Act. On the other hand it is decided to proceed under SARFAESI Act 2002 against the said company.	Sub-Standard
2	SKYREACH BUILDERS PVT LTD., No.326, 5th Main, 10th Cross, 4th Stage Vinayaka Layout, Nagarbhavi, Bangalore-560072	1.Sri Praveen Mohan 2. Sri.Mohan R	1	18/698/7	12-Jun-17	3600.00	3582.32	3582.32	48.68	3631.00	demand notice has sent u/s 70 of KCS Act.to Regularize the a/c	Sub-Standard
3	SHANTA RAO CENTRE FOR FINE ARTS, Shakti No.158/1, 8th Main, 8th Cross, Malleshwaram, Bangalore-560003	1.T G Mruthunyanjaya ,Managing Director 2.Smt.Gayathri Mruthunjaya 3.Sri.Karthik Aradya	1	18/698/8	2-Jan-18	919.00	930.11	0	11.11	11.11	Regular Account	Standard
4	SMT GANGAMMA EDUCATION & CHARITABLE TRUST®, No.14, Kalikanagar, Opp: Sowmyakali Temple, Andrahalli Main Road, PSI Post, Peenya 2nd Stage, Bengaluru - 560 058	1.Sri.M K Ashok 2.H V Geetha	1	18/698/9	7-Mar-18	2450.00	1903.76	0	0.00	0.00	Regular a/c	Standard
5	KANVA GARMENTS PVT LTD.,No.861, Kanva Sri Sai Complex, West of Chord Road, Modi Hospital Road, Bengaluru - 560 086	1.Sri.Nanjundaiah 2.Smt .Praveena	1	18/698/10	21-Jun-18	560.00	577.72	0	17.72	17.72	Notice sent to Regularize the Account	Sub-Standard

For The Karnataka State
Co-Operative Apex Bank Ltd.

General Manager (HOB)
Head Office Br., Bengaluru - 18

16	LAKSHMI GOLD KHAZANA PVT LTD., No.47, 6th Cross, Sampige Road, Malleswaram, Bengaluru - 560 003	1.Sri.K P Nanjundi Vishwakarma,Managing director. 2.Smt.Chennajammani, Director	1	50/755/29	28-Feb-19	2800.00	2800.00	366.67	240.48	607.15	Notice sent to Regularize the loan Account. But, director of the company has assured to close the loan a/c within march 2020.	Sub-Standard
17	MANGESHI MAHALSA PVT LTD, No 1132,Sharada Galli, Yallapura, Uttara Kannada 581359.	1 Sri RajshHarishchandra Malsekaar, Director 2.Rajendra Anand Naik	1	50/755/30	31-Aug-19	550.00	434.50	0.00	0.00	0.00	Regular a/c	Standard
18	S R S TRAVELS & LOGISTICS PVT LTD., NO.321,T S P Road, Kalasipalya, Bengaluru-560002.	1.Rajashekar K T	1	18/698/11	18-Oct-19	6000.00	6060.22	0.00	60.22	60.22	Regular Account	Standard
	Total					34279.00	33313.71	18010.93	17286.70	35297.63		

For The Karnataka State Co-Operative Apex Bank Ltd.

General Manager (HOB)
Head Office Br., Bengaluru - 18

Annexure - III.

ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತ
(ಷೆಡ್ಯೂಲ್ ಬ್ಯಾಂಕ್)
"ಉತ್ತುಂಗ", ನಂ. 1, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560 018.
THE KARNATAKA STATE CO-OP. APEX BANK LTD.,
(Scheduled Bank)
"UTHUNGA", No. 1, Pampa Mahakavi Road, Chamarajpet, Bangalore - 560 018

ಸಂಖ್ಯೆ:ಮು.ಕಾ.ನಿ/ವಸೂಲಾತಿ/ಸು.ಬ.ಮ.ಯೋ./5264/2019–20 ದಿನಾಂಕ:18.11.2019

:: ಸುತ್ತೋಲೆ ::

ವಿಷಯ: ಬ್ಯಾಂಕಿನಲ್ಲಿ "ಸುಸ್ತಿಸಾಲದ ಬಡ್ಡಿದರ ಮನರ್‌ನಿಗದಿ ಯೋಜನೆ" ಅನುಷ್ಠಾನಗೊಳಿಸಿರುವ ಬಗ್ಗೆ.

ಉಲ್ಲೇಖ: ಬ್ಯಾಂಕಿನ ಆಡಳಿತ ಮಂಡಳಿ ಸಭೆಯ ದಿನಾಂಕ 28.08.2019, ಠರಾವು ಸಂಖ್ಯೆ 24.

****

ಬ್ಯಾಂಕಿನ ಆದಾಯ ಮತ್ತು ನಿವ್ವಳ ಲಾಭವನ್ನು ವೃದ್ಧಿಗೊಳಿಸಲು, ನಿವ್ವಳ ಸಂಪತ್ತು ಮತ್ತು ಸಿ.ಆರ್.ಎ.ಆರ್. ಪ್ರಮಾಣವನ್ನು ಹೆಚ್ಚಿಸಲು ಅನುತ್ಪಾದಕ ಆಸ್ತಿಯ ಪ್ರಮಾಣವನ್ನು ಕಡಿಮೆಗೊಳಿಸುವುದು ಮತ್ತು ಸುಸ್ತಿಸಾಲಗಳ ವಸೂಲಾತಿಗೆ ಶೀಘ್ರ ಚಾಲನೆ ನೀಡುವುದು ಅತ್ಯವಶ್ಯಕವಾಗಿರುತ್ತದೆ. ಈ ಸಂಬಂಧ ಬ್ಯಾಂಕಿನಲ್ಲಿ **"ಸುಸ್ತಿಸಾಲದ ಬಡ್ಡಿದರ ಮನರ್‌ನಿಗದಿ ಯೋಜನೆ"**ಯನ್ನು ಅನುಷ್ಠಾನಗೊಳಿಸಲು ದಿನಾಂಕ 28.08.2019ರಂದು ನಡೆದ ಅಪೆಕ್ಸ್ ಬ್ಯಾಂಕಿನ ಆಡಳಿತ ಮಂಡಳಿ ಸಭೆಯಲ್ಲಿ ತೀರ್ಮಾನಿಸಿದ್ದು, ಠರಾವು ಸಂಖ್ಯೆ 24ರಲ್ಲಿ ಯೋಜನೆಯ ರೂಪುರೇಷೆಗಳು ಅನುಮೋದನೆಗೊಂಡಿದ್ದು, ಈ ಕೆಳಕಂಡಂತಿವೆ:

I. ಈ ಯೋಜನೆಯು **"ಸುಸ್ತಿಸಾಲದ ಬಡ್ಡಿದರ ಮನರ್‌ನಿಗದಿ ಯೋಜನೆ"** ಎಂದು ಕರೆಯಲ್ಪಡುತ್ತದೆ.

II. **ಈ ಯೋಜನೆಯಡಿ ಅರ್ಹವಾಗುವ ಸಾಲಗಳು:**

1) ದಿನಾಂಕ 31.03.2019ರ ವರ್ಷಾಂತ್ಯಕ್ಕೆ ಸುಸ್ತಿಬಾಕಿಯಾಗಿ, ಸಂಶಯಾಸ್ಪದ/ನಷ್ಟದ ಆಸ್ತಿಯಡಿ ವರ್ಗೀಕರಣಗೊಂಡ ಪ್ರಕರಣಗಳು ಈ ಸೌಲಭ್ಯ ಪಡೆಯಲು ಅರ್ಹವಿರುತ್ತವೆ.
2) ಸಾಲಗಾರರು ಮತ್ತು ಜಾಮೀನುದಾರರು ಜೀವಂತವಾಗಿದ್ದರೂ ಸಾಲ ಮರುಪಾವತಿ ಸಾಮರ್ಥ್ಯವಿಲ್ಲದಿರುವುದು ಹಾಗೂ ವಸೂಲಿಗೆ ಸ್ಥಿರಾಸ್ತಿಗಳ ಲಭ್ಯತೆಯಿಲ್ಲದಿರುವುದು.
3) ಸಾಲಗಾರರ ಮತ್ತು ಜಾಮೀನುದಾರರೀರ್ವರೂ ನಾಪತ್ತೆಯಾಗಿ ದೀರ್ಘಕಾಲದ ಪ್ರಯತ್ನದ ನಂತರವೂ ಲಭ್ಯವಿಲ್ಲದಿರುವುದು.
4) ಸಾಲಗಾರರು ಮರಣಹೊಂದಿ ಜಾಮೀನುದಾರರು ಮಾತ್ರ ಲಭ್ಯವಿದ್ದು, ಸದರಿಯವರಿಗೆ ಮರುಪಾವತಿ ಸಾಮರ್ಥ್ಯವಿಲ್ಲದಿರುವಿಕೆ.
5) ಸಾಲಗಾರರು ಹಾಗೂ ಜಾಮೀನುದಾರರು ಇಬ್ಬರೂ ಮರಣಹೊಂದಿ, ಅವರ ಕಾನೂನು ವಾರಸುದಾರರಿಂದ ವಸೂಲಾತಿ ಅಸಾಧ್ಯವಾಗಿರುವುದು.
6) ಮಾರಣಾಂತಿಕ ಕಾಯಿಲೆಗೊಳಗಾಗಿ ದೀರ್ಘಕಾಲಿಕ ಚಿಕಿತ್ಸಾವೆಚ್ಚ ಭರಿಸಿದ ಸಾಲಗಾರರು, ಜಾಮೀನುದಾರರುಗಳಲ್ಲಿ ಮರುಪಾವತಿ ಸಾಮರ್ಥ್ಯವಿಲ್ಲದಿರುವುದು.

.....2

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಒ 119 ಸಿಎಲ್ಎಸ್ 2020 (ಇ-ಕಡತ)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 12.03.2020

ಇಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಸಹಕಾರ ಇಲಾಖೆ,
ಬೆಂಗಳೂರು-01

ಇವರಿಗೆ:

ಕಾರ್ಯದರ್ಶಿ, (ಪ್ರ)
ಕರ್ನಾಟಕ ವಿಧಾನ ಸಭೆ,
ಸಚಿವಾಲಯ, ವಿಧಾನ ಸೌಧ.

111 45 13/3/2020

ಮಾನ್ಯರೆ,

ವಿಷಯ : ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ರಾಮಸ್ವಾಮಿ.ಎ.ಟಿ (ಅರಕಲಗೂಡು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1752 ಕ್ಕೆ ಉತ್ತರ ನೀಡುವ ಬಗ್ಗೆ.

***

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ರಾಮಸ್ವಾಮಿ.ಎ.ಟಿ (ಅರಕಲಗೂಡು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1752 ಕ್ಕೆ ಸಂಬಂಧಿಸಿದಂತೆ, ಉತ್ತರದ 100 ಪ್ರತಿಯನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿತಳಾಗಿದ್ದೇನೆ.

ತಮ್ಮ ನಂಬುಗೆಯ,

12/3/2020

(ಮನೋರಮ ಡಿ.ಸಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರು : ಶ್ರೀ ರಾಮಸ್ವಾಮಿ ಎ.ಟಿ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1752
ಉತ್ತರಿಸಬೇಕಾದ ದಿನಾಂಕ : 13.03.2020

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಕಳೆದ ಮೂರು ವರ್ಷಗಳಿಂದ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್‌ನಲ್ಲಿ ನಡೆದಿರುವ ಕೋಟ್ಯಾಂತರ ರೂ.ಗಳ ಅವ್ಯವಹಾರದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಇದುವರೆವಿಗೂ ಕೈಗೊಂಡಿರುವ ಕ್ರಮಗಳೇನು:	ಹೌದು. ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ನಿ., ಬೆಂಗಳೂರು ಇದರಲ್ಲಿ ನಡೆದಿದೆ ಎನ್ನಲಾದ ಹಣಕಾಸಿನ ಅವ್ಯವಹಾರಗಳ ಕುರಿತಂತೆ ದೂರುಗಳು ಸ್ವೀಕೃತವಾದ ಹಿನ್ನೆಲೆಯಲ್ಲಿ ಸಹಕಾರ ಸಂಘಗಳ ನಿಬಂಧಕರು 6 ಜನ ಇಲಾಖಾಧಿಕಾರಿಗಳನ್ನೊಳಗೊಂಡ ತಂಡವನ್ನು ರಚಿಸಿ ಪರಿಶೀಲನೆಗಾಗಿ ನಿಯೋಜಿಸಿರುತ್ತಾರೆ. ಪರಿಶೀಲನಾ ತಂಡದ ವರದಿಯನ್ನಾಧರಿಸಿ, ಸಹಕಾರ ಸಂಘಗಳ ಅಪರ ನಿಬಂಧಕರು (ಪತ್ತು) ಕೇಂದ್ರ ಕಛೇರಿ ಇವರು ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 64ರ ಶಾಸನಬದ್ಧ ವಿಚಾರಣೆಗೆ ಆದೇಶಿಸಿದ್ದು, ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ದಿನಾಂಕ:08-07-2019 ರಂದು ಆದೇಶ ಮಾಡಲಾಗಿರುತ್ತದೆ. ವಿಚಾರಣಾಧಿಕಾರಿ ವಿಚಾರಣಾ ವರದಿಯನ್ನು ದಿನಾಂಕ:05-12-2019 ರಂದು ಸಹಕಾರ ಸಂಘಗಳ ಅಪರ ನಿಬಂಧಕರು (ಪತ್ತು) ಇವರಿಗೆ ಸಲ್ಲಿಸಿರುತ್ತಾರೆ. ಸಹಕಾರ ಸಂಘಗಳ ನಿಬಂಧಕರು, ಸರ್ಕಾರಕ್ಕೆ ಅರೆ ಸರ್ಕಾರಿ ಪತ್ರವನ್ನು ದಿನಾಂಕ:28-10-2019ರಂದು ಬರೆದಿದ್ದು, ಇದೇ ಅಂಶಗಳ ಬಗ್ಗೆ ಕಲಂ 64ರಡಿ ಶಾಸನಬದ್ಧ ವಿಚಾರಣೆಗೆ ಆದೇಶಿಸಲಾಗಿದ್ದು, ದಿನಾಂಕ: 10.03.2020ರಂದು ವರದಿಯು ಸರ್ಕಾರಕ್ಕೆ ಸ್ವೀಕೃತವಾಗಿರುತ್ತದೆ.
ಆ)	ಸದರಿ ಬ್ಯಾಂಕ್‌ನಲ್ಲಿ ನಡೆದಿರುವ ಅವ್ಯವಹಾರಗಳ ಕುರಿತು ದೂರುಗಳು ಸರ್ಕಾರಕ್ಕೆ ಸ್ವೀಕೃತವಾಗಿದೆಯೇ (ದೂರುದಾರರ ಹೆಸರು ಹಾಗೂ ದೂರಿನ ವಿವರ ನೀಡುವುದು):	ಹೌದು. ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ನಿ., ಬೆಂಗಳೂರು ಇಲ್ಲಿ ನಡೆದಿದೆ ಎನ್ನಲಾದ ಹಣಕಾಸಿನ ಅವ್ಯವಹಾರಗಳ ಕುರಿತು ಕೆಳಕಂಡವರಿಂದ ದೂರುಗಳು ಸ್ವೀಕೃತವಾಗಿರುತ್ತದೆ. 1. ಶ್ರೀ ಮೂರ್ತಿ, ಸಾಮಾಜಿಕ ಕಾರ್ಯಕರ್ತ, ವಿಜಯನಗರ, ಬೆಂಗಳೂರು ಇವರ ಅರ್ಜಿ ದಿನಾಂಕ:15-06-2018 ಮತ್ತು 02-08-2018. 2. ಶ್ರೀ ಬಿ. ವಿಕ್ರಮ್, ನಂ.88, 4ನೇ ಮುಖ್ಯರಸ್ತೆ, 6ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು ಇವರ ಅರ್ಜಿ ದಿನಾಂಕ:11-01-2019. 3. ಕರ್ನಾಟಕ ಸ್ಟೇಟ್ ಕೋ-ಆಪರೇಟಿವ್ ಅಪೆಕ್ಸ್ ಬ್ಯಾಂಕ್ ಲಿ., ಬೆಂಗಳೂರು ಇದರ ಸಿಬ್ಬಂದಿಗಳು ಹಾಗೂ ಎಂಪ್ಲಾಯೀಸ್ ಯೂನಿಯನ್ ಅಂಡ್ ಆಫೀಸರ್ಸ್ ಅಸೋಸಿಯೇಷನ್ ಆಫ್ ದಿ ಸ್ಟೇಟ್ ಕೋ-ಆಪರೇಟಿವ್ ಅಪೆಕ್ಸ್ ಬ್ಯಾಂಕ್ ಲಿ., ಬೆಂಗಳೂರು ಇವರ ಅರ್ಜಿ ದಿನಾಂಕ:04-02-2019. 4. ನಬಾರ್ಡ್, ಬೆಂಗಳೂರು ಇವರ ಪತ್ರ ದಿನಾಂಕ:01-10-2018. 5. ಸೂಪರಿಂಟೆಂಡೆಂಟ್ ಆಫ್ ಪೊಲೀಸ್, ಸಿಬಿಐ,ಎಸಿಬಿ, ಬೆಂಗಳೂರು ಇವರ ಪತ್ರ ಸಂ:ಸಿಎ 84/19/ಸಿಬಿಐ/ಎಸಿಬಿ/ಬಿಎಲ್‌ಆರ್/321. ದಿನಾಂಕ:30-03-2019. 6. ಭಾರತೀಯ ರಿಸರ್ವ್ ಬ್ಯಾಂಕ್ ಇಂಡಿಯಾ, ಮುಂಬೈ. ಇವರ ಪತ್ರ ದಿನಾಂಕ:08-04-2019.

ಇ)	ಸದರಿ ಅವ್ಯವಹಾರದ ಕುರಿತು ದಾಖಲಾತಿ ಪರಿಶೀಲನೆಗೆ ಸರ್ಕಾರದ ವತಿಯಿಂದ ತನಿಖಾ ತಂಡ ರಚಿಸಲಾಗಿದೆಯೇ: ಇದ್ದಲ್ಲಿ, ತಂಡದಿಂದ ಪರಿಶೀಲನಾ ವರದಿ ಪಡೆಯಲಾಗಿದೆಯೇ (ಸಂಪೂರ್ಣ ಮಾಹಿತಿ ನೀಡುವುದು):	ಹೌದು. ಈ ಅವ್ಯವಹಾರದ ಕುರಿತು ದಾಖಲಾತಿ ಪರಿಶೀಲನೆಗೆ ಇಲಾಖಾಧಿಕಾರಿಗಳ ತಂಡವನ್ನು ದಿನಾಂಕ:30-04-2019 ರಂದು ರಚಿಸಲಾಗಿದ್ದು, ಪರಿಶೀಲನಾ ತಂಡವು ದಿ:30-05-2019 ರಂದು ವರದಿ ಸಲ್ಲಿಸಿರುತ್ತಾರೆ. ಪರಿಶೀಲನಾ ವರದಿಯಲ್ಲಿ ಕಂಡು ಬಂದ ಅಂಶಗಳ ಮಾಹಿತಿಯನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.
ಈ	ಈ ಬಗ್ಗೆ ಸರ್ಕಾರದ ವತಿಯಿಂದ ನಿಯೋಜಿಸಲಾಗಿದ್ದ ಅಧಿಕಾರಿಗಳು ಯಾವುದಾದರೂ ವರದಿ ನೀಡಿದ್ದಾರೆಯೇ: ನೀಡಿದ್ದಲ್ಲಿ, ವರದಿ ಆಧಾರದ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ (ಸಂಪೂರ್ಣ ಮಾಹಿತಿ ನೀಡುವುದು)	ಹೌದು. ಸಹಕಾರ ಸಂಘಗಳ ನಿಬಂಧಕರು ದಿನಾಂಕ:30-04-2019ರಂದು ಇಲಾಖಾಧಿಕಾರಿಗಳ ತಂಡವನ್ನು ಪರಿಶೀಲನೆಗಾಗಿ ನಿಯೋಜಿಸಲಾಗಿದ್ದು, ನಿಯೋಜಿತಗೊಂಡ ತಂಡ ದಿನಾಂಕ:30-05-2019 ರಂದು ವರದಿಯನ್ನು ಸಲ್ಲಿಸಿರುತ್ತಾರೆ. ಪರಿಶೀಲನಾ ತಂಡವು ದೂರಿನಲ್ಲಿ ನೀಡಿರುವ ಕೆಲವು ಅಂಶಗಳ ಸತ್ಯತೆ ಕಂಡು ಬಂದ ಹಿನ್ನೆಲೆಯಲ್ಲಿ ಉನ್ನತ ಮಟ್ಟದ ವಿಚಾರಣೆಗೆ ಒಳಪಡಿಸಿದರೆ ಸತ್ಯಾಂಶ ಪಡೆಯಲು ಸಾಧ್ಯವಾಗುತ್ತದೆ ಎಂದು ಪರಿಶೀಲನಾ ತಂಡವು ಅಭಿಪ್ರಾಯಪಟ್ಟಿರುತ್ತದೆ. ಈ ವರದಿಯನ್ನಾಧರಿಸಿ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 64ರಡಿ ಶಾಸನಬದ್ಧ ವಿಚಾರಣೆಗೆ ದಿನಾಂಕ:08-07-2019ರಂದು ಆದೇಶಿಸಿದ್ದು, ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯಾಗಿ ನೇಮಕ ಮಾಡಲಾಗಿರುತ್ತದೆ.
ಉ	ಸದರಿ ಬ್ಯಾಂಕಿನಲ್ಲಿ ನಡೆದಿರುವ ಅವ್ಯವಹಾರದ ಕುರಿತು ಶಾಸನಬದ್ಧ ತನಿಖೆಗೆ ಸಹಕಾರ ಸಂಘಗಳ ಅಪರನಿಬಂಧಕರ ಆದೇಶದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಕುರಿತು ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 64 ರ ವಿಚಾರಣೆಗೆ ಆದೇಶಿಸಲಾಗಿದೆಯೇ: ಆದೇಶಿಸಿದ್ದರೆ, ತನಿಖೆ ಯಾವ ಹಂತದಲ್ಲಿದೆ (ತನಿಖಾಧಿಕಾರಿಗಳ ಹೆಸರು ಮತ್ತು ವಿಳಾಸ ನೀಡುವುದು):	ಅಪೆಕ್ಸ್ ಬ್ಯಾಂಕಿನಲ್ಲಿ ನಡೆದಿರುವ ಅವ್ಯವಹಾರದ ಕುರಿತು ಶಾಸನಬದ್ಧ ತನಿಖೆಗೆ ಸಹಕಾರ ಸಂಘಗಳ ಅಪರ ನಿಬಂಧಕರು (ಪತ್ತು) ಕೇಂದ್ರ ಕಛೇರಿ ಇವರು ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 64ರ ವಿಚಾರಣೆಗೆ ದಿನಾಂಕ:08-07-2019 ರಂದು ಆದೇಶಿಸಲಾಗಿದೆ. ತನಿಖೆ ಪೂರ್ಣಗೊಂಡಿರುತ್ತದೆ. ದಿನಾಂಕ:05-12-2019 ರಂದು ವಿಚಾರಣಾಧಿಕಾರಿಯು ವಿಚಾರಣಾ ವರದಿಯನ್ನು ಸಹಕಾರ ಸಂಘಗಳ ನಿಬಂಧಕರ ಕಛೇರಿಗೆ ಸಲ್ಲಿಸಿದ್ದು, ಅದರ ಪ್ರತಿಯನ್ನು ದಿನಾಂಕ: 10.03.2020ರಂದು ಸರ್ಕಾರಕ್ಕೆ ಸಲ್ಲಿಸಿದ್ದು, ಪರಿಶೀಲನೆಯಲ್ಲಿರುತ್ತದೆ. ಶ್ರೀ ಎಂ.ಡಿ. ನರಸಿಂಹಮೂರ್ತಿ, ಸಹಕಾರ ಸಂಘಗಳ ಜಂಟಿ ನಿಬಂಧಕರು, ಕಾನೂನು ಕೋಶ, ಸಹಕಾರ ಸಂಘಗಳ ನಿಬಂಧಕರ ಕಛೇರಿ, ಬೆಂಗಳೂರು (ಹಾಲಿ) ಹಾಗೂ ವಿಚಾರಣೆಗೆ ಆದೇಶಿಸಿದ ಸಂದರ್ಭದಲ್ಲಿ ಸದರಿಯವರು ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು ಈ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಇವರು ಕಲಂ 64 ರ ವಿಚಾರಣಾ ವರದಿಯನ್ನು ದಿನಾಂಕ:05-12-2019 ರಂದು ಸಲ್ಲಿಸಿರುತ್ತಾರೆ.

ಸಂಖ್ಯೆ: ಸಿಒ 119 ಸಿಎಲ್‌ಎಸ್ 2020

(ಎಸ್.ಟಿ ಸೋಮಶೇಖರ್)
ಸಹಕಾರ ಸಚಿವರು

ಅನುಬಂಧ-1 ಕರಡು ವರದಿ

ಸಕ್ಕರೆ ಕಾರ್ಖಾನೆಗಳಿಗೆ ಸಾಲ ಮತ್ತು ಮುಂಗಡಗಳು:

ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ಲಿ., ಬೆಂಗಳೂರು ಇವರು 27 ಸಹಕಾರಿ ಮತ್ತು ಸಹಕಾರೇತರ ಸಕ್ಕರೆ ಕಾರ್ಖಾನೆಗಳಿಗೆ ವಿವಿಧ ರೀತಿಯ ಅಂದರೆ ದುಡಿಯುವ ಬಂಡವಾಳ, ಬ್ರಿಡ್ಜ್ ಲೋನ್, ಟರ್ಮ್ ಲೋನ್, ಸಾಫ್ಟ್ ಲೋನ್, ಈ ಶೀರ್ಷಿಕೆಯಡಿಯಲ್ಲಿ ದಿನಾಂಕ: 31-03-2018ರ ಅಂತ್ಯಕ್ಕೆ ರೂ.1022.55 ಕೋಟಿಗಳ ಸಾಲವನ್ನು ನೀಡಿದ್ದು, ದಿನಾಂಕ: 31-03-2019ರ ಅಂತ್ಯಕ್ಕೆ ರೂ.860.48 ಕೋಟಿ ಸಾಲಗಳು ಕಾರ್ಖಾನೆಗಳಿಂದ ವಸೂಲಾಗಲು ಬಾಕಿ ಇರುತ್ತದೆ. (ಎಸ್-1)

ಇದರಲ್ಲಿ ಒಟ್ಟು 10 ಸಹಕಾರಿ ಸಕ್ಕರೆ ಕಾರ್ಖಾನೆಗೆ ರೂ.517.80 ಕೋಟಿ ಸಾಲವನ್ನು ಮಂಜೂರಾತಿ ಮಾಡಲಾಗಿದ್ದು, ಈ ಪೈಕಿ 31-3-2019 ಕ್ಕೆ ರೂ. 454.89 ಕೋಟಿ ಹೊರಬ್ಬಾಕಿಯಿರುತ್ತದೆ. ಇದರಲ್ಲಿ 31-03-2019 ಕ್ಕೆ ರೂ.70.57 ಕೋಟಿ ಅಸಲು ಮತ್ತು ರೂ.83.43 ಕೋಟಿ ಬಡ್ಡಿ ಒಟ್ಟು ರೂ.154.00 ಕೋಟಿ ಸುಸ್ತಿಯಾಗಿ ಸಾಲ ವಸೂಲಾತಿಗೆ ಬಾಕಿಯಿರುತ್ತದೆ. ದಿನಾಂಕ: 31-03-2019 ಕ್ಕೆ 10 ಸಕ್ಕರೆ ಕಾರ್ಖಾನೆಗೆ ನೀಡಲಾದ ಸಾಲಗಳಲ್ಲಿ ರೂ.95.27 ಕೋಟಿ ಎನ್.ಪಿ.ಎ (NPA) ಆಗಿ ಮುಂದುವರೆದಿರುತ್ತದೆ.

ಹಾಗೆಯೇ 17 ಖಾಸಗಿ ಸಕ್ಕರೆ ಕಾರ್ಖಾನೆಗಳಿಗೆ ರೂ.1262.00 ಕೋಟಿ ಸಾಲ ನೀಡಲಾಗಿದ್ದು, ದಿನಾಂಕ: 31-03-2019ಕ್ಕೆ ರೂ.1148.00 ಕೋಟಿ ಹೊರಬಾಕಿಯಿರುತ್ತದೆ. ಈ ಪೈಕಿ ರೂ.136.00 ಕೋಟಿ ಅಸಲು ಮತ್ತು ರೂ.101.00 ಕೋಟಿ ಬಡ್ಡಿ ಒಟ್ಟು ರೂ.237.00 ಕೋಟಿ ಸುಸ್ತಿ ಸಾಲ ವಸೂಲಾತಿಗೆ ಬಾಕಿಯಿರುತ್ತದೆ. ದಿನಾಂಕ: 31-03-2019ಕ್ಕೆ ರೂ.210.00 ಕೋಟಿ ಸಾಲ ಎನ್.ಪಿ.ಎ (NPA) ಆಗಿರುತ್ತದೆ.

ಒಟ್ಟಾರೆ 27 ಸಕ್ಕರೆ ಕಾರ್ಖಾನೆಗಳಿಗೆ ದಿನಾಂಕ: 31.03.2019 ಕ್ಕೆ, 47 ಪ್ರಕರಣಗಳಲ್ಲಿ ದುಡಿಯುವ ಬಂಡವಾಳ ಸಾಲವಾಗಿ ರೂ. 1176.00 ಕೋಟಿ ಹಾಗೂ 29 ಪ್ರಕರಣಗಳಲ್ಲಿ ಅವಧಿ ಸಾಲ (ಟರ್ಮ್ ಲೋನ್) ಸಾಲವಾಗಿ ರೂ.427.24 ಕೋಟಿ ಹೊರಬಾಕಿಯಿರುತ್ತದೆ. ಒಟ್ಟಾರೆ ರೂ. 1603.36 ಕೋಟಿ ಸಾಲ ಹೊರಬಾಕಿ ಇರುತ್ತದೆ. ಈ ಪೈಕಿ, ರೂ.206.32 ಅಸಲು ಹಾಗೂ 184.83 ಕೋಟಿ ಬಡ್ಡಿ ಒಟ್ಟು ರೂ. 391.15 ಕೋಟಿ ಸಾಲ ಸುಸ್ತಿಯಾಗಿ ಮುಂದುವರಿತ್ತಿರುತ್ತದೆ. ಇದರಲ್ಲಿ ರೂ.305.73 ಕೋಟಿ ಎನ್.ಪಿ.ಎ ಆಗಿರುತ್ತದೆ.

ವಿವರಣೆಯನ್ನು ಎಸ್-1 ಎಂದು ಗುರುತಿಸಲಾಗಿದೆ.

ವಿವರಣೆ ಈ ಕೆಳಕಂಡಂತಿರುತ್ತದೆ.

ಸಹಕಾರಿ ಸಕ್ಕರೆ ಕಾರ್ಖಾನೆಗಳು ದಿನಾಂಕ: 31-03-2019ರ ಅಂತ್ಯಕ್ಕೆ (ರೂ.ಕೋಟಿಗಳಲ್ಲಿ)		ಸಹಕಾರೇತರ ಸಕ್ಕರೆ ಕಾರ್ಖಾನೆಗಳು ದಿನಾಂಕ: 31-03-2019ರ ಅಂತ್ಯಕ್ಕೆ (ರೂ.ಕೋಟಿಗಳಲ್ಲಿ)		ಎನ್‌ಪಿಎ ದಿನಾಂಕ: 31-03-2019ರ ಅಂತ್ಯಕ್ಕೆ
ಸಂಖ್ಯೆ	ಸಾಲದ ಮೊತ್ತ	ಸಂಖ್ಯೆ	ಸಾಲದ ಮೊತ್ತ	
10	454.88	17	1148.00	19.07%

ಈ ಪೈಕಿ ಕೆಳಕಂಡ 8 ಸಹಕಾರಿ ಮತ್ತು ಸಹಕಾರೇತರ ಸಕ್ಕರೆ ಕಾರ್ಖಾನೆಗಳಿಗೆ ನೀಡಲಾಗಿರುವ ಸಾಲವು ಸುಸ್ತಿಯಾಗಿ ಮುಂದುವರೆಯುತ್ತಿರುವುದರಿಂದ, ಸದರಿ 8 ಸಕ್ಕರೆ ಕಾರ್ಖಾನೆಗಳಿಗೆ ನೀಡಲಾದ ಸಾಲದ ಕಡತಗಳನ್ನು ಪರಿಶೀಲಿಸಿ ವರದಿಯನ್ನು ಸಿದ್ದಪಡಿಸಲಾಗಿದೆ. ಉಳಿದ ಸಕ್ಕರೆ ಕಾರ್ಖಾನೆಗಳ ಸಾಲಗಳು ವಸೂಲಾತಿ ಪ್ರಗತಿಯಲ್ಲಿರುವುದರಿಂದ ಪರಿಶೀಲನೆ ಮಾಡಲಾಗಿರುವುದಿಲ್ಲ.

1. **ಸೌಭಾಗ್ಯ ಲಕ್ಷ್ಮಿ ಶುಗರ್ಸ್ ಲಿಮಿಟೆಡ್, ಗೋಕಾಕ್ (ಎಸ್-2(1))**

1. ಈ ಕಾರ್ಖಾನೆಗೆ ಬ್ಯಾಂಕಿನಿಂದ ಟರ್ಮ್ ಲೋನ್ (ಅವಧಿ ಸಾಲ) ಮೊದಲನೇ ಬಾರಿಗೆ ರೂ.10.00 ಕೋಟಿಯನ್ನು ದಿನಾಂಕ: 15-04-2014ರಂದು, ಎರಡನೇ ಬಾರಿಗೆ ರೂ.35.00 ಕೋಟಿಗಳನ್ನು ದಿನಾಂಕ: 12-11-2014ರಂದು, ದುಡಿಯುವ ಬಂಡವಾಳ ರೂ.60.00 ಕೋಟಿಗಳನ್ನು ದಿನಾಂಕ: 12-07-2013 ರಂದು ದುಡಿಯುವ ಬಂಡವಾಳ ರೂ.9.50 ಕೋಟಿಗಳನ್ನು ದಿನಾಂಕ: 31-03-2017ರಂದು ಬ್ರಿಡ್ಜ್ ಲೋನ್ ರೂ.7.88 ಕೋಟಿಗಳನ್ನು ದಿನಾಂಕ: 31-03-2016ರಂದು ಬಿಡುಗಡೆ ಮಾಡಿ ಒಟ್ಟು ರೂ.122.38 ಕೋಟಿ ಸಾಲವನ್ನು ನೀಡಿದೆ.
2. ಈ ಸಾಲವನ್ನು ಕಾರ್ಖಾನೆಯ ವಿಸ್ತರಣೆಗೆ ರೂ.10.00 ಕೋಟಿಯನ್ನು, ಯಥನಾಲ್ ಪ್ಲಾಂಟ್‌ನ್ನು ಹಾಕಲು ರೂ.35.00 ಕೋಟಿಯನ್ನು ಮತ್ತು ಬಾಕಿಯಿರುವ ಯಥನಾಲ್ ಪ್ಲಾಂಟ್‌ನ್ನು ಹಾಕಲು ರೂ.7.88 ಕೋಟಿ ಹಣವನ್ನು ಬಿಡುಗಡೆ ಮಾಡಿದ್ದು, ಈ ಕಾಮಗಾರಿಗಳು ಪೂರ್ಣಗೊಂಡಿರುವ ಬಗ್ಗೆ ಕಾರ್ಖಾನೆಯಿಂದ ದೃಢೀಕರಣ ಪತ್ರ ಪಡೆದಿರುವ ಬಗ್ಗೆ ದಾಖಲಾತಿ ಬ್ಯಾಂಕ್‌ನಲ್ಲಿ ಲಭ್ಯವಿಲ್ಲ.
3. ಕಾರ್ಖಾನೆ ಹೊಂದಿರುವ ರೂ.16.00 ಕೋಟಿ ಮತ್ತು ರೂ.21.10 ಕೋಟಿ ಮೌಲ್ಯದ ಸ್ಥಿರಾಸ್ತಿಯನ್ನು ಬ್ಯಾಂಕ್ ಅಡಮಾನ ಮಾಡಿಕೊಂಡಿರುತ್ತದೆ. ಆದರೆ, ನೀಡಿರುವ ಸಾಲಕ್ಕೂ ಅಡಮಾನ ಮಾಡಿಕೊಂಡಿರುವ ಸ್ಥಿರಾಸ್ತಿಯ ಮೌಲ್ಯವು ನೀಡಿರುವ ಸಾಲದ ಮೊತ್ತಕ್ಕಿಂತ ಕಡಿಮೆಯಾಗಿರುತ್ತದೆ.
4. ಸಕ್ಕರೆ ದಾಸ್ತಾನು ಆಧಾರದ ಮೇಲೆ ದುಡಿಯುವ ಬಂಡವಾಳ ರೂ.60.00 ಕೋಟಿ ಮತ್ತು ರೂ.9.50 ಕೋಟಿ ಹಣವನ್ನು ಬಿಡುಗಡೆ ಮಾಡಿದ್ದು, ಬಿಡುಗಡೆ ಸಂದರ್ಭದಲ್ಲಿ ಸಕ್ಕರೆ ದಾಸ್ತಾನು ಇರುವ ಬಗ್ಗೆ ಖಾತರಿಪಡಿಸಿಕೊಂಡಿರುವ ಬಗ್ಗೆ ಬ್ಯಾಂಕಿನಲ್ಲಿ ದಾಖಲಾತಿ ಲಭ್ಯವಿರುವುದಿಲ್ಲ. ಹಾಗೂ ದಿನಾಂಕ: 16.05.2019 ಕ್ಕೆ ಬ್ಯಾಂಕಿನ ಅಧಿಕಾರಿಗಳು ಒದಗಿಸಿರುವ ದಾಖಲೆಗಳಲ್ಲಿ ಸಕ್ಕರೆ ದಾಸ್ತಾನು ಇರುವುದಿಲ್ಲ. ಇದನ್ನು **ಎಸ್-2(1)(ಎ) ಎಂದು ಗುರುತಿಸಿದೆ.**
5. ದಿನಾಂಕ: 31-03-2019ರ ಅಂತ್ಯಕ್ಕೆ ಮೇಲೆ ನಮೂದಿಸಿರುವ ಸಾಲಗಳಲ್ಲಿ ಅಸಲು ಒಟ್ಟು ರೂ.74.48 ಕೋಟಿ ಮತ್ತು ರೂ.29.05 ಕೋಟಿ ಬಡ್ಡಿ ಒಟ್ಟು ರೂ.103.54 ಕೋಟಿ ಬಾಕಿ ಇರುತ್ತದೆ. ಈ ಸಾಲವು ಸುಸ್ತಿಯಾಗಿದ್ದು, ದಿನಾಂಕ: 16-04-2017ರಲ್ಲಿ (ಎನ್‌ಪಿಎ) ವಸೂಲಾಗದ ಆಸ್ತಿ ಎಂದು ಬ್ಯಾಂಕಿನಿಂದ ಪರಿಗಣಿಸಲ್ಪಟ್ಟಿದೆ.
6. ಸುಸ್ತಿ ಸಾಲದ ವಸೂಲಾತಿಗಾಗಿ ಬ್ಯಾಂಕಿನಿಂದ ಸರ್‌ಫೇಸಿಯಾ ಕಾಯ್ದೆ-2002ರ ರೀತ್ಯಾ ವಸೂಲಾತಿಗೆ ನೋಟೀಸ್ ನೀಡಲಾಗಿದೆ.

ವಿವರಣೆಯನ್ನು **ಎಸ್-2(1)** ಎಂದು ಗುರುತಿಸಲಾಗಿದೆ.

2. **ಸೋವರಿಯನ್ ಸಕ್ಕರೆ ಕಾರ್ಖಾನೆ, ತೆರದಾಳ ಜಮ್ಮಖಂಡಿ ತಾಲ್ಲೂಕು.**

1) ಈ ಕಾರ್ಖಾನೆಗೆ ಬ್ಯಾಂಕಿನಿಂದ ಟರ್ಮ್ ಲೋನ್ (ಅವಧಿ ಸಾಲ) ಮೊದಲನೇ ಬಾರಿಗೆ ರೂ.50.00 ಕೋಟಿಯನ್ನು ದಿನಾಂಕ: 23-09-2014ರಂದು, ಎರಡನೇ ಬಾರಿಗೆ ರೂ.1.00 ಕೋಟಿಗಳನ್ನು ದಿನಾಂಕ: 13-03-2015ರಂದು, ಮೂರನೇ ಬಾರಿಗೆ ರೂ.18.00 ಕೋಟಿಗಳನ್ನು ದಿನಾಂಕ: 18-06-2016ರಂದು, ದುಡಿಯುವ ಬಂಡವಾಳ ರೂ.10.00 ಕೋಟಿಗಳನ್ನು ದಿನಾಂಕ: 22-02-2016ರಂದು ದುಡಿಯುವ ಬಂಡವಾಳ ರೂ.20.00 ಕೋಟಿಗಳನ್ನು ದಿನಾಂಕ: 31-03-2017ರಂದು ಬ್ರಿಡ್ಜ್ ಲೋನ್ ರೂ.7.04 ಕೋಟಿಗಳನ್ನು ದಿನಾಂಕ: 31-03-2017ರಂದು ಬಿಡುಗಡೆ ಮಾಡಿ ಒಟ್ಟು ರೂ.106.04 ಕೋಟಿ ಸಾಲವನ್ನು ನೀಡಿದೆ. ಈ ಬ್ಯಾಂಕನ್ನು ಒಳಗೊಂಡಂತೆ ಸಮೂಹ ಬ್ಯಾಂಕುಗಳಿಂದಲೂ ಸಹ ಸಾಲವನ್ನು ನೀಡಲಾಗಿರುತ್ತದೆ.
2) ಮೇಲ್ಕಂಡ ಸಾಲಗಳಿಗೆ ಕಾರ್ಖಾನೆ ಹೊಂದಿರುವ ಸ್ಥಿರಾಸ್ತಿಗಳಾದ ಭೂಮಿಯನ್ನು ಮತ್ತು ಕಾರ್ಖಾನೆ ಹೊಂದಿರುವ ಯಂತ್ರೋಪಕರಣ ಕಟ್ಟಡ ಚರಾಸ್ತಿ (plant and Machineries,

Building, All movable assets of the company not related to the proposed project) ಗಳನ್ನು ಭದ್ರತೆಯಾಗಿ ಪಡೆಯಲಾಗಿದೆ. ಸಾಲಕ್ಕೆ ಪಡೆದಿರುವ ಭದ್ರತೆಯ ಮೌಲ್ಯವು ಕಡಿಮೆಯಿರುತ್ತದೆ. ಅಂದರೆ, ಸಾಲದ ಮೊತ್ತಕ್ಕೆ ಸ್ಥಿರಾಸ್ತಿ ಮಾರುಕಟ್ಟೆ ಮೌಲ್ಯ 20.48 ಕೋಟಿಯನ್ನು ಭದ್ರತೆಯನ್ನಾಗಿ ಪಡೆಯಲಾಗಿದೆ.

7. ಸಕ್ಕರೆ ದಾಸ್ತಾನು ಆಧಾರದ ಮೇಲೆ ದುಡಿಯುವ ಬಂಡವಾಳ ರೂ.10.00 ಕೋಟಿ ಮತ್ತು ರೂ.20.00 ಕೋಟಿ ಹಣವನ್ನು ಬಿಡುಗಡೆ ಮಾಡಿದ್ದು, ಬಿಡುಗಡೆ ಸಂದರ್ಭದಲ್ಲಿ ಸಕ್ಕರೆ ದಾಸ್ತಾನು ಇರುವ ಬಗ್ಗೆ ಖಾತರಿಪಡಿಸಿಕೊಂಡಿರುವ ಬಗ್ಗೆ ಬ್ಯಾಂಕಿನಲ್ಲಿ ದಾಖಲಾತಿ ಲಭ್ಯವಿರುವುದಿಲ್ಲ. ದಿನಾಂಕ: 16.05.2019 ಕ್ಕೆ ಬ್ಯಾಂಕಿನ ಅಧಿಕಾರಿಗಳು ಒದಗಿಸಿರುವ ದಾಖಲೆಗಳಲ್ಲಿ ಸಕ್ಕರೆ ದಾಸ್ತಾನು ಇರುವುದಿಲ್ಲ. ಇದನ್ನು **ಎಸ್-2(2)(ಎ) ಎಂದು ಗುರುತಿಸಿದೆ.**

3) ಈ ಸಾಲವನ್ನು ಕಾರ್ಖಾನೆಗೆ 3500 ಟಿಸಿಡಿ ಯಂತ್ರೋಪಕರಣ ಅಳವಡಿಸಲು ರೂ.50.00 ಕೋಟಿಯನ್ನು, 60 ಕೆಎಲ್‌ಪಿಡಿ ಡಿಸ್ಟಿಲರಿ ಪ್ಲಾಂಟ್‌ನ್ನು ಹಾಕಲು ರೂ.1.00 ಕೋಟಿಯನ್ನು ಮತ್ತು 3500 ಟಿಸಿಡಿ ಯಂತ್ರೋಪಕರಣ ಅಳವಡಿಸಲು ರೂ.18.00 ಕೋಟಿ ಮತ್ತು 20 ಮೆಗಾ ವ್ಯಾಟ್ ಜನರೇಟರ್ ಯಂತ್ರ ಅಳವಡಿಸಲು ಬಾಕಿಯಿದ್ದ ರೂ.7.04 ಕೋಟಿ ಹಣವನ್ನು ಬಿಡುಗಡೆ ಮಾಡಿದ್ದು, ಈ ಕಾಮಗಾರಿಗಳು ಪೂರ್ಣಗೊಂಡಿರುವ ಬಗ್ಗೆ ಕಾರ್ಖಾನೆಯಿಂದ ದೃಢೀಕರಣ ಪತ್ರ ಪಡೆದಿರುವ ಬಗ್ಗೆ ದಾಖಲಾತಿ ಬ್ಯಾಂಕ್‌ನಲ್ಲಿ ಲಭ್ಯವಿಲ್ಲ.

4) ದಿನಾಂಕ: 31-03-2019ರ ಅಂತ್ಯಕ್ಕೆ ಮೇಲೆ ನಮೂದಿಸಿರುವ ಸಾಲಗಳಲ್ಲಿ ಅಸಲು ಒಟ್ಟು ರೂ.46.19 ಕೋಟಿ ಮತ್ತು ರೂ.39.24 ಕೋಟಿ ಬಡ್ಡಿ ಒಟ್ಟು ರೂ.79.34 ಕೋಟಿ ಬಾಕಿ ಇರುತ್ತದೆ. ಈ ಸಾಲವು ಸುಸ್ಥಿಯಾಗಿದ್ದು, ದಿನಾಂಕ: 30-06-2017ರಲ್ಲಿ (ಎನ್‌ಪಿಎ) ವಸೂಲಾಗದ ಆಸ್ತಿ ಎಂದು ಬ್ಯಾಂಕಿನಿಂದ ಪರಿಗಣಿಸಲ್ಪಟ್ಟಿದೆ.

5) ಸುಸ್ಥಿ ಸಾಲದ ವಸೂಲಾತಿಗಾಗಿ ಬ್ಯಾಂಕಿನಿಂದ ಸರ್‌ಫೇಸಿಯಾ ಕಾಯ್ದೆ-2002ರ ರೀತ್ಯಾ ವಸೂಲಾತಿಗೆ ಕ್ರಮವಿಡಲಾಗಿದೆ.

ವಿವರಣೆಯನ್ನು ಎಸ್-2(2) ಎಂದು ಗುರುತಿಸಲಾಗಿದೆ.

3. ಬಾದಾಮಿ ಸಕ್ಕರೆ ಕಾರ್ಖಾನೆ,

1) ಈ ಕಾರ್ಖಾನೆಗೆ ಬ್ಯಾಂಕಿನಿಂದ ಟರ್ಮ್ ಲೋನ್ (ಅವಧಿ ಸಾಲ) ಮೊದಲನೇ ಬಾರಿಗೆ ರೂ.9.00 ಕೋಟಿಯನ್ನು ದಿನಾಂಕ: 25-11-2002ರಂದು, ಹೆಚ್ಚುವರಿಯಾಗಿ ಟರ್ಮ್ ಲೋನ್ ರೂ.1.66 ಕೋಟಿಗಳನ್ನು ದಿನಾಂಕ: 30-11-2005 ರಂದು ಬಿಡುಗಡೆ ಮಾಡಿ, ಒಟ್ಟು ರೂ.10.66 ಕೋಟಿ ಸಾಲವನ್ನು ನೀಡಿದೆ.

2) ಮೇಲ್ಕಂಡ ಸಾಲಗಳಿಗೆ ಕಾರ್ಖಾನೆ ಹೊಂದಿರುವ ಸ್ಥಿರಾಸ್ತಿಗಳಾದ ಭೂಮಿ ಮತ್ತು ಕಟ್ಟಡಗಳನ್ನು ಜಾಮೀನು ಪಡೆಯಲಾಗಿದೆ.

3) ಈ ಸಾಲವನ್ನು ಕಾರ್ಖಾನೆಗೆ 2500 ಟಿಸಿಡಿ ಯಂತ್ರೋಪಕರಣ ಮತ್ತು 18 ಮೆಗಾ ವ್ಯಾಟ್ ಜನರೇಟರ್ ಯಂತ್ರ ಅಳವಡಿಸಲು ಅಳವಡಿಸಲು ರೂ.9.00 ಕೋಟಿಯನ್ನು ಮತ್ತು 2500 ಟಿಸಿಡಿ ಯಂತ್ರೋಪಕರಣ ಮತ್ತು 18 ಮೆಗಾ ವ್ಯಾಟ್ ಜನರೇಟರ್ ಯಂತ್ರ ಅಳವಡಿಸುವ ಕಾರ್ಯ ಪೂರ್ಣಗೊಳಿಸಲು ರೂ.1.66 ಕೋಟಿ ಹಣವನ್ನು ಬಿಡುಗಡೆ ಮಾಡಿದ್ದು, ಈ ಕಾಮಗಾರಿಗಳು ಪೂರ್ಣಗೊಂಡಿರುವ ಬಗ್ಗೆ ಕಾರ್ಖಾನೆಯಿಂದ ದೃಢೀಕರಣ ಪತ್ರ ಪಡೆದಿರುವ ಬಗ್ಗೆ ದಾಖಲಾತಿ ಬ್ಯಾಂಕ್‌ನಲ್ಲಿ ಲಭ್ಯವಿಲ್ಲ.

4) ದಿನಾಂಕ: 31-03-2019ರ ಅಂತ್ಯಕ್ಕೆ ಮೇಲೆ ನಮೂದಿಸಿರುವ ಸಾಲಗಳಲ್ಲಿ ಅಸಲು ಒಟ್ಟು ರೂ.10.50 ಕೋಟಿ ಮತ್ತು ರೂ.26.58 ಕೋಟಿ ಬಡ್ಡಿ ಒಟ್ಟು ರೂ.37.08 ಕೋಟಿ ಬಾಕಿ ಇರುತ್ತದೆ. ಈ ಸಾಲವು ಸುಸ್ಥಿಯಾಗಿದ್ದು, ದಿನಾಂಕ: 01-10-2007ರಲ್ಲಿ (ಎನ್‌ಪಿಎ) ವಸೂಲಾಗದ ಆಸ್ತಿ ಎಂದು ಬ್ಯಾಂಕಿನಿಂದ ಪರಿಗಣಿಸಲ್ಪಟ್ಟಿದೆ.

5) ಸುಸ್ಥಿ ಸಾಲದ ವಸೂಲಾತಿಗಾಗಿ ಬ್ಯಾಂಕಿನಿಂದ ಸಹಕಾರಿ ಕಾಯ್ದೆ ಕಲಂ 70ರಡಿಯಲ್ಲಿ ದಾವೆ ದಾಖಲಿಸಿದ್ದು, ಪ್ರಗತಿಯಲ್ಲಿರುತ್ತದೆ.

ವಿವರಣೆಯನ್ನು **ಎಸ್-2(3)** ಎಂದು ಗುರುತಿಸಲಾಗಿದೆ.

4. **ಭವಾನಿ ಖಂಡಸಾರಿ ಸಕ್ಕರೆ ಕಾರ್ಖಾನೆ,**

1) ಈ ಕಾರ್ಖಾನೆಗೆ ಬ್ಯಾಂಕಿನಿಂದ ಟರ್ಮ್ ಲೋನ್ (ಅವಧಿ ಸಾಲ) ಮೊದಲನೇ ಬಾರಿಗೆ ರೂ.3.00 ಕೋಟಿಯನ್ನು ದಿನಾಂಕ: 24-10-2003 ರಿಂದ 30-12-2004ರವರೆಗೆ ಬಿಡುಗಡೆ ಮಾಡಿದೆ ಒಟ್ಟು ರೂ.3.00 ಕೋಟಿ ಸಾಲವನ್ನು ನೀಡಿದೆ.
2) ಮೇಲ್ಕಂಡ ಸಾಲಗಳಿಗೆ ಕಾರ್ಖಾನೆ ಹೊಂದಿರುವ ಸ್ಥಿರಾಸ್ತಿಗಳಾದ ಭೂಮಿ ಮತ್ತು ಕಟ್ಟಡಗಳನ್ನು ಜಾಮೀನು ಪಡೆಯಲಾಗಿದೆ.
3) ಈ ಸಾಲವನ್ನು ಕಾರ್ಖಾನೆಗೆ 500 ಆರ್‌ಟಿಸಿಡಿ ಯಿಂದ 1000 ಟಿಸಿಡಿ ಯಂತ್ರೋಪಕರಣ ಅಳವಡಿಸಲು ರೂ.3.00 ಕೋಟಿ ಹಣವನ್ನು ಬಿಡುಗಡೆ ಮಾಡಿದ್ದು, ಈ ಕಾಮಗಾರಿಗಳು ಪೂರ್ಣಗೊಂಡಿರುವ ಬಗ್ಗೆ ಕಾರ್ಖಾನೆಯಿಂದ ದೃಢೀಕರಣ ಪತ್ರ ಪಡೆದಿರುವ ಬಗ್ಗೆ ದಾಖಲಾತಿ ಬ್ಯಾಂಕ್‌ನಲ್ಲಿ ಲಭ್ಯವಿಲ್ಲ.
4) ದಿನಾಂಕ: 31-03-2019ರ ಅಂತ್ಯಕ್ಕೆ ಮೇಲೆ ನಮೂದಿಸಿರುವ ಸಾಲಗಳಲ್ಲಿ ಅಸಲು ಒಟ್ಟು ರೂ.3.08 ಕೋಟಿ ಮತ್ತು ರೂ.9.62 ಕೋಟಿ ಬಡ್ಡಿ ಒಟ್ಟು ರೂ.12.70 ಕೋಟಿ ಬಾಕಿ ಇರುತ್ತದೆ. ಈ ಸಾಲವು ಸುಸ್ಥಿಯಾಗಿದ್ದು, ದಿನಾಂಕ: 31-03-2006ರಲ್ಲಿ (ಎನ್‌ಪಿಎ) ವಸೂಲಾಗದ ಆಸ್ತಿ ಎಂದು ಬ್ಯಾಂಕಿನಿಂದ ಪರಿಗಣಿಸಲ್ಪಟ್ಟಿದೆ.
5) ಸುಸ್ಥಿ ಸಾಲದ ವಸೂಲಾತಿಗಾಗಿ ಬ್ಯಾಂಕಿನಿಂದ ಸಹಕಾರಿ ಕಾಯ್ದೆ ಕಲಂ 70ರಡಿಯಲ್ಲಿ ದಾವೆ ದಾಖಲಿಸಿದ್ದು, ಆದೇಶ ಪಡೆಯಲಾಗಿದೆ. ಮತ್ತು ವಸೂಲಾತಿಗೆ ಅಮಲ್ಜಾರಿ ಪಡೆಯಲಾಗಿದ್ದು, ನಂತರ 3 ರಿಂದ 4 ಬಾರಿ ಹರಾಜು ಪ್ರಕ್ರಿಯೆ ನಡೆಸಿದ್ದು, ಹರಾಜಿನಲ್ಲಿ ಯಾರು ಸಹ ಭಾಗವಹಿಸಿರುವುದಿಲ್ಲ.

ವಿವರಣೆಯನ್ನು ಎಸ್-2(4) ಎಂದು ಗುರುತಿಸಲಾಗಿದೆ

5. **ಬೀಳಗಿ ಸಕ್ಕರೆ ಕಾರ್ಖಾನೆ**

ಬ್ಯಾಂಕಿನ ಆಡಳಿತ ಮಂಡಳಿ ಸಭೆ ದಿನಾಂಕ: 21-07-2018ರ ಅಜೆಂಡಾ ಸಂ: 8ರಲ್ಲಿ ರೂ.75.00 ಕೋಟಿ ದುಡಿಯುವ ಬಂಡವಾಳವಾಗಿ ಚರಾಸ್ತಿ (ಸಕ್ಕರೆ ದಾಸ್ತಾನು) ಆಧಾರದ ಮೇಲೆ ಬಿಡುಗಡೆ ಮಾಡಲು ತೀರ್ಮಾನಿಸಲಾಗಿದೆ. ದಿನಾಂಕ: 27-07-2018ರ ಸಾಲ ಮಂಜೂರಾತಿ ಆದೇಶದಲ್ಲಿ ರೂ.75.00 ಕೋಟಿ ಚರಾಸ್ತಿ ಆಧಾರದ ಮೇಲೆ ಸಾಲ ಬಿಡುಗಡೆ ಮಾಡುವಾಗ ಶೇ.1/3ರಷ್ಟು ಕ್ಲೀ-ಆಪರೇಟಿವ್ ಲೋನ್ ಆಗಿ ಹಾಗೂ ಶೇ.2/3 ಸ್ಟಾಕ್ ಸುಗರ್ ಆಧಾರದ ಮೇಲೆ ಬಿಡುಗಡೆಗೊಳಿಸಲಾಗಿದೆ. ತದ ನಂತರ ದಿನಾಂಕ: 18-08-2018ರಂದು ರೂ.75.00 ಕೋಟಿಯಲ್ಲಿ ಶೇ.2/3 ಪ್ಲೆಡ್ಜ್ ಲೋನ್ (ಅಡಮಾನ ಸಾಲ) ಎಂದು ಇರುವುದನ್ನು ತಿದ್ದುಪಡಿ ಮಾಡಿ ಕ್ಲೀ-ಆಪರೇಟಿವ್ ಲೋನ್ ಆಗಿ ಬಿಡುಗಡೆ ಮಾಡಿದೆ. ಒಟ್ಟಾರೆ ರೂ.75.00 ಕೋಟಿಯನ್ನು ಸಹ ಯಾವುದೇ ಸ್ಥಿರಾಸ್ತಿ-ಚರಾಸ್ತಿ ಅಡಮಾನ ಮಾಡಿಕೊಳ್ಳದೇ ಬಿಡುಗಡೆ ಮಾಡಿರುವುದು ಕಂಡು ಬಂದಿದೆ. ಇದು ಬ್ಯಾಂಕಿನ ಪಾಲಿಸಿ ಅಂಡ್ ಆಪರೇಷನಲ್ ಗೈಡ್‌ಲೈನ್ಸ್ ಫಾರ್ ಸುಗರ್ ಸೆಕ್ಟರ್ ಕಂಡಿಕೆ: II(2)ನ್ನು ಪಾಲನೇ ಮಾಡಿರುವುದಿಲ್ಲ. ಹಾಗೂ ನಬಾರ್ಡ್‌ನ ಸುತ್ತೋಲೆ ಸಂ: NB.PCD.CMA/H-305/A-75/2001-02, Dt: 06-08-2001 ರ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ.

ಬ್ಯಾಂಕಿನ ಪಾಲಿಸಿ ಅಂಡ್ ಆಪರೇಷನಲ್ ಗೈಡ್‌ಲೈನ್ಸ್ ಫಾರ್ ಸುಗರ್ ಸೆಕ್ಟರ್ ಇದನ್ನು ಎಸ್-2(5) ಎಂದು ಗುರುತಿಸಲಾಗಿದೆ

6. **ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ, ದೊಡ್ಡಬಾತಿ**

1) ಈ ಕಾರ್ಖಾನೆಗೆ ಬ್ಯಾಂಕಿನಿಂದ ದುಡಿಯುವ ಬಂಡವಾಳ ರೂ.13.00 ಕೋಟಿಗಳನ್ನು ದಿನಾಂಕ: 14-12-2000 ರಿಂದ 16-03-2012ರ ವಿವಿಧ ದಿನಾಂಕಗಳಲ್ಲಿ ಸಾಲವನ್ನು ಬಿಡುಗಡೆ ಮಾಡಿದೆ. ಈ ಬ್ಯಾಂಕನ್ನು ಒಳಗೊಂಡಂತೆ ಸಮೂಹ ಬ್ಯಾಂಕುಗಳಿಂದಲೂ ಸಹ ಸಾಲವನ್ನು ನೀಡಲಾಗಿರುತ್ತದೆ.

2) ಮೇಲ್ಕಂಡ ಸಾಲವನ್ನು ಕಾರ್ಖಾನೆ ಹೊಂದಿರುವ 2001-02ನೇ ಸಾಲಿನಲ್ಲಿ ಇದ್ದ ಸಕ್ಕರೆ ದಾಸ್ತಾನನ್ನು ಅಡಮಾನ ಮಾಡಿಕೊಂಡಿರುತ್ತದೆ.
3) ಸಕ್ಕರೆ ದಾಸ್ತಾನು ಆಧಾರದ ಮೇಲೆ ದುಡಿಯುವ ಬಂಡವಾಳ ರೂ.13.00 ಕೋಟಿ ಹಣವನ್ನು ಬಿಡುಗಡೆ ಮಾಡಿದ್ದು, ಬಿಡುಗಡೆ ಸಂದರ್ಭದಲ್ಲಿ ಸಕ್ಕರೆ ದಾಸ್ತಾನು ಇರುವ ಬಗ್ಗೆ ಖಾತರಿಪಡಿಸಿಕೊಂಡಿರುವ ಬಗ್ಗೆ ಬ್ಯಾಂಕಿನಲ್ಲಿ ದಾಖಲಾತಿ ಲಭ್ಯವಿರುವುದಿಲ್ಲ.
4) ದಿನಾಂಕ: 31-03-2019ರ ಅಂತ್ಯಕ್ಕೆ ಮೇಲೆ ನಮೂದಿಸಿರುವ ಸಾಲಗಳಲ್ಲಿ ಅಸಲು ಒಟ್ಟು ರೂ.956.46 ಲಕ್ಷ ಮತ್ತು ರೂ.1680.76 ಲಕ್ಷ ಬಡ್ಡಿ ಒಟ್ಟು ರೂ.2637.18 ಲಕ್ಷ ಬಾಕಿ ಇರುತ್ತದೆ. ಈ ಸಾಲವು ಸುಸ್ಥಿಯಾಗಿದ್ದು, ದಿನಾಂಕ: 30-12-2013ರಲ್ಲಿ (ಎನ್‌ಪಿಎ) ವಸೂಲಾಗದ ಆಸ್ತಿ ಎಂದು ಬ್ಯಾಂಕಿನಿಂದ ಪರಿಗಣಿಸಲ್ಪಟ್ಟಿದೆ.
5) ಸುಸ್ಥಿ ಸಾಲದ ವಸೂಲಾತಿಗಾಗಿ ಬ್ಯಾಂಕಿನಿಂದ ಸಹಕಾರಿ ಕಾಯ್ದೆ ಕಲಂ 70ರಡಿಯಲ್ಲಿ ದಾವೆ ದಾಖಲಿಸಿದ್ದು, ವಸೂಲಾತಿಗೆ ಆದೇಶ ಪಡೆಯಲಾಗಿದೆ. ಈ ಕ್ರಮದ ವಿರುದ್ಧವಾಗಿ ಕರ್ನಾಟಕ ಗೌರವ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 15149/2018 (ಸಿಎಸ್) ಇತ್ಯರ್ಥಕ್ಕೆ ಬಾಕಿಯಿರುತ್ತದೆ.

ವಿವರಣೆಯನ್ನು **ಎಸ್-2(6)** ಎಂದು ಗುರುತಿಸಲಾಗಿದೆ

7. ಘಟಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ, ಗೋಕಾಕ್.

1) ಈ ಕಾರ್ಖಾನೆಗೆ ಬ್ಯಾಂಕಿನಿಂದ ದುಡಿಯುವ ಬಂಡವಾಳ ರೂ.12.12 ಕೋಟಿಯನ್ನು ದಿನಾಂಕ: 01-10-2006ರಂದು ಬಿಡುಗಡೆ ಮಾಡಿದೆ ಒಟ್ಟು ರೂ.12.12 ಕೋಟಿ ಸಾಲವನ್ನು ನೀಡಿದೆ.
2) ಮೇಲ್ಕಂಡ ಸಾಲವನ್ನು ಕಾರ್ಖಾನೆ ಹೊಂದಿರುವ 2001-02ನೇ ಸಾಲಿನಲ್ಲಿ ಇದ್ದ ಸಕ್ಕರೆ ದಾಸ್ತಾನನ್ನು ಅಡಮಾನ ಮಾಡಿಕೊಂಡಿರುತ್ತದೆ.
3) ಸಕ್ಕರೆ ದಾಸ್ತಾನು ಆಧಾರದ ಮೇಲೆ ದುಡಿಯುವ ಬಂಡವಾಳ ರೂ.12.12 ಕೋಟಿ ಹಣವನ್ನು ಬಿಡುಗಡೆ ಮಾಡಿದ್ದು, ಬಿಡುಗಡೆ ಸಂದರ್ಭದಲ್ಲಿ ಸಕ್ಕರೆ ದಾಸ್ತಾನು ಇರುವ ಬಗ್ಗೆ ಖಾತರಿಪಡಿಸಿಕೊಂಡಿರುವ ಬಗ್ಗೆ ಬ್ಯಾಂಕಿನಲ್ಲಿ ದಾಖಲಾತಿ ಲಭ್ಯವಿರುವುದಿಲ್ಲ.
4) ದಿನಾಂಕ: 31-03-2019ರ ಅಂತ್ಯಕ್ಕೆ ಮೇಲೆ ನಮೂದಿಸಿರುವ ಸಾಲಗಳಲ್ಲಿ ಅಸಲು ಒಟ್ಟು **ರೂ.1165.01** ಲಕ್ಷ ಮತ್ತು ರೂ.2910.05 ಲಕ್ಷ ಬಡ್ಡಿ ಒಟ್ಟು ರೂ.4075.06 ಲಕ್ಷ ಬಾಕಿ ಇರುತ್ತದೆ. ಈ ಸಾಲವು ಸುಸ್ಥಿಯಾಗಿದ್ದು, ದಿನಾಂಕ: 30-12-2007ರಲ್ಲಿ (ಎನ್‌ಪಿಎ) ವಸೂಲಾಗದ ಆಸ್ತಿ ಎಂದು ಬ್ಯಾಂಕಿನಿಂದ ಪರಿಗಣಿಸಲ್ಪಟ್ಟಿದೆ.
5) ಸುಸ್ಥಿ ಸಾಲದ ವಸೂಲಾತಿಗಾಗಿ ಬ್ಯಾಂಕಿನಿಂದ ಸಹಕಾರಿ ಕಾಯ್ದೆ ಕಲಂ 70ರಡಿಯಲ್ಲಿ ದಾವೆ ದಾಖಲಿಸಿದ್ದು, ಆದೇಶ ಪಡೆಯಲಾಗಿದೆ. ಮತ್ತು ವಸೂಲಾತಿಗೆ ಅಮಲ್ಜಾರಿ ಪಡೆಯಲಾಗಿದ್ದು, ನಂತರದ ಪ್ರಕ್ರಿಯೆ ನಡೆಸಲು ಬಾಕಿಯಿರುತ್ತದೆ.

ವಿವರಣೆಯನ್ನು ಎಸ್-2(7) ಎಂದು ಗುರುತಿಸಲಾಗಿದೆ

8. ಭಾಗ್ಯಲಕ್ಷ್ಮಿ ಸಹಕಾರಿ ಸಕ್ಕರೆ ಕಾರ್ಖಾನೆ, ಖಾನಾಪುರ

1) ಈ ಕಾರ್ಖಾನೆಗೆ ಬ್ಯಾಂಕಿನಿಂದ ದುಡಿಯುವ ಬಂಡವಾಳ ರೂ.25.00 ಕೋಟಿಗಳನ್ನು ದಿನಾಂಕ: 04-03-2006ರಂದು ಸಾಲವನ್ನು ನೀಡಲಾಗಿರುತ್ತದೆ.
2) ಮೇಲ್ಕಂಡ ಸಾಲವನ್ನು ಸದರಿ ಸಂಸ್ಥೆಯಿಂದ ಯಾವುದೇ ಖಾತರಿ ಪಡೆಯದೇ ಸಾಲವನ್ನು ನೀಡಲಾಗಿದೆ.
3) ಕಾರ್ಖಾನೆಗೆ ಕಬ್ಬು ಸರಬರಾಜು ಮಾಡಿರುವ ರೈತರಿಗೆ ಹಣ ಪಾವತಿ ಮಾಡುವ ಉದ್ದೇಶಕ್ಕಾಗಿ ರೂ.25.00 ಕೋಟಿ ಸಾಲ ಪಡೆದಿದ್ದು, ಕಬ್ಬು ಸರಬರಾಜುದಾರರಿಗೆ ಈ ಹಣವನ್ನು ಪಾವತಿ ಮಾಡಿರುವ ಬಗ್ಗೆ ಕಾರ್ಖಾನೆಯಿಂದ ದೃಢೀಕರಣ ಪಡೆದಿರುವ ಬಗ್ಗೆ ದಾಖಲೆ ಲಭ್ಯವಿರುವುದಿಲ್ಲ.
4) ದಿನಾಂಕ: 31-03-2019ರ ಅಂತ್ಯಕ್ಕೆ ಮೇಲೆ ನಮೂದಿಸಿರುವ ಸಾಲಗಳಲ್ಲಿ ಅಸಲು ಒಟ್ಟು ರೂ.5.20 ಕೋಟಿ ಮತ್ತು ರೂ.5.23 ಕೋಟಿ ಬಡ್ಡಿ ಒಟ್ಟು ರೂ.104.39 ಕೋಟಿ ಬಾಕಿ

ಇರುತ್ತದೆ. ಈ ಸಾಲವು ಸುಸ್ಥಿಯಾಗಿದ್ದು, ದಿನಾಂಕ: 18-01-2018ರಲ್ಲಿ (ಎನ್‌ಪಿಎ) ವಸೂಲಾಗದ ಆಸ್ತಿ ಎಂದು ಬ್ಯಾಂಕಿನಿಂದ ಪರಿಗಣಿಸಲ್ಪಟ್ಟಿದೆ.

5) ಸುಸ್ಥಿ ಸಾಲದ ವಸೂಲಾತಿಗಾಗಿ ಬ್ಯಾಂಕಿನಿಂದ ಸಹಕಾರಿ ಕಾಯ್ದೆ ಕಲಂ 70ರಡಿಯಲ್ಲಿ ದಾವೆ ದಾಖಲಿಸಿದ್ದು, ವಸೂಲಾತಿಗೆ ಆದೇಶ ಪಡೆಯಲಾಗಿದೆ. ಈ ಕ್ರಮದ ವಿರುದ್ಧವಾಗಿ ಕಾರ್ಖಾನೆಯವರು ಗೌರವ ಸಿವಿಲ್ ನ್ಯಾಯಾಲಯ, ಖಾನಾಪುರದಲ್ಲಿ ಪ್ರಕರಣ ಸಂಖ್ಯೆ: 15/2015 ನವೆಂಬರ್ ಮಾಹೆಯಲ್ಲಿ ರೂ.43.01 ಕೋಟಿಗಳಿಗೆ ಪ್ರಕರಣ ದಾಖಲಿಸಿರುತ್ತಾರೆ.

ವಿವರಣೆಯನ್ನು ಎಸ್-2(8) ಎಂದು ಗುರುತಿಸಲಾಗಿದೆ

9. **ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ ಹಳ್ಳಿಖೇಡ್**

1) ಈ ಕಾರ್ಖಾನೆಗೆ ಬ್ಯಾಂಕಿನಿಂದ ಟರ್ಮ್ ಲೋನ್ (ಅವಧಿ ಸಾಲ) ಮೊದಲನೇ ಬಾರಿಗೆ ರೂ.15.00 ಕೋಟಿಯನ್ನು ದಿನಾಂಕ: 26-11-2011ರಂದು, ಎರಡನೇ ಬಾರಿಗೆ ರೂ.15.00 ಕೋಟಿಗಳನ್ನು ದಿನಾಂಕ: 02-12-2013ರಂದು, ದುಡಿಯುವ ಬಂಡವಾಳ ರೂ.10.00 ಕೋಟಿಗಳನ್ನು ದಿನಾಂಕ: 09-02-2016ರಂದು ಬಿಡುಗಡೆ ಮಾಡಿ, ಒಟ್ಟು ರೂ.40.00 ಕೋಟಿ ಸಾಲವನ್ನು ನೀಡಿದೆ.

2) ಮೇಲ್ಕಂಡ ಸಾಲಗಳಿಗೆ ಕಾರ್ಖಾನೆ ಹೊಂದಿರುವ ಸ್ಥಿರಾಸ್ತಿಗಳಾದ ಭೂಮಿ ಮತ್ತು ಕಟ್ಟಡಗಳನ್ನು ಜಾಮೀನು ಪಡೆಯಲಾಗಿದೆ.

3) ಈ ಸಾಲವನ್ನು ಕಾರ್ಖಾನೆಯ ಯಂತ್ರೋಪಕರಣಗಳನ್ನು ನವೀಕರಿಸಲು ನೀಡಿದ್ದು, ನವೀಕರಿಸಿದ ಬಗ್ಗೆ ಕಾರ್ಖಾನೆಯಿಂದ ದೃಢೀಕರಣ ಪತ್ರ ಪಡೆದಿರುವ ಬಗ್ಗೆ ದಾಖಲಾತಿ ಬ್ಯಾಂಕ್‌ನಲ್ಲಿ ಲಭ್ಯವಿಲ್ಲ.

4) ದಿನಾಂಕ: 31-03-2019ರ ಅಂತ್ಯಕ್ಕೆ ಮೇಲೆ ನಮೂದಿಸಿರುವ ಸಾಲಗಳಲ್ಲಿ ಅಸಲು ಒಟ್ಟು ರೂ.34.16 ಕೋಟಿ ಮತ್ತು ರೂ.23.39 ಕೋಟಿ ಬಡ್ಡಿ ಒಟ್ಟು ರೂ.57.55 ಕೋಟಿ ಬಾಕಿ ಇರುತ್ತದೆ. ಈ ಸಾಲವು ಸುಸ್ಥಿಯಾಗಿದ್ದು, ದಿನಾಂಕ: 27-05-2014ರಲ್ಲಿ (ಎನ್‌ಪಿಎ) ವಸೂಲಾಗದ ಆಸ್ತಿ ಎಂದು ಬ್ಯಾಂಕಿನಿಂದ ಪರಿಗಣಿಸಲ್ಪಟ್ಟಿದೆ.

5) ಸುಸ್ಥಿ ಸಾಲದ ವಸೂಲಾತಿಗಾಗಿ ಬ್ಯಾಂಕಿನಿಂದ ಸಹಕಾರಿ ಕಾಯ್ದೆ ಕಲಂ 70ರಡಿಯಲ್ಲಿ ದಾವೆ ದಾಖಲಿಸಿದ್ದು, ವಸೂಲಾತಿಗೆ ಆದೇಶ ಪಡೆಯಲಾಗಿದೆ. ಇ.ಪಿ ಪಡೆಯಲು ಬಾಕಿಯಿದೆ. ಮತ್ತು ಸರ್ಕಾರವು ಗ್ಯಾರಂಟಿ ನೀಡಿದ್ದು, ಇದನ್ನು ತೆರವುಗೊಳಿಸಲು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯೊಂದಿಗೆ ಪತ್ರ ವ್ಯವಹಾರವನ್ನು ದಿನಾಂಕ: 21-06-2018ರಂದು ನಡೆಸಿರುತ್ತಾರೆ.

ವಿವರಣೆಯನ್ನು ಎಸ್-2(9) ಎಂದು ಗುರುತಿಸಲಾಗಿದೆ

<u>ಅಭಿಪ್ರಾಯ:-</u>

1. ಬ್ಯಾಂಕಿನಿಂದ ಹಲವು ಸಕ್ಕರೆ ಕಾರ್ಖಾನೆಗೆ ಹೊಸದಾಗಿ ಸಾಲವನ್ನು ಮಂಜೂರು ಮಾಡಿ ಈ ಸಾಲವನ್ನು ಕಾರ್ಖಾನೆಗಳು ಪಡೆದ ಹಿಂದಿನ ಸಾಲಗಳು ಎನ್‌ಪಿಎ ಆದ ಕಾರಣ ಸಾಲವನ್ನು ಮರು ಪಾವತಿಸುವ ಉದ್ದೇಶಕ್ಕಾಗಿ ಹೊಸದಾಗಿ ಸಾಲವನ್ನು ಮಂಜೂರು ಮಾಡಿರುತ್ತದೆ. ಈ ಸಾಲಗಳು ಸುಸ್ತಿಯಾಗಿ ಎನ್‌ಪಿಎ ಆಗಲು ಕಾರಣವಾಗಿರುತ್ತದೆ. ಇದರಿಂದಾಗಿ ದಿನಾಂಕ: 31-03-2018ರಲ್ಲಿ ಎನ್‌ಪಿಎ ಶೇ.39.73% ಇದ್ದು, ದಿನಾಂಕ: 31-03-2019ಕ್ಕೆ ಎನ್‌ಪಿಎ ಶೇ.19.07% ಕಡಿಮೆಯಾಗಲು ಕಾರಣವಾಗಿದೆ.

2. ಕಾರ್ಖಾನೆಗಳಿಗೆ ಬಿಡುಗಡೆಯಾದ ಸಾಲಗಳು ಕಾರ್ಖಾನೆಯ ಯಂತ್ರೋಪಕರಣ, ಕಾರ್ಖಾನೆ ವಿಸ್ತರಿಸಲು, ಹೆಚ್ಚಿನ ವಿದ್ಯುತ್ ಸಂಪರ್ಕ ಪಡೆಯಲು ಸಾಲಗಳನ್ನು ಪಡೆದಿದ್ದು, ಈ ಉದ್ದೇಶಕ್ಕಾಗಿ ಪಡೆದ ಸಾಲಗಳು ಸದುಪಯೋಗಪಡಿಸಿಕೊಂಡಿರುವ ಬಗ್ಗೆ ಬ್ಯಾಂಕಿನಿಂದ ಖಾತರಿಪಡಿಸಿಕೊಂಡಿರುವುದಿಲ್ಲವಾದ್ದರಿಂದ ಈ ಮೇಲಿನ ಉದ್ದೇಶಕ್ಕಾಗಿ ಪಡೆದ ಸಾಲವು ಸದುಪಯೋಗವಾಗದೆ ಕಾರ್ಖಾನೆಗಳಲ್ಲಿ ಉತ್ಪಾದನೆಯು ಕುಂಠಿತವಾಗಿರುವುದರಿಂದ ಪಡೆದ ಸಾಲವು ಸುಸ್ತಿಯಾಗಿ ಎನ್‌ಪಿಎ ಆಗಲು ಕಾರಣವಾಗಿದೆ.
3. ದಿನಾಂಕ: 21-04-2018 ರಿಂದ 31-03-2019ರ ವರೆಗೆ ಸಹಕಾರಿ ಮತ್ತು ಖಾಸಗಿ ಸಕ್ಕರೆ ಕಾರ್ಖಾನೆಗಳಿಗೆ ದುಡಿಯುವ ಬಂಡವಾಳ ಸಾಲವನ್ನು ಪ್ರೀ-ಆಪರೇಟಿವ್ ಲೋನ್ ಆಗಿ ನೀಡಲಾಗಿರುತ್ತದೆ. ಈ ರೀತಿಯಾಗಿ ನೀಡಿರುವ ಸಾಲಗಳಲ್ಲಿ ಒಟ್ಟು 20 ಸಹಕಾರಿ ಮತ್ತು ಸಹಕಾರೇತರ ಕಾರ್ಖಾನೆಗಳಿಗೆ ಒಟ್ಟಾರೆ ರೂ. 898.15 ಕೋಟಿಗಳ ಮೊತ್ತವನ್ನು ಮಂಜೂರು ಮಾಡಲಾಗಿರುತ್ತದೆ. ಬ್ಯಾಂಕಿನಿಂದ ಕಾರ್ಖಾನೆಗಳಲ್ಲಿ ಸಕ್ಕರೆ ದಾಸ್ತಾನು ಹೊಂದಿರುವ ಬಗ್ಗೆ ದೃಢೀಕರಣ ಪಡೆಯದೇ ಸಾಲವನ್ನು ನೀಡಲಾಗಿರುತ್ತದೆ. ಇಂತಹ ಸಾಲಗಳು ಬ್ಯಾಂಕಿಗೆ ಸುಸ್ತಿಯಾಗುವ ಸಾಧ್ಯತೆ ಇರುತ್ತದೆ.
4. ಬ್ಯಾಂಕಿನ ಬೈಲಾ ಹಾಗೂ ಸಾಲ ನಿಯಮಾವಳಿ ರೀತ್ಯಾ ಮ್ಯಾಚಿಂಗ್ ಷೇರು ಹಾಗೂ ನಿರ್ವಹಣಾ ವೆಚ್ಚ (ಪ್ರೋಸೆಸಿಂಗ್ ಫೀ) ಕಡಿಮೆ ವಸೂಲಿ ಮಾಡಿರುವುದು ಕಂಡುಬರುತ್ತದೆ. ಈ ವಸೂಲಿ ಮೊತ್ತವನ್ನು ಸಂಬಂಧಪಟ್ಟವರಿಂದ ವಸೂಲಿ ಮಾಡಿಕೊಳ್ಳಲು ಕ್ರಮವಹಿಸಬಹುದಾಗಿದೆ.
5. ಸಾವರಿನ್, ಸೌಭಾಗ್ಯಲಕ್ಷ್ಮಿ ಸಕ್ಕರೆ ಕಾರ್ಖಾನೆಗಳಿಗೆ ಸಕ್ಕರೆ ದಾಸ್ತಾನು ಆಧಾರದ ಮೇಲೆ ದುಡಿಯುವ ಬಂಡವಾಳವಾಗಿ ಸಾಲವನ್ನು ಮಂಜೂರು ಮಾಡಲಾಗಿದೆ. ಆದರೆ, ಮಂಜೂರಾತಿ ಮಾಡುವ ಪೂರ್ವದಲ್ಲಿಯಾಗಲೀ ಅಥವಾ ತದನಂತರವಾಗಲೀ ಸಕ್ಕರೆ ದಾಸ್ತಾನು ಇರುವ ಬಗ್ಗೆ ಯಾವುದೇ ದಾಖಲಾತಿಗಳು ಕಡತದಲ್ಲಿ ಲಭ್ಯವಿರುವುದಿಲ್ಲ.
6. ಬೀಳಗಿ ಸಕ್ಕರೆ ಕಾರ್ಖಾನೆಗೆ ರೂ. 75.00 ಕೋಟಿಗಳ ಸಕ್ಕರೆ ದಾಸ್ತಾನು ಆಧಾರದ ಮೇಲೆ ದುಡಿಯುವ ಬಂಡವಾಳವಾಗಿ ಆಡಳಿತ ಮಂಡಲಿ ಸಭೆಯಲ್ಲಿ ಮಂಜೂರಾತಿ ನೀಡಲಾಗಿದೆ. ತದನಂತರ, ಸಂಪೂರ್ಣ 75.00 ಕೋಟಿ ಸಾಲವನ್ನು ಪ್ರೀ ಆಪರೇಟಿವ್ ಸಾಲವಾಗಿ ಪರಿವರ್ತಿಸಲಾಗಿದೆ. ಇದಕ್ಕೆ ಯಾವುದೇ ಭದ್ರತೆ ಪಡೆದಿರುವುದಿಲ್ಲ.

ಸಕ್ಕರೆ ಕಾರ್ಖಾನೆಗಳಿಗೆ ಎಲ್ಲಾ ರೀತಿಯ ಸಾಲಗಳನ್ನು ಮಂಜೂರು ಮಾಡುವಾಗ ಅಧಿಕಾರಿಗಳ ಪರಿಶೀಲನೆ, ಟಿಪ್ಪಣಿಯೊಂದಿಗೆ ಕಾರ್ಯನಿರ್ವಾಹಕ ಸಮಿತಿ /ಆಡಳಿತ ಮಂಡಲಿಗೆ ಸಲ್ಲಿಸಿ ಮಂಜೂರಾತಿ ಮಾಡಲಾಗುತ್ತದೆ. ಆಡಳಿತ ಮಂಡಲಿ ಮಂಜೂರಾತಿಯ ನಂತರ ಅಧಿಕಾರಿಗಳು ದಾಖಲೆಗಳನ್ನು,ಭದ್ರತೆಗಳನ್ನು ಮತ್ತು ಇತರೆ ಕಾನೂನು ಅವಶ್ಯಕತೆಗಳನ್ನು ಪೂರೈಸಿಕೊಂಡು ಸಾಲ ಬಿಡುಗಡೆ ಮಾಡಬೇಕಾಗಿರುತ್ತದೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಮಾಹಿತಿಯನ್ನು, ದಾಖಲೆಗಳನ್ನು ಪರಿಶೀಲಿಸಿ ಒದಗಿಸಲಾಗಿದೆ. ಸಹಕಾರ ಕಾಯ್ದೆ ಕಲಂ ಗಳಂತೆ ಉನ್ನತ ಮಟ್ಟದ ವಿಚಾರಣೆಗೆ ಆದೇಶಿಸಿ ಮುಂದಿನ ಕ್ರಮವಿಡಬಹುದಾಗಿದೆ.

2. ಭದ್ರತಾ ಪತ್ರಗಳ ಮಾರಾಟ ಮತ್ತು ಖರೀದಿ (Securities):-

ಬ್ಯಾಂಕಿನ 6 ವರ್ಷದ ಅಂದರೆ 2013-14, 2014-15, 2015-16, 2016-17, 2017-18 ಮತ್ತು 2018-19ನೇ ಸಾಲುಗಳ ಹೂಡಿಕೆಗಳ ಖರೀದಿ ವ್ಯವಹಾರವನ್ನು ಪರಿಶೀಲಿಸಲಾಗಿದೆ. ಅದರ ವಿವರವನ್ನು ಅನುಬಂಧ-1, 2 ಮತ್ತು 3ರಲ್ಲಿ ಲಗತ್ತಿಸಿದೆ.

2013-*14ನೇ ಸಾಲು:*

2013-14ನೇ ಸಾಲಿನಲ್ಲಿ ಒಟ್ಟು 500.23 ಕೋಟಿ ರೂ.ಗಳ SLR ದಿನಾಂಕ: 27-05-2013, 18-06-2013, 02-07-2013 ರಂದು ಖರೀದಿ ಮಾಡಲಾಗಿದ್ದು, ಇದನ್ನು secondary ಮಾರ್ಕೆಟ್‌ನಲ್ಲಿ AFCO, Trend with Consultancy Ltd., RS CO-OPERATIVE BANK ರವರಿಂದ ಖರೀದಿಸಲಾಗಿದೆ. FIMDA ದರಕ್ಕೂ ನೈಜ ಖರೀದಿ ದರಕ್ಕೂ ಕ್ರಮವಾಗಿ ಶೇ.2.39%, 2.70, 2.55, 3.78, 3.78, 3.50, 3.63, 3.21, 3.31, 3.07, 3.41, 2.91, ಮತ್ತು 3.40%, ವ್ಯತ್ಯಾಸ ಇರುವುದನ್ನು ಗಮನಿಸಲಾಗಿದೆ.

2014-15ನೇ ಸಾಲು:

2014-15ನೇ ಸಾಲಿನಲ್ಲಿ ಖರೀದಿಸಿರುವುದಿಲ್ಲ.

2015-16ನೇ ಸಾಲು:

2015-16ನೇ ಸಾಲಿನಲ್ಲಿ ಒಟ್ಟು ರೂ.104.98 ಕೋಟಿಗಳ SLR ದಿನಾಂಕ: 11-12-2015ರಂದು ಖರೀದಿ ಮಾಡಲಾಗಿದ್ದು, ಇದನ್ನು secondary ಮಾರ್ಕೆಟ್‌ನಲ್ಲಿ Trendwith Consultancy Ltd., ರವರಿಂದ ಖರೀದಿಸಲಾಗಿದೆ. FIMDA ದರಕ್ಕೂ ನೈಜ ಖರೀದಿ ದರಕ್ಕೂ ಕ್ರಮವಾಗಿ ಶೇ.2.50%, ಮತ್ತು 2.61%, ವ್ಯತ್ಯಾಸ ಇರುವುದನ್ನು ಗಮನಿಸಲಾಗಿದೆ. Non-SLR ಅಡಿ ರೂ.212.88 ಕೋಟಿಗಳನ್ನು Trendwith Consultancy Ltd.,ರವರಿಂದ secondary ಮಾರ್ಕೆಟ್‌ನಿಂದ ಖರೀದಿ ಮಾಡಲಾಗಿದೆ. FIMDA ದರಕ್ಕೂ ನೈಜಖರೀದಿ ದರಕ್ಕೂ ಕ್ರಮವಾಗಿ ಶೇ.3.80%, 4.45%, 4.2%, 4.5%, 2.25% ವ್ಯತ್ಯಾಸ ಇರುವುದನ್ನು ಗಮನಿಸಿದೆ.

ಸದರಿ ಸಾಲಿನಲ್ಲಿ ರೂ.100 ಕೋಟಿ SLR ಹೂಡಿಕೆಯಲ್ಲಿ ಬ್ಯಾಂಕ್‌ಗೆ ರೂ.1.36 ಕೋಟಿಗಳ ನಷ್ಟ ಉಂಟಾಗಿದ್ದು, ಇದನ್ನು ನಬಾರ್ಡ್ ನಿರೀಕ್ಷಣಾ ವರದಿಯಲ್ಲಿಯೂ ಸಹ ನಮೂದಿಸಿರುತ್ತಾರೆ.

2016-17ನೇ ಸಾಲು:

2016-17ನೇ ಸಾಲಿನಲ್ಲಿ ಎಸ್.ಎಲ್.ಆರ್. ಅಡಿಯಲ್ಲಿ ಒಟ್ಟು 14 ಖರೀದಿಗಳನ್ನು ಪ್ರತ್ಯೇಕ ದಿನಗಳಂದು ಕೈಗೊಂಡಿದ್ದು ಒಟ್ಟು ರೂ.851.82 ಕೋಟಿಗಳ ವ್ಯವಹಾರ ನಡೆಸಲಾಗಿದೆ. ಈ ಪೈಕಿ 12 ಪ್ರಕರಣಗಳಲ್ಲಿ ಪ್ರೈಮರಿ ಖರೀದಿದಾರರಿಂದ ಖರೀದಿಸಿದ್ದು, ಕೇವಲ 2 ಪ್ರಕರಣಗಳಲ್ಲಿ ಮಾತ್ರ ಸೆಕೆಂಡರಿ ಖರೀದಿದಾರರಿಂದ ಒಟ್ಟು ರೂ.105.24 ಕೋಟಿ JM Global Equities Pvt

Ltd., ರವರಿಂದ ದಿನಾಂಕ: 11-7-2016 ಮತ್ತು 19-5-2017ರಂದು ಖರೀದಿ ಮಾಡಲಾಗಿದೆ. FIMDA ದರಕ್ಕೂ ನೈಜ ಖರೀದಿ ದರಕ್ಕೂ 4.24% ಹಾಗೂ 3.07% ವ್ಯತ್ಯಾಸವಿದ್ದು, Investment policy ಕಂಡಿಕೆ ಸಂಖ್ಯೆ 12.6 ರೀತ್ಯಾ ನಿಗದಿತ ಶೇ.2%ನ್ನು ಮೀರಿ ಖರೀದಿ ಮಾಡಿರುವುದು ಆಕ್ಷೇಪಣೀಯ. Non-SLR ಅಡಿ 103.75 ಕೋಟಿ ರೂ.ಗಳನ್ನು AFCO Consultancy Ltd., ರವರಿಂದ ದಿನಾಂಕ:07-04-2016 ರಿಂದ ಖರೀದಿಸಲಾಗಿದೆ. ಸದರಿ ಬಾಂಡುಗಳು ದಿನಾಂಕ: 15-7-2016 ರಂದು ಸ್ವೀಕೃತವಾಗಿದ್ದು, ಬಡ್ಡಿಯನ್ನು ದಿನಾಂಕ: 7-4-2016 ರಿಂದಲೇ ನೀಡಿರುವುದನ್ನು ಗಮನಿಸಿದೆ. ಸದರಿ ಸಾಲಿನಲ್ಲಿ 200 ಕೋಟಿ SLR ಹಾಗೂ Non-SLR ಹೂಡಿಕೆಯಲ್ಲಿ ಬ್ಯಾಂಕ್‌ಗೆ 19.91 ಕೋಟಿರೂ.ಗಳ ನಷ್ಟ ಉಂಟಾಗಿದ್ದು, ಇದನ್ನು ನಬಾರ್ಡ್ 2016-17ನೇ ಸಾಲಿನ ನಿರೀಕ್ಷಣಾ ವರದಿಯಲ್ಲಿಯೂ ಸಹ ನಮೂದಿಸಿರುತ್ತಾರೆ.

2017-18ನೇ ಸಾಲು:

2017-18ನೇ ಸಾಲಿನಲ್ಲಿ ಒಟ್ಟು ರೂ.1,088-42 ಕೋಟಿಗಳ SLR ಅಡಿ 8 ಪ್ರತ್ಯೇಕ ಖರೀದಿ ಮಾಡಲಾಗಿದ್ದು, ಈ ಪೈಕಿ ರೂ.418-80ಕೋಟಿಗಳನ್ನು 2 ಪ್ರಕರಣಗಳಲ್ಲಿ ಸೆಕೆಂಡರಿ ಮಾರುಕಟ್ಟೆಯಲ್ಲಿ AFCO Investments Services Pvt Ltd., ರವರಿಂದ ದಿನಾಂಕ: 3-4-2017 ಹಾಗೂ Trendwith Consultancy Ltd.,ರವರಿಂದ ದಿನಾಂಕ 19-5-2017ರಂದು ಖರೀದಿಸಲಾಗಿದೆ. FIMDA ದರಕ್ಕೂ ನೈಜ ಖರೀದಿ ದರಕ್ಕೂ ಕ್ರಮವಾಗಿ ಶೇ.3.09 ಮೊತ್ತ 3.79% ವ್ಯತ್ಯಾಸ ಇರುವುದನ್ನು ಗಮನಿಸಿದ್ದು, ಇದು ನಿಗದಿತ ಶೇ.2%ನ್ನು ಮೀರಿದ್ದು, ಆಕ್ಷೇಪಣೀಯವಾಗಿರುತ್ತದೆ. ಸದರಿ ಸಾಲಿನಲ್ಲಿ 400 ಕೋಟಿ SLR ಹೂಡಿಕೆಯಲ್ಲಿ ಬ್ಯಾಂಕ್‌ಗೆ11.94 ಕೋಟಿರೂ.ಗಳ ನಷ್ಟ ಉಂಟಾಗಿದ್ದು, ಇದನ್ನು ನಬಾರ್ಡ್‌ನ 2017-18ನೇ ಸಾಲಿನ ನಿರೀಕ್ಷಣಾ ವರದಿಯಲ್ಲಿಯೂ ಸಹ ನಮೂದಿಸಿರುತ್ತಾರೆ.

<u>2018–19ನೇ ಸಾಲು:</u>

2018–19ನೇ ಸಾಲಿನಲ್ಲಿಒಟ್ಟು ರೂ.194.36 ಕೋಟಿಗಳ Non-SLR ಗಳನ್ನು ಸೆಕೆಂಡರಿ ಮಾರುಕಟ್ಟೆಯಿಂದ Trendwith Consultancy Ltd., ರವರಿಂದ ದಿನಾಂಕ: 6–7–2018ರಂದು ಖರೀದಿ ಮಾಡಲಾಗಿದೆ. FIMDA ದರಕ್ಕೂ ನೈಜಖರೀದಿ ದರಕ್ಕೂಕ್ರಮವಾಗಿ ಶೇ.3.87%, 3.28%, 3.86%, 3.81%, 3.91% ವ್ಯತ್ಯಾಸ ಇರುವುದನ್ನು ಗಮನಿಸಿದ್ದು, ಇದು ನಿಗದಿತ ಶೇ.2%ನ್ನು ಮೀರಿದ್ದು, ಆಕ್ಷೇಪಣೀಯವಾಗಿರುತ್ತದೆ. ಸದರಿ ಸಾಲಿನಲ್ಲಿ 200 ಕೋಟಿ Non-SLR ಹೂಡಿಕೆಯಲ್ಲಿ ಬ್ಯಾಂಕ್‌ಗೆ ರೂ.7.61 ಕೋಟಿಗಳ ನಷ್ಟ ಉಂಟಾಗಿದ್ದು, ಇದನ್ನು ನಬಾರ್ಡ್‌ನ 2017–18ನೇ ಸಾಲಿನ ನಿರೀಕ್ಷಣಾ ವರದಿಯಲ್ಲಿಯೂ ಸಹ ನಮೂದಿಸಿರುತ್ತಾರೆ. ನಬಾರ್ಡ್ ಮಾರ್ಗ ಸೂಚಿಯಂತೆ, ಬ್ಯಾಂಕಿನ ಹಿಂದಿನ ಆರ್ಥಿಕ ವರ್ಷದ ಒಟ್ಟು ಠೇವಣಿಯ ಶೇಕಡಾ 10% ಕ್ಕೆ ಮೀರದಂತೆ Non-SLRರಲ್ಲಿ ಹೂಡಿಕೆ ಮಾಡಬಹುದಾಗಿದ್ದು, ಅಂಕಿ ಅಂಶಗಳು ಕೆಳಕಂಡಂತಿದೆ.

(ರೂ.ಕೋಟಿಗಳಲ್ಲಿ)

ವರ್ಷ	ಸಾಲಾಖೈರಿಗೆಇದ್ದಠೇವಣಿ	ಕಾಲಂ 2ರ ಶೇ.10% ರಷ್ಟು	ವಾಸ್ತವವಾಗಿ ಹೂಡಿಕೆ ಮಾಡಿರುವುದು
2015–16	7201.47	720.14	607.71
2016–17	7363.79	736.37	711.45
2017–18	9151.42	915.14	671.57
2018–19	9510.92	951.09	795.34

<u>Non-SLR ಹೂಡಿಕೆಯು ನಿಗದಿತ ಮಿತಿಯೊಳಗೆ ಇರುವುದನ್ನು ಗಮನಿಸಿದೆ.</u>

ಆರ್.ಬಿ.ಐ. ಸುತ್ತೋಲೆ ದಿನಾಂಕ: 1–7–2015ರ (Master Circular on Investments by primary (urban) Co-operative Banks) ಕಂಡಿಕೆ 7.3 ರೀತ್ಯಾ 5% of Total transaction both purchase and sales during the year ಎಂದು ಇದ್ದು, ಸದರಿ ಸುತ್ತೋಲೆಗಳನ್ನು ಉಲ್ಲಂಘಿಸಿದ್ದು ಕಂಡು ಬರುತ್ತದೆ. ಅಂದರೆ 100 ಕೋಟಿ ಹೂಡಿಕೆಗೆ ಕನಿಷ್ಠ 20 ಜನ ಬ್ರೋಕರ್‌ಗಳನ್ನು ನಿಯೋಜಿಸಬೇಕಾಗಿರುತ್ತದೆ.

(ರೂ.ಕೋಟಿಗಳಲ್ಲಿ)

ವರ್ಷ	ಒಟ್ಟು ಖರೀದಿ	ಬ್ರೋಕಿಂಗ್‌ಏಜೆನ್ಸಿಯ ಹೆಸರು			ಹೂಡಿಕೆ/ ಒಟ್ಟು ಹೂಡಿಕೆಯ ಶೇಕಡಾವಾರು		
		Trend with	JM Global	AFCO	JM Global	AFCO	Trend with
2015–16	212.88	212.88	–	–	–	–	100%

2016–17	955.57	–	105.24	103.75	11.01	10.86	–
2017–18	1088.42	210.00	–	208.8	–	19.18	19.29%
2018–19	194.36	194.36	–	–	–	–	100%

2015-16 ಮತ್ತು 2018-19ನೇ ಸಾಲುಗಳಲ್ಲಿ ಸೆಕೆಂಡರಿ ಮಾರುಕಟ್ಟೆಯಲ್ಲಿ ಖರೀದಿ ಮಾಡಿದ ಒಟ್ಟು ಹೂಡಿಕೆಗಳನ್ನು ಶೇ.100 ರಷ್ಟನ್ನು ಟ್ರೆಂಡ್ ವಿತ್ ಏಜೆನ್ಸಿಯಲ್ಲಿ ಖರೀದಿಸಿರುವುದನ್ನು ಆಕ್ಷೇಪಿಸಿದೆ. ಆದಾಗ್ಯೂ ಸದರಿ ಉಲ್ಲಂಘನೆಗಳನ್ನು ಆಡಳಿತ ಮಂಡಳ ಸಭೆಯಲ್ಲಿ ಅನುಸಮರ್ಥನೆ ಮಾಡಿಕೊಂಡಿರುವುದನ್ನು ಗಮನಿಸಲಾಗಿದೆ.

ಮೇಲಿನ ಎಲ್ಲಾ ಖರೀದಿಗಳನ್ನು ಹೆಚ್.ಟಿ.ಎಂ. ರಡಿ ಖರೀದಿಸಿದ್ದು, ಸದರಿ ಸಾಲುಗಳಲ್ಲಿ ಯಾವುದೇ ಭದ್ರತಾ ಬಾಂಡುಗಳನ್ನು ಮಾರಾಟ ಮಾಡಿಲ್ಲದಿರುವುದನ್ನೂ ಸಹ ಗಮನಿಸಲಾಗಿದೆ.

ಅಭಿಪ್ರಾಯ:-

ಭಾರತೀಯ ರಿಸರ್ವ ಬ್ಯಾಂಕಿನ ಮಾರ್ಗಸೂಚಿಗಳನ್ವಯ ಅಪೆಕ್ಸ ಬ್ಯಾಂಕಿನಲ್ಲಿ ಹೂಡಿಕೆ ರೂಪರೇಷೆಗಳು (Investment policy) ಕಂಡಿಕೆ 5 ರೀತ್ಯಾ ಈ ಕೆಳಕಂಡ ಅಧಿಕಾರಿಗಳು ಹೂಡಿಕೆ ಸಮಿತಿಯ ಸದಸ್ಯರಾಗಿರುತ್ತಾರೆ.

1) ಮುಖ್ಯ ಕಾರ್ಯನಿರ್ವಹಣಾಧಿಕಾರಿ- ಸಮಿತಿಯ ಅಧ್ಯಕ್ಷರು
2) ಕಾರ್ಯದರ್ಶಿ – ಸದಸ್ಯರು
3) ಮುಖ್ಯ ಸಾಮಾನ್ಯ ವ್ಯವಸ್ಥಾಪಕರು (ಆಡಳಿತ ಮತ್ತು ಅಭಿವೃದ್ಧಿ) – ಸದಸ್ಯರು
4) ಮುಖ್ಯ ಸಾಮಾನ್ಯ ವ್ಯವಸ್ಥಾಪಕರು(ಹಣಕಾಸು ಮತ್ತು ಲೆಕ್ಕಪರಿಶೋಧನೆ) – ಸದಸ್ಯರು
5) ಸಾಮಾನ್ಯ ವ್ಯವಸ್ಥಾಪಕರು (ಬ್ಯಾಂಕಿಂಗ್) – ಸದಸ್ಯರು
6) ಉಪ ಸಾಮಾನ್ಯ ವ್ಯವಸ್ಥಾಪಕರು (ಎಚ) – ಸಮಿತಿ ಸಂಚಾಲಕರು

ಅದರಂತೆ ಬ್ಯಾಂಕಿನಲ್ಲಿ ಈ ಕೆಳಕಂಡ ಅಧಿಕಾರಿ ಸದಸ್ಯರುಗಳ ಸಮಿತಿ ರಚನೆಯಾಗಿರುತ್ತದೆ.

1) ಮುಖ್ಯ ಕಾರ್ಯನಿರ್ವಹಣಾಧಿಕಾರಿ- ಸಮಿತಿಯ ಅಧ್ಯಕ್ಷರು
2) ಕಾರ್ಯದರ್ಶಿ – ರಿಕ್ತ
3) ಮುಖ್ಯ ಸಾಮಾನ್ಯ ವ್ಯವಸ್ಥಾಪಕರು (ಆಡಳಿತ ಮತ್ತು ಅಭಿವೃದ್ಧಿ) – ಸದಸ್ಯರು
4) ಮುಖ್ಯ ಸಾಮಾನ್ಯ ವ್ಯವಸ್ಥಾಪಕರು(ಹಣಕಾಸು ಮತ್ತು ಲೆಕ್ಕಪರಿಶೋಧನೆ)- ಸದಸ್ಯರು
5) ಸಾಮಾನ್ಯ ವ್ಯವಸ್ಥಾಪಕರು(ಬ್ಯಾಂಕಿಂಗ್) – ಸದಸ್ಯರು
6) ಉಪ ಸಾಮಾನ್ಯ ವ್ಯವಸ್ಥಾಪಕರು (ಎಚ) – ಸಮಿತಿ ಸಂಚಾಲಕರು

ಬ್ಯಾಂಕಿನ ಹೂಡಿಕೆಗಳ ಖರೀದಿ ಮತ್ತು ಮಾರಾಟವನ್ನು ಮಾರ್ಗಸೂಚಿ ಮತ್ತು ಲಾಭದಾಯಕ ಮಾರ್ಗಗಳನ್ವಯ ನಿರ್ವಹಿಸುವ ಹೊಣೆಗಾರಿಕೆ ಹೂಡಿಕೆ ಸಮಿತಿಗೆ ಇರುತ್ತದೆ. ಆಡಳಿತ ಮಂಡಳ ಸಭೆಗೆ ಹೂಡಿಕೆಯ ಖರೀದಿ ಮತ್ತು ಮಾರಾಟದ ಹೊಣೆಗಾರಿಕೆ ಇರುವುದಿಲ್ಲ.

- ಭದ್ರತಾ ಹೂಡಿಕೆಗಳನ್ನು ಸೆಕೆಂಡರಿ ಮಾರುಕಟ್ಟೆಯಲ್ಲಿ ಖರೀದಿ ಮಾಡುವಾಗ ಬ್ರೋಕರ್‌ಗಳ ಆಯ್ಕೆಯ ಪ್ರಕ್ರಿಯೆಯು ಪಾರದರ್ಶಕವಾಗಿರುವುದಿಲ್ಲ.
- FIMDA ದರಕ್ಕೆ ಸಮೀಪ ಇರುವ ದರವನ್ನು ಪಡೆಯಲು ಬ್ಯಾಂಕ್‌ನಿಂದ ಯಾವ ಪ್ರಯತ್ನವೂ ನಡೆದಿರುವುದಿಲ್ಲ.
- ಬ್ಯಾಂಕ್‌ನ ಆಡಳಿತ ಮಂಡಳಿ ಸಭೆಯಲ್ಲಿ ಆರ್.ಬಿ.ಐ ಸುತ್ತೋಲೆಗಳ ಉಲ್ಲಂಘನೆ ಮಾಡುವ ಸಂದರ್ಭದಲ್ಲಿ ಅನುಸಮರ್ಥನೆ ಮಾಡುವಾಗ ಅನಿವಾರ್ಯ ಕಾರಣಗಳನ್ನು ಪಟ್ಟಿ ಮಾಡುವುದು ಅವಶ್ಯಕವಿದ್ದು, ಈ ರೀತಿ ಮಾಡದೇ ಇರುವುದನ್ನು ಗಮನಿಸಿದೆ.
- ಭದ್ರತಾ ಹೂಡಿಕೆಗಳ ಖರೀದಿಯು ಏಕಮುಖ ತೀರ್ಮಾನದಿಂದ ಕೈಗೊಂಡಿರುವುದು ದಾಖಲೆಗಳಿಂದ ಸ್ಪಷ್ಟವಾಗಿರುತ್ತದೆ.
- SLR ಹೂಡಿಕೆಗೆ ಪ್ರತಿವರ್ಷ ಭದ್ರತಾ ಪತ್ರಗಳ ಮುಖಬೆಲೆಗಿಂತ ಹೆಚ್ಚಿಗೆ ನೀಡಿರುವ ಪ್ರೀಮಿಯಂಗೆ ಭದ್ರತಾ ಪತ್ರ ಪಕ್ವವಾಗುವ ಅವಧಿ ಪರಿಗಣಿಸಿ ಪ್ರತಿವರ್ಷ amortization ಮಾಡಲಾಗುತ್ತಿದೆ. (ಆರ್.ಬಿ.ಐ. ಸುತ್ತೋಲೆ ಸಂಖ್ಯೆ: DBOD NO.BP.BC3/2/04.141/2009-10 dt:01-07-2009) 2013-14 ರಿಂದ 2018-19ರವರೆಗಿನ ಅವಧಿಯಲ್ಲಿ ನಷ್ಟಕ್ಕೆ ವರ್ಗಾಯಿಸಿರುವ ವಿವರವನ್ನು ಇದರೊಂದಿಗೆ ಲಗತ್ತಿಸಿದೆ. (ಅನುಬಂಧ-5)
- Non-SLR ಹೂಡಿಕೆಗೆ ಪ್ರತಿ ವರ್ಷಾಖೈರಿಗೆ ಮೌಲೀಕರಣ (valuation) ಮಾಡುತ್ತಿದ್ದು, ಭದ್ರತಾ ಪತ್ರದ ಖರೀದಿ ಬೆಲೆ ಮತ್ತು ಮಾರುಕಟ್ಟೆ ಬೆಲೆಯ ವ್ಯತ್ಯಾಸವನ್ನು ಆರ್ಥಿಕ ತ:ಖ್ತೆಗಳಲ್ಲಿ Investment Depreciation Reserve ಖಾತೆಯಡಿ ಅವಕಾಶ ಕಲ್ಪಿಸಲಾಗುತ್ತಿದೆ. ಪ್ರಸ್ತುತ ಬ್ಯಾಂಕ್‌ನಲ್ಲಿ ದಿನಾಂಕ: 31-3-2019ರ ಅಂತ್ಯಕ್ಕೆ ರೂ.11.23 ಕೋಟಿ ಮೌಲ್ಯ ಕಡಿಮೆಯಾಗಿದ್ದು ರೂ.11.23 ಕೋಟಿ ರೂ.ಗಳ ಅವಕಾಶ ಮಾಡಲಾಗಿರುತ್ತದೆ. ವರದಿ (**ಅನುಬಂಧ-I**)
- ಭದ್ರತಾ ಹೂಡಿಕೆಗಳ ಖರೀದಿ ಮತ್ತು ಮಾರಾಟಗಳು ವ್ಯವಸ್ಥಿತವಾಗಿ ಬ್ಯಾಂಕಿಗೆ ಲಾಭದಾಯಕವಾಗುವ ವಿಧಾನದಲ್ಲಿ ಮಾಡದಿರುವುದನ್ನು ಗಮನಿಸಲಾಗಿದೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಮಾಹಿತಿಯನ್ನು, ದಾಖಲೆಗಳನ್ನು ಪರಿಶೀಲಿಸಿ ಒದಗಿಸಲಾಗಿದೆ. ಸಹಕಾರ ಕಾಯ್ದೆ ಕಲಂಗಳಂತೆ ಉನ್ನತ ಮಟ್ಟದ ವಿಚಾರಣೆಗೆ ಆದೇಶಿಸಿ ಮುಂದಿನ ಕ್ರಮವಿಡಬಹುದಾಗಿದೆ.

<u>3. ಏಕಕಾಲಿಕ ಸಾಲ ತೀರುವಳಿ ಯೋಜನೆಯಡಿ ಮುಕ್ತಾಯ ಮಾಡಿದ ಸಾಲಗಳು:-</u>

1. ಉಮಾ ಸುರೇಶ್ ಇವರಿಗೆ ದಿನಾಂಕ:02-07-2008ರಂದು ರೂ.1.60 ಕೋಟಿ ಸಾಲ ಮಂಜೂರು ಮಾಡಲಾಗಿದೆ. ದಿನಾಂಕ:06-09-2018 ರಂದು ಏಕಕಾಲಿಕ ಸಾಲ ತೀರುವಳಿ ಯೋಜನೆ ಯಡಿಯಲ್ಲಿ ಸಾಲವನ್ನು ಚುಕ್ತಾ ಮಾಡಲಾಗಿದೆ.

- ಓ.ಟಿ.ಎಸ್ ಸ್ಕೀಂನಲ್ಲಿ 7.23% ರಂತೆ ಬಡ್ಡಿ ಪಡೆದುಅಂದರೆ ಶೇ.1.33% cost of Deposit ಕ್ಕಿಂತಕಡಿಮೆ ಬಡ್ಡಿ ಪಡೆದು ಸಾಲ ತೀರುವಳಿ ಮಾಡಲಾಗಿದೆ. ಇದರಿಂದಾಗಿ ರೂ.3.49 ಕೋಟಿ ಬಡ್ಡಿ ಮನ್ನಾ ಮಾಡಲಾಗಿದೆ. ಸದರಿ ಸಾಲದಖಾತೆಯನ್ನು ಪರಿಶೀಲಿಸಲಾಗಿ ಸಾಲಗಾರರಿಗೆ ಸಾಲ ಮರುಪಾವತಿ ಸಾಮರ್ಥ್ಯ ಕಂಡುಕೊಳ್ಳಲು ಸೂಕ್ತ ದಾಖಲಾತಿಗಳನ್ನು ಪಡೆಯದೆ ಇರುವುದನ್ನು ಗಮನಿಸಿದೆ.

- ಸದರಿ ಸಾಲಗಾರರು11-8-2008 ರಿಂದ12-12-2008ರವರೆಗೆ 6 ಕಂತುಗಳಲ್ಲಿ ನಿಯಮಿತವಾಗಿ ಸಾಲ ಮರುಪಾವತಿ ಮಾಡಿದ್ದು, ದಿನಾಂಕ: 12-12-2008 ರಿಂದ 6-7-2017 ರವರೆಗೆ ಸಾಲ ಮರುಪಾವತಿ ಮಾಡಿರುವುದಿಲ್ಲ. ದಿನಾಂಕ:7-7-2011 ರಿಂದ 01-6-2013 ರವರೆಗೆ ಅನಿಯಮಿತವಾಗಿ ಸಾಲ ಮರುಪಾವತಿ ಮಾಡಿದ್ದು, ಮುಂದೆ 2-6-2013 ರಿಂದ 6-9-2018ರವರೆಗೆ ಬ್ಯಾಂಕಿಗೆ ಸಾಲ ಮರುಪಾವತಿ ಮಾಡಿರುವುದಿಲ್ಲ. ದಿನಾಂಕ:6-9-2018 ರಂದು ಏಕಕಾಲಿಕ ಸಾಲ ತೀರುವಳಿಯಾಗಿರುತ್ತದೆ.

- ಸದರಿ ಸಾಲಗಾರರ ಭದ್ರತಾ ಆಸ್ತಿಯಾದ 2 ನಿವೇಶನಗಳನ್ನು ಹರಾಜು ಹಾಕದೆ ರೂ.3.49 ಕೋಟಿಗಳ ಸಾಲ ಮನ್ನಾ ಮಾಡಿರುವುದು ಆಕ್ಷೇಪಣೀಯ.(ಅನುಬಂಧ-7)

2. ಆನೇಕಲ್ ತಿಮ್ಮಯ್ಯ, ಚಾರಿಟೀಸ್ಟ್ರಸ್ಟ್, ಬೆಂಗಳೂರು ಇವರಿಗೆ ದಿನಾಂಕ: 01-04-2009 ರಂದು ರೂ.9.00 ಕೋಟಿ ಮತ್ತು ದಿನಾಂಕ:23-07-2009 ರಂದು ರೂ.5.00 ಕೋಟಿ ಒಟ್ಟಾರೆ ರೂ.14.00 ಕೋಟಿ ಸಾಲವನ್ನು ಮಂಜೂರು ಮಾಡಲಾಗಿದೆ. ದಿನಾಂಕ:28-02-2018 ರಂದು ಏಕಕಾಲಿಕ ಸಾಲ ತೀರುವಳಿ ಯೋಜನೆ ಯಡಿಯಲ್ಲಿ ಸಾಲವನ್ನು ಚುಕ್ತಾ ಮಾಡಲಾಗಿದೆ. ಸುಮಾರು ರೂ.24.38 ಕೋಟಿ ಮೌಲ್ಯದ ಸ್ಥಿರಾಸ್ತಿಯನ್ನು ಭದ್ರತೆಯಾಗಿ ಪಡೆಯಲಾಗಿದೆ.

- ಓ.ಟಿ.ಎಸ್ ಸ್ಕೀಂನಲ್ಲಿ 7.29%, ಬಡ್ಡಿ ಹಾಗೂ ಮಾರ್ಜಿನ್ 1% ಪಡೆದು ಸಾಲ ತೀರುವಳಿ ಮಾಡಲಾಗಿದೆ. ಇದರಿಂದಾಗಿ ರೂ.18.50 ಕೋಟಿ ಬಡ್ಡಿ ಮನ್ನಾ ಮಾಡಲಾಗಿದೆ.
- ಸದರಿಖಾತೆಯಲ್ಲಿ 5-5-2016 ರಿಂದ 28-2-2018ರವರೆಗೆ ಯಾವುದೇ ಸಾಲ ಮರುಪಾವತಿ ಬಂದಿಲ್ಲದಿರುವುದನ್ನು ಗಮನಿಸಿದೆ.
- ಸದರಿಖಾತೆಯಲ್ಲಿ ರೂ.18.5 ಕೋಟಿ ಮನ್ನಾ ಮಾಡಿರುವುದು ಆಕ್ಷೇಪಣೀಯ.
- ರೂ.9.00 ಕೋಟಿ ರೂಪಾಯಿ ಸಾಲದ ಅರ್ಜಿ ಮತ್ತು ಮಂಜೂರಾತಿ ಪತ್ರವನ್ನು ಬ್ಯಾಂಕಿನವರು ಪರಿಶೀಲನೆಗೆ ಹಾಜರು ಪಡಿಸಿರುವುದಿಲ್ಲ. (ಅನುಬಂಧ-8)

ಈ ವ್ಯವಹಾರಗಳಿಗೆ ಸಂಬಂಧಿಸಿದಂತೆ ಪ್ರಾಥಮಿಕ ಮಾಹಿತಿಯನ್ನು, ದಾಖಲೆಗಳನ್ನು ಪರಿಶೀಲಿಸಿ ಒದಗಿಸಲಾಗಿದೆ. ಸಹಕಾರ ಕಾಯ್ದೆ ಕಲಂಗಳಂತೆ ಉನ್ನತ ಮಟ್ಟದ ವಿಚಾರಣೆಗೆ ಆದೇಶಿಸಿ ಮುಂದಿನ ಕ್ರಮವಿಡಬಹುದಾಗಿದೆ.

4. <u>ಯೋಜನಾಬದ್ಧ ಸಾಲಗಳು:-</u>

11 ಜನ/ ಸಂಸ್ಥೆಗಳಿಗೆ ನೀಡಿರುವ ಸಾಲಗಳು ಸುಸ್ತಿಯಾಗಿದ್ದು, ವಿವರಗಳನ್ನು ಅನುಬಂಧ -9 ರಲ್ಲಿ ವಿವರಿಸಲಾಗಿದೆ.

- ❖ ಸಾಲ ನೀಡುವಾಗ ಸಾಲ ಮರುಪಾವತಿ ಸಾಮರ್ಥ್ಯವನ್ನು ನಿರ್ಧಿಷ್ಟವಾಗಿ ಪರಿಶೀಲಿಸಿರುವುದಿಲ್ಲ.
- ❖ ಗುತ್ತಿಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ಸಾಲವನ್ನು ನೀಡಲಾಗಿದೆ. Commercial Real Estate ಸಾಲದಡಿ ಸದರಿ ಸಾಲವನ್ನು ವರ್ಗೀಕರಿಸಬಹುದಾಗಿದ್ದು, ಯೋಜನಾ ಬದ್ಧ ಸಾಲದಡಿಯಲ್ಲಿ ಸಾಲವನ್ನು ನೀಡಿರುವುದು ಆಕ್ಷೇಪಣೀಯವಾಗಿರುತ್ತದೆ.
- ❖ ಸೀಗಡಿ ಮೀನಿನ ಉತ್ಪಾದನಾ ಸಂಸ್ಥೆಗೆ ನೀಡಿರುವ ಸಾಲ ಯೋಜನಾ ಬದ್ಧ ಅವಧಿ ಸಾಲದಡಿಯಲ್ಲಿ ನೀಡಿರುವುದು ಸರಿಯಲ್ಲ.
- ❖ ಕೆಲವು ಸಾಲಗಳಲ್ಲಿ ಭದ್ರತೆಯಾಗಿ ಪಡೆದಿರುವ ಆಸ್ತಿಯ ಮೌಲ್ಯ ಕಡಿಮೆ ಇದ್ದು, ಸಾಲದ ಮೊತ್ತ ಹೆಚ್ಚಾಗಿರುತ್ತದೆ.
- ❖ C.R.E. ಅಡಿಯಲ್ಲಿ ನೀಡಬೇಕಾದ ಸಾಲಗಳನ್ನು ಯೋಜನಾ ಬದ್ಧ ಸಾಲಗಳಡಿಯಲ್ಲಿ ನೀಡಿರುವುದು ಸರಿಯಲ್ಲ.
- ❖ ಸಾಲಗಳು ಸುಸ್ತಿಯಾಗಿದ್ದು, ವಸೂಲಾತಿಯಾಗಬೇಕಾಗಿರುತ್ತದೆ. (ಅನುಬಂಧ-9 ಮತ್ತು ಅನುಬಂಧ-9(1))

ಈ ವ್ಯವಹಾರಗಳಿಗೆ ಸಂಬಂಧಿಸಿದಂತೆ ಪ್ರಾಥಮಿಕ ಮಾಹಿತಿಯನ್ನು, ದಾಖಲೆಗಳನ್ನು ಪರಿಶೀಲಿಸಿ ಒದಗಿಸಲಾಗಿದೆ. ಸಹಕಾರ ಕಾಯ್ದೆ ಕಲಂಗಳಂತೆ ಉನ್ನತ ಮಟ್ಟದ ವಿಚಾರಣೆಗೆ ಆದೇಶಿಸಿ ಮುಂದಿನ ಕ್ರಮವಿಡಬಹುದಾಗಿದೆ.

5. ಕೋರ್ ಬ್ಯಾಂಕಿಂಗ್ ಸಾಫ್ಟವೇರ್ ಖರೀದಿ

2012ರ ಪೂರ್ವದಲ್ಲಿ ಬ್ಯಾಂಕ್ ಟಿ.ಬಿ.ಎ ತಂತ್ರಾಂಶ ಹೊಂದಿದ್ದು, ಆ ನಂತರ "ಡೆಟಾವಿಷನ್ ಸಲ್ಯೂಷನ್" ಸಂಸ್ಥೆಯಿಂದ ದಿನಾಂಕ: 27.12.2012ರ ನಂತರ ತಂತ್ರಾಂಶ ಅಳವಡಿಸಿಕೊಂಡು ಇಂದಿನವರೆಗೂ ಕೂಡಾ ಸದರಿ ತಂತ್ರಾಂಶದಲ್ಲಿ ಕಾರ್ಯನಿರ್ವಹಿಸುತ್ತಿದೆ. ಆದರೆ ಡಾಟಾವಿಷನ್ ಸಾಫ್ಟವೇರ್ ಸಂಸ್ಥೆಯು ಆರ್.ಟಿ.ಜಿ.ಎಸ್, ಸಿ.ಕೆ.ವೈಸಿ/ಎ.ಯು.ಎ ಮುಂತಾದ ಸೇವಾ ಸೌಲಭ್ಯಗಳನ್ನು ಒದಗಿಸಲು ವಿಫಲವಾದ ಹಿನ್ನೆಲೆಯಲ್ಲಿ, ದಿನಾಂಕ 05.02.2018ರಲ್ಲಿ ನಡೆದ ಗಣಕೀಕರಣ ಉಪ ಸಮಿತಿಯ ನಿರ್ಣಯ ಹಾಗೂ 17.02.2018ರ ಆಡಳಿತ ಮಂಡಳಿ ನಿರ್ಣಯದಂತೆ, ಸಿ.ಬಿ.ಎಸ್ ಸಾಫ್ಟವೇರ್ ಮತ್ತು ದಿನಾಂಕ 09.03.2018ರ ಆಡಳಿತ ಮಂಡಳಿ ನಿರ್ಣಯದ ಸಭೆಯಲ್ಲಿ ಹೊಸ ಸಿ.ಬಿ.ಎಸ್ ಸಾಫ್ಟವೇರ್ ಅಳವಡಿಸಲು ಅಧ್ಯಕ್ಷರಿಗೆ ಖರ್ಚು–ವೆಚ್ಚ ಭರಿಸಲು ಅಧಿಕಾರ ನೀಡಲಾಗಿರುತ್ತದೆ.

ಅದರಂತೆ ದಿನಾಂಕ 26.03.2018ರಂದು ಒಟ್ಟು ರೂ.6.54 ಕೋಟಿಗಳಿಗೆ ಖರೀದಿ ಆದೇಶವನ್ನು ನೀಡಲಾಗಿರುತ್ತದೆ. ಆದರೆ, ಸದರಿ ಖರೀದಿ ಆದೇಶ ರೀತ್ಯಾ ವಿ.ಸಾಫ್ಟ್ ಟೆಕ್ನಾಲಜಿ ಪ್ರೈವೇಟ್ ಲಿಮಿಟೆಡ್‌ರವರು ದಿನಾಂಕ 20.04.2018ರೊಳಗಾಗಿ 'ಸರ್ವಿಸ್ ಲೆವೆಲ್ ಅಗ್ರಿಮೆಂಟ್' ಮಾಡಿಕೊಳ್ಳದ ಹಿನ್ನೆಲೆಯಲ್ಲಿ, ಬ್ಯಾಂಕ್ ಒಟ್ಟು 1100 ಅಂಶಗಳಿಗೆ ಸ್ಪಷ್ಟೀಕರಣ ನೀಡಲು ಸದರಿ ಕಂಪನಿಗೆ ಕೋರಿದ್ದು, ಬ್ಯಾಂಕ್ ಅಧಿಕಾರಿಗಳು ಪರಿಶೀಲಿಸಿದಾಗ, 400 ಅಂಶಗಳನ್ನು ಕಂಪನಿ ಒದಗಿಸಬೇಕಿದ್ದು, ಸದರಿ ಅಂಶಗಳನ್ನು ಒದಗಿಸದ ಹಿನ್ನೆಲೆಯಲ್ಲಿ, ದಿನಾಂಕ 26.03.2018ರಂದು ನೀಡಿದ ಖರೀದಿ ಆದೇಶವನ್ನು ರದ್ದುಗೊಳಿಸಿದೆ ಎಂದು ತಿಳಿಸಲಾಗಿದೆ. ಆದ್ದರಿಂದ, ವಿಚಾರಣಾ ದಿನಾಂಕದವರೆಗೂ 2012ರಲ್ಲಿ ಅಳವಡಿಸಿದ ಡಾಟಾ ವಿಷನ್ ಸಾಫ್ಟ್ ವೇರ್‌ನಲ್ಲಿ ಬ್ಯಾಂಕ್ ಕಾರ್ಯನಿರ್ವಹಿಸುತ್ತಿದ್ದು, ಯಾವುದೇ ಹೊಸ ತಂತ್ರಾಂಶ ಅಳವಡಿಸಿಕೊಂಡಿರುವುದಿಲ್ಲವೆಂದು ಐ.ಟಿ ವಿಭಾಗದ ಮ್ಯಾನೇಜರ್ ಆದ ಶ್ರೀ ಪ್ರಭಾಕರ್‌ರವರು ತಿಳಿಸಿರುತ್ತಾರೆ. ಸದರಿಯವರ ತೀರ್ಮಾನವನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ದೃಢೀಕರಿಸಿರುತ್ತಾರೆ. (ಮಾಹಿತಿ ಲಗತ್ತಿಸಿದೆ.)

6. ಲೆಕ್ಕಪರಿಶೋಧನೆ ಮತ್ತು ತನಿಖೆ ವಿಭಾಗವನ್ನು ರದ್ದುಪಡಿಸಿ ಚಾರ್ಟಡ್ ಅಕೌಂಟಂಟ್ ನೇಮಕ ಮಾಡಿಕೊಂಡಿರುವುದು.

ಮೇಲಿನ ಆರೋಪಕ್ಕೆ ಸಂಬಂಧಿಸಿದಂತೆ, ಸದರಿ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಉಷಾ ರವರು ಮಾಹಿತಿ ನೀಡಿದ್ದು, ಅರ್ಜಿದಾರರು ದೂರು ಅರ್ಜಿಯಲ್ಲಿ ಆರೋಪಿಸಿರುವಂತೆ, ಲೆಕ್ಕಪರಿಶೋಧನೆ ಮತ್ತು ತನಿಖೆ ವಿಭಾಗವನ್ನು ರದ್ದುಪಡಿಸಿರುವುದಿಲ್ಲ ಸದರಿ ವಿಭಾಗವು ಹಾಲಿ ಕೂಡಾ ಕಾರ್ಯನಿರ್ವಹಿಸುತ್ತಿದ್ದು, ಅಪೆಕ್ಸ್ ಬ್ಯಾಂಕ್ ಶಾಖೆ ಮತ್ತು ಜಿಲ್ಲಾ ಬ್ಯಾಂಕ್ ಪರಿವೀಕ್ಷಣೆಯನ್ನು ಕೈಗೊಳ್ಳುತ್ತಿರುತ್ತದೆ. ಸದರಿ ವಿಭಾಗದಲ್ಲಿ 2013ರಲ್ಲಿದ್ದಂತೆ, 31 ಜನ ಕಾರ್ಯನಿರ್ವಹಿಸುತ್ತಿದ್ದು, 2019ಕ್ಕೆ ಕೇವಲ 10 ಜನ ಕಾರ್ಯನಿರ್ವಹಿಸುತ್ತಿರುತ್ತಾರೆ. ನಬಾರ್ಡ್ ಸುತ್ತೋಲೆ ಸಂಖ್ಯೆ 48/ಡಿ.ಓ.ಎಸ್–15/2018, ದಿನಾಂಕ 14.03.2018ರ ಪ್ರಕಾರ 'ಸಮವರ್ತಿತ ಲೆಕ್ಕ ಪರಿಶೋಧನೆ' ಗೆ ಚಾರ್ಟಡ್ ಅಕೌಂಟಂಟ್ ನೇಮಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ, ದಿನಾಂಕ 17.05.2017ರಂದು ಸಮವರ್ತಿತ ಲೆಕ್ಕಪರಿಶೋಧನಾ ಕಾರ್ಯವನ್ನು 21 ಜನ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದು, ವಾರ್ಷಿಕ ವೇತನ, ಇತರ ಖರ್ಚು ರೂ.2.75 ಕೋಟಿಗಳಷ್ಟು ಆಗುತ್ತಿದ್ದು, ಸದರಿ ಕಾರ್ಯವನ್ನು ಸಿ.ಎ ರವರಿಂದ ನಡೆಸಿದಲ್ಲಿ, ಬ್ಯಾಂಕಿಗೆ ಸಾಕಷ್ಟು ಆರ್ಥಿಕವಾಗಿ ಹಣ ಉಳಿತಾಯವಾಗಲಿದ್ದು, ಸದರಿ ಕಾರ್ಯವನ್ನು ನಿರ್ವಹಿಸುತ್ತಿದ್ದ ಸಿಬ್ಬಂದಿಗಳನ್ನು ಬ್ಯಾಂಕಿನ ಇನ್ನಿತರ ಕಾರ್ಯಗಳಿಗೆ ನಿಯೋಜಿಸಬಹುದಾಗಿದೆಯೆಂದು ತೀರ್ಮಾನಿಸಿ, ಸಮವರ್ತಿತ ಲೆಕ್ಕಪರಿಶೋಧನಾ ಕಾರ್ಯಕ್ಕೆ ಸಿ.ಎ ರವರನ್ನು ನೇಮಿಸಲು ತೀರ್ಮಾನಿಸಿ, ಅಧ್ಯಕ್ಷರಿಗೆ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ ಅಧಿಕಾರ ನೀಡಲಾಗಿದೆ.

ಈ ಸಂಬಂಧ, 4 ಅನುಭವಿ ಸಿ.ಎ ಗಳಿಂದ ದರಪಟ್ಟಿ ಆಹ್ವಾನಿಸಿದ್ದು, ಅದರಲ್ಲಿ ಕನಿಷ್ಠ ಮೊತ್ತಕ್ಕೆ ದರಪಟ್ಟಿ ನೀಡಿರುವ ಅನಿಲ್‌ಕುಮಾರ್ ಆಂಡ್ ಕಂಪನಿ ರವರಿಗೆ 2017-18ನೇ ಸಾಲಿನಲ್ಲಿ ಸಮವರ್ತಿತ ಲೆಕ್ಕಪರಿಶೋಧನೆಗೆ ಆದೇಶ ನೀಡಿರುವುದು ಕಂಡುಬರುತ್ತದೆ.

ದಾಖಲೆಗ:ಳನ್ನು ಪರಿಶೀಲಿಸಿದಾಗ, ಮೇಲೆ ತಿಳಿಸಿರುವ ನಬಾರ್ಡ್ ಸುತ್ತೋಲೆ ಪ್ರಕಾರ, ದಿನಾಂಕ 17.05.2017ರ ಆಡಳಿತ ಮಂಡಳಿ ನಿರ್ಣಯದಂತೆ, ಪ್ರತೀಕ್ ಆಂಡ್ ಕಂಪನಿ – ರೂ.7.60 ಲಕ್ಷ, ಬಿ.ವಿ.ಎಸ್.ಆರ್ ಅಂಡ್ ಕಂಪನಿ – ರೂ.7.30 ಲಕ್ಷ ಹಾಗೂ ಅನಿಲ್ ಕುಮಾರ್ ಎಸ್. ಆಂಡ್ ಕಂಪನಿ – ರೂ.6.50 ಲಕ್ಷ ಆಹ್ವಾನಿಸಿ, ಈ ಪೈಕಿ ಕನಿಷ್ಠ ದರಪಟ್ಟಿ ನೀಡಿದ ಅನಿಲ್ ಕುಮಾರ್ ಎಸ್.ಆಂಡ್ ಕಂಪನಿಯವರಿಗೆ 2017-18ನೇ ಸಾಲಿನ ಸಮವರ್ತಿತ ಲೆಕ್ಕಪರಿಶೋಧನೆ ಮಾಡಲು ಆದೇಶ ನೀಡಿರುವುದು ಕಂಡು ಬಂದಿರುತ್ತದೆ. ಒಟ್ಟಾರೆಯಾಗಿ, ದಾಖಲೆಗಳನ್ನು ಪರಿಶೀಲಿಸಿದಾಗ, ಅರ್ಜಿದಾರರು ತಮ್ಮ ದೂರು ಅರ್ಜಿಯಲ್ಲಿ ತಿಳಿಸಿರುವಂತೆ, ಲೆಕ್ಕಪರಿಶೋಧನಾ ವಿಭಾಗವನ್ನು ರದ್ದುಪಡಿಸಿರುವುದಿಲ್ಲ ಹಾಗು ತಮಗೆ ಬೇಕಾದಂತೆ ಸಿ.ಎ ಗಳನ್ನು ನೇಮಕಾತಿ ಮಾಡಿರುವ ಅಂಶ ಕೂಡಾ ಸಾಬೀತಾಗಿರುವುದಿಲ್ಲ. ಸಿ.ಎ ಗಳ ನೇಮಕಾತಿ ಕ್ರಮಬದ್ಧವಾಗಿ ದರಪಟ್ಟಿ ಅಹ್ವಾನಿಸಿ, ಕನಿಷ್ಠ ದರಪಟ್ಟಿ ನೀಡಿದ ಕಂಪನಿಗೆ ಸಮವರ್ತಿತ ಲೆಕ್ಕಪರಿಶೋಧನೆಗೆ ಆದೇಶ ನೀಡಿರುತ್ತಾರೆ. **(ಮಾಹಿತಿ ಲಗತ್ತಿಸಿದೆ.)**

7. ಸೇವಾ ಜೇಷ್ಠತೆಯನ್ನು ಪರಿಗಣಿಸದೇ ಸಿಬ್ಬಂದಿಗಳಿಗೆ ಪದೋನ್ನತಿ ನೀಡಿರುವುದು.

ವಿಷಯಕ್ಕೆ ಸಂಬಂಧಿಸಿದಂತೆ, ದಾಖಲೆಗಳನ್ನು ಪರಿಶೀಲಿಸಲಾಗಿ, ಅಪೆಕ್ಸ ಬ್ಯಾಂಕಿನಲ್ಲಿ 2009 ರ ನಂತರ ಸಿಬ್ಬಂದಿಗಳ ಸೇವಾ ಜೇಷ್ಠತೆ ಪಟ್ಟಿ ನಿರ್ವಹಿಸಿರುವುದಿಲ್ಲ. 2009 ರ ನಂತರ ಹಲವಾರು ಸಿಬ್ಬಂದಿಗಳು ನಿವೃತ್ತಿ ಹೊಂದಿರುತ್ತಾರೆ. ನಿಯಮಾನುಸಾರ ಪ್ರತಿ ವರ್ಷ ಸೇವಾ ಜೇಷ್ಠತೆ ಪಟ್ಟಿ ಸಿದ್ದಪಡಿಸಿ ಸಿಬ್ಬಂದಿಗಳ ಆಕ್ಷೇಪಣೆ ಆಹ್ವಾನಿಸಿ ಆಕ್ಷೇಪಣೆ ಪರಿಶೀಲಿಸಿ ನಂತರ ಅಂತಿಮ ಪಟ್ಟಿ ಪ್ರಕಟಿಸುವುದು ನಿಯಮವಾಗಿರುತ್ತದೆ. ಆದರೆ ಸೇವಾ ಜೇಷ್ಠತೆ ಪಟ್ಟಿ ಪ್ರಕಟಿಸದೆ ತಾತ್ಕಾಲಿಕ ಜೇಷ್ಠತೆ ಪಟ್ಟಿ ಆಧಾರದ ಮೇಲೆ ಪದೋನ್ನತಿ ಸ್ಕ್ರೀನಿಂಗ್ ಕಮಿಟಿ ಮುಂದೆ ಮಂಡಿಸಿ ನಂತರ ಪದೋನ್ನತಿ ನೀಡಿರುತ್ತಾರೆ. ಹಾಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ನೌಕರುಗಳ ಪಟ್ಟಿಯನ್ನು ಹಾಜರು ಪಡಿಸಿದ್ದು ಪರಿಶೀಲಿಸಲಾಗಿ ಶ್ರೀಮತಿ ಕೆ.ವಿ. ದಾಕ್ಷಾಯಿಣಿ, ಶ್ರೀ ಬಿ.ವಿ.ಹಂಗಡಿ, ಶ್ರೀಮತಿ ಆರ್. ಉಷಾ ಈ ಮೂರು ಪ್ರಕರಣ ಹೊರತುಪಡಿಸಿ ಉಳಿದಂತೆ

ಜೇಷ್ಠತಾ ಆಧಾರದ ಮೇಲೆ ಪದೋನ್ನತಿ ಕಂಡುಬರುತ್ತದೆ ಮೇಲಿನ 3 ಜನರ ಆರೋಪಗಳಿಗೆ ಸಂಬಂಧಿಸಿದಂತೆ ಪದೋನ್ನತಿ ತಡೆಹಿಡಿದು ನಂತರ ಶ್ರೀಮತಿ ಕೆ.ವಿ. ದಾಕ್ಷಾಯಿಣಿ, ಶ್ರೀ ಬಿ.ವಿ.ಹಂಗಡಿ, ಪದೋನ್ನತಿ ನೀಡಿರುತ್ತಾರೆ. ಶ್ರೀಮತಿ ಉಷಾ ಅವರಿಗೆ ಡಿಜಿಎಂನಿಂದ ಜಿಎಂ ಗೆ ಪದೋನ್ನತಿ ನಿಡಿರುವುದಿಲ್ಲ. ಜಿಎಂ ಶ್ರೇಣಿಯ ಯಾವುದೇ ಹುದ್ದೆಗಳು ಖಾಲಿ ಇಲ್ಲದೇ ಇರುವುದರಿಂದ ಪದೋನ್ನತಿ ನೀಡಿರುವುದಿಲ್ಲ ಎಂದು ತಿಳಿಸಿರುತ್ತಾರೆ.

ಒಟ್ಟಾರೆ ಸೂಕ್ತವಾಗಿ ನಿಯಮಾನುಸಾರ ಸಿಬ್ಬಂದಿ ಜೇಷ್ಠತಾ ಪಟ್ಟಿ ಪ್ರಕಟಿಸದೇ ಇರುವುದರಿಂದ ಪದೋನ್ನತಿಯಲ್ಲಿ ಜೇಷ್ಠತೆ ಉಲ್ಲಂಘನೆ ಆಗಿರುವುದರ ಬಗ್ಗೆ ಯಾವುದೇ ಸ್ಪಷ್ಟ ಅಭಿಪ್ರಾಯ ನೀಡಲು ಸಾಧ್ಯವಾಗಿರುವುದಿಲ್ಲ. **(ಜೇಷ್ಠತಾ ಪಟ್ಟಿ ಲಗತ್ತಿಸಿದೆ.)**

ಈಗ ಸೇವಾ ಜೇಷ್ಠತೆ ಪಟ್ಟಿ ಪ್ರಕಟಿಸಲು ಕ್ರಮ ಕೈಗೊಂಡಿದ್ದು, ಜೇಷ್ಠತಾ ಪಟ್ಟಿ ಪ್ರಕಟಿಸಿದ ನಂತರ ಅಂತಿಮವಾಗಿ ಪಟ್ಟಿ ಹೊರಬಂದ ನಂತರ ಸೇವಾ ಜೇಷ್ಠತೆ ಉಲ್ಲಂಘನೆಯಾಗಿರುವ ಬಗ್ಗೆ ಸ್ಪಷ್ಟವಾದ ಅಭಿಪ್ರಾಯ ತಿಳಿಸಬಹುದಾಗಿರುತ್ತದೆ.

8. ಕಂಪ್ಯೂಟರ್ ತಜ್ಞರಲ್ಲದ ಬಿ.ಕಾಂ ಪಧವೀಧರರನ್ನು ಸಾಫ್ಟವೇರ್ ನಿರ್ವಹಣೆಗೆ ತಾಂತ್ರಿಕ ಸಲಹೆಗಾರರನ್ನಾಗಿ ನೇಮಕ ಮಾಡಿಕೊಂಡಿರುವುದು.

ಶ್ರೀ ಸುಶಾಂತ್ ಬಿ.ಕಾಂ ಪಧವೀಧರ ಇವರನ್ನು ಸಾಫ್ಟವೇರ್ ನಿರ್ವಹಣೆಗೆ ತಾಂತ್ರಿಕ ಸಲಹೆಗಾರರಾಗಿ ನೇಮಿಸಿದ್ದು, ಈ ಬಗ್ಗೆ ದಾಖಲೆಗಳನ್ನು ಪರಿಶೀಲಿಸಿಲಾಗಿ ಶ್ರೀ ಸುಶಾಂತ್ ಹಾಲಿ ಅಪೆಕ್ಸ ಬ್ಯಾಂಕ್‌ಗೆ ತಂತ್ರಾಂಶ ಒದಗಿಸಿದ ಡಾಟಾ ವಿಶನ್ ಕಾಂಪಾಸಿಟ್ ಕಂಪನಿಯ ವೈಸ್ ಪ್ರೆಸಿಡೆಂಟ್ ಆಗಿ ಕಾರ್ಯ ನಿರ್ವಹಿಸುತ್ತಿದ್ದು, 2013 ರಿಂದ 2016 ರವೆಗೂ ಕಾರ್ಯ ನಿರ್ವಹಿಸಿದ್ದು ಬ್ಯಾಂಕಿಗೆ ತಂತ್ರಾಂಶದಲ್ಲಿ ಅಡಚಣೆ ಉಂಟಾದಾಗ ಡಾಟಾವಿಶನ್ ಕಂಪನಿಯ ಪರವಾಗಿ ಸೂಕ್ತ ಸಲಹೆ ಸೂಚನೆ ನೀಡಿ ಸಹಕರಿಸಿರುತ್ತಾರೆ.

ಸದರಿಯವರು ಡಾಟಾವಿಶನ್ ಕಂಪನಿಯ ಹೊರಬಂದು ನಂತರ ಈ ಬ್ಯಾಂಕಿನಲ್ಲಿ ತಾಂತ್ರಿಕ ಸಲಹೆಗಾರರಾಗಿ ನೇಮಕಗೊಂಡಿರುತ್ತಾರೆ. ಇವರ ನೇಮಕಾತಿಯಲ್ಲಿ ದಿ; 17-06-16 ರಂದು ಬ್ಯಾಂಕಿನ ಗಣಕೀಕರಣ ಉಪಸಮಿತಿ ನಿರ್ಣಯದಂತೆ ನೇಮಕಾತಿ ಮಾಡಿಕೊಂಡಿದ್ದು, ಸದರಿ ನಿರ್ಣಯದಂತೆ ದಿ; 23-07-2016 ರಂದು ನಡೆದ ಆಡಳಿತ ಮಂಡಳಿಯ ಸಭೆಯಲ್ಲಿ ಸ್ಥಿರೀಕರಣಗೊಳಿಸಿರುತ್ತಾರೆ. ಆದ್ದರಿಂದ ಸದರಿಯವರ ನೇಮಕಾತಿಯು ಆಡಳಿತ ಮಂಡಳಿಯ ಒಪ್ಪಿಗೆ ಪಡೆದಿರುವುದು ಸಾಬೀತಾಗಿರುತ್ತದೆ.

ಶ್ರೀ ಸುಶಾಂತ ಬಿ.ಕಾಂ ಪಧವೀಧರರಾಗಿದ್ದರೂ ಕೂಡ ಅವರು ಸಾಫ್ಟವೇರ್ ಕಂಪನಿಯ ಕೆಲಸ ನಿರ್ವಹಿಸಿದ ಅನುಭವ ಹೊಂದಿದ್ದು ಮತ್ತು ಹಾಲಿ ಅಪೆಕ್ಸ ಬ್ಯಾಂಕಿನಲ್ಲಿ ಹೊಂದಿರುವ ತಂತ್ರಾಂಶದ ಅನುಭವ ಹೊಂದಿರುವ ಹಿನ್ನೆಲೆಯಲ್ಲಿ ಅವರನ್ನು ನೇಮಕ ಮಾಡಿಕೊಂಡಿರುವ ಅಂಶ ದಾಖಲೆಗಳ ಮೂಲಕ ಹಾಗೂ ಹೇಳಿಕೆಯಿಂದ ಕಂಡುಬಂದಿರುತ್ತದೆ. ಇದಕ್ಕೆ ಸಂಬಂದಿಸಿದಂತೆ ಶ್ರೀ ಸುಶಾಂತ್ ಅವರ ಪ್ರೋಪೈಲ್ ರೆಕಾರ್ಡ ಲಗತ್ತಿಸಿದೆ. ಆದರೆ ಇವರಿಗೆ ಸಂಬಳ ನಿರ್ಣಯಿಸುವ ಬಗ್ಗೆ

ಅಧ್ಯಕ್ಷರು ಗಣಕೀಕರಣ ಉಪಸಮಿತಿಯ ನಿರ್ಣಯ ಕೈಗೊಂಡು ಸದರಿ ನಿರ್ಣಯವನ್ನು ಆಡಳಿತ ಮಂಡಳಿ ಅನುಮೋದಿಸಲಾಗಿದೆ. **(ಮಾಹಿತಿ ಲಗತ್ತಿದೆ)**

9. ಬ್ಯಾಂಕಿನ ಸೇವೆಯಿಂದ ವಜಾ ಆಗಿದ್ದ ಶ್ರೀಮತಿ ಲಕ್ಷ್ಮೀದೇವಿ ಹಾಗೂ ಇತರರಿಗೆ ವೇತನ, ನಿವೃತ್ತಿ ಆರ್ಥಿಕ ಸೌಲಭ್ಯಗಳು ಪಾವತಿಸಿರುವುದು.

ಅ) ಶ್ರೀಮತಿ ಲಕ್ಷ್ಮಿದೇವಿ

ವಿಜಯನಗರ ಶಾಖೆಯಲ್ಲಿ ದಿನಾಂಕ 20.10.2000ರಿಂದ 18.11.2003ರವರೆಗೆ ಶಾಖಾ ವ್ಯವಸ್ಥಾಪಕರಾಗಿ ಕಾರ್ಯ ನಿರ್ವಹಿಸಿದ್ದು, ಆ ಅವಧಿಯಲ್ಲಿ ಕೆಂಗೇರಿ ಉಪನಗರದ ಶ್ರೀ ವಿಶ್ವೇಶ್ವರ ಸ್ವಾಮಿ ಪ್ರೌಢಶಾಲೆ ನೌಕರರೆಂದು ಹೇಳಿಕೊಂಡ 58 ಜನರಿಗೆ ನಿಯಮ ಉಲ್ಲಂಘಿಸಿ ಮಂಜೂರು ಮಾಡಿರುವ ರೂ. 28.49 ಲಕ್ಷ ಕಂತು ಸಾಲ ಸುಸ್ತಿಯಾದ ಕಾರಣ ಮತ್ತು ನಿಯಮ ಉಲ್ಲಂಘಿಸಿ 5 ಜನ ಬೇನಾಮಿ ಹೆಸರಿನವರಿಗೂ ಸಾಲ ಮಂಜೂರು ಮಾಡಿರುವ ಬಗ್ಗೆ ಶ್ರೀಮತಿ ಲಕ್ಷ್ಮಿದೇವಿಯವರ ವಿರುದ್ಧ ಆಂತರಿಕ ವಿಚಾರಣೆ ನಡೆದು, ಅವರ ವಿರುದ್ಧ ಹೊರಿಸಿದ್ದ ಮೂರು ಆರೋಪಗಳು ಸಾಬೀತಾದ ಕಾರಣ, ಸದರಿಯವರ ನಿಯಮ ಬಾಹಿರ ಕೃತ್ಯದಿಂದಾಗಿ ಬ್ಯಾಂಕಿಗೆ ಆರ್ಥಿಕ ನಷ್ಟ ಉಂಟಾಗಿದೆಯೆಂದು ದಿನಾಂಕ 17.04.2006ರಂದು ಶಿಸ್ತು ಪ್ರಾಧಿಕಾರವಾದ ವ್ಯವಸ್ಥಾಪಕ ನಿರ್ದೇಶಕರು ಸದರಿಯವರನ್ನು ಸೇವೆಯಿಂದ ವಜಾಗೊಳಿಸಿ ಆದೇಶಿಸಿರುತ್ತಾರೆ. **(ವಜಾ ಆದೇಶದ ಪ್ರತಿ ಲಗತ್ತಿಸಿದೆ)**

ಶ್ರೀಮತಿ ಲಕ್ಷ್ಮಿದೇವಿಯವರು ಈ ಆದೇಶವನ್ನು ಪ್ರಶ್ನಿಸಿ ಸಹಕಾರ ಸಂಘಗಳ ಕಾಯ್ದೆ ಕಲಂ 70ರಡಿ ಸಹಕಾರ ಸಂಘಗಳ ಅಪರ ನಿಬಂಧಕರ ನ್ಯಾಯಾಲಯ ನಿಯಮ 441, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತ ಈ ನ್ಯಾಯಾಲಯದಲ್ಲಿ ದಾವೆ ದಾಖಲಿಸಿದ್ದು, ದಾವಾ ಸಂಖ್ಯೆ ಜೆಆರ್‌ಡಿ/ಎಎಕ್ಸಬಿ/19/2013-14, ಎಡಿಆರ್‌ಎಲ್‌ಆರ್/ಆರ್‌ಡಿ/ಎಎಕ್ಸಬಿ/69/2016-17 ಆಗಿದ್ದು, ಈ ದಾವೆಯು ದಿ: 06-10-2016 ರಂದು ಇತ್ಯರ್ಥವಾಗಿರುತ್ತದೆ. **(ನ್ಯಾಯಾಲಯದ ಆದೇಶದ ಪ್ರತಿಯನ್ನು ಲಗತ್ತಿಸಿದೆ)**

ವಜಾಗೊಂಡ ನೌಕರರಾದ ಶ್ರೀಮತಿ ಲಕ್ಷ್ಮಿದೇವಿಯವರ ಪರವಾಗಿ ತೀರ್ಪು ಬಂದಿದ್ದು, ಶ್ರೀಮತಿ ಲಕ್ಷ್ಮೀದೇವಿಯವರು ದಿನಾಂಕ:31.03.2017ರಂದು ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ ಮನವಿ ಸಲ್ಲಿಸಿ ನ್ಯಾಯಾಲಯದ ತೀರ್ಪಿನ ಅನುಸಾರ ಸದರಿಯವರಿಗೆ ಬರಬಹುದಾದ ಆರ್ಥಿಕ/ಸೇವಾ ಸವಲತ್ತುಗಳನ್ನು ನೀಡಲು ಮನವಿ ಮಾಡಿರುತ್ತಾರೆ.

ಶ್ರೀಮತಿ ಲಕ್ಷ್ಮಿದೇವಿಯವರಿಗೆ ನ್ಯಾಯಾಲಯದ ಆದೇಶದ ರೀತ್ಯಾ ಆರ್ಥಿಕ ಸವಲತ್ತುಗಳನ್ನು ನೀಡಲಾಗಿದ್ದು, ವಿವರ ಕೆಳಕಂಡಂತಿದೆ.

ಒಟ್ಟು ಮೊತ್ತ			ಕಟಾವುಗಳು	
ಕ್ರ. ಸಂ	ವಿವರ	ಮೊತ್ತ (ರೂ.ಲಕ್ಷಗಳಲ್ಲಿ)	ವಿವರ	ಮೊತ್ತ (ರೂ.ಲಕ್ಷಗಳಲ್ಲಿ)
1	20-04-2006ರಿಂದ 30-11-2013 ರವರೆಗೆ	47.71	ಬೇನಾಮಿ ಸಾಲದ ಅಸಲಿನ ಮೊತ್ತ	22.85

	ವೇತನ			
2	ಪಿಂಚಣಿ ಕೊಡುಗೆ	5.35	ಆದಾಯ ತೆರಿಗೆ	14.93
3	ಗ್ರಾಚುಟಿ	10.95	ಪಿಂಚಣಿ ನಿಧಿ	0.59
4	ರಜಾ ನಗದೀಕರಣ	6.22		
	ಒಟ್ಟು	70.23		38.37
	ಪಾವತಿಸಿರುವ ಒಟ್ಟು ಮೊತ್ತ – ರೂ. 31.87 ಲಕ್ಷಗಳು			

ದೂರು ಅರ್ಜಿಯಲ್ಲಿನ ಈ ವಿಷಯದ ಕುರಿತು **ಇಎಸ್‌ಟಿ ಶಾಖೆಯ ಕಡತ ಸಂಖ್ಯೆ 167** ನ್ನು ಪರಿಶೀಲಿಸಲಾಗಿರುತ್ತದೆ. ಕಡತದ ಕಛೇರಿ ಟಿಪ್ಪಣಿ ಭಾಗದ ಪುಟ ಸಂಖ್ಯೆ 27ರ ಕಂಡಿಕೆ 60ರಿಂದ 67ರವರೆಗೂ ಗಮನಿಸಲಾಗಿ ಕಡತ ವಿಷಯ ನಿರ್ವಾಹಕರಿಂದ ಕ್ರಮವಾಗಿ ಸಂಬಂಧಪಟ್ಟ ಸಿಬ್ಬಂದಿ/ಅಧಿಕಾರಿಗಳಿಂದ ಟಿಪ್ಪಣಿ ಮಂಡಿಸಲ್ಪಟ್ಟಿದ್ದು, ಅಂತಿಮವಾಗಿ ಅಧ್ಯಕ್ಷರಿಗೆ ಟಿಪ್ಪಣಿ ಮಂಡಿಸಿ ಅನುಮೋದನೆ ಪಡೆದು ಪಾವತಿಸಲಾಗಿರುತ್ತದೆ.

<u>ಪರಿಶೀಲನಾಧಿಕಾರಿಯ ಅಭಿಪ್ರಾಯ</u>

1) ಸಹಕಾರ ಸಂಘಗಳ ಅಪರ ನಿಬಂಧಕರು ನಿಯಮ 441 ಈ ನ್ಯಾಯಾಲಯದಲ್ಲಿ ಇತ್ಯರ್ಥವಾದ ದಿ:06-10-2016ರ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲು ಅವಕಾಶವಿದ್ದು, ಬ್ಯಾಂಕ್ ಮೇಲ್ಮನವಿ ಸಲ್ಲಿಸಿರುವುದಿಲ್ಲ.

2) ಇ.ಎಸ್.ಟಿ ಕಡತ ಸಂಖ್ಯೆ 167ರ ಕಛೇರಿ ಟಿಪ್ಪಣಿ 60 ರಿಂದ 67ರವರೆಗೆ ಗಮನಿಸಿದಾಗ, ಈ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸುವ ಬಗ್ಗೆ ಯಾವ ಕಂಡಿಕೆಗಳಲ್ಲಿಯೂ ಪ್ರಸ್ತಾಪವಾಗಿರುವುದಿಲ್ಲ. ಶ್ರೀಮತಿ ಲಕ್ಷ್ಮೀದೇವಿ ಇವರಿಗೆ ಅಪರ ನಿಬಂಧಕರ ನ್ಯಾಯಾಲಯದ ಆದೇಶದ ಅನುಸಾರ ಆರ್ಥಿಕ ಹಾಗೂ ಸೇವಾ ಸವಲತ್ತು ನೀಡುವ ಬಗ್ಗೆ ಮಾತ್ರ ಪ್ರಸ್ತಾಪಿಸಿ ಅಧ್ಯಕ್ಷರಿಗೂ ಸಹ ಇದೇ ರೀತಿ ಟಿಪ್ಪಣಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.

3) ಶ್ರೀಮತಿ ಲಕ್ಷ್ಮಿದೇವಿಯವರಿಗೆ ಒಟ್ಟಾರೆಯಾಗಿ ಆರ್ಥಿಕ ಸವಲತ್ತು ರೂ. **70.23** ಲಕ್ಷ ರೂ. ಗಳಾಗಿದ್ದು ಇಷ್ಟು ದೊಡ್ಡ ಮೊತ್ತವನ್ನು ಪಾವತಿಸುವ ಪೂರ್ವದಲ್ಲಿ ಆಡಳಿತ ಮಂಡಳಿಯಲ್ಲಿ ವಿಷಯವನ್ನು ಮಂಡಿಸಿ ಅನುಮೋದನೆ ಪಡೆದಿರುವುದು ಕಡತದಲ್ಲಿ ಕಂಡುಬಂದಿರುವುದಿಲ್ಲ.

4) ಶ್ರೀಮತಿ ಲಕ್ಷ್ಮಿದೇವಿಯವರು ಸೇವೆಯಿಂದ ವಜಾಗೊಂಡ ನಂತರ ಅವರ ಉಳಿದ ಸೇವಾ ಅವಧಿಯ ಆರ್ಥಿಕ ಸವಲತ್ತನ್ನು ಪಾವತಿಸಿದ್ದು, ಸೇವೆ ಸಲ್ಲಿಸಿದೆ ಇರುವ ಅವಧಿಗೆ ಪೂರ್ಣ ವೇತನ ಮತ್ತು ಇತರೆ ಸೌಲಭ್ಯ ಕೊಡುವ ಪೂರ್ವದಲ್ಲಿ ಈ ಬಗ್ಗೆ ಬ್ಯಾಂಕಿನ ಹಂತದಲ್ಲಿ ಪರಿಶೀಲಿಸಿ ಮೇಲ್ಮನವಿ ಸಲ್ಲಿಸಬಹುದಾಗಿತ್ತು.

5) ತನಿಖಾ ಸಮಯದಲ್ಲಿ ಈ ಸಾಲಗಳ ವಸೂಲಾತಿ ಬಗ್ಗೆ ಬ್ಯಾಂಕಿನ ಲೀಗಲ್ ಶಾಖೆಯಿಂದ ಮಾಹಿತಿ ಪಡೆಯಲಾಗಿರುತ್ತದೆ. ಶ್ರೀಮತಿ ಲಕ್ಷ್ಮಿದೇವಿಯವರ ಅವಧಿಯಲ್ಲಿ ನೀಡಿರುವ ಸಾಲಗಳ ವಸೂಲಾತಿ ಕುರಿತಂತೆ ಸಹಕಾರ ಸಂಘಗಳ ಕಾಯ್ದೆ ಕಲಂ

70ರಡಿ ದಾವಾ ದಾಖಲಿಸಿ ಅವಾರ್ಡ್ ಪಡಯಲಾಗಿದ್ದು ನಂತರ ಅವಲ್ಜಾರಿ ಅರ್ಜಿಯನ್ನು ಸಹ ಪಡೆಯಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

6) ಅಮಲ್ಜಾರಿ ಅರ್ಜಿಗಳ ಮೇಲೆ ಕ್ರಮವಿಟ್ಟು ಬ್ಯಾಂಕಿನ ವಸೂಲಾಧಿಕಾರಿಯು ವಸೂಲಿಗೆ ತೆರಳಿದ ಸಂದರ್ಭದಲ್ಲಿ ಸಾಲ ಪಡೆದ ಸಾಲಗಾರರು ವಿಳಾಸದಲ್ಲಿ ಇಲ್ಲದೆ ಇರುವುದರಿಂದ ಅಮಲ್ಜಾರಿ ಅರ್ಜಿಯ ಮೇಲೆ ಕ್ರಮ ಸಾಧ್ಯವಾಗಿರುವುದಿಲ್ಲವೆಂದು ವಸೂಲಾಧಿಕಾರಿ ಶಾಖಾ ವ್ಯವಸ್ಥಾಪಕರಿಗೆ ದಿನಾಂಕ 08.10.2004ರಲ್ಲಿ ಲಿಖಿತವಾಗಿ ತಿಳಿಸಿರುತ್ತಾರೆ. **(ಪ್ರತಿಯನ್ನು ಲಗತ್ತಿಸಿದೆ)**

7) ವಿಳಾಸದಾರರಿಲ್ಲದ ಬೇನಾಮಿ ಸಾಲ ನೀಡಿದ್ದ ಅಂದಿನ ಶಾಖಾ ವ್ಯವಸ್ಥಾಪಕರಾದ ಶ್ರೀಮತಿ ಲಕ್ಷ್ಮಿದೇವಿಯವರ ವಿರುದ್ಧ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 70ರಡಿ ದಿನಾಂಕ 06-03-2018ರಂದು ಸಹಕಾರ ಸಂಘಗಳ ಅಪರ ನಿಬಂಧಕರು ನಿಯಮ 441 ದಲ್ಲಿ ದಾವೆ ಹೂಡಲಾಗಿದ್ದು, ದಾವಾ ಸಂಖ್ಯೆ: ಆರ್‌ಸಿಎಸ್/ಸಿಆರ್‌ಡಿ/ಕೆಎಂಇ-08/278/2011-12, ಜೆಆರ್‌ಡಿ/ಎಕ್ಸಬಿ/93/2013-14, ಆರ್‌ಸಿಎಸ್/ಸಿಆರ್‌ಡಿ/ಕೆಎಂಇ-08/19/2019-20 ಆಗಿದ್ದು, ದಾವೆ ವಿಚಾರಣಾ ಹಂತದಲ್ಲಿರುತ್ತದೆ.

8) ಈ ಪ್ರಕರಣ ಇತ್ಯರ್ಥಕ್ಕೆ ಬಾಕಿ ಇರುವ ಪೂರ್ವದಲ್ಲಿಯೇ ಶ್ರೀಮತಿ ಲಕ್ಷ್ಮಿದೇವಿಯವರಿಗೆ ಅವರ ಸೇವಾ ಸವಲತ್ತುಗಳು ಸೇರಿದಂತೆ ಆರ್ಥಿಕ ಸೌಲಭ್ಯಗಳನ್ನು ನೀಡಿರುವುದು ನೀಡಿರುವುದು ಸೂಕ್ತವಾಗಿರುವುದಿಲ್ಲ.

ಆ) ಶ್ರೀ ವೆಂಕಟರಮಣ ಶೆಟ್ಟಿ

ದೂರು ಅರ್ಜಿಯಲ್ಲಿ ಹೇಳಿರುವಂತೆ ಇದೇ ರೀತಿ ಶಿಸ್ತು ಕ್ರಮಕ್ಕೆ ಒಳಪಟ್ಟ ನೌಕರರಿಗೆ ಸೇವಾ ಸವಲತ್ತು ನೀಡಿರುವ ಬಗ್ಗೆ ಆಡಳಿತ ಶಾಖೆಯಿಂದ ಮಾಹಿತಿ ಪಡೆಯಲಾಗಿ ಶ್ರೀ ವೆಂಕಟರಮಣ ಶೆಟ್ಟಿ ವ್ಯವಸ್ಥಾಪಕರು ಇವರು ಚೆಕ್‌ಬೌನ್ಸ ಪ್ರಕರಣದಲ್ಲಿ ನ್ಯಾಯಾಲಯದಲ್ಲಿ ಸಾಕ್ಷಿ ನೀಡುವ ಸಂದರ್ಭದಲ್ಲಿ ಆರೋಪಿಗಳಿಗೆ ಅನುಕೂಲವಾಗುವ ರೀತಿಯಲ್ಲಿ ಮಾಹಿತಿಯನ್ನು ತಿರುಚಿ ಬ್ಯಾಂಕಿನ ಹಿತಾಸಕ್ತಿಗೆ ವಿರುದ್ಧವಾಗಿ ಸಾಕ್ಷಿ ನೀಡಿರುತ್ತಾರೆಂದು ಆರೋಪಿಸಿ ಇವರ ವಿರುದ್ಧ ಆಂತರಿಕ ವಿಚಾರಣೆ ನಡೆಸಿ ದಿ; 18-05-2017 ರಂದು ಶಿಸ್ತು ಪ್ರಾಧಿಕಾರ ಇವರನ್ನು ಬ್ಯಾಂಕಿನ ಸೇವೆಯಿಂದ ವಜಾಗೊಳಿಸಿರುತ್ತಾರೆ.

ವಜಾಗೊಂಡ ನೌಕರರು ಬ್ಯಾಂಕಿನ ಅಧ್ಯಕ್ಷರಿಗೆ ದಿ; 26-07-2017 ರಂದು ಮನವಿ ಸಲ್ಲಿಸಿ ವಜಾ ಆದೇಶವನ್ನು ಹಿಂಪಡೆಯುವಂತೆ ಕೋರಿದ್ದು, ಅಧ್ಯಕ್ಷರು ವಜಾ ಅದೇಶವನ್ನು ರದ್ದುಗೊಳಿಸಿ ಸೇವಾ ಪುಸ್ತಕದ ಅನುಸಾರ ನೌಕರರು ನಿವೃತ್ತರಾಗಬೇಕಾದ ದಿನಾಂಕಕ್ಕೆ ನಿವೃತ್ತಿ ಎಂದು ಪರಿಗಣಿಸಿ ನಿವೃತ್ತಿ ಸೌಲಭ್ಯಗಳನ್ನು ಬಿಡುಗಡೆ ಮಾಡಲು ಆದೇಶಿಸಿರುತ್ತಾರೆ.

ಅಧ್ಯಕ್ಷರ ಆದೇಶದಂತೆ ಸದರಿ ನೌಕರರಿಗೆ ಈ ಕೆಳಗಿನಂತೆ ಪಾವತಿಸಲಾಗಿತ್ತದೆ.

ಉಪಧನ – 10.00,000 ರೂ.
ರಜಾ ನಗದೀಕರಣ – 1.52, 402 ರೂ.
ಬಾಕಿ ವೇತನ – 1.14097 ರೂ.
ಒಟ್ಟು – 12,93,499 ರೂ

<u>ಪರಿಶೀಲನಾಧಿಕಾರಿಯ ಅಭಿಪ್ರಾಯ</u>

ನೌಕರರಿಗೆ ಆರ್ಥಿಕ ಸೌಲಭ್ಯ ನೀಡುವ ಪೂರ್ವದಲ್ಲಿ ಆಡಳಿತ ಮಂಡಳಿಗೆ ವಿಷಯ ಮಂಡಿಸದೇ ಇರುವುದು ಕ್ರಮಬದ್ಧವಲ್ಲವೆಂದು ಅಭಿಪ್ರಾಯ ಪಡಲಾಗಿದೆ

ಇ) ಶ್ರೀ ಮಸಳಿ ಆರ್.ಎಸ್.

ಶ್ರೀ ಮಸಳಿಯವರು, ಬ್ಯಾಂಕಿನ ಆರ್‌ಟಿ ನಗರ ಶಾಖೆಯಲ್ಲಿ ಶಾಖಾ ವ್ಯವಸ್ಥಾಪಕರಾದ್ದ ಅವಧಿಯಲ್ಲಿ ಶ್ರೀ ರವಿರಾಜ್ ಎಂಬುವವರಿಗೆ ರೂ. 14.80,000/- ಗಳನ್ನು ಚಿನ್ನಾಭರಣ ಸಾಲವನ್ನು ಬ್ಯಾಂಕಿನ ನಿಯಮ ಉಲ್ಲಂಘಿಸಿ ಮಂಜೂರು ಮಾಡಿರುತ್ತಾರೆಂದು ಸದರಿ ಚಿನ್ನಾಭರಣವನ್ನು ಸಾಲಗಾರನು ಛೀಮಾ ಗೋಲ್ಡ ಜ್ಯುವೆಲ್ಸ್‌ನಿಂದ ಕದ್ದು ತಂದ ಆರೋಪದಡಿಯಲ್ಲಿ ಪೋಲಿಸ್ ಪ್ರಕರಣ ದಾಖಲಾಗಿ ಚಿನ್ನಾಭರಣವನ್ನು ಮುಟ್ಟುಗೋಲು ಹಾಕಿದ ಹಿನ್ನೆಲೆಯಲ್ಲಿ ಈ ನೌಕರರ ವಿರುದ್ಧ ಆಂತರಿಕ ವಿಚಾರಣೆ ನಡೆಸಿ ದಿ; 29-07-2013 ರಂದು ಶಿಸ್ತು ಪ್ರಾಧಿಕಾರದ ಆದೇಶದನ್ವಯ ಒಂದು ವೇತನ ಬಡ್ತಿಯನ್ನು ಸಂಚಿತ ಪರಿಣಾಮದೊಂದಿಗೆ ತಡೆಹಿಡಿಯುವ ಶಿಕ್ಷೆ ವಿಧಿಸಿ, ಬ್ಯಾಂಕಿಗೆ ಆಗಿರುವ ಆರ್ಥಿಕ ನಷ್ಟವನ್ನು ಅಸಲು ಮತ್ತು ಬಡ್ಡಿಯೊಂದಿಗೆ ಪೂರ್ಣವಾಗಿ ಬ್ಯಾಂಕಿಗೆ ಕಡ್ಡಾಯವಾಗಿ ತುಂಬಿಕೊಡುವಂತೆ ಆದೇಶಿಸಲಾಗಿತ್ತು.

ಶ್ರೀ ಮಸಳಿ ಆರ್.ಎಸ್. ಇವರು ಬ್ಯಾಂಕಿನ ಅಧ್ಯಕ್ಷರಿಗೆ ದಿ; 03-04-2018 ರಂದು ಮೇಲ್ಮನವಿಯನ್ನು ಸಲ್ಲಿಸಿದ್ದು, ಅಧ್ಯಕ್ಷರು ದಿ; 05-07-2018 ರಂದು ಶಿಸ್ತು ಪ್ರಧಿಕಾರದ ಆದೇಶವನ್ನು ಮಾರ್ಪಡಿಸಿ ಸಾಲಗಳು ವಸೂಲಿಯಾಗದೇ ಬ್ಯಾಂಕಿಗೆ ಮುಂದೆ ಹಾನಿ ಉಂಟಾದಲ್ಲಿ ಈ ಆರ್ಥಿಕ ನಷ್ಟವನ್ನು ಭರಿಸುತ್ತೇನೆಂದು ನೋಟರೀಕೃತ ಮುಚ್ಚಳಿಕೆ ಸಲ್ಲಿಸುವ ಷರತ್ತಿಗೆ ಒಳಪಟ್ಟು ಸಂಚಿತ ಪರಿಣಾಮದೊಂದಿಗೆ ತಡೆಹಿಡಿಯಲಾಗಿದ್ದ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮವಿಲ್ಲದೇ ಒಂದು ವರ್ಷಕ್ಕೆ ಮಿತಿಗೊಳಿಸಿ ವೇತನ ನಿಗದಿಗೊಳಿಸಲು ಆದೇಶಿಸಿರುತ್ತಾರೆ.

ಮೇಲ್ಮನವಿ ಪ್ರಾಧಿಕಾರದ ಆದೇಶದ ಅನುಸಾರ ಶ್ರೀ ಮಸಳಿಯವರಿಗೆ ತಡೆಹಿಡಿದಿದ್ದ ಸಂಚಿತ ವೇತನ ಬಡ್ತಿ ಮೊತ್ತ ರೂ. 97,173 ರೂ. ಗಳನ್ನು ಅಗಸ್ಟ -2018 ರ ವೇತನದೊಂದಿಗೆ ಪಾವತಿಸಲಾಗಿದೆ.

<u>ಪರಿಶೀಲನಾಧಿಕಾರಿಯ ಅಭಿಪ್ರಾಯ</u>

ಬ್ಯಾಂಕಿನ ಸೇವಾ ನಿಯಮಾವಳಿಗಳ ರೀತ್ಯಾ ನೇಮಕಾತಿ ಪ್ರಾಧಿಕಾರವೇ ಶಿಸ್ತು ಪ್ರಾಧಿಕಾರವಾಗಿದ್ದು, ನೇಮಕಾತಿ ಪ್ರಾಧಿಕಾರವಾದ ಆಡಳಿತ ಮಂಡಳಿಗೆ ವಿಷಯ ಮಂಡಿಸದೇ ಇರುವುದು ಕ್ರಮಬದ್ಧವಲ್ಲವೆಂದು ಅಭಿಪ್ರಾಯ ಪಡಲಾಗಿದೆ.

10. ಸಿಬ್ಬಂದಿಗಳ ನೇಮಕಾತಿಯಲ್ಲಿ ಅವ್ಯವಹಾರಗಳು ನಡೆದಿರುವುದು.

ದೂರು ಅಂಶಗಳ ಕುರಿತು ಕಡತ ಪರಿಶೀಲಿಸಲಾಗಿರುತ್ತದೆ. ತನಿಖೆಗೆ ಕಡತ/ದಾಖಲೆಗಳನ್ನು ಹಾಜರು ಪಡಿಸಿದವರು ಶ್ರೀ ಬೆಳ್ಳಿಯಪ್ಪ ಮತ್ತು ಶ್ರೀ ಜ್ಞಾನಾನಂದ ಆಗಿರುತ್ತಾರೆ.

ಅಪೆಕ್ಸ ಬ್ಯಾಂಕಿನಲ್ಲಿ 2016ರ ನವೆಂಬರ್ ಅಂತ್ಯಕ್ಕೆ ಗುಮಾಸ್ತ ಹುದ್ದೆಯಲ್ಲಿ 215 ವೃಂದ ಬಲವಿದ್ದು, ಇದರಲ್ಲಿ 130 ಜನ ಕಾರ್ಯನಿರ್ವಹಿಸುತ್ತಿದ್ದು, 31-12-2016 ರ ಅಂತ್ಯಕ್ಕೆ 13 ಜನ ಪದೋನ್ನತಿ ಮತ್ತು ನಿವೃತ್ತಿಯಿಂದ ತೆರವಾಗುವ ಹುದ್ದೆಗಳನ್ನು ಪರಿಗಣಿಸಿ ಒಟ್ಟು 98 ಗುಮಾಸ್ತ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ದಿ; 24-09-2016 ರ ಆಡಳಿತ ಮಂಡಳಿಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.

ದಿ; 03-11-2016 ರಂದು ನೇಮಕಾತಿ ಸಮಿತಿಯನ್ನು ರಚಿಸಿದ್ದು, ಬ್ಯಾಂಕಿನ ಅಧ್ಯಕ್ಷರು, ಸಮಿತಿಯ ಅಧ್ಯಕ್ಷರಾಗಿ, ಬ್ಯಾಂಕಿನ ಉಪಾಧ್ಯಕ್ಷರು, ಒರ್ವ ನಿರ್ದೇಶಕರು, ಹಾಗೂ ಸಹಕಾರ ಸಂಘಗಳ ನಿಬಂಧಕರ ಪ್ರತಿನಿಧಿ ಸೇರಿದಂತೆ 3 ಜನ ಸದಸ್ಯರು, ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ನೇಮಕಾತಿ ಸಮಿತಿಗೆ ಸದಸ್ಯ ಕಾರ್ಯದರ್ಶಿಯಾಗಿರುತ್ತದೆ.

ರೋಸ್ಟರ್ ಮತ್ತು ಹೈದರಾಬಾದ್ ಕರ್ನಾಟಕಕ್ಕೆ ಮೀಸಲಾತಿಯನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಅನುಮೋದನೆ ಪಡೆದಿರುತ್ತಾರೆ. ದಿ: 15-11-2016 ರ ಪ್ರಜಾವಾಣಿ, ಸಂಯುಕ್ತ ಕರ್ನಾಟಕ ದಿನ ಪತ್ರಿಕೆಯಲ್ಲಿ ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಲು ಪ್ರಕಟಣೆ ಹೊರಡಿಸಿ ದಿ; 15-12-2016ರ ಸಂಜೆ 5.30 ರೊಳಗೆ ಕೊನೆಯ ದಿನಾಂಕ ಮತ್ತು ಸಮಯವನ್ನು ನಿಗದಿಪಡಿಸಲಾಗಿದೆ. **(ಪತ್ರಿಕಾ ಪ್ರಕಟಣೆ ಲಗತ್ತಿಸಿದೆ)**

ಅರ್ಜಿ ಸ್ವೀಕೃತಿಯಿಂದ ಪ್ರಾರಂಭಗೊಂಡು, ಅರ್ಜಿಗಳ ಪರೀಶೀಲನೆ, ಲಿಖಿತ ಪರೀಕ್ಷೆಗೆ ಅರ್ಹ ಅಭ್ಯರ್ಥಿಗಳ ಪಟ್ಟಿ ಸಿದ್ದಪಡಿಸುವುದು, ಲಿಖಿತ ಪರೀಕ್ಷೆಯ ನಂತರ ಸಂದರ್ಶನಕ್ಕೆ 1:5 ಅನುಪಾತದಲ್ಲಿ ಮೌಖಿಕ ಸಂದರ್ಶನಕ್ಕೆ ಲಿಖಿತ ಪರೀಕ್ಷಾ ಅಂಕ ಆಧರಿಸಿ ಪಟ್ಟಿ ಸಿದ್ಧಪಡಿಸುವ ಕಾರ್ಯವನ್ನು ಮೆ॥ ಇಂಟೆಂಟ್ ಇನ್‌ಫೋಟೆಕ್ ಪ್ರೈ. ಲಿ. ಸಂಸ್ಥೆಗೆ ವಹಿಸಲಾಗಿರುತ್ತದೆ.

ಲಿಖಿತ ಪರೀಕ್ಷೆಯನ್ನು ನಡೆಸಲು ಕೆನರಾ ಬ್ಯಾಂಕ್, ಎಸ್‌ಬಿಐ ಬ್ಯಾಂಕ್, ಎನ್‌ಐಆರ್‌ಬಿ ಸಂಸ್ಥೆಗೆ ಕೋರಲಾಗಿದ್ದು, ಎನ್‌ಐಆರ್‌ಬಿ ಸಂಸ್ಥೆ ಒಪ್ಪಿದ್ದರಿಂದ **ದಿ; 17-04-2017** ರಂದು ಲಿಖಿತ ಪರೀಕ್ಷೆ ನಡೆಸಲು ಎನ್‌ಐಆರ್‌ಬಿ ಸಂಸ್ಥೆಗೆ ಆದೇಶ ನೀಡಲಾಗಿದೆ.

ಒಟ್ಟು 2800 ಅರ್ಜಿಗಳು ಸ್ವೀಕೃತವಾಗಿದ್ದು, ಇದರಲ್ಲಿ 2518 ಅರ್ಜಿಗಳು ಕ್ರಮ ಬದ್ಧವಾಗಿದ್ದು ದಿ; 14-05-2017 ರಂದು ಲಿಖಿತ ಪರೀಕ್ಷೆ ನಡೆಸಲಾಗಿದೆ. ಒಟ್ಟು 2022 ಅಭ್ಯರ್ಥಿಗಳು ಲಿಖಿತ ಪರೀಕ್ಷೆಗೆ ಹಾಜರಾಗಿದ್ದು, 1:5 ಅನುಪಾತದಲ್ಲಿ 488 ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಆಹ್ವಾನಿಸಿದ್ದು, 5 ದಿನ ಸಂದರ್ಶನ ನಡೆಸಲಾಗಿದೆ. 35 ಅಭ್ಯರ್ಥಿಗಳು ಸಂದರ್ಶನಕ್ಕೆ ಗೈರಾಗಿರುತ್ತಾರೆ.

ದಿ; 30-10-2017ರಂದು ನಡೆದ ಕೊನೆಯ ನೇಮಕಾತಿ ಸಮಿತಿಯಲ್ಲಿ ಒಟ್ಟು 105 ಗುಮಾಸ್ತ ಹುದ್ದೆಗಳಿಗೆ ಅಭ್ಯರ್ಥಿಯನ್ನು ಆಯ್ಕೆ ಮಾಡಲಾಗಿದ್ದು, **(ಆಯ್ಕೆ ಪಟ್ಟಿ ಲಗತ್ತಿಸಿದೆ)**

ಆಯ್ಕೆ ಪಟ್ಟಿ ಪರಿಶೀಲಿಸಲಾಗಿ ವಿವಿಧ ಜಿಲ್ಲೆ ಅಭ್ಯರ್ಥಿಗಳು ನೇಮಕಾತಿ ಪ್ರಕ್ರಿಯೆಯಲ್ಲಿ ಆಯ್ಕೆಯಾಗಿದ್ದು, ತುಮಕೂರು ಜಿಲ್ಲೆಯಿಂದ 22 ಅಭ್ಯರ್ಥಿಗಳು ಆಯ್ಕೆಯಾಗಿರುವುದು ನೇಮಕಾತಿ ಪಟ್ಟಿಯಿಂದ ಕಂಡುಬರುತ್ತಿದೆ.

ಪತ್ರಿಕಾ ಪ್ರಕಟಣೆಯಲ್ಲಿ 98 ಹುದ್ದೆಗಳ ಆಯ್ಕೆಗೆ ಪ್ರಕಟಣೆ ಹೊರಡಿಸಲಾಗಿದ್ದು, ತದನಂತರ ಪದೋನ್ನತಿ ಹುದ್ದೆಯಿಂದ ತೆರವಾದ 06 ಹುದ್ದೆಗಳನ್ನು ಸಹ ಭರ್ತಿ ಮಾಡಲು ದಿ; 30-10-2017ರಂದು ಕೊನೆಯ ನೇಮಕಾತಿ ಸಮಿತಿಯಲ್ಲಿ ಚರ್ಚಿಸಿ, ತೀರ್ಮಾನಿಸಿ ಒಟ್ಟು 105 ಗುಮಾಸ್ತ ಹುದ್ದೆಗೆ ಆಯ್ಕೆ ಮಾಡಿದ್ದು, ಇದನ್ನು ದಿ; 17-02-2018 ರಂದು ನಡೆದ ಆಡಳಿತ ಮಂಡಳಿ ಸಭೆಯಲ್ಲಿ ಸ್ಥಿರೀಕರಿಸಲಾಗಿದೆ. 06 ಹುದ್ದೆಗಳಿಗೆ ಪದೋನ್ನತಿ ನೀಡಿದ್ದು, ಒಟ್ಟು 104 ಹುದ್ದೆಗಳು ಭರ್ತಿ ಮಾಡಬೇಕಾಗಿದ್ದು, 1 ಹೆಚ್ಚಿಗೆ ಹುದ್ದೆ ಭರ್ತಿ ಮಾಡಲಾಗಿದೆ.

<u>ಪರಿಶೀಲನಾಧಿಕಾರಿಯ ಅಭಿಪ್ರಾಯ</u>

ತುಮಕೂರು ಜಿಲ್ಲೆಯ ಅಭ್ಯರ್ಥಿಗಳಿಗೆ 60 ಹುದ್ದೆಗಳನ್ನು ನೀಡಲಾಗಿದೆಯೆಂಬ ಆರೋಪಕ್ಕೆ ಸಂಬಂಧಿಸಿದಂತೆ, ಒಟ್ಟು 105 ಹುದ್ದೆಯಲ್ಲಿ ತುಮಕೂರು ಜಿಲ್ಲೆಯಲ್ಲಿ 22 ಅಭ್ಯರ್ಥಿಗಳು ಮಾತ್ರ ಆಯ್ಕೆಯಾಗಿರುವುದು ನೇಮಕಾತಿ ಪಟ್ಟಿಯಿಂದ ಕಂಡುಬಂದಿರುತ್ತದೆ. ತುಮಕೂರು ಜಿಲ್ಲೆಯಿಂದ ಬಂದಿರುವ ಅರ್ಜಿಗಳು, ಲಿಖಿತ ಪರೀಕ್ಷೆಗೆ ಹಾಜರಾದ ಅಭ್ಯರ್ಥಿಗಳು ಹಾಗೂ ಮೌಖಿಕ ಪರೀಕ್ಷೆಗೆ ಹಾಜರಾದ ಅಭ್ಯರ್ಥಿಗಳ ಪಟ್ಟಿ ದಾಖಲೆ ಹಾಜರುಪಡಿಸಿರುವುದಿಲ್ಲ ಮತ್ತು ಪರಿಶೀಲನೆಯ ಸಮಯದಲ್ಲಿ ನಿಬಂಧಕರ ಕಛೇರಿಯಿಂದ ಮಂಜೂರಾದ ವೃಂದ ಬಲ ಅಥವಾ ನಬಾರ್ಡ ಮಾನವ ಸಂಪನ್ಮೂಲ ನಿಯಮಾವಳಿ ರೀತ್ಯಾ ಬ್ಯಾಂಕು ಅನುಮೋದಿಸಿಕೊಂಡಿರುವ ವೃಂದಬಲ ಮತ್ತು ನಿಯಮಾವಳಿಗಳನ್ನು ಹಾಜರುಪಡಿಸಿರುವುದಿಲ್ಲ. ಮತ್ತು ಎನ್‌ಐಆರ್‌ಬಿ ಸಂಸ್ಥೆ ಮತ್ತು ಮೇ॥ ಇಂಟೆಂಟ್ ಇನ್‌ಫೋಟೆಕ್ ಪ್ರೈ. ಲಿ. ಸಂಸ್ಥೆಯಿಂದ ಬ್ಯಾಂಕು ಎಲ್ಲಾ ಹಂತದ ಅಭ್ಯರ್ಥಿಗಳ ಪಟ್ಟಿಯನ್ನು ಪಡೆದು ದಾಖಲಿಸದೇ ಇರುವುದರಿಂದ ಮತ್ತು ಸದರಿ ಸಂಸ್ಥೆಗಳು ಅನುಸರಿಸಿದ ಪದ್ಧತಿಯ ಬಗ್ಗೆ ದಾಖಲಾತಿಯನ್ನು ಹಾಜರು ಪಡಿಸಿರುವುದಿಲ್ಲ.

ಆದ್ದರಿಂದ ಆರೋಪದ ಅಂಶಗಳ ಪರಿಶೀಲನೆಗೆ ಹೆಚ್ಚಿನ ಸಮಯಾವಕಾಶ ಬೇಕಾಗಿದ್ದು, ಉನ್ನತ ಮಟ್ಟದ ವಿಚಾರಣೆಯಲ್ಲಿ ತಾಂತ್ರಿಕ ಅಂಶಗಳನ್ನು ಪರಿಶೀಲಿಸಬಹುದಾಗಿರುತ್ತದೆ. **(ದಾಖಲೆಗಳನ್ನು ಲಗತ್ತಿಸಿದೆ)**

11. ಬ್ಯಾಂಕಿನ ಶಾಖೆಗಳ ನವೀಕರಣ ಮತ್ತು ಹೊಸ ಶಾಖೆಗಳ ಒಳಾಂಗಣ ವಿನ್ಯಾಸ ಕಾಮಗಾರಿಯಲ್ಲಿ ಪಾರದರ್ಶಕ ಕಾಯ್ದೆಯ ಉಲ್ಲಂಘನೆ

ತನಿಖೆಗೆ ಕಡತ/ದಾಖಲೆಗಳನ್ನು ಹಾಜರು ಪಡಿಸಿದವರು ಶ್ರೀ ಲೀನಾ ಕುಮಾರ್ ಹಾಗೂ ಶ್ರೀಮತಿ ಗಾಯತ್ರಿ ಬಿ.ಎಸ್ ಆಗಿರುತ್ತಾರೆ. ಅಪೆಕ್ಸ ಬ್ಯಾಂಕಿನಲ್ಲಿ ಒಟ್ಟು 48

ಶಾಖೆಗಳಿದ್ದು, ವಿಚಾರಣಾ ಸಂದರ್ಭದಲ್ಲಿ 6 ಶಾಖೆಗಳ ನವೀಕರಣ/ ಒಳಾಂಗಣ ವಿನ್ಯಾಸ ಮಾಡಿಸಲಾಗಿದೆ. ಕಡತಗಳನ್ನು ಪರಿಶೀಲಿಸಲಾಗಿದ್ದು ಒಟ್ಟು ಆರು ಶಾಖೆಗಳ ನವೀಕರಣ/ ಒಳಾಂಗಣ ವಿನ್ಯಾಸ ಮಾಡಿಸಲಾಗಿರುತ್ತದೆ.

ಇದಕ್ಕೆ ಸಂಬಂಧಿಸಿದ ಕಡತ ಪರಿಶೀಲಿಸಲಾಗಿ ಪತ್ರಿಕಾ ಪ್ರಕಟಣೆ ಮೂಲಕ ಟೆಂಡರ್ ಅಧಿಸೂಚನೆ ಹೊರಡಿಸಲಾಗಿದ್ದು, ವಿವರ ಈ ಕೆಳಗಿನಂತಿದೆ.

ಕ್ರ.ಸಂ	ಶಾಖೆಗಳು	ಪತ್ರಿಕಾ ಪ್ರಕಟಣೆ ವಿವರ
1	ವಿದ್ಯಾರಣ್ಯ ಪುರಂ ಶಾಖೆ	ಕನ್ನಡ ಪ್ರಭ ದಿ: 05-05-18
2	ಬನ್ನೇರುಗಟ್ಟ ಶಾಖೆ	ಉದಯವಾಣಿ ದಿ:05-07-2018
3	ಸರ್.ಎಂ.ವಿಶ್ವೇಶ್ವರಯ್ಯ, ಬಡಾವಣೆ ಶಾಖೆ	ಉದಯವಾಣಿ ದಿ:05-07-2018
4	ತಲಘಟ್ಟ ಪುರ ಶಾಖೆ	ಕನ್ನಡ ಪ್ರಭ ದಿ:01-09-18
5	ಗಾಯತ್ರಿ ನಗರ ಶಾಖೆ	ಕನ್ನಡ ಪ್ರಭ ದಿ:20-10-18
6	ಉತ್ತರಹಳ್ಳಿ ಶಾಖೆ	ಕನ್ನಡ ಪ್ರಭ ದಿ: 30-11-18

ಟೆಂಡರ್ ಪಡೆದ ನಂತರ ತಾಂತ್ರಿಕ ಬಿಡ್ ಮತ್ತು ಕಮರ್ಶಿಯಲ್ ಬಿಡ್ ಮೂಲಕ ಕಡಿಮೆ ದರ ನಮೂದಿಸಿರುವ ಟೆಂಡರ್‌ದಾರರಿಂದ ದರ ಸಂಧಾನ ನಡೆಸಿ ಕಾಮಗಾರಿ ವಹಿಸಲಾಗಿರುತ್ತದೆ ಮತ್ತು ನಿಯಮಾನುಸಾರ ಬಿಲ್ ಪಡೆದು ಕಾಮಗಾರಿ ಮೊತ್ತ ಪಾವತಿಸಿರುವುದು ಕಂಡುಬರುತ್ತದೆ.**(ಪತ್ರಿಕಾ ಪ್ರಕಟಣೆ ಲಗತ್ತಿಸಿದೆ)**

12. ವಯೋನಿವೃತ್ತಿ ಅಂಚಿನಲ್ಲಿರುವವರನ್ನು ವಿದೇಶ ಯಾತ್ರೆಗೆ ಕಳುಹಿಸಿರುವುದು.

ಸದರಿ ಬ್ಯಾಂಕಿನ ಸಂಬಂಧಿಸಿದ ಅಧಿಕಾರಿಗಳು ಲಿಖಿತ ಹೇಳಿಕೆ ಹಾಗೂ ಸಂಬಂಧಿಸಿದ ಪೂರಕ ದಾಖಲೆಗಳನ್ನು ಪರಿಶೀಲನೆಗೆ ಹಾಜರುಪಡಿಸಿರುತ್ತಾರೆ. ಆ ಪ್ರಕಾರ ಭಾರತೀಯ ರಿಸರ್ವ್ ಬ್ಯಾಂಕ್ ಇಲ್ಲಿಂದ CAB No.304/09.05.02/2017-18 ದಿನಾಂಕ 22.03.2018ರಂದು Chairman/Chief Executive Officer ಎಂದು ನಾಮಾಂಕಿತಗೊಳಿಸಿರುವ ಪತ್ರವು ಬ್ಯಾಂಕಿನಿಂದ ಸ್ವೀಕೃತಗೊಂಡಿದ್ದು, ಪತ್ರವನ್ನು ಪರಿಶೀಲಿಸಲಾಗಿ ಹಾಗೂ ಬ್ಯಾಂಕಿನ ಅಧಿಕಾರಿಗಳು ನೀಡಿರುವ ಲಿಖಿತ ಹೇಳಿಕೆ ರೀತಿಯ ಭಾರತೀಯರಿಸರ್ವ್ ಬ್ಯಾಂಕಿನ ಅಂಗ ಸಂಸ್ಥೆಯಾದ College of Agricultural Banking, Pune EªÀgÀÄ International Exposure Visit Programme to Germany and Netherlands for the Directors/CEOs /Senior Executives of the Urban Co-operative Banks and Rural Co-operative Bank ರವರಿಗೆ ದಿನಾಂಕ 09.02.2018 ರಿಂದ 17.02.2018ರವರೆಗೆ ತರಬೇತಿ ಆಯೋಜಿಸಿರುವುದಾಗಿ ತಿಳಿಸಿ ಬ್ಯಾಂಕಿನ ಹಿರಿಯ ಅಧಿಕಾರಿಗಳನ್ನು ನಿಯೋಜಿಸುವಂತೆ ಪತ್ರ ಸಲ್ಲಿಸಿದ್ದರ ಮೇರೆಗೆ ಈ ಬ್ಯಾಂಕಿನ ಹಿರಿಯ ಅಧಿಕಾರಿಗಳಾದ ಶ್ರೀ ಜಂಗಮಪ್ಪ, ಮುಖ್ಯ ಪ್ರಧಾನ ವ್ಯವಸ್ಥಾಪಕರು ಹಾಗೂ ಶ್ರೀ

ನಾಗಣ್ಣವರ್, ಪ್ರಧಾನ ವ್ಯವಸ್ಥಾಪಕರು ಇವರುಗಳನ್ನು ಸದರಿ ಬ್ಯಾಂಕ್‌ವತಿಯಿಂದ ಆಯ್ಕೆಮಾಡಿ ಅಭ್ಯಾಸ ಪ್ರವಾಸಕ್ಕೆ ಕಳುಹಿಸಲು ತೀರ್ಮಾನಿಸಲಾಗಿದ್ದು, ಸದರಿ ಪ್ರವಾಸವು ಕಾರಣಾಂತರಗಳಿಂದ ಮುಂದೂಡಿ ದಿನಾಂಕ 08.07.2018 ರಿಂದ 17.07.2018ರವರೆಗೆ ನಡೆದಿರುವುದು ದಾಖಲಾತಿಗಳಿಂದ ಹಾಗೂ ಹೇಳಿಕೆಯಿಂದ ಕಂಡುಬರುತ್ತದೆ. ದೂರುದಾರರು ದೂರಿರುವಂತೆ ಅಧ್ಯಯನಾ ಪ್ರವಾಸಕ್ಕೆ ಕೇವಲ ಹಿರಿಯ ಅಧಿಕಾರಿಗಳನ್ನು ನಿಯೋಜಿಸಬೇಕೆಂದು ಇರುತ್ತದೆಯೆ ಹೊರತು ವಯಸ್ಸಿನ ಮಿತಿ ನಿಗದಿಪಡಿಸಿರುವುದಿಲ್ಲ. ಸದರಿ ಹಿರಿಯ ಅಧಿಕಾರಿಗಳು ಪ್ರಸ್ತುತವು ಸಹ ಬ್ಯಾಂಕಿನಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಸದರಿ ವಿಷಯವಾಗಿ ಬ್ಯಾಂಕಿನ ಅಧಿಕಾರಿಗಳು ನೀಡಿರುವ ಲಿಖಿತ ಹೇಳಿಕೆ ಹಾಗೂ ಸಂಬಂಧಿಸಿದ ಪೂರಕ ದಾಖಲಾತಿಗಳನ್ನು ಪತ್ರದೊಂದಿಗೆ ಲಗತ್ತಿಸಿದೆ.

13. ಸುಸ್ತಿ ಸಾಲಗಾರರಿಗೆ ಪುನರುಜ್ಜೀವನ ಸಾಲ ನೀಡಿರುವುದು.

ಸದರಿ ವಿಷಯವಾಗಿ ಬ್ಯಾಂಕಿನ ಅಧಿಕಾರಿಗಳು ಲಿಖಿತ ಹಾಗೂ ಮೌಖಿಕವಾಗಿ ತಿಳಿಸುತ್ತಾ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಬ್ಯಾಂಕಿನಿಂದ ಯಾವುದೇ ಸುಸ್ತಿ ಸಾಲಗಾರರಿಗೆ ಪುರರುಜ್ಜೀವನ ಯೋಜನೆಯಡಿಯಲ್ಲಿ ಯಾವುದೇ ಹೊಸ ಸಾಲಗಳನ್ನು ಮಂಜೂರು ಮಾಡಿರುವುದಿಲ್ಲ. **(ಲಿಖಿತ ಹೇಳಿಕೆ ಪ್ರತಿ ಲಗತ್ತಿಸಿದೆ.)**

14. ಬಿಲ್ ಕಲೆಕ್ಟರಗಳನ್ನು ಹೊರಗುತ್ತಿಗೆಯಲ್ಲಿ ನೇಮಕ ಮಾಡಿಕೊಂಡು ಬ್ಯಾಂಕಿಗೆ ಆರ್ಥಿಕ ನಷ್ಟ ಮಾಡಿರುವುದು.

ಸದರಿ ವಿಷಯವಾಗಿ ಬ್ಯಾಂಕಿನ ಅಧಿಕಾರಿಗಳು ಲಿಖಿತವಾಗಿ ಹೇಳಿಕೆ ನೀಡಿದ್ದು, ಜೊತೆಗೆ ಪೂರಕ ದಾಖಲಾತಿಗಳನ್ನು ಸಹ ನೀಡಿರುತ್ತಾರೆ.

ಮೇಲಿನಂತೆ ನೀಡಿರುವ ಹೇಳಿಕೆ ಹಾಗೂ ಪೂರಕ ದಾಖಲಾತಿಗಳನ್ನು ಪರಿಶೀಲಿಸಲಾಗಿ ಮಾನ್ಯ ಅಧ್ಯಕ್ಷರು, ಅಪೆಕ್ಸ್ ಬ್ಯಾಂಕ್‌ಇವರ ನಿರ್ದೇಶನದ ರೀತಿಯ ಕಾರ್ಯದರ್ಶಿಗಳು Bill Collection ವಿಷಯವಾಗಿ ಇತರೆ ಬ್ಯಾಂಕುಗಳಲ್ಲಿ ಅನುಸರಿಸುತ್ತಿರುವ ಕಾರ್ಯವೈಖರಿ ಕುರಿತು ಪರಿಶೀಲಿಸಿ ಮಾಹಿತಿ ನೀಡುವಂತೆ ಬ್ಯಾಂಕಿನ ಕಾರ್ಯದರ್ಶಿಯವರಿಗೆ ಬ್ಯಾಂಕಿನ ಸಂಬಂಧಿಸಿದ ಕಡತದ ಕಛೇರಿ ಟಿಪ್ಪಣಿಯಲ್ಲಿ ನಿರ್ದೇಶನ ನೀಡಿರುವುದುಕಂಡು ಬಂದಿರುತ್ತದೆ. ಆ ಸಂದರ್ಭದಲ್ಲಿ ಬ್ಯಾಂಕಿನಲ್ಲಿದ್ದ 16 ಜನ ಜವಾನರ (ಡಿ ದರ್ಜೆ)ಮುಖಾಂತರ Bill Collection ಕಾರ್ಯವನ್ನು ಕೈಗೊಳ್ಳುತ್ತಿದ್ದು ಇವರುಗಳಿಗೆ ನೀಡುತ್ತಿದ್ದ ಮಾಸಿಕ ವೇತನವು ಸುಮಾರು ರೂ.8.00ಲಕ್ಷ ಎಂದು ದಾಖಲಾತಿಯಿಂದ ತಿಳಿದುಬರುತ್ತದೆ.

ಆದಕಾರಣ ಸದರಿ ವೆಚ್ಚವನ್ನು ಕಡಿತಗೊಳಿಸುವ ದೃಷ್ಠಿಯಿಂದ ಸದರಿ Bill Collection ಕಾರ್ಯವನ್ನು ಹೊರಗುತ್ತಿಗೆ ಆಧಾರದಲ್ಲಿ ಕೈಗೊಳ್ಳಲು ತೀರ್ಮಾನಿಸಲಾಗಿರುತ್ತದೆ, ಆ ಪ್ರಕಾರ ದಾಖಲಾತಿಗಳನ್ನು ಪರಿಶೀಲಿಸಲಾಗಿ ಕೋಟೇಷನ್ ಆಧಾರದಲ್ಲಿ ಈ ಕೆಳಗಿನಂತೆ ಮೂರು(3) Agency ಗಳಿಂದ ದರಪಟ್ಟಿ ಪಡೆಯಲಾಗಿರುತ್ತದೆ.

	ಪ್ರತಿ ಶಾಖೆಗೆ ನಮೂದಿಸಿದ ದರ
1) ಟೀಮ್ ಟ್ರೈಡೆಂಟ್	ರೂ.1445 + ST
2) ಸಿಟಿ ಡೆಲ್	ರೂ.1600 + ST
3) ಇಂಟ್ರಾ ಸಿಟಿ ಲಿಂಕ್	ರೂ.1400 + ST

ಮೇಲಿನಂತೆ ದರಪಟ್ಟಿ ಪಡೆದು ಅವುಗಳಲ್ಲಿ ಕಡಿಮೆ ಮೊತ್ತ ನಮೂದಿಸಿದ ಇಂಟ್ರಾ ಸಿಟಿ ಲಿಂಕ್ ಇವರಿಗೆ ಹೊರಗುತ್ತಿಗೆ ಆಧಾರದಲ್ಲಿ Bill Collector ಕಾರ್ಯವನ್ನು ನಿರ್ವಹಿಸಲು ಗುತ್ತಿಗೆ ನೀಡಿರುವುದು ದಾಖಲಾತಿಗಳಿಂದ ಕಂಡುಬಂದಿರುತ್ತದೆ.

ಮೇಲಿನಂತೆ ನಿಯೋಜನೆಗೊಂಡ ಹೊರಗುತ್ತಿಗೆ ಆಧಾರದಲ್ಲಿ ನಿರ್ವಹಿಸುವ Bill Collector ಕಾರ್ಯಕ್ಕೆ ಮಾಸಿಕ ರೂ.57,400/-ಗಳು ವೆಚ್ಚವಾಗುತ್ತಿದ್ದು, ಬ್ಯಾಂಕಿಗೆ ರೂ.7,42,600/-ಗಳು ಬ್ಯಾಂಕಿಗೆ ಮಾಸಿಕ ಉಳಿತಾಯವೆಂದು ತಿಳಿಸಿರುತ್ತಾರೆ. ಈ ಹಿಂದೆ ಇದ್ದ 16 ಜನ Bill Collector ವಿಷಯವಾಗಿ ಪ್ರಶ್ನಿಸಲಾಗಿ ಸದರಿಯವರ ಅವಶ್ಯಕತೆಯು ಬ್ಯಾಂಕಿಗೆಇದ್ದು, ಖಾಲಿ ಇದ್ದ ವಿವಿಧ್ಧ ಜವಾನ ದರ್ಜೆಯ ಹುದ್ದೆಗಳಿಗೆ ನಿಯೋಜಿಸಲಾಗಿದೆಯೆಂದು ತಿಳಿಸಿರುತ್ತಾರೆ. ಜೊತೆಗೆ ಈ ಹೊರಗುತ್ತಿಗೆ ಆಧಾರದಲ್ಲಿ ಇಂಟ್ರಾ ಸಿಟಿ ಲಿಂಕ್‌ರವರಿಗೆ ಹೊರಗುತ್ತಿಗೆ ಆಧಾರದಲ್ಲಿ Bill Collector ಕಾರ್ಯವನ್ನು ನೀಡಿದ ನಂತರ ಬ್ಯಾಂಕಿಗೆ ವಾರ್ಷಿಕ ರೂ.89,11,200/-ಗಳು ಉಳಿತಾಯವಾಗುವುದಾಗಿ ತಿಳಿಸಿರುತ್ತಾರೆ. ಸದರಿ ವಿಷಯವಾಗಿ ಬ್ಯಾಂಕಿನ ಅಧಿಕಾರಿಗಳು ನೀಡಿರುವ ಲಿಖಿತ ಹೇಳಿಕೆ ಹಾಗೂ ಪೂರಕ ದಾಖಲಾತಿಗಳನ್ನು ವರದಿಯೊಂದಿಗೆ ಲಗತ್ತಿಸಿ ಸಲ್ಲಿಸಿದೆ.

ಮೇಲಿನ ವಿಷಯವಾಗಿ ಬ್ಯಾಂಕಿಗೆ ಜವಾನ ದರ್ಜೆಯ ಮಂಜೂರಾತಿ ಹುದ್ದೆಗಳು 127 ಇದ್ದು, 2016-17ನೇ ಸಾಲಿನಲ್ಲಿ ಬ್ಯಾಂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಜವಾನರ ಸಂಖ್ಯೆ 111 ಆಗಿದ್ದು ಇನ್ನೂ ಸಹ 16 ಜವಾನರ ಹುದ್ದೆ ಕೊರತೆಯಲ್ಲಿರುವುದು ಕಂಡು ಬರುತ್ತದೆ. **(ಮಾಹಿತಿ ಲಗತ್ತಿಸಿದೆ.)**

15. ಅಧ್ಯಕ್ಷರು ಪ್ರತಿ ವರ್ಷ 8 ರಿಂದ 10 ಬಾರಿ ವಿದೇಶ ಪ್ರವಾಸದಿಂದ ಲಕ್ಷಾಂತರ ರೂಪಾಯಿ ಬ್ಯಾಂಕಿಗೆ ನಷ್ಟವಾಗಿರುವುದು.

ಸದರಿ ವಿಷಯವಾಗಿ ಬ್ಯಾಂಕಿನ ವ್ಯವಸ್ಥಾಪಕರು ಲಿಖಿತ ಹೇಳಿಕೆ ನೀಡಿದ್ದು, ದಿನಾಂಕ 29.08.2015ರಂದು ಬ್ಯಾಂಕಿನ ಅಧ್ಯಕ್ಷರಾಗಿ ಶ್ರೀ ಕೆ.ಎನ್. ರಾಜಣ್ಣ ಮಾಜಿ ಶಾಸಕರು ಇವರು ಅಧಿಕಾರ ವಹಿಸಿಕೊಂಡಿದ್ದು, ಸದರಿ ಅಧ್ಯಕ್ಷರು ತಹಲ್‌ವರೆಗೂ ಬ್ಯಾಂಕಿನ ಖರ್ಚಿನಿಂದ ಯಾವುದೇ ಉದ್ದೇಶಕ್ಕೆ ಪ್ರವಾಸವನ್ನು ಕೈಗೊಂಡಿರುವುದಿಲ್ಲ ಆದಕಾರಣ FTA ಹಾಗೂ DA ನೀಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ಬ್ಯಾಂಕಿನ ಅಧಿಕಾರಿಗಳು ಹೇಳಿಕೆ ನೀಡಿರುತ್ತಾರೆ.**(ಮಾಹಿತಿ ಲಗತ್ತಿಸಿದೆ)**

16. ಅಧ್ಯಕ್ಷರು ನಗರದ ಪ್ರತಿಷ್ಠಿತ ಕ್ಲಬ್ ಹಾಗೂ ಹೋಟೇಲ್‌ಗಳಿಗೆ ಸ್ನೇಹಿತ ಬಂಧುಗಳೊಡನೆ ಊಟಕ್ಕೆ ಹೋಗಿ ಬ್ಯಾಂಕಿಗೆ ಆರ್ಥಿಕ ನಷ್ಟ ಮಾಡಿರುವುದು.

ಸದರಿ ವಿಷಯವಾಗಿ ಬ್ಯಾಂಕಿನ ವ್ಯವಸ್ಥಾಪಕರು ಹೇಳಿಕೆ ನೀಡಿದ್ದು, ಬ್ಯಾಂಕಿನ ಅಧ್ಯಕ್ಷರು ಬೆಂಗಳೂರಿನಲ್ಲಿರುವ ಸಂದರ್ಭದಲ್ಲಿ ಪ್ರತಿಷ್ಠಿತ ಕ್ಲಬ್/ಹೋಟೆಲ್‌ಗಳಿಗೆ ಊಟಕ್ಕಾಗಿ ಸ್ನೇಹಿತರ ಹಾಗೂ ಬಂಧು–ಬಳಗದವರ ಜೊತೆ ಬ್ಯಾಂಕಿನ ಹಣದಿಂದ ಮೋಜು ಮಾಡಿರುತ್ತಾರೆಂಬ ವಿಷಯವು ಸತ್ಯಕ್ಕೆ ದೂರವಾಗಿದ್ದು, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಬ್ಯಾಂಕಿನಿಂದ ಯಾವುದೇ ಹಣ ವ್ಯಯ ಮಾಡಿರುವುದಿಲ್ಲವೆಂದು ಲಿಖಿತವಾಗಿ ತಿಳಿಸಿರುತ್ತಾರೆ.

<u>ತನಿಖಾಧಿಕಾರಿಗಳ ಒಟ್ಟಾರೆ ಅಂತಿಮ ಅಭಿಪ್ರಾಯ</u>

ಮೂರು ದೂರು ಅರ್ಜಿಗಳು ಬೇನಾಮಿ ಅರ್ಜಿಗಳು. ಈ ಬೇನಾಮಿ ವಿಳಾಸಕ್ಕೆ ನೋಟೀಸ್ ನೀಡಿ ವಿಚಾರಣೆಗೆ ಹಾಜರಾಗಲು ತಿಳಿಸಿದ್ದು, ವಿಳಾಸವಿಲ್ಲದೇ ನೋಟೀಸ್‌ಗಳು ಹಿಂದಕ್ಕೆ ಬಂದಿರುತ್ತವೆ. ದಾಖಲೆಗಳ ಪರಿಶೀಲನಾ ಸಮಯಾವಕಾಶದ ಮಿತಿಯಲ್ಲಿ ಮಾಹಿತಿ/ಅಭಿಪ್ರಾಯ ಸಲ್ಲಿಸಲಾಗಿದೆ. ದೂರು ಅರ್ಜಿಯ ಅಂಶಗಳಿಗೆ ನೀಡಿರುವ ಮಾಹಿತಿ/ಅಭಿಪ್ರಾಯಗಳಿಗೆ ಉನ್ನತ ಮಟ್ಟದ ವಿಚಾರಣೆಗೆ ಒಳಪಡಿಸಿದರೆ ಸತ್ಯಾಂಶ ಪಡೆಯಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಿಸಲಾಗಿದೆ.

(ಡಿ.ಸಿ.ನಾಗರಾಜಯ್ಯ)	(ಕೆ.ಎಂ.ಆಶಾ)	(ಆರ್.ಲೋಕೇಶ್)
ಸಹಕಾರ ಸಂಘಗಳ ಅಪರ ನಿಬಂಧಕರು, (ವಸತಿ ಮತ್ತು ಇತರೆ)	ಸಹಕಾರ ಸಂಘಗಳ ಅಪರ ನಿಬಂಧಕರು, (ಪತ್ತು ಶಾಖೆ)	ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 33 ಜಿಇಎಲ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 13/03/2020

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸಸೌಧ, ಬೆಂಗಳೂರು.

'ಜರೂರು'

97
VS
13/3/2020

ಇವರಿಗೆ:

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ **ಶ್ರೀ ನರೇಂದ್ರ ಆರ್.** **(ಹನೂರು)** ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1416**ಕ್ಕೆ** ಉತ್ತರ ಕಳುಹಿಸುವ ಬಗ್ಗೆ.

** ** **

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆ ಸದಸ್ಯರಾದ **ಶ್ರೀ ನರೇಂದ್ರ ಆರ್. (ಹನೂರು)** ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1416**ಕ್ಕೆ** ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

(ಎಸ್.ವೀಣಾ)

ಸರ್ಕಾರದ ಅಧೀನ ಕಾರ್ಯದರ್ಶಿ
(ಪೌರಾಡಳಿತ–2 & ಮಂಡಳಿ)
ನಗರಾಭಿವೃದ್ಧಿ ಇಲಾಖೆ.

<u>ಪ್ರತಿಯನ್ನು:</u>

1) ಮಾನ್ಯ ಪೌರಾಡಳಿತ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2) ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ (ಸಮನ್ವಯ).

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1416
ಸದಸ್ಯರ ಹೆಸರು	ಶ್ರೀ ನರೇಂದ್ರ ಆರ್. (ಹನೂರು)
ಉತ್ತರಿಸಬೇಕಾದ ದಿನಾಂಕ	13.03.2020
ಉತ್ತರಿಸುವವರು	ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ಚಾಮರಾಜನಗರ ಜಿಲ್ಲೆಯ ಹನೂರು ಪಟ್ಟಣ ಪಂಚಾಯಿತಿಯಲ್ಲಿ ವಿವಿಧ ಹುದ್ದೆಗಳು ಖಾಲಿಯಿದ್ದು, ಸಾರ್ವಜನಿಕರ ಕೆಲಸ ಕಾರ್ಯಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
(ಆ)	ಬಂದಿದ್ದಲ್ಲಿ, ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?(ಸಂಪೂರ್ಣ ವಿವರ ನೀಡುವುದು)	ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೇರ ನೇಮಕಾತಿ ಅಡಿಯಲ್ಲಿ ಖಾಲಿಯಿರುವ ಈ ಕೆಳಕಂಡ 'ಸಿ' ವೃಂದದ ಹುದ್ದೆಗಳ ಭರ್ತಿಗೆ ಸಂಬಂಧಿಸಿದಂತೆ, ಈಗಾಗಲೇ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆಯನ್ನು ಕಳುಹಿಸಲಾಗಿದ್ದು, ವಿವರಗಳು ಈ ಕೆಳಗಿನಂತಿದೆ. ಪ್ರಥಮ ದರ್ಜೆ ಸಹಾಯಕರು– 62 ಪ್ರಥಮ ದರ್ಜೆ ಕಂದಾಯ ನಿರೀಕ್ಷಕರು– 116 ಕಿರಿಯ ಆರೋಗ್ಯ ನಿರೀಕ್ಷಕರು– 70 ದ್ವಿತೀಯ ದರ್ಜೆ ಸಹಾಯಕರು– 182 ಕರ್ನಾಟಕ ಲೋಕ ಸೇವಾ ಆಯೋಗದಿಂದ ಅರ್ಹ ಅಭ್ಯರ್ಥಿಗಳ ಆಯ್ಕೆ ಪಟ್ಟಿ ಸ್ವೀಕೃತವಾದ ನಂತರ ನಿಯಮಾನುಸಾರ ಖಾಲಿಯಿರುವ 'ಸಿ' ವೃಂದದ 04 ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುತ್ತದೆ. 'ಡಿ' ವೃಂದದಲ್ಲಿ ಖಾಲಿಯಿರುವ ಅಟೆಂಡರ್–01 ಹುದ್ದೆಯನ್ನು ಹಾಗೂ 07 ಪೌರಕಾರ್ಮಿಕರ ಹುದ್ದೆಗಳನ್ನು ಭರ್ತಿ ಮಾಡಲು ನಿಯಮಾನುಸಾರ ಕ್ರಮವಹಿಸಲಾಗುತ್ತದೆ.

ಸಂಖ್ಯೆ: ನಅಇ 33 ಜಿಇಎಲ್ 2020

(ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

File No. CI/53/IAP/2020-ID-C&I SEC

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಐ 53 ಐಎಪಿ(ಇ) 2020

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ 12.03.2020.

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ (ಪ್ರ),
ಕರ್ನಾಟಕ ವಿಧಾನ ಸಭೆ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಸುಬ್ಬಾರೆಡ್ಡಿ ಎಸ್.ಎನ್. (ಬಾಗೇಪಲ್ಲಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1837ಕ್ಕೆ ಉತ್ತರಿಸುವ ಕುರಿತು.

---*---

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಸುಬ್ಬಾರೆಡ್ಡಿ ಎಸ್.ಎನ್. (ಬಾಗೇಪಲ್ಲಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1837ಕ್ಕೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಎನ್. ಕುಮಾರ್) 12/3/2020
ಸರ್ಕಾರದ ಅಧೀನ ಕಾರ್ಯದರ್ಶಿ (ಕೈ.ಅ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1837
2. ಸದಸ್ಯರ ಹೆಸರು : ಶ್ರೀ ಸುಬ್ಬಾರೆಡ್ಡಿ ಎಸ್.ಎನ್. (ಬಾಗೇಪಲ್ಲಿ)
3. ಉತ್ತರಿಸುವ ದಿನಾಂಕ : 13.03.2020
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	ಬಾಗೇಪಲ್ಲಿ ಕ್ಷೇತ್ರದಲ್ಲಿ ಬರಗಾಲದಿಂದ ನಿರುದ್ಯೋಗ ಸಮಸ್ಯೆ ಹೆಚ್ಚಾಗಿದ್ದು, ಉದ್ಯೋಗ ಅರಸಿ ಆಂಧ್ರಕ್ಕೆ ಮತ್ತು ಬೆಂಗಳೂರು ನಗರಕ್ಕೆ ವಲಸೆ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿರುವುದಿಲ್ಲ.
ಆ.	ಬಂದಿದ್ದಲ್ಲಿ, ವಲಸೆ ತಡೆಯಲು ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು (ವಿವರ ನೀಡುವುದು);	ಬಾಗೇಪಲ್ಲಿ ಮತ್ತು ಕೊಂಡರೆಡ್ಡಿಪಲ್ಲಿ ಗ್ರಾಮಗಳ 192-00 ಎಕರೆ ಜಮೀನನ್ನು ಸ್ವಾಧೀನಪಡಿಸಲು ಕೆ.ಐ.ಎ.ಡಿ. ಕಾಯ್ದೆ ಕಲಂ 28(4)ರ ಅಂತಿಮ ಅಧಿಸೂಚನೆಯನ್ನು ದಿನಾಂಕ: 08.03.2007ರ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ. ಈ ಜಮೀನಿಗೆ ಪ್ರತಿ ಎಕರೆ ರೂ.15.00 ಲಕ್ಷದಂತೆ ಭೂಪರಿಹಾರ ಧನ ನಿಗದಿಪಡಿಸಲಾಗಿತ್ತು. ಸದರಿ ಭೂಸ್ವಾಧೀನಕ್ಕೆ ಹಾಗೂ ಜಂಟಿ ಅಳತೆ ಕಾರ್ಯ ನಿರ್ವಹಣೆಗೆ ಭೂಮಾಲೀಕರಿಂದ ಪ್ರತಿರೋಧ ವ್ಯಕ್ತವಾಗಿದ್ದು, ಈ ಜಮೀನುಗಳಿಗೆ ಪರಿಹಾರವನ್ನು ಭೂಮಾಲೀಕರು ಪಡೆದುಕೊಂಡಿರುವುದಿಲ್ಲ. ದಿನಾಂಕ: 19.10.2019ರಂದು ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ಭೂಮಾಲೀಕರ ಸಭೆಯನ್ನು ಕರೆಯಲಾಗಿದ್ದು, ಸದರಿ ಸಭೆಯಲ್ಲಿ ರೈತರು ಮತ್ತು ರೈತ ಸಂಘದವರು ಭೂಸ್ವಾಧೀನಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿ, ಭೂಸ್ವಾಧೀನಪಡಿಸಿಕೊಂಡ ಜಮೀನುಗಳನ್ನು ಭೂಸ್ವಾಧೀನ
ಇ.	ಕೆಐಎಡಿಬಿ ಇಂದ ಕೈಗಾರಿಕಾ ವಸಹಾತು ಸ್ಥಾಪನೆ ಮಾಡಲು ಜಮೀನು ಗುರುತಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	
ಈ.	ಬಂದಿದ್ದಲ್ಲಿ, ಜಮೀನು ಗುರುತಿಸಿ 10 ವರ್ಷಗಳು ಕಳೆದಿದ್ದರೂ ಧರ ನಿಗದಿಪಡಿಸಿ ಪರಿಹಾರ ನೀಡಿ ಜಮೀನು ವಶಕ್ಕೆ ಪಡೆಯಲು ವಿಳಂಬ ಮಾಡುತ್ತಿರಲು ಕಾರಣಗಳೇನು;	

ಉ.	ಜಮೀನು ವಶಕ್ಕೆ ಪಡೆದು ಕೈಗಾರಿಕಾ ವಸಹಾತನ್ನು ಯಾವಾಗ ಸ್ಥಾಪನೆ ಮಾಡಲಾಗುವುದು?	ಪ್ರಕ್ರಿಯೆಯಿಂದ ಕೈಬಿಡುವಂತೆ ಒತ್ತಾಯಿಸಿರುತ್ತಾರೆ. ಆದಕಾರಣ ಈ ಜಮೀನುಗಳನ್ನು ಸರ್ಕಾರದ ವಶಕ್ಕೆ ಪಡೆದಿರುವುದಿಲ್ಲ. ಕೊಂಡರೆಡ್ಡಿಪಲ್ಲಿ ಮತ್ತು ಹೊಸಹುಡ್ಯ ಗ್ರಾಮಗಳ 809-31 ಎಕರೆ ಜಮೀನನ್ನು ಸ್ವಾಧೀನಪಡಿಸಲು ದಿನಾಂಕ: 11.12.2009ರಂದು ಕೆ.ಐ.ಎ.ಡಿ. ಕಾಯ್ದೆ ಕಲಂ 3(1), 1(3) & 28(1)ರಡಿ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ. ಭೂಸ್ವಾಧೀನಕ್ಕೆ ಭೂಮಾಲೀಕರಿಂದ ತೀವ್ರ ಪ್ರತಿರೋಧ ವ್ಯಕ್ತವಾದ ಕಾರಣ, ಈವರೆವಿಗೂ ಅಂತಿಮ ಅಧಿಸೂಚನೆ ಹೊರಡಿಸಿರುವುದಿಲ್ಲ. ಅಂತಿಮ ಅಧಿಸೂಚನೆ ಹೊರಡಿಸಿ, ಭೂಪರಿಹಾರ ಪಾವತಿಸಿ, ಜಮೀನುಗಳನ್ನು ವಶಕ್ಕೆ ಪಡೆದ ನಂತರ ಬೇಡಿಕೆಗನುಸಾರವಾಗಿ ಕೈಗಾರಿಕಾ ಪ್ರದೇಶ ನಿರ್ಮಾಣ ಮಾಡಲಾಗುವುದು.

ಸಂಖ್ಯೆ: ಸಿಐ 53 ಐಎಪಿ(ಇ) 2020

(ಜಗದೀಶ್ ಶೆಟ್ಟರ್)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಸಾರ್ವಜನಿಕ ಉದ್ದಿಮೆಗಳ ಸಚಿವರು

File No. CI/48/IAP/2020-ID-C&I SEC

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಐ 48 ಐಎಪಿ(ಇ) 2020

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ 12.03.2020.

137
13/3/20

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ (ಪ್ರ),
ಕರ್ನಾಟಕ ವಿಧಾನ ಸಭೆ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಶಿವಶಂಕರ ರೆಡ್ಡಿ (ಗೌರಿಬಿದನೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 686ಕ್ಕೆ ಉತ್ತರಿಸುವ ಕುರಿತು.

---*---

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಶಿವಶಂಕರ ರೆಡ್ಡಿ (ಗೌರಿಬಿದನೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 686ಕ್ಕೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,
(ಎನ್. ಕುಮಾರ್) 12/3/2020
ಸರ್ಕಾರದ ಅಧೀನ ಕಾರ್ಯದರ್ಶಿ (ಕೈ.ಅ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

12/3/2020

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **686**
2. ಸದಸ್ಯರ ಹೆಸರು : ಶ್ರೀ ಶಿವಶಂಕರರೆಡ್ಡಿ ಎನ್.ಹೆಚ್. (ಗೌರಿಬಿದನೂರು)
3. ಉತ್ತರಿಸುವ ದಿನಾಂಕ : **13.03.2020**
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	ಗೌರಿಬಿದನೂರು ತಾಲ್ಲೂಕು, ಕುಡುಮಲಕುಂಟೆ ಕೈಗಾರಿಕಾ ಪ್ರದೇಶದ 3ನೇ ಹಂತಕ್ಕೆ 900 ಎಕರೆ ಜಮೀನು ಸ್ವಾಧೀನಪಡಿಸಿಕೊಳ್ಳಲು ಕೆ.ಐ.ಎ.ಡಿ.ಬಿ. ಮಂಡಳಿಯು ಅನುಮೋದಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಹೌದು.
ಆ.	ಹಾಗಿದ್ದಲ್ಲಿ, ಗೆಜೆಟ್ ನೋಟಿಫಿಕೇಷನ್ ಮಾಡಲು ಕ್ರಮ ಕೈಗೊಳ್ಳಲಾಗಿದೆಯೇ;	ಕುಡುಮಲಕುಂಟೆ 3ನೇ ಹಂತದ ಕೈಗಾರಿಕಾ ಪ್ರದೇಶಕ್ಕಾಗಿ ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು, ಕಸಬಾ ಹೋಬಳಿ, ದೊಡ್ಡಕುರುಗೋಡು ಮತ್ತು ಗೌಡಸಂದ್ರ ಗ್ರಾಮಗಳಲ್ಲಿನ ಒಟ್ಟು 835-06½ ಎಕರೆ ಜಮೀನನ್ನು ಹೊಸದಾಗಿ ಭೂಸ್ವಾಧೀನಪಡಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.
ಇ.	ಈ ಪ್ರದೇಶದಲ್ಲಿ ಕೈಗಾರಿಕೋದ್ಯಮಿಗಳು ಭೂಮಿಗಾಗಿ ಬೇಡಿಕೆ ಇಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಈ.	ಹಾಗಿದ್ದಲ್ಲಿ, ನಿರ್ದಿಷ್ಟ ಕಾಲಾವಧಿಯೊಳಗೆ ಭೂಮಿಯನ್ನು ವಶಪಡಿಸಿಕೊಳ್ಳಲು ನೋಟಿಫಿಕೇಷನ್ ಮಾಡುವುದಕ್ಕೇನಾದರೂ ನಿಬಂಧನವಿದೆಯೇ?	ಅಂತಹ ಯಾವುದೇ ನಿಬಂಧನೆಗಳು ಇರುವುದಿಲ್ಲ.

ಸಂಖ್ಯೆ: ಸಿಐ 48 ಐಎಪಿ(ಇ) 2020

(ಜಗದೀಶ್ ಶೆಟ್ಟರ್)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ : ಸಇ 136 ಎಂಆರ್‌ಇ 2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:12.03.2020

165
4/5
13/3/20

ಇವರಿಂದ :

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಸಹಕಾರ ಇಲಾಖೆ,
ಬಹುಮಹಡಿಕಟ್ಟಡ,
ಬೆಂಗಳೂರು.

ಇವರಿಗೆ :

ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ : ಕರ್ನಾಟಕ ವಿಧಾನಸಭೆಯ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1150ಕ್ಕೆ ಉತ್ತರಿಸುವ ಬಗ್ಗೆ

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಟಿ.ವೆಂಕಟರಮಣಯ್ಯ ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1150ಕ್ಕೆ ದಿನಾಂಕ:13.03.2020ರಂದು ಉತ್ತರಿಸಬೇಕಾಗಿದ್ದು, ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿದೆ ಹಾಗೂ ಉತ್ತರವನ್ನು ಪಿ.ಡಿ.ಎಫ್. ಮಾದರಿಯಲ್ಲಿ ಇ-ಮೇಲ್ ವಿಳಾಸ: dsqb-kla-kar@nic.in ರ ಮೂಲಕ ಸಹ ಕಳುಹಿಸಿದೆ.

ತಮ್ಮ ನಂಬುಗೆಯ,

(ಬಿ.ಎಸ್.ಮಂಜುನಾಥ್)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಸಹಕಾರ ಇಲಾಖೆ.

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1150
2. ಮಾನ್ಯ ಸದಸ್ಯರ ಹೆಸರು	:	ಶ್ರೀ ವೆಂಕಟರಮಣಯ್ಯ.ಟಿ. (ದೊಡ್ಡಬಳ್ಳಾಪುರ)
3. ಉತ್ತರಿಸಬೇಕಾದ ದಿನಾಂಕ	:	13.03.2020
4. ಉತ್ತರಿಸುವ ಸಚಿವರು	:	ಸಹಕಾರ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ.	ರಾಜ್ಯದಲ್ಲಿ ರೈತರು ಬೆಳೆದ ತರಕಾರಿ ಮತ್ತು ಹಣ್ಣು ಬೆಳೆಗಳನ್ನು ತಾಲ್ಲೂಕು ಕೇಂದ್ರದಲ್ಲಿ ಮಾರಾಟ ಮಾಡಲು ಸಾರಿಗೆ ವ್ಯವಸ್ಥೆ ಕಲ್ಪಿಸಲು ಹಾಗೂ ಕಮೀಷನ್ ಏಜೆಂಟ್‌ಗಳ ದಂಧೆ ತಪ್ಪಿಸಲು ಸರ್ಕಾರ ಏನಾದರೂ ಪರ್ಯಾಯ ಕ್ರಮ ಕೈಗೊಂಡಿದೆಯೇ; ಇಲ್ಲದಿದ್ದಲ್ಲಿ; ಹೋಬಳಿ ಕೇಂದ್ರಗಳಲ್ಲಿಯೇ ಖರೀದಿ ಕೇಂದ್ರಗಳನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ರಾಜ್ಯದಲ್ಲಿ 162 ಮುಖ್ಯ ಮಾರುಕಟ್ಟೆ ಪ್ರಾಂಗಣಗಳು ಹಾಗೂ 352 ಉಪ ಮಾರುಕಟ್ಟೆ ಪ್ರಾಂಗಣಗಳನ್ನು ಸ್ಥಾಪಿಸಲಾಗಿದೆ. ಇದಲ್ಲದೆ, 646 ಗ್ರಾಮೀಣ ಸಂತೆಗಳನ್ನು ಅಭಿವೃದ್ಧಿಪಡಿಸಿ ಗ್ರಾಮ ಪಂಚಾಯ್ತಿಗಳಿಗೆ ಹಸ್ತಾಂತರಿಸಲಾಗಿದೆ. ರೈತರು ತಾವು ಬೆಳೆದ ಉತ್ಪನ್ನಗಳನ್ನು ತಮ್ಮ ಫಾರಂ ಗೇಟ್ ಹತ್ತಿರದಲ್ಲಿಯೇ ನೇರವಾಗಿ ಮಾರಾಟ ಮಾಡಲು ಖರೀದಿ ಕೇಂದ್ರಗಳ ಸ್ಥಾಪನೆಗೆ, ರೈತ-ಗ್ರಾಹಕ ಮಾರುಕಟ್ಟೆಗಳ ಸ್ಥಾಪನೆಗೆ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966ರ ಕಲಂ 72(ಎ) ಹಾಗೂ ಕಲಂ 87(ಸಿ)ರಡಿ ಅವಕಾಶ ಕಲ್ಪಿಸಲಾಗಿದೆ. ಈವರೆಗೆ 58 ನೇರ ಖರೀದಿ ಕೇಂದ್ರಗಳ ಸ್ಥಾಪನೆಗಾಗಿ ಲೈಸೆನ್ಸ್ ಮಂಜೂರು ಮಾಡಿದ್ದು ಅವು ಕಾರ್ಯನಿರ್ವಹಿಸುತ್ತಿವೆ. ಈ ಪರ್ಯಾಯ ವ್ಯವಸ್ಥೆಗಳಿಂದಾಗಿ (ರೈತರು) ಸಾಗುವಳಿ ಸ್ಥಳಕ್ಕೆ ಹತ್ತಿರವಿರುವ ವಿವಿಧ ಮಾರುಕಟ್ಟೆಗಳಿಗೆ ತಮ್ಮ ಉತ್ಪನ್ನಗಳನ್ನು ಸಾಗಾಣಿಕೆ ಮಾಡಲು ಮತ್ತು ಸಾಗಾಣಿಕೆ ವೆಚ್ಚ ಕಡಿಮೆಗೊಳ್ಳಲು ಅನುಕೂಲವಾಗುತ್ತದೆ. ಮೇಲ್ಕಂಡ ಪರ್ಯಾಯ ವ್ಯವಸ್ಥೆಗಳನ್ನು ಕೈಗೊಂಡಿರುವುದರಿಂದ ಹೋಬಳಿ ಕೇಂದ್ರಗಳಲ್ಲಿಯೂ ಖರೀದಿ ಕೇಂದ್ರಗಳನ್ನು ಸ್ಥಾಪಿಸುವ ಪ್ರಸ್ತಾವನೆ ಪ್ರಸ್ತುತ ಸರ್ಕಾರದ ಮುಂದೆ ಇರುವುದಿಲ್ಲ.
ಆ.	ಹಾಗಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966ರ ಕಲಂ 78 ರಡಿ ಕಮೀಷನ್ ಏಜೆಂಟರ ಕರ್ತವ್ಯ ಹಾಗೂ ಜವಾಬ್ದಾರಿಗಳನ್ನು ನಿಗದಿಪಡಿಸಲಾಗಿದೆ. ರೈತರು ಲೈಸೆನ್ಸ್ ಪಡೆದ ಕಮೀಷನ್ ಏಜೆಂಟರುಗಳ ಮುಖಾಂತರ ತಮ್ಮ ಉತ್ಪನ್ನ ಮಾರಾಟ ಮಾಡಿದಲ್ಲಿ ಕಮೀಷನ್ ಏಜೆಂಟರು ಉತ್ಪನ್ನದ ಖರೀದಿದಾರರಿಂದ ಹಣ್ಣು, ತರಕಾರಿ ಹಾಗೂ ಹೂವು ಉತ್ಪನ್ನಗಳಿಗೆ ಶೇ.5 ಮೀರದಂತೆ ಕಮೀಷನ್ ಪಡೆಯಬಹುದಾಗಿದೆ. ಈ ಕುರಿತು ಯಾವುದೇ ದೂರು ಬಂದಲ್ಲಿ ಸಂಬಂಧಪಟ್ಟ ಮಾರುಕಟ್ಟೆ ಸಮಿತಿಗಳು ಪರಿಶೀಲಿಸಿ ಕ್ರಮ ವಹಿಸುತ್ತವೆ.

ಸಂಖ್ಯೆ: ಸಇ 136 ಎಂಆರ್‌ಇ 2020

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಆನಾಸ 22 ಆನಾಸ 2020(ಇ-ಆಫೀಸ್)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ, ನೆಲಮಹಡಿ,
ಬೆಂಗಳೂರು, ದಿನಾಂಕ:11.03.2020.

77
13/3/20

ಇವರಿಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಇಲಾಖೆ,

ಇವರಿಗೆ,
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ
ವಿಧಾನಸೌಧ.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಲಿಂಗೇಶ ಕೆ.ಎಸ್ (ಬೇಲೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ:1755ಕ್ಕೆ ಉತ್ತರ ಒದಗಿಸುವ ಬಗ್ಗೆ.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಲಿಂಗೇಶ ಕೆ.ಎಸ್ (ಬೇಲೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ:1755ಕ್ಕೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ತಮಗೆ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ವಿ.ವೆಂಕಟೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ
ಆಹಾರ, ನಾಗರೀಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಇಲಾಖೆ.

ಪ್ರತಿಯನ್ನು ಮಾಹಿತಿಗಾಗಿ:

1. ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನ ಶಾಸ್ತ್ರ ಇಲಾಖಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನ ಶಾಸ್ತ್ರ ಇಲಾಖೆ, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕಿ. ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನ ಶಾಸ್ತ್ರ ಇಲಾಖೆ, ವಿಕಾಸಸೌಧ, ಬೆಂಗಳೂರು
4. ಸರ್ಕಾದರ ಅಧೀನ ಕಾರ್ಯದರ್ಶಿ, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನ ಶಾಸ್ತ್ರ ಇಲಾಖೆ, ವಿಕಾಸಸೌಧ, ಬೆಂಗಳೂರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1755
ವಿಧಾನ ಸಭೆಯ ಸದಸ್ಯರ ಹೆಸರು	:	ಶ್ರೀ ಲಿಂಗೇಶ .ಕೆ.ಎಸ್ (ಬೇಲೂರು)
ಉತ್ತರಿಸಬೇಕಾದ ದಿನಾಂಕ	:	13.03.2020
ಉತ್ತರಿಸುವ ಸಚಿವರು	:	ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ಹಾಸನ ಜಿಲ್ಲೆಯ 07 ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಿಂದ ಎಷ್ಟು ಕಲ್ಯಾಣ ಸಂಸ್ಥೆಗಳಿಗೆ ಆಹಾರ ಧಾನ್ಯಗಳನ್ನು ವಿತರಿಸಲಾಗುತ್ತಿದೆ; (ವಿಧಾನಸಭಾ ಕ್ಷೇತ್ರವಾರು ಸಂಪೂರ್ಣ ಮಾಹಿತಿ ನೀಡುವುದು)	ಹಾಸನ ಜಿಲ್ಲೆಯ 7 ವಿಧಾನ ಸಭಾ ಕ್ಷೇತ್ರಗಳಲ್ಲಿರುವ ಒಟ್ಟು 12 ಕಲ್ಯಾಣ ಸಂಸ್ಥೆಗಳಿಗೆ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ವತಿಯಿಂದ ಕಲ್ಯಾಣ ಸಂಸ್ಥೆ ಯೋಜನೆಯಡಿ ಆಹಾರಧಾನ್ಯವನ್ನು ವಿತರಿಸಲಾಗುತ್ತಿದೆ. ವಿಧಾನಸಭಾ ಕ್ಷೇತ್ರವಾರು ವಿವರ ಕೆಳಕಂಡಂತಿದೆ. (ಕೆಳಗಿನ ಕೋಷ್ಟಕ ನೋಡಿ) (ಸಂಸ್ಥೆಗಳ ಪಟ್ಟಿ ಲಗತ್ತಿಸಿದೆ.)
ಆ	ಸದರಿ ಸಂಸ್ಥೆಗಳಿಗೆ ವಿತರಿಸಲು ಬಾಕಿ ಇರುವ ಅರ್ಜಿಗಳನ್ನು ಎಷ್ಟು ದಿನಗಳಲ್ಲಿ ವಿಲೇವಾರಿ ಮಾಡಲಾಗುವುದು; ಕಲ್ಯಾಣ ಸಂಸ್ಥೆಗಳಿಗೆ ಆಹಾರ ಧಾನ್ಯಗಳನ್ನು ನೀಡಲು ಸರ್ಕಾರ ನಿಗದಿಪಡಿಸಿರುವ ಮಾನದಂಡಗಳೇನು; ಬಾಕಿ ಇರುವ ಕಲ್ಯಾಣ ಸಂಸ್ಥೆಗಳ ಅರ್ಜಿಗಳನ್ನು ಎಷ್ಟು ದಿನದೊಳಗೆ ತೀರುವಳಿ ಮಾಡಲಾಗುವುದು; (ಸಂಪೂರ್ಣ ಮಾಹಿತಿ ನೀಡುವುದು)	1. ಕಲ್ಯಾಣ ಸಂಸ್ಥೆ ಯೋಜನೆಯಡಿ ಹಾಸನ ಜಿಲ್ಲೆಯಲ್ಲಿ ಯಾವುದೇ ಅರ್ಜಿಗಳು ಬಾಕಿ ಇರುವುದಿಲ್ಲ. 2. ಕಲ್ಯಾಣ ಸಂಸ್ಥೆ ಯೋಜನೆಯಡಿ ಸಂಸ್ಥೆಗಳನ್ನು ಕೇಂದ್ರ ಸರ್ಕಾರದಿಂದ ನೀಡಿರುವ ಮಾರ್ಗಸೂಚಿಗಳಂತೆ ರಾಜ್ಯ ಸರ್ಕಾರದ ಆದೇಶ ಸಂಖ್ಯೆ: FCS/74/FCS/2002, ದಿನಾಂಕ: 18.02.2002 ರಂತೆ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳಿಂದ ಪರಿಶೀಲಿಸಿ ಆಯ್ಕೆ ಮಾಡಲಾಗುವುದು.

ಕ್ರ.ಸಂ	ವಿಧಾನ ಸಭಾ ಕ್ಷೇತ್ರದ ಹೆಸರು	ಒಟ್ಟು
~~1~~	~~ಅರಕಲಗೂಡು~~	~~0~~
2	ಅರಸೀಕೆರೆ	0
3	ಬೇಲೂರು	0
4	ಶ್ರವಣಬೆಳಗೋಳ	3
5	ಹಾಸನ	7
6	ಹೊಳೆನರಸೀಪುರ	0
7	ಸಕಲೇಶಪುರ	2
	ಒಟ್ಟು	12

ಇ	ಸದರಿ ಇಲಾಖೆಯಿಂದ ಅಕ್ಷರ ದಾಸೋಹ ಯೋಜನೆಯಡಿ ಆಹಾರ ಧಾನ್ಯಗಳನ್ನು ಎಷ್ಟು ವಿದ್ಯಾಸಂಸ್ಥೆಗಳಿಗೆ ವಿತರಿಸಲಾಗುತ್ತಿದೆ; (ವಿಧಾನಸಭಾ ಕ್ಷೇತ್ರವಾರು ಸಂಪೂರ್ಣ ಮಾಹಿತಿ ನೀಡುವುದು)	ಆಹಾರ ಇಲಾಖೆಯ ವತಿಯಿಂದ ಅಕ್ಷರ ದಾಸೋಹ ಯೋಜನೆಯಡಿ ಆಹಾರಧಾನ್ಯ ವಿತರಿಸಲಾಗುತ್ತಿರುವುದಿಲ್ಲ.
ಈ	ಸದರಿ ಯೋಜನೆಯಡಿಯಲ್ಲಿ ವಿತರಿಸಲಾದ ಎಲ್ಲಾ ಆಹಾರ ಧಾನ್ಯಗಳನ್ನು ಸಮರ್ಪಕವಾಗಿ ಎಲ್ಲಾ ವಿದ್ಯಾಸಂಸ್ಥೆಗಳು ಮಾಹೆಯಾನ ಕೊಂಡೊಯ್ಯುತ್ತಿವೆಯೇ, ಇಲ್ಲದಿದ್ದಲ್ಲಿ ಇದಕ್ಕೆ ಕಾರಣಗಳೇನು? (ಸಂಪೂರ್ಣ ಮಾಹತಿ ನೀಡುವುದು)	ಅನ್ವಯಿಸುವುದಿಲ್ಲ.

ಆನಾಸ 22 ಆನಾಸ 2020 (ಇ-ಆಫೀಸ್)

(ಕೆ.ಗೋಪಾಲಯ್ಯ)

ಆಹಾರ, ನಾಗರಿಕ ಸರಬರಾಜು ಮತ್ತು

ಗ್ರಾಹಕರ ವ್ಯವಹಾರಗಳ ಹಾಗೂ

ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

LAQ-1755

ಹಾಸನ ಜಿಲ್ಲೆಯ ಕಲ್ಯಾಣ ಸಂಸ್ಥೆಗಳು			
ಕ್ರಮ ಸಂ	ತಾಲ್ಲೂಕು	ಆನ್‌ಲೈನ್‌ನಲ್ಲಿ ನೋಂದಣಿಯಾಗಿರುವ ಸಂಸ್ಥೆ ಹೆಸರು	ಸಂಸ್ಥೆಯಲ್ಲಿ ಒಟ್ಟು ನಿವಾಸಿಗಳ ಸಂಖ್ಯೆ
1	ಹಾಸನ	ಚೈತನ್ಯ ಮಂದಿರ, ಹಾಸನ.	49
2	ಹಾಸನ	ಶ್ವೇತಾ ವಿದ್ಯಾ ಸಂಸ್ಥೆ, ಹಾಸನ.	3
3	ಹಾಸನ	ಶ್ವೇತಾ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ, ಹಾಸನ.	27
4	ಹಾಸನ	ಶ್ವೇತಾ ಉಜ್ವಲ ಕೇಂದ್ರ, ಹಾಸನ.	7
5	ಆಲೂರು	ಜೋಸೆಫ್ ನಗರ ಅಕ್ಸಿಲಿಯಂ ವಿಕಾಸ ಕೇಂದ್ರ, ಆಲೂರು.	51
6	ಚನ್ನರಾಯಪಟ್ಟಣ	ವಿದ್ಯಾರಣ್ಯ ಸರೋಜಿನಿ ಮಹಿಳಾ ನಿರಾಶ್ರಿತ ಕೇಂದ್ರ, ಚನ್ನರಾಯಪಟ್ಟಣ.	25
7	ಚನ್ನರಾಯಪಟ್ಟಣ	ವಿದ್ಯಾರಣ್ಯ ಗಾಂಧಿ ವೃದ್ಧಾಶ್ರಮ, ಚನ್ನರಾಯಪಟ್ಟಣ.	16
8	ಚನ್ನರಾಯಪಟ್ಟಣ	ವಿದ್ಯಾರಣ್ಯ ಬುದ್ಧಿ ಮಾಂದ್ಯ ವಿಕಲಚೇತನ ಮಕ್ಕಳ ವಸತಿ ಶಾಲೆ, ಚನ್ನರಾಯಪಟ್ಟಣ.	30
9	ಹಾಸನ	ಬಾಲಕಿಯರ ಬಾಲ ಮಂದಿರ, ಹಾಸನ.	29
10	ಹಾಸನ	ಡಾನ್ ಬೋಸ್ಕೋ ತಾಂತ್ರಿಕ ಸಂಸ್ಥೆ, ಹಾಸನ.	21
11	ಹಾಸನ	ಬಾಲಕಯರ ಬಾಲ ಮಂದಿರ, ಹಾಸನ.	24
12	ಆಲೂರು	ತವದು ಪಬ್ಲಿಕ್ ಚಾರಿಟಬಲ್ ಟ್ರಸ್ಟ್, ಆಲೂರು	3
	ಒಟ್ಟು		285

ಕರ್ನಾಟಕ ಸರ್ಕಾರ

ಸಂಖ್ಯೆ : ಸಇ 133 ಎಂಆರ್‌ಇ 2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:12.03.2020

ಇವರಿಂದ :

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಸಹಕಾರ ಇಲಾಖೆ,
ಬಹುಮಹಡಿಕಟ್ಟಡ,
ಬೆಂಗಳೂರು.

143
4/5
13/3/20

ಇವರಿಗೆ :

ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ : ಕರ್ನಾಟಕ ವಿಧಾನಸಭೆಯ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1839ಕ್ಕೆ ಉತ್ತರಿಸುವ ಬಗ್ಗೆ

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಸುಬ್ಬಾರೆಡ್ಡಿ ಎಸ್.ಎನ್. (ಬಾಗೇಪಲ್ಲಿ) ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1839ಕ್ಕೆ ದಿನಾಂಕ:13.03.2020ರಂದು ಉತ್ತರಿಸಬೇಕಾಗಿದ್ದು, ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿದೆ ಹಾಗೂ ಉತ್ತರವನ್ನು ಪಿ.ಡಿ.ಎಫ್. ಮಾದರಿಯಲ್ಲಿ ಇ-ಮೇಲ್ ವಿಳಾಸ: dsqb-kla-kar@nic.in ರ ಮೂಲಕ ಸಹ ಕಳುಹಿಸಿದೆ.

ತಮ್ಮ ನಂಬುಗೆಯ,

(ಬಿ.ಎಸ್.ಮಂಜುನಾಥ್)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಸಹಕಾರ ಇಲಾಖೆ.

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1839
2. ಸದಸ್ಯರ ಹೆಸರು : ಶ್ರೀ ಸುಬ್ಬಾರೆಡ್ಡಿ ಎಸ್.ಎನ್, ಬಾಗೇಪಲ್ಲಿ.
3. ಉತ್ತರಿಸಬೇಕಾದ ದಿನಾಂಕ : 13.03.2020
4. ಉತ್ತರಿಸುವ ಸಚಿವರು : ಸಹಕಾರ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಬಾಗೇಪಲ್ಲಿ ಪಟ್ಟಣದ ಮುಖ್ಯ ರಸ್ತೆಯಲ್ಲಿರುವ ಎ.ಪಿ.ಎಂ.ಸಿ. ಮಾರುಕಟ್ಟೆ ಜಾಗವು ಜನದಟ್ಟಣೆಯಿಂದ ಮತ್ತು ವಾಹನ ದಟ್ಟಣೆಯಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
ಆ	ಬಂದಿದ್ದಲ್ಲಿ, ಹೊಸ ಮಾರುಕಟ್ಟೆ ಪ್ರಾಂಗಣ ಸ್ಥಾಪನೆ ಮಾಡಲು ಜಮೀನನ್ನು ಇಲಾಖೆಯ ವಶಕ್ಕೆ ಪಡೆಯಲಾಗಿದೆಯೇ;	ಹೌದು ದಿನಾಂಕ:23.09.2019ರಂದು 9 ಎಕರೆ 30 ಗುಂಟೆ ಜಮೀನನ್ನು ಹೊಸ ಮಾರುಕಟ್ಟೆ ಮಾಡಲು ಸಮಿತಿಯ ಸ್ವಾಧೀನಕ್ಕೆ ಪಡೆಯಲಾಗಿರುತ್ತದೆ.
ಇ	ಈಗ ಹೊಸದಾಗಿ ನೀಡಿರುವ ಜಮೀನಿನಲ್ಲಿ ಹೊಸ ಮಾರುಕಟ್ಟೆಯನ್ನು ಸ್ಥಾಪಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;	ಪ್ರಸ್ತುತ ಸರ್ಕಾರದ ಹಂತದಲ್ಲಿ ಯಾವುದೇ ಪ್ರಸ್ತಾವನೆಯು ಬಾಕಿ ಇರುವುದಿಲ್ಲ.
ತೋಟಗಾರಿಕೆ ಮತ್ತು ರೇಷ್ಮೆ ಸಚಿವರು.

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 24 ಎಂಎಂಸಿ 2020 (ಇ)

ಕರ್ನಾಟಕ ಸರ್ಕಾರ ಸಚಿವಾಲಯ
ವಿಕಾಸಸೌಧ
ಬೆಂಗಳೂರು, ದಿನಾಂಕ:13.03.2020.

163
415
13/3/20

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ನಗರಾಬಿವೃದ್ಧಿ ಇಲಾಖೆ,
ವಿಕಾಸ ಸೌಧ, ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ, ಬೆಂಗಳೂರು.

ಮಾನ್ಯರೆ,

ವಿಷಯ : ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ವೇದವ್ಯಾಸ ಕಾಮತ್, ಇವರು ಮಂಡಿಸಿರುವ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 1426 ಕ್ಕೆ ಉತ್ತರಿಸುವ ಬಗ್ಗೆ.

ಉಲ್ಲೇಖ : ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ, ಇವರ ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/6ಅ/ಪ್ರ.ಸಂ.1426/2020, ದಿನಾಂಕ 03.03.2020.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ವೇದವ್ಯಾಸ ಕಾಮತ್, ಇವರು ಮಂಡಿಸಿರುವ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 1426 ಕ್ಕೆ ಉತ್ತರದ 100 ಪ್ರತಿಗಳನ್ನು ಮುಂದಿನ ಅಗತ್ಯ ಕ್ರಮಕ್ಕಾಗಿ ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ

S. Venkatesh

(ಎಸ್. ವೆಂಕಟೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ
(ಮಹಾನಗರಪಾಲಿಕೆ-2)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1426
ಸದಸ್ಯರ ಹೆಸರು	:	ಶ್ರೀ ವೇದವ್ಯಾಸ ಕಾಮತ್ ಡಿ. (ಮಂಗಳೂರು ನಗರ ದಕ್ಷಿಣ)
ಉತ್ತರಿಸಬೇಕಾದ ದಿನಾಂಕ	:	13.03.2020
ಉತ್ತರಿಸಬೇಕಾದ ಸಚಿವರು	:	ನಗರಾಭಿವೃದ್ಧಿ ಸಚಿವರು

	ಪ್ರಶ್ನೆ	ಉತ್ತರ
ಅ)	ಕಳೆದ 15-20 ವರ್ಷಗಳಿಂದ ದಿನಗೂಲಿ ನೌಕರರಾಗಿ ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೌರ ಕಾರ್ಮಿಕರನ್ನು ಖಾಯಂಗೊಳಿಸುವ ಉದ್ದೇಶ ಸರ್ಕಾರಕ್ಕಿದೆಯೇ ;	ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 129 ಎಂಎನ್ ಇ 2017, ದಿನಾಂಕ: 05.12.2017 ರಲ್ಲಿನ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ (ರಾಜ್ಯದ ಮಹಾನಗರ ಪಾಲಿಕೆಗಳ ಪೌರಕಾರ್ಮಿಕ ನೇಮಕಾತಿ) (ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹೊರತುಪಡಿಸಿ)(ವಿಶೇಷ) ನಿಯಮಗಳು, 2017 ರಲ್ಲಿ ಹಾಲಿ ಮಹಾನಗರ ಪಾಲಿಕೆಗಳಲ್ಲಿ ದಿನಗೂಲಿ / ಗುತ್ತಿಗೆ / ಹೊರಗುತ್ತಿಗೆ / ಸಮಾನ ಕೆಲಸಕ್ಕೆ ಸಮಾನ ವೇತನ / ಇತರೆ ಆಧಾರದ ಮೇಲೆ 2 ವರ್ಷಕ್ಕಿಂತ ಕಡಿಮೆ ಇಲ್ಲದೆ ನಿರಂತರವಾತಿ ಕೆಲಸ ನಿರ್ವಹಿಸುತ್ತಿರುವ ಪೌರ ಕಾರ್ಮಿಕರಿಗೆ ನೇರ ನೇಮಕಾತಿಯಲ್ಲಿ ಆದ್ಯತೆ ನೀಡುವಂತೆ ತಿಳಿಸಲಾಗಿದೆ. ಆದಾಗ್ಯೂ, ಉಮಾದೇವಿ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ಸರ್ಕಾರದ ವತಿಯಿಂದ ಕಾಲಕಾಲಕ್ಕೆ ಹೊರಡಿಸಿರುವ ಆದೇಶಗಳು / ಸುತ್ತೋಲೆಗಳು / ಮಾರ್ಗಸೂಚಿಗಳಲ್ಲಿ ಸಕ್ರಮಗೊಳಿಸುವ ಬಗ್ಗೆ ನಿಗಧಿಪಡಿಸಿರುವ ಅರ್ಹತೆ / ನಿಬಂಧನೆ / ಷರತ್ತುಗಳು ಪೂರೈಕೆ ಆಗುವ ಪ್ರಕರಣಗಳಲ್ಲಿ ಪೌರ ಕಾರ್ಮಿಕರನ್ನು ಖಾಯಂಗೊಳಿಸುವ ಬಗ್ಗೆ ಪ್ರಸ್ತಾವನೆ ಸಲ್ಲಿಸಿದಲ್ಲಿ ನಿಯಮಾನುಸಾರ ಪರಿಗಣಿಸಲಾಗುವುದು.
ಆ)	ಹಾಗಿದ್ದಲ್ಲಿ, ಪೌರ ಕಾರ್ಮಿಕರನ್ನು ಖಾಯಂಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು (ಸಂಪೂರ್ಣ ವಿವರ ನೀಡುವುದು) ?	

ನಅಇ 24 ಎಂಎಂಸಿ 2020 (ಇ)

(ಬಿ.ಎ. ಬಸವರಾಜ)
ಮಾನ್ಯ ನಗರಾಭಿವೃದ್ಧಿ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 24 ಎಲ್‌ಎಕ್ಯೂ / ~~ಎಲ್‌ಸಿಕ್ಯೂ~~ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ 12-03-2020

92
U.S
13/3/2020

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ / ~~ಪರಿಷತ್~~,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ:- ಕರ್ನಾಟಕ ವಿಧಾನ ಸಭೆ / ~~ಪರಿಷತ್~~ ಸದಸ್ಯರಾದ ಶ್ರೀ . ಸುನಿಲ ಬಿಳಿಯಾನಾಯಕ ಇವರ ಚುಕ್ಕೆ ~~ಗುರುತಿನ~~ / ಗುರುತಿಲ್ಲದ ಪ್ರಶ್ನೆ ಸಂಖ್ಯೆ 1872ಕ್ಕೆ ಉತ್ತರ ನೀಡುವ ಬಗ್ಗೆ.

.----

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆ/ ~~ಪರಿಷತ್ತಿನ~~ ಸದಸ್ಯರಾದ ಶ್ರೀ . ಸುನಿಲ ಬಿಳಿಯಾನಾಯಕ (ಭಟ್ಕಳ) ಇವರು ಮಂಡಿಸಿರುವ ಚುಕ್ಕೆ ~~ಗುರುತಿನ~~ / ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1872 ಕ್ಕೆ ಉತ್ತರವನ್ನು ತಯಾರಿಸಿದ್ದು, ಇದರ 100 ಪ್ರತಿಗಳನ್ನು ಇದರೊಂದಿಗೆ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,
A. Vijayakumar 12-03-2020
(ಎ.ವಿಜಯಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1872

ಸದಸ್ಯರ ಹೆಸರು : ಶ್ರೀ ಮಸಾಲ ಜೈರಾಮ್ ಎ.ಎಸ್. (ತುರುವೇಕೆರೆ)

ಉತ್ತರಿಸುವ ದಿನಾಂಕ : 13.03.2020

ಉತ್ತರಿಸುವ ಸಚಿವರು : ಮಾನ್ಯ ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ತುರುವೇಕೆರೆ ತಾಲ್ಲೂಕಿನ ಪಟ್ಟಣ ಪಂಚಾಯತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯು ಸರ್ಕಾರದ ಗಮನಕ್ಕೆ ಮುಂದಿದೆಯೇ?	ತುರುವೇಕೆರೆ ಪಟ್ಟಣ ಪಂಚಾಯತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ.
(ಆ)	ಹಾಗಿದ್ದಲ್ಲಿ, ಮೇಲ್ದರ್ಜೆಗೇರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?	2011ರ ಜನಗಣತಿಯನುಸಾರ ತುರುವೇಕೆರೆ ಪಟ್ಟಣ ಪಂಚಾಯತಿಯ ಜನಸಂಖ್ಯೆ 14194 ಇರುತ್ತದೆ. ಕರ್ನಾಟಕ ಪುರಸಭೆಗಳ ಅಧಿನಿಯಮ 1964ರ ಕಲಂ 3ರನ್ವಯ ಪುರಸಭೆಯನ್ನಾಗಿ ಪರಿವರ್ತಿಸಲು ಕನಿಷ್ಠ ಜನಸಂಖ್ಯೆ 20,000 ಹೊಂದಿರಬೇಕಾಗಿದ್ದು, ತುರುವೇಕೆರೆ ಪಟ್ಟಣ ಪಂಚಾಯತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಅವಕಾಶವಿರುವುದಿಲ್ಲ.
(ಇ)	ಪಟ್ಟಣ ಪಂಚಾಯತಿಯಿಂದ ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಇರುವ ಮಾನದಂಡಗಳೇನು?	ಕರ್ನಾಟಕ ಪುರಸಭೆಗಳ ಅಧಿನಿಯಮ 1964ರ ಕಲಂ 3 ಮತ್ತು 9 ರನ್ವಯ ಪಟ್ಟಣ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಈ ಕೆಳಕಂಡ ಮಾನದಂಡಗಳನ್ನು ನಿಗದಿಪಡಿಸಲಾಗಿದೆ. 1. ಆ ಪಟ್ಟಣ ಪಂಚಾಯಿತಿಯ ಪ್ರದೇಶದ ಜನಸಂಖ್ಯೆ 20,000 ಕ್ಕೆ ಕಡಿಮೆ ಇಲ್ಲದಂತೆ ಹಾಗೂ 50,000 ಕ್ಕೆ ಹೆಚ್ಚಿಲ್ಲದಂತಿರಬೇಕು, 2. ಅಂತಹ ಪ್ರದೇಶದ ಜನಸಂಖ್ಯೆಯ ಜನಸಾಂದ್ರತೆಯು ಆ ಪ್ರದೇಶದ ಒಂದು ಚದುರ ಕಿ.ಮೀ. ವಿಸ್ತೀರ್ಣಕ್ಕೆ 1500 ಕ್ಕಿಂತ ಕಡಿಮೆ ಇಲ್ಲದಿರುವುದು, 3. ಹಿಂದಿನ ನಿಕಟಪೂರ್ವ ಜನಗಣತಿಯಲ್ಲಿ ಅಂತಹ ಪ್ರದೇಶದಿಂದ ಸ್ಥಳೀಯ ಆಡಳಿತಕ್ಕಾಗಿ ತೆರಿಗೆ ಮತ್ತು ತೆರಿಗೆಯಲ್ಲದ ಇತರ ಸಂಪನ್ಮೂಲಗಳಿಂದ ಉತ್ಪಾದಿತವಾದ ರಾಜಸ್ವ ವಾರ್ಷಿಕ ಒಂಬತ್ತು ಲಕ್ಷ ಅಥವಾ ವಾರ್ಷಿಕ ತಲಾ ಒಬ್ಬರಿಗೆ 45 ರೂಪಾಯಿಗಳ ದರದಂತೆ ಲೆಕ್ಕಹಾಕಲಾದ ಮೊತ್ತ ಇವೆರಡರಲ್ಲಿ ಯಾವುದು ಹೆಚ್ಚೋ ಆ ಮೊತ್ತಕ್ಕಿಂತ ಕಡಿಮೆ ಇರದ ಹೊರತು.

		4. ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗಾವಕಾಶಗಳ ಶೇಕಡಾವಾರು ಪ್ರಮಾಣವು ಒಟ್ಟು ಉದ್ಯೋಗದ ಪ್ರಮಾಣಕ್ಕಿಂತ ಶೇ.50 ಕ್ಕಿಂತ ಕಡಿಮೆ ಇಲ್ಲದಿರುವುದು.

ಸಂಖ್ಯೆ: ನಅಇ 24 ಎಲ್ಎಕ್ಯೂ 2020

(ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ
ಮತ್ತು ರೇಷ್ಮೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 19 ಎಲ್‌ಎಕ್ಯೂ / ~~ಎಲ್‌ಸಿಕ್ಯೂ~~ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ 12-03-2020

20
13/3/20

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ / ~~ಪರಿಷತ್~~,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ:– ಕರ್ನಾಟಕ ವಿಧಾನ ಸಭೆ / ~~ಪರಿಷತ್~~ ಸದಸ್ಯರಾದ ಶ್ರೀ . ಡಿ. ಕೃಷ್ಣಪ್ಪ (ರಂಗನ್) ಎಂ.ಪಿ. ಇವರ ಚುಕ್ಕೆ ~~ಗುರುತಿನ~~ / ಗುರುತಿಲ್ಲದ ಪ್ರಶ್ನೆ ಸಂಖ್ಯೆ: 68 ಕ್ಕೆ ಉತ್ತರ ನೀಡುವ ಬಗ್ಗೆ.

.----

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭೆ/ ~~ಪರಿಷತ್ತಿನ~~ ಸದಸ್ಯರಾದ ಶ್ರೀ . ಡಿ. ಕೃಷ್ಣಪ್ಪ (ರಂಗನ್) ಎಂ.ಪಿ. (ಮಡಿಕೇರಿ) ಇವರು ಮಂಡಿಸಿರುವ ಚುಕ್ಕೆ ~~ಗುರುತಿನ~~ / ಗುರುತಿಲ್ಲದ ಪ್ರಶ್ನೆ ಸಂಖ್ಯೆ:. 68 ಕ್ಕೆ ಉತ್ತರವನ್ನು ತಯಾರಿಸಿದ್ದು, ಇದರ 180 ಪ್ರತಿಗಳನ್ನು ಇದರೊಂದಿಗೆ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

A. Vijayakumar
12-03-2020
(ಎ.ವಿಜಯಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	68
ಸದಸ್ಯರ ಹೆಸರು	:	ಶ್ರೀ ಅಪ್ಪಚ್ಚು (ರಂಜನ್) ಎಂ.ಪಿ. (ಮಡಿಕೇರಿ)
ಉತ್ತರಿಸುವ ದಿನಾಂಕ	:	13.03.2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಕೊಡಗು ಜಿಲ್ಲೆ, ಕುಶಾಲನಗರ ಮತ್ತು ಸೋಮವಾರಪೇಟೆ ಪಟ್ಟಣ ಪಂಚಾಯಿತಿಯನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಈ ಬಗ್ಗೆ ಸರ್ಕಾರದ ನಿಲುವೇನು; (ವಿವರ ನೀಡುವುದು)	ಕೊಡಗು ಜಿಲ್ಲೆಯ ಕುಶಾಲನಗರ ಮತ್ತು ಸೋಮವಾರಪೇಟೆ ಪಟ್ಟಣ ಪಂಚಾಯಿತಿಯನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಇರುವುದಿಲ್ಲ.
ಆ)	ಕಳೆದ ಮೂರು ವರ್ಷಗಳಿಂದ ನಗರೋತ್ಥಾನ ಯೋಜನೆಯಡಿಯಲ್ಲಿ ಯಾವ ಯಾವ ಪಟ್ಟಣ ಪಂಚಾಯಿತಿಗೆ ಎಷ್ಟೆಷ್ಟು ಅನುದಾನ ಬಿಡುಗಡೆಗೊಳಿಸಲಾಗಿದೆ? (ಕ್ಷೇತ್ರವಾರು ವಿವರ ನೀಡುವುದು)	ನಗರೋತ್ಥಾನ (ಮುನಿಸಿಪಾಲಿಟಿ) ಹಂತ-3 ಮತ್ತು ಸಿಎಂಎಸ್‌ಎಂಟಿಡಿಪಿ ನಗರೋತ್ಥಾನ ಹಂತ-2ರ ಯೋಜನೆಗಳಿಗೆ ಕಳೆದ ಮೂರು ವರ್ಷಗಳಲ್ಲಿ ಪಟ್ಟಣ ಪಂಚಾಯಿತಿಗಳಿಗೆ ಬಿಡುಗಡೆಯಾಗಿರುವ ವಿವರಗಳನ್ನು ಅನುಬಂಧ-1 ಮತ್ತು ಅನುಬಂಧ-2 ರಲ್ಲಿ ನೀಡಲಾಗಿದೆ.

ಸಂಖ್ಯೆ: ನಅಇ 19 ಎಲ್‌ಎಕ್ಯೂ 2020

(ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ
ಮತ್ತು ರೇಷ್ಮೆ ಸಚಿವರು

ಅನುಬಂಧ-1

ನಗರೋತ್ಥಾನ (ಮುನಿಸಿಪಾಲಿಟಿ)-3ನೇ ಹಂತ

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಜಿಲ್ಲೆಯ ಹೆಸರು	ಕ್ಷೇತ್ರದ ಹೆಸರು	ಪಟ್ಟಣ ಪಂಚಾಯಿತಿಯ ಹೆಸರು	ಹಂಚಿಕೆ	ಬಿಡುಗಡೆಯಾದ ಅನುದಾನ 2017-18 ರಿಂದ 2019-20 ರವರೆಗೆ
1	ಚಿಕ್ಕಬಳ್ಳಾಪುರ	ಬಾಗೇಪಲ್ಲಿ	ಗುಡಿಬಂಡೆ ಪಟ್ಟಣ ಪಂಚಾಯಿತಿ	200.00	141.87
2	ತುಮಕೂರು	ಗುಬ್ಬಿ	ಗುಬ್ಬಿ ಪಟ್ಟಣ ಪಂಚಾಯಿತಿ	200.00	162.98
		ತುರುವೇಕೆರೆ	ತುರುವೇಕೆರೆ ಪಟ್ಟಣ ಪಂಚಾಯಿತಿ	200.00	72.85
		ಕೊರಟಗೆರೆ	ಕೊರಟಗೆರೆ ಪಟ್ಟಣ ಪಂಚಾಯಿತಿ	200.00	25.88
3	ಚಿತ್ರದುರ್ಗ	ಹೊಳಲ್ಕೆರೆ	ಹೊಳಲ್ಕೆರೆ ಪಟ್ಟಣ ಪಂಚಾಯಿತಿ	200.00	170.00
		ಮೊಳಕಾಲ್ಮೂರು	ಮೊಳಕಾಲ್ಮೂರು ಪಟ್ಟಣ ಪಂಚಾಯಿತಿ	200.00	170.00
		ಮೊಳಕಾಲ್ಮೂರು	ನಾಯಕನಹಟ್ಟಿ ಪಟ್ಟಣ ಪಂಚಾಯಿತಿ	500.00	425.00
4	ದಾವಣಗೆರೆ	ಹೊನ್ನಾಳಿ	ಹೊನ್ನಾಳಿ ಪಟ್ಟಣ ಪಂಚಾಯಿತಿ	200.00	118.98
		ಜಗಳೂರು	ಜಗಳೂರು ಪಟ್ಟಣ ಪಂಚಾಯಿತಿ	200.00	142.35
5	ಶಿವಮೊಗ್ಗ	ಸಾಗರ	ಹೊಸನಗರ ಪಟ್ಟಣ ಪಂಚಾಯಿತಿ	200.00	114.69
			ಜೋಗ್-ಕಾರ್ಗಲ್ ಪಟ್ಟಣ ಪಂಚಾಯಿತಿ	200.00	143.59
		ಶಿಕಾರಿಪುರ	ಶಿರಾಳಕೊಪ್ಪ ಪಟ್ಟಣ ಪಂಚಾಯಿತಿ	200.00	169.94
		ಸೊರಬ	ಸೊರಬ ಪಟ್ಟಣ ಪಂಚಾಯಿತಿ	200.00	170.00
		ತೀರ್ಥಹಳ್ಳಿ	ತೀರ್ಥಹಳ್ಳಿ ಪಟ್ಟಣ ಪಂಚಾಯಿತಿ	200.00	134.19
6	ಮಂಡ್ಯ	ನಾಗಮಂಗಲ	ಬೆಳ್ಳೂರು ಪಟ್ಟಣ ಪಂಚಾಯಿತಿ	500.00	100.00
7	ಚಾಮರಾಜನಗರ	ಕೊಳ್ಳೇಗಾಲ	ಯಳಂದೂರು ಪಟ್ಟಣ ಪಂಚಾಯಿತಿ	200.00	97.98
		ಹನೂರು	ಹನೂರು ಪಟ್ಟಣ ಪಂಚಾಯಿತಿ	200.00	125.34
8	ಮೈಸೂರು	ಹೆಚ್.ಡಿ.ಕೋಟೆ	ಸರಗೂರು ಪಟ್ಟಣ ಪಂಚಾಯಿತಿ	200.00	19.52
9	ಹಾಸನ	ಅರಕಲಗೂಡು	ಅರಕಲಗೂಡು ಪಟ್ಟಣ ಪಂಚಾಯಿತಿ	200.00	3.90
		ಸಕಲೇಶಪುರ	ಆಲೂರು ಪಟ್ಟಣ ಪಂಚಾಯಿತಿ	200.00	137.05
10	ಚಿಕ್ಕಮಗಳೂರು	ಶೃಂಗೇರಿ	ನ.ರಾ.ಪುರ ಪಟ್ಟಣ ಪಂಚಾಯಿತಿ	200.00	123.74
			ಕೊಪ್ಪ ಪಟ್ಟಣ ಪಂಚಾಯಿತಿ	200.00	153.29
			ಶೃಂಗೇರಿ ಪಟ್ಟಣ ಪಂಚಾಯಿತಿ	200.00	122.73
		ಮೂಡಿಗೆರೆ	ಮೂಡಿಗೆರೆ ಪಟ್ಟಣ ಪಂಚಾಯಿತಿ	200.00	136.36
11	ಉಡುಪಿ	ಕುಂದಾಪುರ	ಸಾಲಿಗ್ರಾಮ ಪಟ್ಟಣ ಪಂಚಾಯಿತಿ	200.00	109.66
12	ದಕ್ಷಿಣ ಕನ್ನಡ	ಮೂಡಬಿದಿರೆ	ಮುಲ್ಕಿ ಪಟ್ಟಣ ಪಂಚಾಯಿತಿ	200.00	107.28
		ಮಂಗಳೂರು	ಕೋಟೆಕಾರು ಪಟ್ಟಣ ಪಂಚಾಯಿತಿ	500.00	256.75
		ಪುತ್ತೂರು	ವಿಟ್ಲ ಪಟ್ಟಣ ಪಂಚಾಯಿತಿ	500.00	253.37
		ಬೆಳ್ತಂಗಡಿ	ಬೆಳ್ತಂಗಡಿ ಪಟ್ಟಣ ಪಂಚಾಯಿತಿ	200.00	134.11
		ಸುಳ್ಯ	ಸುಳ್ಯ ಪಟ್ಟಣ ಪಂಚಾಯತಿ	200.00	0.00
13	ಕೊಡಗು	ಮಡಿಕೇರಿ	ಕುಶಾಲನಗರ ಪಟ್ಟಣ ಪಂಚಾಯಿತಿ	200.00	20.66
			ಸೋಮವಾರಪೇಟೆ ಪಟ್ಟಣ ಪಂಚಾಯಿತಿ	200.00	52.61
		ವಿರಾಜಪೇಟೆ	ವಿರಾಜಪೇಟೆ ಪಟ್ಟಣ ಪಂಚಾಯಿತಿ	200.00	75.72
14	ಹಾವೇರಿ	ಹಿರೇಕೆರೂರು	ಹಿರೇಕೆರೂರು ಪಟ್ಟಣ ಪಂಚಾಯಿತಿ	200.00	162.25
		ಹಾವೇರಿ	ಗುತ್ತಲ ಪಟ್ಟಣ ಪಂಚಾಯಿತಿ	500.00	302.53
		ಯಲ್ಲಾಪುರ-ಮುಂಡಗೋಡ-ಬನವಾಸಿ	ಯಲ್ಲಾಪುರ ಪಟ್ಟಣ ಪಂಚಾಯಿತಿ	200.00	184.39
			ಮುಂಡಗೋಡ ಪಟ್ಟಣ ಪಂಚಾಯಿತಿ	200.00	192.42

					(ರೂ. ಲಕ್ಷಗಳಲ್ಲಿ)
ಕ್ರ ಸಂ.	ಜಿಲ್ಲೆಯ ಹೆಸರು	ಕ್ಷೇತ್ರದ ಹೆಸರು	ಪಟ್ಟಣ ಪಂಚಾಯಿತಿಯ ಹೆಸರು	ಹಂಚಿಕೆ	ಬಿಡುಗಡೆಯಾದ ಅನುದಾನ 2017–18 ರಿಂದ 2019–20 ರವರೆಗೆ
15	ಉತ್ತರ ಕನ್ನಡ	ಕುಮಟಾ–ಹೊನ್ನಾವರ	ಹೊನ್ನಾವರ ಪಟ್ಟಣ ಪಂಚಾಯಿತಿ	200.00	173.20
		ಶಿರಸಿ–ಸಿದ್ದಾಪುರ	ಸಿದ್ದಾಪುರ ಪಟ್ಟಣ ಪಂಚಾಯಿತಿ	200.00	190.13
		ಭಟ್ಕಳ	ಜಾಲಿ ಪಟ್ಟಣ ಪಂಚಾಯಿತಿ	500.00	356.46
16	ಬೆಳಗಾವಿ	ಚಿಕ್ಕೋಡಿ–ಸದಲಗಾ	ಯಕ್ಸಂಬಾ ಪಟ್ಟಣ ಪಂಚಾಯಿತಿ	500.00	168.14
			ಬೋರಗಾಂವ ಪಟ್ಟಣ ಪಂಚಾಯಿತಿ	500.00	317.80
		ಕಾಗವಾಡ	ಐನಾಪೂರ ಪಟ್ಟಣ ಪಂಚಾಯಿತಿ	500.00	234.79
			ಶೇಡಬಾಳ ಪಟ್ಟಣ ಪಂಚಾಯಿತಿ	500.00	309.17
		ರಾಯಬಾಗ	ರಾಯಬಾಗ ಪಟ್ಟಣ ಪಂಚಾಯಿತಿ	200.00	149.99
			ಕಂಕಣವಾಡಿ ಪಟ್ಟಣ ಪಂಚಾಯಿತಿ	500.00	324.69
			ಚಿಂಚಲಿ ಪಟ್ಟಣ ಪಂಚಾಯಿತಿ	500.00	337.71
			ಕಬ್ಬೂರ ಪಟ್ಟಣ ಪಂಚಾಯಿತಿ	500.00	239.95
		ಅರಭಾವಿ	ಅರಭಾಂವಿ ಪಟ್ಟಣ ಪಂಚಾಯಿತಿ	500.00	314.59
			ನಾಗನೂರ ಪಟ್ಟಣ ಪಂಚಾಯಿತಿ	500.00	259.35
			ಕಲ್ಲೋಳಿ ಪಟ್ಟಣ ಪಂಚಾಯಿತಿ	500.00	368.83
		ಗೋಕಾಕ	ಮಲ್ಲಾಪೂರ ಪಿ.ಜಿ ಪಟ್ಟಣ ಪಂಚಾಯಿತಿ	500.00	293.03
		ಖಾನಾಪೂರ	ಖಾನಾಪೂರ ಪಟ್ಟಣ ಪಂಚಾಯಿತಿ	200.00	148.23
		ಕಿತ್ತೂರು	ಚೆನ್ನಮ್ಮನ ಕಿತ್ತೂರು ಪಟ್ಟಣ ಪಂಚಾಯಿತಿ	500.00	307.59
			ಎಂ.ಕೆ. ಹುಬ್ಬಳ್ಳಿ ಪಟ್ಟಣ ಪಂಚಾಯಿತಿ	500.00	327.27
17	ಧಾರವಾಡ	ಕಲಘಟಗಿ	ಅಳ್ನಾವರ ಪಟ್ಟಣ ಪಂಚಾಯಿತಿ	200.00	159.90
			ಕಲಘಟಗಿ ಪಟ್ಟಣ ಪಂಚಾಯಿತಿ	200.00	96.75
		ಕುಂದಗೋಳ	ಕುಂದಗೋಳ ಪಟ್ಟಣ ಪಂಚಾಯಿತಿ	200.00	173.13
18	ಗದಗ	ಗದಗ	ಮುಳಗುಂದ ಪಟ್ಟಣ ಪಂಚಾಯಿತಿ	200.00	149.13
		ರೋಣ	ನರೇಗಲ್ಲ ಪಟ್ಟಣ ಪಂಚಾಯಿತಿ	200.00	131.35
		ಶಿರಹಟ್ಟಿ	ಶಿರಹಟ್ಟಿ ಪಟ್ಟಣ ಪಂಚಾಯಿತಿ	200.00	56.70
19	ಬಾಗಲಕೋಟ	ಬಾದಾಮಿ	ಕೆರೂರು ಪಟ್ಟಣ ಪಂಚಾಯತ	200.00	82.25
		ಬೀಳಗಿ	ಬೀಳಗಿ ಪಟ್ಟಣ ಪಂಚಾಯತ	200.00	99.21
		ಬಾಗಲಕೋಟೆ	ಕಮತಗಿ ಪಟ್ಟಣ ಪಂಚಾಯತ	500.00	224.83
		ಬಾಗಲಕೋಟೆ	ಅಮೀನಗಡ ಪಟ್ಟಣ ಪಂಚಾಯತ	500.00	220.02
		ಮುಧೋಳ	ಬೆಳಗಲಿ ಪಟ್ಟಣ ಪಂಚಾಯತ	500.00	191.60
20	ವಿಜಯಪುರ	ಸಿಂದಗಿ	ಆಲಮೇಲ ಪಟ್ಟಣ ಪಂಚಾಯಿತಿ	500.00	7.84
		ನಾಗಠಾಣ	ಚಡಚಣ ಪಟ್ಟಣ ಪಂಚಾಯಿತಿ	500.00	61.79
		ದೇವರಹಿಪ್ಪರಗಿ	ದೇವರ ಹಿಪ್ಪರಗಿ ಪಟ್ಟಣ ಪಂಚಾಯಿತಿ	500.00	350.48
		ಬಸವನ ಬಾಗೇವಾಡಿ	ಕೊಲ್ಹಾರ ಪಟ್ಟಣ ಪಂಚಾಯಿತಿ	500.00	232.84
		ಬಸವನ ಬಾಗೇವಾಡಿ	ಮನಗೂಳಿ ಪಟ್ಟಣ ಪಂಚಾಯಿತಿ	500.00	404.52
		ಮುದ್ದೇಬಿಹಾಳ	ನಾಲತವಾಡ ಪಟ್ಟಣ ಪಂಚಾಯಿತಿ	500.00	257.15
		ಬಸವನ ಬಾಗೇವಾಡಿ	ನಿಡಗುಂದಿ ಪಟ್ಟಣ ಪಂಚಾಯಿತಿ	500.00	404.95
21	ಬೀದರ	ಔರಾದ ಬಿ	ಔರಾದ ಬಿ ಪಟ್ಟಣ ಪಂಚಾಯಿತಿ	200.00	116.47

(ರೂ. ಲಕ್ಷಗಳಲ್ಲಿ)

ಕ್ರ ಸಂ.	ಜಿಲ್ಲೆಯ ಹೆಸರು	ಕ್ಷೇತ್ರದ ಹೆಸರು	ಪಟ್ಟಣ ಪಂಚಾಯಿತಿಯ ಹೆಸರು	ಹಂಚಿಕೆ	ಬಿಡುಗಡೆಯಾದ ಅನುದಾನ 2017-18 ರಿಂದ 2019-20 ರವರೆಗೆ
22	ರಾಯಚೂರು	ಮಾನ್ವಿ	ಕವಿತಾಳ ಪಟ್ಟಣ ಪಂಚಾಯಿತಿ	500.00	98.68
			ಸಿರಿವಾರ ಪಟ್ಟಣ ಪಂಚಾಯಿತಿ	500.00	231.10
		ಮಸ್ಕಿ	ಬಳಗಾನೂರು ಪಟ್ಟಣ ಪಂಚಾಯಿತಿ	500.00	426.36
			ತುರುವಿಹಾಳ ಪಟ್ಟಣ ಪಂಚಾಯಿತಿ	500.00	359.28
			ಹಟ್ಟಿ ಚಿನ್ನದಗಣಿ ಪಟ್ಟಣ ಪಂಚಾಯಿತಿ	500.00	0.00
23	ಬಳ್ಳಾರಿ	ಹೊಸಪೇಟೆ	ಕಮಲಾಪುರ ಪಟ್ಟಣ ಪಂಚಾಯಿತಿ	200.00	144.88
		ಸಿರುಗುಪ್ಪ	ತೆಕ್ಕಲಕೋಟೆ ಪಟ್ಟಣ ಪಂಚಾಯಿತಿ	200.00	25.75
		ಸಂಡೂರು	ಕುಡಿತಿನಿ ಪಟ್ಟಣ ಪಂಚಾಯಿತಿ	500.00	141.20
		ಹಗರಿಬೊಮ್ಮನಹಳ್ಳಿ	ಮರಿಯಮ್ಮನಹಳ್ಳಿ ಪಟ್ಟಣ ಪಂಚಾಯಿತಿ	500.00	142.91
			ಕೊಟ್ಟೂರು ಪಟ್ಟಣ ಪಂಚಾಯಿತಿ	200.00	95.72
		ಕೂಡ್ಲಿಗಿ	ಕೂಡ್ಲಿಗಿ ಪಟ್ಟಣ ಪಂಚಾಯಿತಿ	200.00	1.36
24	ಕೊಪ್ಪಳ	ಕೊಪ್ಪಳ	ಭಾಗ್ಯನಗರ ಪಟ್ಟಣ ಪಂಚಾಯಿತಿ	500.00	312.63
		ಯಲಬುರ್ಗಾ	ಕುಕನೂರು ಪಟ್ಟಣ ಪಂಚಾಯಿತಿ	500.00	266.61
			ಯಲಬುರ್ಗಾಪಟ್ಟಣ ಪಂಚಾಯಿತಿ	200.00	1.36
		ಕುಷ್ಟಗಿ	ತಾವರಗೇರಾಪಟ್ಟಣ ಪಂಚಾಯಿತಿ	500.00	302.62
		ಕನಕಗಿರಿ	ಕನಕಗಿರಿ ಪಟ್ಟಣ ಪಂಚಾಯಿತಿ	500.00	324.92
ಒಟ್ಟು				**30000.00**	**16151.19**

* ಕಾಮಗಾರಿಗಳ ಪ್ರಗತಿಗೆ ಅನುಗುಣವಾಗಿ ಜಿಲ್ಲಾಧಿಕಾರಿಗಳಿಂದ ಬೇಡಿಕೆ ಪಡೆದು ಅನುದಾನವನ್ನು ಬಿಡುಗಡೆ ಮಾಡಲಾಗುವುದು.

ಮುಖ್ಯ ಅಭಿಯಂತರರು
ಪೌರಾಡಳಿತ ನಿದೇಶನಾಲಯ
ಬೆಂಗಳೂರು

ಅನುಬಂಧ–2

ಸಿಎಂಎಸ್‌ಎಂಟಿಡಿಪಿ ನಗರೋತ್ಥಾನ ಹಂತ–2

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಜಿಲ್ಲೆಯ ಹೆಸರು	ಕ್ಷೇತ್ರದ ಹೆಸರು	ಪಟ್ಟಣ ಪಂಚಾಯಿತಿಯ ಹೆಸರು	ಹಂಚಿಕೆ	ಬಿಡುಗಡೆಯಾದ ಅನುದಾನ 2017–18 ರಿಂದ 2019–20 ರವರೆಗೆ
1	ಚಿತ್ರದುರ್ಗ	ಹೊಳಲ್ಕೆರೆ	ಹೊಳಲ್ಕೆರೆ ಪಟ್ಟಣ ಪಂಚಾಯಿತಿ	500.00	483.15
		ಮೊಳಕಾಲ್ಮೂರು	ಮೊಳಕಾಲ್ಮೂರು ಪಟ್ಟಣ ಪಂಚಾಯಿತಿ	500.00	411.92
2	ದಾವಣಗೆರೆ	ಜಗಳೂರು	ಜಗಳೂರು ಪಟ್ಟಣ ಪಂಚಾಯಿತಿ	500.00	110.00
3	ಶಿವಮೊಗ್ಗ	ಸಾಗರ	ಜೋಗ್–ಕಾರ್ಗಲ್ ಪಟ್ಟಣ ಪಂಚಾಯಿತಿ	500.00	130.81
		ಶಿಕಾರಿಪುರ	ಶಿರಾಳಕೊಪ್ಪ ಪಟ್ಟಣ ಪಂಚಾಯಿತಿ	500.00	112.5
		ಸೊರಬ	ಸೊರಬ ಪಟ್ಟಣ ಪಂಚಾಯಿತಿ	500.00	69.05
		ತೀರ್ಥಹಳ್ಳಿ	ತೀರ್ಥಹಳ್ಳಿ ಪಟ್ಟಣ ಪಂಚಾಯಿತಿ	500.00	21.52
4	ಚಾಮರಾಜನಗರ	ಕೊಳ್ಳೇಗಾಲ	ಯಳಂದೂರು ಪಟ್ಟಣ ಪಂಚಾಯಿತಿ	500.00	92.64
		ಹನೂರು	ಹನೂರು ಪಟ್ಟಣ ಪಂಚಾಯಿತಿ	500.00	74.09
5	ಹಾಸನ	ಅರಕಲಗೂಡು	ಅರಕಲಗೂಡು ಪಟ್ಟಣ ಪಂಚಾಯಿತಿ	500.00	42.83
		ಸಕಲೇಶಪುರ	ಆಲೂರು ಪಟ್ಟಣ ಪಂಚಾಯಿತಿ	500.00	111.23
6	ಚಿಕ್ಕಮಗಳೂರು	ಶೃಂಗೇರಿ	ನ.ರಾ.ಪುರ ಪಟ್ಟಣ ಪಂಚಾಯಿತಿ	500.00	16.50
			ಕೊಪ್ಪ ಪಟ್ಟಣ ಪಂಚಾಯಿತಿ	500.00	38.51
			ಶೃಂಗೇರಿ ಪಟ್ಟಣ ಪಂಚಾಯಿತಿ	500.00	89.06
		ಮೂಡಿಗೆರೆ	ಮೂಡಿಗೆರೆ ಪಟ್ಟಣ ಪಂಚಾಯಿತಿ	500.00	349.16
7	ಕೊಡಗು	ಮಡಿಕೇರಿ	ಕುಶಾಲನಗರ ಪಟ್ಟಣ ಪಂಚಾಯಿತಿ	500.00	46.43
			ಸೋಮವಾರಪೇಟೆ ಪಟ್ಟಣ ಪಂಚಾಯಿತಿ	500.00	24.75
		ವಿರಾಜಪೇಟೆ	ವಿರಾಜಪೇಟೆ ಪಟ್ಟಣ ಪಂಚಾಯಿತಿ	500.00	22.93
8	ಹಾವೇರಿ	ಹಿರೇಕೆರೂರು	ಹಿರೇಕೆರೂರು ಪಟ್ಟಣ ಪಂಚಾಯಿತಿ	500.00	1.86
9	ಉತ್ತರ ಕನ್ನಡ	ಯಲ್ಲಾಪುರ–ಮುಂಡಗೋಡ–ಬನವಾಸಿ	ಯಲ್ಲಾಪುರ ಪಟ್ಟಣ ಪಂಚಾಯಿತಿ	500.00	94.60
			ಮುಂಡಗೋಡ ಪಟ್ಟಣ ಪಂಚಾಯಿತಿ	500.00	94.60
		ಕುಮಟಾ–ಹೊನ್ನಾವರ	ಹೊನ್ನಾವರ ಪಟ್ಟಣ ಪಂಚಾಯಿತಿ	500.00	94.60
		ಶಿರಸಿ–ಸಿದ್ದಾಪುರ	ಸಿದ್ದಾಪುರ ಪಟ್ಟಣ ಪಂಚಾಯಿತಿ	500.00	94.60
		ಭಟ್ಕಳ	ಜಾಲಿ ಪಟ್ಟಣ ಪಂಚಾಯಿತಿ	500.00	94.60
10	ಬೆಳಗಾವಿ	ಚಿಕ್ಕೋಡಿ–ಸದಲಗಾ	ಸದಲಗಾ ಪಟ್ಟಣ ಪಂಚಾಯಿತಿ	500.00	138.46
		ಕುಡಚಿ	ಕುಡಚಿ ಪಟ್ಟಣ ಪಂಚಾಯಿತಿ	500.00	18.35
		ರಾಯಬಾಗ	ರಾಯಬಾಗ ಪಟ್ಟಣ ಪಂಚಾಯಿತಿ	500.00	70.02
		ಗೋಕಾಕ	ಕೊಣ್ಣೂರ ಪಟ್ಟಣ ಪಂಚಾಯಿತಿ	500.00	49.66
		ಖಾನಾಪೂರ	ಖಾನಾಪೂರ ಪಟ್ಟಣ ಪಂಚಾಯಿತಿ	500.00	73.78
11	ಧಾರವಾಡ	ಕಲಘಟಗಿ	ಅಳ್ನಾವರ ಪಟ್ಟಣ ಪಂಚಾಯಿತಿ	500.00	93.15
			ಕಲಘಟಗಿ ಪಟ್ಟಣ ಪಂಚಾಯಿತಿ	500.00	92.69
12	ಗದಗ	ಗದಗ	ಮುಳಗುಂದ ಪಟ್ಟಣ ಪಂಚಾಯಿತಿ	500.00	21.72
		ರೋಣ	ನರೇಗಲ್ಲ ಪಟ್ಟಣ ಪಂಚಾಯಿತಿ	500.00	112.91
		ಶಿರಹಟ್ಟಿ	ಶಿರಹಟ್ಟಿ ಪಟ್ಟಣ ಪಂಚಾಯಿತಿ	500.00	55.24
13	ಬಾಗಲಕೋಟ	ಬಾದಾಮಿ	ಕೆರೂರ ಪಟ್ಟಣ ಪಂಚಾಯತ	500.00	64.47
		ಬೀಳಗಿ	ಬೀಳಗಿ ಪಟ್ಟಣ ಪಂಚಾಯತ	500.00	142.57

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಜಿಲ್ಲೆಯ ಹೆಸರು	ಕ್ಷೇತ್ರದ ಹೆಸರು	ಪಟ್ಟಣ ಪಂಚಾಯಿತಿಯ ಹೆಸರು	ಹಂಚಿಕೆ	ಬಿಡುಗಡೆಯಾದ ಅನುದಾನ 2017-18 ರಿಂದ 2019-20 ರವರೆಗೆ
14	ಕಲಬುರಗಿ	ಚಿಂಚೋಳಿ	ಚಿಂಚೋಳಿ ಪಟ್ಟಣ ಪಂಚಾಯತ	500.00	168.49
		ಅಫಜಲ್‌ಪುರ	ಅಫಜಲ್‌ಪುರ ಪಟ್ಟಣ ಪಂಚಾಯತ	500.00	166.84
		ಜೇವರ್ಗಿ	ಜೇವರ್ಗಿ ಪಟ್ಟಣ ಪಂಚಾಯತ	500.00	45.67
15	ಬಳ್ಳಾರಿ	ಹೊಸಪೇಟೆ	ಕಮಲಾಪುರ ಪಟ್ಟಣ ಪಂಚಾಯಿತಿ	500.00	173.83
		ಸಿರುಗುಪ್ಪ	ತೆಕ್ಕಲಕೋಟೆ ಪಟ್ಟಣ ಪಂಚಾಯತಿ	500.00	158.32
		ಹಗರಿಬೊಮ್ಮನಹಳ್ಳಿ	ಕೊಟ್ಟೂರು ಪಟ್ಟಣ ಪಂಚಾಯತಿ	500.00	307.33
		ಕೂಡ್ಲಿಗಿ	ಕೂಡ್ಲಿಗಿ ಪಟ್ಟಣ ಪಂಚಾಯತಿ	500.00	233.97
16	ಕೊಪ್ಪಳ	ಯಲಬುರ್ಗಾ	ಯಲಬುರ್ಗಾ ಪಟ್ಟಣ ಪಂಚಾಯಿತಿ	500.00	251.56
	ಒಟ್ಟು			**22000.00**	**5160.97**

* ಸಿಎಂಎಸ್‌ಎಂಟಿಡಿಪಿ ನಗರೋತ್ಥಾನ 2ನೇ ಹಂತ ಯೋಜನೆಯನ್ನು 2012-13ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದ್ದು, ಬಹುತೇಕ ಕಾಮಗಾರಿಗಳು ಭೌತಿಕವಾಗಿ ಮತ್ತು ಆರ್ಥಿಕವಾಗಿ ಪೂರ್ಣಗೊಂಡಿರುತ್ತವೆ. 2017-18ರಿಂದ 2019-20ನೇ ಸಾಲಿನವರೆಗಿನ ಬಾಕಿ ಉಳಿದ ಕಾಮಗಾರಿಗಳಿಗೆ ಪಟ್ಟಣ ಪಂಚಾಯಿತಿವಾರು ಬಿಡುಗಡೆ ಮಾಡಿರುವ ಮಾಹಿತಿಯನ್ನು ಮೇಲಿನ ಕೋಷ್ಟಕದಲ್ಲಿ ನೀಡಲಾಗಿದೆ.

ಮುಖ್ಯ ಅಭಿಯಂತರರು
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 45 ಎಂಎನ್ ಎ 2020

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:13-03-2020

87
48
13/3/2020

ಇವರಿಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ/~~ಪರಿಷತ್ತು~~
ವಿಧಾನಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ವಿಧಾನ ಸಭೆ/~~ವಿಧಾನ ಪರಿಷತ್ತಿನ~~ ಮಾನ್ಯ ಸದಸ್ಯರಾದ ಶ್ರೀ ಮಂಜುನಾಥ್.ಎ ಇವರು ಮಂಡಿಸಿರುವ ಚುಕ್ಕೆ ~~ಗುರುತಿನ~~/ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1616 ಕ್ಕೆ ಉತ್ತರವನ್ನು ಕಳುಹಿಸಿಕೊಡುವ ಬಗ್ಗೆ.

* * * * *

ವಿಧಾನ ಸಭೆ/~~ವಿಧಾನ ಪರಿಷತ್ತಿನ~~ ಮಾನ್ಯ ಸದಸ್ಯರಾದ ಶ್ರೀ ಮಂಜುನಾಥ್.ಎ ಇವರು ಮಂಡಿಸಿರುವ ಚುಕ್ಕೆ ~~ಗುರುತಿನ~~/ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1616 ಕ್ಕೆ ಉತ್ತರಗಳ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ತಮಗೆ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ನಿಮ್ಮ ನಂಬುಗೆಯ,

(ಲಕ್ಷ್ಮಿ ಸಾಗರ್.ಎಸ್.ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ)

ಕರ್ನಾಟಕ ವಿಧಾನ ಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1616
2	ಸದಸ್ಯರ ಹೆಸರು	:	ಶ್ರೀ ಮಂಜುನಾಥ್.ಎ (ಮಾಗಡಿ)
3	ಉತ್ತರಿಸುವ ದಿನಾಂಕ	:	13-03-2020
4	ಉತ್ತರಿಸುವವರು	:	ಮಾನ್ಯ ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬಿಬಿಎಂಪಿ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಕೊಳಚೆ ನೀರು ವೃಷಭಾವತಿ ಕಣಿವೆ ಮುಖಾಂತರ ಬೈರಮಂಗಲ ಜಲಾಶಯಕ್ಕೆ ಸೇರುತ್ತಿರುವುದರಿಂದ ಕಣಿವೆ ವ್ಯಾಪ್ತಿಗೆ ಹೊಂದಿಕೊಂಡಿರುವ ಪ್ರದೇಶಗಳ ಅಭಿವೃದ್ಧಿಗೆ ಸರ್ಕಾರದಿಂದ ಆದ್ಯತೆ ನೀಡಲಾಗಿದೆಯೇ;	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬೃಹತ್ ಮಳೆ ನೀರುಗಾಲುವೆ ಶಾಖೆಯಿಂದ ಆದ್ಯತೆ ಮೇಲೆ ವೃಷಭಾವತಿ ಕಣಿವೆಯ ಕಾಮಗಾರಿಯನ್ನು ನಿರ್ವಹಿಸಲಾಗಿದೆ.
ಆ)	ಹಾಗಿದ್ದಲ್ಲಿ, ಕಣಿವೆ ವ್ಯಾಪ್ತಿಗೆ ಹೊಂದಿಕೊಂಡಿರುವ ಪ್ರದೇಶಗಳ ಅಭಿವೃದ್ಧಿಗೆ ಸರ್ಕಾರ ನಿಗದಿಪಡಿಸಿರುವ ಅನುದಾನ ಎಷ್ಟು;	ಕಳೆದ ಮೂರು ವರ್ಷಗಳಲ್ಲಿ (2016-17, 2017-18 ಮತ್ತು 2018-19) ವೃಷಭಾವತಿ ಕಣಿವೆ ಅಭಿವೃದ್ಧಿಗೆ ಒಟ್ಟು ರೂ.51390.39 ಲಕ್ಷಗಳ ಅನುದಾನವನ್ನು ಹಂಚಿಕೆ ಮಾಡಲಾಗಿದೆ.
ಇ)	ಕಳೆದ ಮೂರು ವರ್ಷಗಳಲ್ಲಿ ವೃಷಭಾವತಿ ಕಣಿವೆ ಪ್ರದೇಶಗಳ ಅಭಿವೃದ್ಧಿಗೆ ನೀಡಲಾದ ಅನುದಾನವೆಷ್ಟು;	
ಈ)	ಕಳೆದ 3 ವರ್ಷಗಳಲ್ಲಿ ಬಿಡುಗಡೆಯಾದ ಅನುದಾನದ ಪೈಕಿ ಖರ್ಚು ಮಾಡಲಾದ ಹಣವೆಷ್ಟು; ಬಾಕಿಯಿರುವ ಹಣವೆಷ್ಟು; ಹಾಗಿದ್ದಲ್ಲಿ, ಖರ್ಚು ಮಾಡದೇ ಬಾಕಿ ಉಳಿದಿರುವ ಅನುದಾನವನ್ನು ಮುಂದಿನ ಆರ್ಥಿಕ ವರ್ಷಕ್ಕೆ ಬಳಸಲಾಗುವುದೇ?	2016-17, 2017-18 ಮತ್ತು 2018-19ನೇ ಸಾಲುಗಳಲ್ಲಿ ವೃಷಭಾವತಿ ಕಣಿವೆ ಅಭಿವೃದ್ಧಿಗೆ ಒಟ್ಟು ರೂ.51390.39 ಲಕ್ಷಗಳ ಅನುದಾನ ಒದಗಿಸಲಾಗಿದ್ದು, ಇದರಲ್ಲಿ ರೂ.37014.62 ಲಕ್ಷಗಳ ಅನುದಾನ ವೆಚ್ಚವಾಗಿದ್ದು, ರೂ.8954.80 ಲಕ್ಷಗಳ ಅನುದಾನ ಬಾಕಿ ಇರುತ್ತದೆ. ಬಾಕಿ ಉಳಿದಿರುವ ಅನುದಾನವನ್ನು ಮುಂದಿನ ಆರ್ಥಿಕ ವರ್ಷಕ್ಕೆ ಬಳಸಿಕೊಳ್ಳಲಾಗುವುದು.

ಸಂಖ್ಯೆ: ನಅಇ 45 ಎಂಎನ್‌ವೈ 2020

(ಬಿ.ಎಸ್. ಯಡಿಯೂರಪ್ಪ.)
ಮುಖ್ಯಮಂತ್ರಿ

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ46 ಎಂಎಸ್ ಎ 2020

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 13-03-2020

66
48
13/3/2020

ಇವರಿಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ/~~ಪರಿಷತ್ತು~~
ವಿಧಾನಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ವಿಧಾನ ಸಭೆ/~~ವಿಧಾನ ಪರಿಷತ್ತಿನ~~ ಮಾನ್ಯ ಸದಸ್ಯರಾದ ಶ್ರೀ ಮಂಜುನಾಥ್. ಎ ಇವರು ಮಂಡಿಸಿರುವ ಚುಕ್ಕೆ ~~ಗುರುತಿನ~~/ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1615 ಕ್ಕೆ ಉತ್ತರವನ್ನು ಕಳುಹಿಸಿಕೊಡುವ ಬಗ್ಗೆ.

* * * * *

ವಿಧಾನ ಸಭೆ/~~ವಿಧಾನ ಪರಿಷತ್ತಿನ~~ ಮಾನ್ಯ ಸದಸ್ಯರಾದ ಶ್ರೀ ಮಂಜುನಾಥ್. ಎ ಇವರು ಮಂಡಿಸಿರುವ ಚುಕ್ಕೆ ~~ಗುರುತಿನ~~/ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1615 ಕ್ಕೆ ಉತ್ತರಗಳ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ತಮಗೆ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ನಿಮ್ಮ ನಂಬುಗೆಯ,

(ಲಕ್ಷ್ಮೀಸಾಗರ್.ಎಸ್.ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ)

ಕರ್ನಾಟಕ ವಿಧಾನ ಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1615
2	ಸದಸ್ಯರ ಹೆಸರು	:	ಶ್ರೀ ಮಂಜುನಾಥ್.ಎ (ಮಾಗಡಿ)
3	ಉತ್ತರಿಸುವ ದಿನಾಂಕ	:	13-03-2020
4	ಉತ್ತರಿಸುವವರು	:	ಮಾನ್ಯ ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬಿಬಿಎಂಪಿ ವ್ಯಾಪ್ತಿಯಿಂದ ವೃಷಭಾವತಿ ನದಿಯ ಕೊಳಚೆ ನೀರು ಮಾಗಡಿ ವಿಧಾನಸಭಾ ಕ್ಷೇತ್ರದ ಬೈರಮಂಗಲ ಜಲಾಶಯಕ್ಕೆ ನೇರವಾಗಿ ಸೇರುತ್ತಿರುವುದರಿಂದ ಈ ಜಲಾಶಯದ ವ್ಯಾಪ್ತಿಯಲ್ಲಿನ ಮಂಚನಾಯಕನಹಳ್ಳಿ, ಬೈರಮಂಗಲ, ಗೋಪಹಳ್ಳಿ, ಕಂಚುಗಾರನಹಳ್ಳಿ ಗ್ರಾಮಗಳಲ್ಲಿ ಹಾಗೂ ಬಿಡದಿ ಪುರಸಭೆ ವ್ಯಾಪ್ತಿಯ ಪ್ರದೇಶಗಳಲ್ಲಿ ಕೊಳಚೆ ನೀರಿನ ದುಷ್ಪರಿಣಾಮಗಳಿಂದಾಗಿ ಸಾಂಕ್ರಾಮಿಕ ರೋಗಗಳು ಹರಡುತ್ತಿರುವುದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ವೃಷಭಾವತಿ ಕಣಿವೆಯ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಸುಮಾರು ದಿನಂಪ್ರತಿ **520** ದ.ಲ.ಲೀ ತ್ಯಾಜ್ಯನೀರನ್ನು ಶುದ್ಧೀಕರಿಸಲು ಹಾಲಿ ಬೆಂಗಳೂರು ಜಲಮಂಡಳಿ ವತಿಯಿಂದ 5 ಸಂಸ್ಕರಣಾ ಘಟಕಗಳನ್ನು ಕ್ರಮವಾಗಿ ಮೈಸೂರು ಮುಖ್ಯರಸ್ತೆಯ ನಾಯಂಡನಹಳ್ಳಿಯ ಬಳಿ ದಿನಂಪ್ರತಿ 180 ದಶಲಕ್ಷ ಲೀಟರ್, ಮೈಲಸಂದ್ರದಲ್ಲಿ ದಿನಂಪ್ರತಿ 75 ದಶಲಕ್ಷ ಲೀಟರ್, ಕೆಂಗೇರಿ ಬಳಿ ದಿನಂಪ್ರತಿ 60 ದಶಲಕ್ಷ ಲೀಟರ್ ಹಾಗೂ ದೊಡ್ಡಬೆಲೆ ಬಳಿ ದಿನಂಪ್ರತಿ 60 (40+20) ದಶಲಕ್ಷ ಲೀಟರ್ ಸಾಮರ್ಥ್ಯದ ಒಟ್ಟಾರೆ 375 ದಶಲಕ್ಷ ಲೀಟರ್ ಸಾಮರ್ಥ್ಯದ ಘಟಕಗಳನ್ನು ಸ್ಥಾಪಿಸಲಾಗಿದ್ದು ಕಾರ್ಯ ನಿರ್ವಹಿಸುತ್ತಿವೆ. ನಾಯಂಡನಹಳ್ಳಿಯ ಬಳಿ ದಿನಂಪ್ರತಿ 150 ದಶಲಕ್ಷ ಲೀಟರ್ ಸಾಮರ್ಥ್ಯದ ಮತ್ತೊಂದು ಘಟಕವನ್ನು ನಿರ್ಮಿಸುತ್ತಿದ್ದು ಒಟ್ಟಾರೆ ಸಾಮರ್ಥ್ಯ ದಿನಂಪ್ರತಿ **525** ದಶಲಕ್ಷ ಲೀಟರ್‌ಗಳಾಗಲಿದೆ. ವೃಷಭಾವತಿ ಕಣಿವೆಗೆ ಸಂಬಂಧಿಸಿದಂತೆ ಬೆಂಗಳೂರು ಜಲಮಂಡಲಿಯು ಈಗಾಗಲೇ ಇರುವ ವ್ಯವಸ್ಥೆಯ ಜೊತೆಗೆ ಈ ಕೆಳಕಂಡ ಯೋಜನೆಗಳನ್ನು ಕಾರ್ಯರೂಪಕ್ಕೆ ತರುತ್ತಿದೆ. ವೃಷಭಾವತಿ ಕಣಿವೆಯಲ್ಲಿ ಉತ್ಪಾದನೆಯಾಗುವ ತ್ಯಾಜ್ಯ ನೀರನ್ನು ಶುದ್ಧೀಕರಣ ಘಟಕಗಳಿಗೆ ಸಾಗಿಸಲು ವಿವಿಧ ವ್ಯಾಸದ ಕೊಳವೆ ಮಾರ್ಗಗಳನ್ನು ಸುಮಾರು 40-50 ವರ್ಷಗಳ ಹಿಂದೆ ಅಳವಡಿಸಲಾಗಿತ್ತು. ಕೊಳವೆ ಮಾರ್ಗದಲ್ಲಿ ಇರುವ ತೊಂದರೆಗಳಿಂದಾಗಿ, ಕೊಳವೆ ಮಾರ್ಗದ ವಿನ್ಯಾಸದ ಸಮಯದಲ್ಲಿ ಪರಿಗಣಿಸಿದ ತ್ಯಾಜ್ಯ ನೀರಿನ ಪ್ರಮಾಣವು ಹೆಚ್ಚಾದುದರಿಂದ ಕೊಳವೆ ಮಾರ್ಗದ ಪುನರುಜ್ಜೀವನ / ಬದಲಾವಣೆ ಕಾಮಗಾರಿಯನ್ನು ಕೈಗೊಳ್ಳಬೇಕಾಗಿರುತ್ತದೆ. ಆದುದರಿಂದ ಕೊಳವೆ ಮಾರ್ಗದ ಪುನರುಜ್ಜೀವನ / ಬದಲಾವಣೆ ಕಾಮಗಾರಿಯನ್ನು ಪರಿಸರ ಕ್ರಿಯಾ ಯೋಜನೆ – ಎ ಅಡಿಯಲ್ಲಿ ಕೈಗೊಳ್ಳಲಾಗಿದ್ದು ಸಂಪೂರ್ಣಗೊಳಿಸಲಾಗಿದೆ. ಮುಂದುವರೆದಂತೆ ಪರಿಸರ ಕ್ರಿಯಾ ಯೋಜನೆ – ಬಿ ಅಡಿಯಲ್ಲಿ ನಗರದ ವೃಷಭಾವತಿ ಕಣಿವೆಯ ಹಾಲಿ ಒಳಚರಂಡಿ ವ್ಯವಸ್ಥೆಯ ಪುನರುಜ್ಜೀಕರಣ ಕಾಮಗಾರಿಗಳನ್ನು 2019ರ ಅಂತ್ಯದಲ್ಲಿ ಪೂರ್ಣಗೊಳಿಸಲಾಗಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಗೊಂಡ ರಾಜರಾಜೇಶ್ವರಿ ನಗರ ಮತ್ತು ಕೆಂಗೇರಿಗಳಿಂದ ಉತ್ಪತ್ತಿಯಾಗುವ ಒಳಚರಂಡಿ ತ್ಯಾಜ್ಯ ನೀರನ್ನು ಕ್ರೋಢೀಕರಿಸುವ ಸಲುವಾಗಿ

ಕೆ.ಎಂ.ಆರ್.ಪಿ. ಯೋಜನೆಯಡಿಯಲ್ಲಿ ಜೆ.ಎನ್.ಎನ್.ಯು.ಆರ್.ಎಂ. ಮತ್ತು ವಿಶ್ವಬ್ಯಾಂಕ್ ಸಹಭಾಗಿತ್ವದ ಆರ್ಥಿಕ ನೆರವಿನೊಂದಿಗೆ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಕಾಮಗಾರಿಗಳನ್ನು ಸಹ ಪೂರ್ಣಗೊಳಿಸಲಾಗಿದೆ.

ಈ ಪ್ರದೇಶಗಳಿಂದ ಉತ್ಪತ್ತಿಯಾಗುತ್ತಿರುವ ತ್ಯಾಜ್ಯ ನೀರನ್ನು ಕೊಳವೆಗಳ ಮುಖಾಂತರ ಸಂಸ್ಕರಣಾ ಘಟಕಕ್ಕೆ ಕೊಂಡೊಯ್ದು ಸಂಸ್ಕರಿಸಲು ಕೆಂಗೇರಿ ಬಳಿ 60 ದಶಲಕ್ಷ ಲೀಟರ್ ದಿನಂಪ್ರತಿ ಸಾಮರ್ಥ್ಯದ ಮತ್ತು ದೊಡ್ಡಬೆಲೆಯಲ್ಲಿ 20 ದಶಲಕ್ಷ ಲೀಟರ್ ದಿನಂಪ್ರತಿ ಸಾಮರ್ಥ್ಯದ ಎರಡು ಸಂಸ್ಕರಣಾ ಘಟಕಗಳನ್ನು ಜಪಾನ್ ಅಂತರರಾಷ್ಟ್ರೀಯ ಸಹಕಾರ ಸಂಸ್ಥೆಯ ಸಹಯೋಗದೊಂದಿಗೆ ಕೈಗೊಂಡು ನಿರ್ಮಿಸಲಾಗುತ್ತಿದೆ.

ಮೇಲಿನ ಯೋಜನೆಗಳ ಜೊತೆ ಜಲಮಂಡಳಿಯು ಅಮೃತ್ ಯೋಜನೆಯಡಿಯಲ್ಲಿ ಮೈಸೂರು ರಸ್ತೆ ರಂಗನಾಥ ಕಾಲೋನಿಯಿಂದ ವೃಷಭಾವತಿ ತ್ಯಾಜ್ಯ ನೀರಿನ ಘಟಕದವರೆಗೂ ತ್ಯಾಜ್ಯ ನೀರು ಸಾಗಿಸುವ 1.60 ಕಿ.ಮೀ ಉದ್ದದ ಹಳೆಯ ಕೊಳವೆ ಮಾರ್ಗವನ್ನು ಹೆಚ್ಚಿನ ಗಾತ್ರಕ್ಕೆ ಬದಲಾಯಿಸುವ ಕಾಮಗಾರಿಯನ್ನು ಪೂರ್ಣಮಾಡಲಾಗಿದೆ. ವೃಷಭಾವತಿ ಕಣಿವೆಯಲ್ಲಿ ತ್ಯಾಜ್ಯ ನೀರು ಸಾಗಿಸುವ 90 ಕಿ.ಮೀ ಉದ್ದದ ಕೊಳವೆ ಮಾರ್ಗಗಳನ್ನು ಅಳವಡಿಸುವ ಪರಿಸರ ಕ್ರಿಯಾ ಯೋಜನೆ – ಸಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಈ ಕಾಮಗಾರಿಗಳನ್ನು 2020 ರ ಅಂತ್ಯದಲ್ಲಿ ಪೂರ್ಣ ಮಾಡಲಾಗುವುದು.

ಮೆಗಾಸಿಟಿ ರಿವಾಲ್ವಿಂಗ್ ನಿಧಿಯಡಿಯಲ್ಲಿ ವೃಷಭಾವತಿ ಕಣಿವೆಯ ಬಳಿ 150 ದಶಲಕ್ಷ ಲೀಟರ್ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣ ಘಟಕವನ್ನು ನಿರ್ಮಿಸುವ ಕಾಮಗಾರಿಯು ಪ್ರಗತಿಯಲ್ಲಿದ್ದು, 2020 ರ ಅಂತ್ಯದಲ್ಲಿ ಪೂರ್ಣಗೊಳಿಸಲಾಗುವುದು ಹಾಗೂ ದೊಡ್ಡಬೆಲೆ ಬಳಿ 40 ದಶಲಕ್ಷ ಲೀಟರ್ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣ ಘಟಕವನ್ನು ನವೆಂಬರ್ 2019ರಲ್ಲಿ ಪೂರ್ಣಗೊಳಿಸಿ ಕಾರ್ಯಾರಂಭ ಮಾಡಲಾಗಿದೆ.

ವೃಷಭಾವತಿ ವ್ಯಾಪ್ತಿಯಲ್ಲಿ ಬರುವ 110 ಹಳ್ಳಿ ಪ್ರದೇಶಗಳಲ್ಲಿ ಒಳಚರಂಡಿ ವ್ಯವಸ್ಥೆಯ ಕಾಮಗಾರಿಗಳನ್ನು ಸಹ ಮಂಡಳಿಯು ಕೈಗೊಂಡಿದ್ದು, ಸದರಿ ಪ್ರದೇಶಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಸಹ ಸಂಸ್ಕರಿಸಲು ತ್ಯಾಜ್ಯ ನೀರು ಶುದ್ಧೀಕರಣ ಘಟಕಗಳ ಕಾಮಗಾರಿಗಳಿಗೆ ಈಗಾಗಲೇ ಟೆಂಡರ್ ಕರೆಯಲಾಗಿದೆ ಹಾಗೂ ಶೀಘ್ರದಲ್ಲಿ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

ಬೆಂಗಳೂರು ಜಲ ಮಂಡಳಿಯು ಕೈಗೊಂಡಿರುವ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿ, 2023 ರ ಅಂತ್ಯದಲ್ಲಿ ಕಾರ್ಯರೂಪಕ್ಕೆ ತರಲಾಗುವುದು. ಈ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿದ ನಂತರ ಬೈರಮಂಗಲ ಕೆರೆಯ ಮಾಲಿನ್ಯವನ್ನು ತಡೆಗಟ್ಟಲು ಸಾಧ್ಯವಾಗುತ್ತದೆ.

ಅಲ್ಲದೆ, ಬಿಬಿಎಂಪಿ ವತಿಯಿಂದ ವೃಷಭಾವತಿ ಕಣಿವೆಯ ಗೋಡೆಗಳ ಮೇಲೆ ಘನತ್ಯಾಜ್ಯ ವಸ್ತುಗಳನ್ನು (Solid Waste)ನ್ನು ಹಾಕಬಾರದೆಂದು ನಾಮಫಲಕಗಳನ್ನು ಅಳವಡಿಸಲಾಗಿದೆ ಹಾಗೂ ಇದಕ್ಕಾಗಿ ಪ್ರತಿ ವಾರ್ಡ್‌ಗೆ ಒಬ್ಬ

		ಮಾರ್ಷಲ್ ನ್ನು ನೇಮಿಸಿ, ಘನತ್ಯಾಜ್ಯ ವಸ್ತುಗಳನ್ನು ಬೆಂಗಳೂರು ನಾಗರೀಕರು ವೃಷಭಾವತಿ ಕಣಿವೆಗೆ ಹಾಕದಂತೆ ಕ್ರಮವಹಿಸಲಾಗುತ್ತದೆ. ವೃಷಭಾವತಿ ಕಣಿವೆಯಲ್ಲಿ ದೈನಂದಿನ ಘನತ್ಯಾಜ್ಯ ಸ್ವಚ್ಛತೆ ಗುತ್ತಿಗೆದಾರರನ್ನು ನೇಮಿಸಲಾಗಿದ್ದು, ವೃಷಭಾವತಿ ಕಣಿವೆಯಲ್ಲಿ ಬಿದ್ದಂತಹ ಘನತ್ಯಾಜ್ಯ ವಸ್ತುಗಳನ್ನು ಆಗಿಂದಾಗೆ ತೆಗೆಯಲು ಬಿಬಿಎಂಪಿ ವತಿಯಿಂದ ಕ್ರಮವಹಿಸಲಾಗಿದೆ.
ಆ)	ಸದರಿ ಕೊಳಚೆ ನೀರು ಬೈರಮಂಗಲ ಜಲಾಶಯಕ್ಕೆ ಸೇರುತ್ತಿರುವುದರಿಂದ ಸ್ಥಳೀಯ ಪ್ರದೇಶಾಭಿವೃದ್ಧಿಗಾಗಿ ವಿಶೇಷ ಪ್ರಕರಣದಡಿ ಪರಿಗಣಿಸಿ ಬಿ.ಬಿ.ಎಂ.ಪಿ ಗೆ ರೂ.40.00 ಕೋಟಿ ಅನುದಾನವನ್ನು ಮಂಜೂರು ಮಾಡಲು ನಿರ್ದೇಶನ ನೀಡಿದ್ದರೂ ಸಹ ಇದುವರೆವಿಗೂ ಯಾವುದೇ ಕ್ರಮ ಜರುಗಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ	ಬಿಬಿಎಂಪಿ ವತಿಯಿಂದ ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಲಾಗುವುದು.
ಇ)	ಬಂದಿದ್ದಲ್ಲಿ ಅನುದಾನ ಬಿಡುಗಡೆಗಾಗಿ ಆಯುಕ್ತರು, ಬಿಬಿಎಂಪಿ ಇವರು ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆ ಸಲ್ಲಿಸದೇ ವಿಳಂಬ ಅನುಸರಿಸುತ್ತಿರಲು ಕಾರಣಗಳೇನು (ಸಂಪೂರ್ಣ ಮಾಹಿತಿ ನೀಡುವುದು)	ಉದ್ಭವಿಸುವುದಿಲ್ಲ.
ಈ)	ಸದರಿ ಪ್ರದೇಶಗಳ ಅಭಿವೃದ್ಧಿಗೆ ಬಿಬಿಎಂಪಿ ವತಿಯಿಂದಲೂ ವಿಶೇಷ ಅನುದಾನ ಬಿಡುಗಡೆ ಮಾಡಲು ಕ್ರಮ ಜರುಗಿಸಲಾಗುವುದೇ? (ವಿವರ ನೀಡುವುದು)	ಸದರಿ ಪ್ರಸ್ತಾವನೆಯಲ್ಲಿ ಸೇರಿರುವ ಗ್ರಾಮಗಳು ಬಿಬಿಎಂಪಿ ವ್ಯಾಪ್ತಿಗೆ ಒಳಪಡುವುದಿಲ್ಲ.

ಸಂಖ್ಯೆ: ನಅಇ 46 ಎಂಎನ್‌ವೈ 2020

ಬಿ.ಎಸ್. ಯಡಿಯೂರಪ್ಪ
(ಬಿ.ಎಸ್. ಯಡಿಯೂರಪ್ಪ.)
ಮುಖ್ಯಮಂತ್ರಿ

ಕರ್ನಾಟಕ ಸರ್ಕಾರ

ಸಂಖ್ಯೆ:ನಅಇ 36 ಯುಎಂಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:13.03.2020

38
13/3/20

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಜಿ.ಟಿ.ದೇವೇಗೌಡ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 685 ಕ್ಕೆ ಉತ್ತರಿಸುವ ಬಗ್ಗೆ

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಜಿ.ಟಿ.ದೇವೇಗೌಡ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 685 ಕ್ಕೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಎಸ್.ದಿವಾಕರ್)
ಶಾಖಾಧಿಕಾರಿ,
ಮಂಡಳಿ ಶಾಖೆ
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	685
ಸದಸ್ಯರ ಹೆಸರು	:	ಶ್ರೀ ದೇವೇಗೌಡ ಜಿ.ಟಿ. (ಚಾಮುಂಡೇಶ್ವರಿ)
ಉತ್ತರಿಸಬೇಕಾದ ದಿನಾಂಕ	:	13.03.2020
ಉತ್ತರಿಸಬೇಕಾದ ಸಚಿವರು	:	ನಗರಾಭಿವೃದ್ಧಿ ಸಚಿವರು.

****

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಮೈಸೂರು ನಗರ ಮತ್ತು ಸುತ್ತಮುತ್ತ ಇರುವ ಹಳ್ಳಿಗಳಿಗೆ ಕಾವೇರಿ ನದಿಯಿಂದ ಕುಡಿಯುವ ನೀರನ್ನು ಒದಗಿಸುವ ಹಳೇ ಉಂಡುವಾಡಿ ಯೋಜನೆಯನ್ನು ಜಾರಿಗೊಳಿಸಲಾಗಿದೆಯೇ;	ಹೌದು. ಸರ್ಕಾರದ ಆದೇಶ ಸಂಖ್ಯೆ ನಅಇ 15 ಯುಡಬ್ಲ್ಯೂಎಸ್ 2018, ದಿನಾಂಕ 21-02-2019 ರಲ್ಲಿ ಹಳೇ ಉಂಡವಾಡಿ ಗ್ರಾಮದ ಬಳಿ ಕಾವೇರಿ ನದಿ ಮೂಲದಿಂದ ಮೈಸೂರು ನಗರ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಮೈಸೂರು ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಮತ್ತು ವ್ಯಾಪ್ತಿಯ ಹೊರಗಡೆ ಬರುವ 92 ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಮಾಡುವ ಯೋಜನೆಯ ಮೊದಲನೇ ಹಂತದ ಕಾಮಗಾರಿಯನ್ನು ರೂ.350.00 ಕೋಟಿಗಳ ಅಂದಾಜಿನಲ್ಲಿ ಕೈಗೆತ್ತಿಕೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಈ ಯೋಜನೆಗೆ ಅವಶ್ಯಕವಿರುವ 30 ಎಕರೆ 31 ಗುಂಟೆ ಸರ್ಕಾರಿ ಜಮೀನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಹಸ್ತಾಂತರವಾಗಬೇಕಾಗಿರುತ್ತದೆ. ಇದಲ್ಲದೆ, ಮಂಡಳಿಯು 92 ಎಕರೆ ಖಾಸಗಿ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲು ನೇರ ಖರೀದಿ ಮಾಡಲು ನಿರ್ಧರಿಸಿದ್ದು, ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ.
ಆ)	ಹಾಗಿದ್ದಲ್ಲಿ, ಸದರಿ ಯೋಜನೆಯ ಕಾಮಗಾರಿಯು ಪ್ರಸ್ತುತ ಯಾವ ಹಂತದಲ್ಲಿದೆ;	
ಇ)	ಈ ಯೋಜನೆಗಾಗಿ ಸರ್ಕಾರವು ಮೀಸಲಿಟ್ಟಿರುವ ಅನುದಾನದ ಮೊತ್ತವೆಷ್ಟು; ಇದುವರೆವಿಗೂ ಬಿಡುಗಡೆಯಾಗಿರುವ ಮತ್ತು ವೆಚ್ಚವಾಗಿರುವ ಮೊತ್ತವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)	ಈ ಯೋಜನೆಯ ಮೊದಲನೇ ಹಂತದಲ್ಲಿ ಅಂದಾಜು ಮೊತ್ತ ರೂ.350.00 ಕೋಟಿಗಳಿಗೆ ಅನುಮೋದನೆ ನೀಡಲಾಗಿರುತ್ತದೆ. ಈ ಯೋಜನೆಗೆ ಇದುವರೆವಿಗೂ ರೂ.6.79 ಲಕ್ಷಗಳು ವೆಚ್ಚವಾಗಿರುತ್ತದೆ.
ಈ)	ಈ ಯೋಜನೆಯನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು)	ಅವಶ್ಯಕ ಜಮೀನು ಮಂಡಳಿಗೆ ಹಸ್ತಾಂತರಗೊಂಡ ನಂತರ 3 ವರ್ಷಗಳಲ್ಲಿ ಈ ಯೋಜನೆಯನ್ನು ಕಾರ್ಯಗತಗೊಳಿಸಲು ಯೋಜಿಸಲಾಗಿದೆ.

ಸಂಖ್ಯೆ: ನಅಇ 67 ಯುಎಂಎಸ್ 2020

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 51 ಯುಎಂಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ 13-03-2020

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 984ಕ್ಕೆ ಉತ್ತರ ನೀಡುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 984ಕ್ಕೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಎಸ್.ದಿವಾಕರ್)
ಶಾಖಾಧಿಕಾರಿ
ಮಂಡಳಿ ಶಾಖೆ
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	984
ಸದಸ್ಯರ ಹೆಸರು	:	ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)
ಉತ್ತರಿಸಬೇಕಾದ ದಿನಾಂಕ	:	13.03.2020
ಉತ್ತರಿಸಬೇಕಾದ ಸಚಿವರು	:	ನಗರಾಭಿವೃದ್ಧಿ ಸಚಿವರು.

****

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಕಳೆದ ಎರಡು ವರ್ಷಗಳಲ್ಲಿ ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ ಕರ್ನಾಟಕ ನೀರು ಸರಬರಾಜು / ಒಳಚರಂಡಿ ಮಂಡಳಿಯವರು ಕೈಗೊಂಡ ಯೋಜನಾನುಷ್ಠಾನ/ ಕಾಮಗಾರಿಗಳಾವುವು; ಅದಕ್ಕಾಗಿ ಬಳಸಿದ ಅನುದಾನದ ಮೊತ್ತ ಎಷ್ಟು; (ವಿವರ ನೀಡುವುದು)	ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯ ಆನೇಕಲ್ ಪಟ್ಟಣಕ್ಕೆ ರೂ.3811.00 ಲಕ್ಷಗಳ ಅಂದಾಜು ಮೊತ್ತದ ಒಳಚರಂಡಿ ಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 18 ಯುಡಿಎಸ್ 2011, ದಿನಾಂಕ: 16.11.2011 ರಲ್ಲಿ ಆಡಳಿತಾತ್ಮಕ ಅನುಮೋದನೆ ಮತ್ತು ಸಂಖ್ಯೆ: 1035, ದಿನಾಂಕ: 26.06.2012 ರಲ್ಲಿ ತಾಂತ್ರಿಕ ಸಹಮತಿ ನೀಡಲಾಗಿದ್ದು, ಒಳಚರಂಡಿ ಕೊಳವೆಮಾರ್ಗ ಅಳವಡಿಸುವ ಕಾಮಗಾರಿಗೆ ದಿನಾಂಕ: 12.04.2013 ರಂದು ಗುತ್ತಿಗೆಯನ್ನು ವಹಿಸಲಾಗಿದ್ದು, ಸದರಿ ಪ್ಯಾಕೇಜ್ ಟೆಂಡರ್ ಕಾಮಗಾರಿಗಳು ಸೆಪ್ಟೆಂಬರ್-2015 ರಂದು ಪೂರ್ಣಗೊಳಿಸಲಾಗಿದೆ. ತದನಂತರ, ಉಳಿದ ಕಾಮಗಾರಿಗಳನ್ನು ಟೆಂಡರ್ ಕರೆದು ಕೈಗೆತ್ತಿಕೊಂಡು ಒಟ್ಟಾರೆ ಸದರಿ ಯೋಜನೆಯನ್ನು ನವೆಂಬರ್-2019 ರಲ್ಲಿ ಚಾಲನೆಗೊಳಿಸಲಾಗಿರುತ್ತದೆ. ಅನೇಕಲ್ ಪಟ್ಟಣದಲ್ಲಿ ಕಳೆದ ಎರಡು ವರ್ಷಗಳಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಸದರಿ ಯೋಜನೆಯಡಿಯಲ್ಲಿ ಕೈಗೆತ್ತಿಕೊಂಡಿದ್ದು, ರೂ.983.52 ಲಕ್ಷಗಳು ಖರ್ಚಾಗಿರುತ್ತದೆ. ಇದರ ವಿವರಗಳು ಕೆಳಗಿನಂತಿವೆ.

ಕ್ರ. ಸಂ	ಗುತ್ತಿಗೆದಾರರ ಹೆಸರು	ಕಾಮಗಾರಿಯ ಭೌತಿಕ ಪ್ರಗತಿ	ವೆಚ್ಚ ರೂ(ಲಕ್ಷಗಳಲ್ಲಿ) ಆರ್ಥಿಕ ವರ್ಷ 2017-18	2018-19
1.	ಮೆ॥ ಸುಜಲ ಸ್ಟ್ರಕ್ಚರ್	3 ಸಂಖ್ಯೆ ವೆಟ್‌ವೆಲ್ & ಡಿ.ಜಿ. ರೂಮ್ ನಿರ್ಮಾಣ ಹಾಗೂ ಏರುಕೊಳವೆ ಮಾರ್ಗ ಅಳವಡಿಕೆ	79.70	33.69
2.	ಮೆ॥ಯುರೋಟೆಕ್ ಎನ್ವೈರಾಮೆಂಟಲ್	3.1 ಎಂ.ಎಲ್.ಡಿ. ಹಾಗೂ 3.3 ಎಂ.ಎಲ್.ಡಿ. ಮಲಿನ ನೀರು ಶುದ್ಧೀಕರಣ ಘಟಕ ನಿರ್ಮಾಣ	557.26	212.18
3.	ಮೆ॥ ಶುಭೋದಯ ಎಂಟರ್‌ಪ್ರೈಸಸ್	ಪಂಪಸೆಟ್‌ಗಳು & ಡಿ.ಜಿ. ಅಳವಡಿಸುವುದು	174.81	-
4.	ಮೆ॥ಕಲೇದಾರ್ ಎಲೆಕ್ಟ್ರಿಕಲ್ಸ್	11 ಕೆ.ವಿ. ಟ್ಯಾಪಿಂಗ್ ಲೈನ್ ಅಳವಡಿಕೆ		5.58
		ಮೊತ್ತ	732.07	251.45

ರೂ.983.52 ಲಕ್ಷಗಳು

ಈ ಯೋಜನೆಗೆ ಈವರೆವಿಗೂ ಒಟ್ಟಾರೆ ರೂ.2958.39 ಲಕ್ಷಗಳು ಖರ್ಚಾಗಿರುತ್ತದೆ.

ಆ)	ಬಿಬಿಎಂಪಿ ವ್ಯಾಪ್ತಿಯಲ್ಲಿ ಕೈಗೊಂಡ ಯೋಜನಾನುಷ್ಠಾನ/ ಕಾಮಾರಿಗಳಾವುವು; (ವಿವರ ನೀಡುವುದು)	ಬಿಬಿಎಂಪಿ ವ್ಯಾಪ್ತಿಯಲ್ಲಿ ಬೆಂಗಳೂರು ಜಲಮಂಡಳಿಯ ಕಾವೇರಿ ವಲಯದ ವತಿಯಿಂದ ಕಳೆದ ಎರಡು ವರ್ಷಗಳಿಂದ ಕೈಗೊಂಡ ಕಾಮಗಾರಿಗಳ ವಿವರಗಳು ಈ ಕೆಳಗಿನಂತಿವೆ: 1. **ಕಾವೇರಿ ನೀರು ಸರಬರಾಜು ಯೋಜನೆ 5ನೇ ಹಂತ:-** ರೂ.5550.00 ಕೋಟಿ ಅಂದಾಜು ವೆಚ್ಚದ ಕಾವೇರಿ ನೀರು ಸರಬರಾಜು ಯೋಜನೆಯ 5ನೇ ಹಂತದ ಯೋಜನೆಗೆ ಜೈಕಾ ಸಂಸ್ಥೆಯ ಆರ್ಥಿಕ ನೆರವನ್ನು ಪಡೆಯಲಾಗುತ್ತಿದೆ. ಕರ್ನಾಟಕ ಸರ್ಕಾರವು ಈ ಯೋಜನೆಗೆ ಅಂದಾಜು ವೆಚ್ಚವಾದ ರೂ.5550.00 ಕೋಟಿಗಳಿಗೆ ಆದೇಶ ಸಂಖ್ಯೆ: ನಅಇ 11 ಎಂಎಸ್ಐ 2015 ಬೆಂಗಳೂರು, ದಿನಾಂಕ:12-10-2017 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿರುತ್ತದೆ. ಇದರಿಂದ ಬೆಂಗಳೂರು ನಗರಕ್ಕೆ ದಿನಂಪ್ರತಿ 775 ದಶಲಕ್ಷ ಲೀಟರ್ ಹೆಚ್ಚುವರಿ ನೀರು ದೊರೆಯುವುದು. ಈ ಯೋಜನೆಯ ಭಾಗವಾಗಿ Project Management ಸೇವೆಯನ್ನು ನಿಯೋಜಿಸಲು M/s ONTB (JV of M/s Oriental Consultants Global Co. Ltd., M/s NJS Engineers India Pvt Ltd., M/s TATA Consulting Engineers Ltd., M/s Black and Veatch) ಸಂಸ್ಥೆಗೆ ಗುತ್ತಿಗೆ ನೀಡಲಾಗಿದೆ ಮತ್ತು ಈ ಯೋಜನೆ ಅಡಿಯಲ್ಲಿ 09 Water Packages ಗಳನ್ನು ಟೆಂಡರ್ ಕರೆದಿದ್ದು, ಅವುಗಳ ಪೈಕಿ 1 ಕಾಮಗಾರಿಯು ಪ್ರಗತಿಯಲ್ಲಿದ್ದು ಮತ್ತು 08 Water Package ಗಳ ಟೆಂಡರ್ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ ಹಾಗೂ 03 Sewerage Package ಗಳು ಟೆಂಡರ್ ಆಹ್ವಾನಿಸಲಾಗಿದೆ. **ಮುಖ್ಯ ಅಭಿಯಂತರರು (ಪೂರ್ವ):** ಬಿಬಿಎಂಪಿ ವ್ಯಾಪ್ತಿಯಲ್ಲಿ ನಿರ್ವಹಣಾ ವಲಯದಿಂದ 2019-20ನೇ ಸಾಲಿನಲ್ಲಿ ಒಟ್ಟು 777 ಕಾಮಗಾರಿಗಳನ್ನು ಕೈಗೊಂಡಿದ್ದು, ಇವುಗಳ ಅಂದಾಜು ಮೊತ್ತ ರೂ.2126.13 ಲಕ್ಷಗಳಾಗಿರುತ್ತದೆ. **ಮುಖ್ಯ ಅಭಿಯಂತರರು (ತ್ಯಾ.ನೀ.ನಿ):** **ಮೆಗಾಸಿಟಿ ರಿವಾಲ್ವಿಂಗ್ ನಿಧಿಯಡಿಯ ಕಾಮಗಾರಿ** • ವೃಷಭಾವತಿ ಕಣಿವೆಯ ಬಳಿ 150 ದಶಲಕ್ಷ ಲೀಟರ್ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣ ಘಟಕವನ್ನು 470.93 ಕೋಟಿ ರೂಗಳ ಮೊತ್ತದಲ್ಲಿ ಕೈಗೊಳ್ಳಲಾಗಿದೆ. ಈ ಕಾಮಗಾರಿಯು ಪ್ರಗತಿಯಲ್ಲಿದ್ದು 2020 ರ ಅಂತ್ಯದಲ್ಲಿ ಪೂರ್ಣಮಾಡಲಾಗುವುದು. • ಕೋರಮಂಗಲ ಮತ್ತು ಚಲ್ಲಘಟ್ಟ ಕಣಿವೆಯ ಬಳಿ 150 ದಶಲಕ್ಷ ಲೀಟರ್ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣ ಘಟಕವ್‌ನ್ನು 297.37 ಕೋಟಿ ರೂಗಳ ಮೊತ್ತದಲ್ಲಿ ಕೈಗೊಳ್ಳಲಾಗಿದೆ. ಈ ಕಾಮಗಾರಿ ಪ್ರಗತಿಯಲ್ಲಿದ್ದು ಕಾಮಗಾರಿಯನ್ನು ಸೆಪ್ಟೆಂಬರ್ 2020 ರೊಳಗೆ ಪೂರ್ಣಮಾಡಲಾಗುವುದು. • ಹೆಬ್ಬಾಳ ಬಳಿ 100 ದಶಲಕ್ಷ ಲೀಟರ್ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣ ಘಟಕವ್‌ನ್ನು 360.77 ಕೋಟಿ ರೂಗಳ ಮೊತ್ತದಲ್ಲಿ ಕೈಗೊಳ್ಳಲಾಗಿದೆ. ಈ ಕಾಮಗಾರಿಯು ಸಹ ಪ್ರಗತಿಯಲ್ಲಿದ್ದು 2020 ರ ಅಂತ್ಯದಲ್ಲಿ ಪೂರ್ಣಮಾಡಲಾಗುವುದು. • ದೊಡ್ಡಬೆಲೆ ಬಳಿ 40 ದಶಲಕ್ಷ ಲೀಟರ್ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣ ಘಟಕವನ್ನು 73.93 ಕೋಟಿ ರೂಗಳ ಮೊತ್ತದಲ್ಲಿ

ಕೈಗೊಳ್ಳಲಾಗಿದೆ. ಈ ಕಾಮಗಾರಿಯನ್ನು ನವೆಂಬರ್ 2019ರಲ್ಲಿ ಪೂರ್ಣಮಾಡಿ ಕಾರ್ಯಚಾಲನೆ ಮಾಡಲಾಗಿದೆ.

ಅಮೃತ್ ಯೋಜನೆಯ ಕಾಮಗಾರಿಗಳು

- ಬಿ.ಬಿ.ಎಂ.ಪಿ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಯಾಗಿರುವ 110 ಹಳ್ಳಿಗಳ ಬ್ಯಾಟರಾಯನಪುರ ವಲಯದಲ್ಲಿ ಕುಡಿಯುವ ನೀರು ಒದಗಿಸುವ ಕಾಮಗಾರಿಯನ್ನು ರೂ.177.22 ಕೋಟಿಗಳ ಮೊತ್ತದಲ್ಲಿ ಕೈಗೊಳ್ಳಲಾಗಿದೆ ಹಾಗೂ ಮೇ 2020ರ ವೇಳೆಗೆ ಪೂರ್ಣಗೊಳಿಸಲಾಗುವುದು.
- ಆರ್.ಆರ್.ನಗರ ಹಾಗೂ ಕೆಂಗೇರಿ ಮುಂದುವರೆದ ಕ್ಷೇತ್ರದಲ್ಲಿ ಒಳಚರಂಡಿ ವ್ಯವಸ್ಥೆ ಒದಗಿಸುವ ರೂ.59.95 ಕೋಟಿಗಳ ಮೊತ್ತದ ಕಾಮಗಾರಿಯನ್ನು ಈಗಾಗಲೇ ಪೂರ್ಣಮಾಡಲಾಗಿದೆ.
- ಮೈಸೂರು ರಸ್ತೆ ರಂಗನಾಥ ಕಾಲೋನಿಯಿಂದ ವೃಷಭಾವತಿ ತ್ಯಾಜ್ಯ ನೀರಿನ ಘಟಕದವರೆಗೂ ತ್ಯಾಜ್ಯ ನೀರು ಸಾಗಿಸುವ 1.60 ಕಿ.ಮೀ ಉದ್ದದ ಹಳೆಯ ಕೊಳವೆ ಮಾರ್ಗವನ್ನು ಹೆಚ್ಚಿನ ಗಾತ್ರಕ್ಕೆ ಬದಲಾಯಿಸುವ ಕಾಮಗಾರಿಯನ್ನು 52.45 ಕೋಟಿ ರೂಗಳ ಮೊತ್ತದಲ್ಲಿ ಕೈಗೊಂಡು ಪೂರ್ಣಮಾಡಲಾಗಿದೆ.
- ವೃಷಭಾವತಿ ಕಣಿವೆಯಲ್ಲಿ ತ್ಯಾಜ್ಯ ನೀರು ಸಾಗಿಸುವ 90 ಕಿ.ಮೀ ಉದ್ದದ ಕೊಳವೆ ಮಾರ್ಗಗಳನ್ನು ಅಳವಡಿಸುವ ಪರಿಸರ ಕ್ರಿಯಾ ಯೋಜನೆ – ಸಿ ಕಾಮಗಾರಿಗಳನ್ನು 386.40 ಕೋಟಿ ರೂಗಳ ಮೊತ್ತದಲ್ಲಿ ಕೈಗೊಳ್ಳಲಾಗಿದೆ. ಈ ಕಾಮಗಾರಿಗಳನ್ನು 2020 ಅಂತ್ಯದಲ್ಲಿ ಪೂರ್ಣ ಮಾಡಲಾಗುವುದು.
- ಕೋರಮಂಗಲ ಕ್ರೀಡಾ ಸಂಕೀರ್ಣದ ಬಳಿ 210 ದಶಲಕ್ಷ ಲೀಟರ್ ಸಾಮರ್ಥ್ಯದ ತ್ಯಾಜ್ಯ ನೀರಿನ ರೇಚಕ ಯಂತ್ರಗಳ ಸ್ಥಾವರ (ಐ.ಪಿ.ಎಸ್) ಮತ್ತು ಈ ಸ್ಥಾವರದಿಂದ ತ್ಯಾಜ್ಯ ನೀರನ್ನು ಕೋರಮಂಗಲ ಮತ್ತು ಚಲ್ಲಘಟ್ಟ ಕಣಿವೆಯಲ್ಲಿರುವ ಸಂಸ್ಕರಣ ಘಟಕಕ್ಕೆ ಸಾಗಿಸುವ ಕೊಳವೆಮಾರ್ಗ (ರೈಸಿಂಗ್ ಮೈನ್) ಈ ಕಾಮಗಾರಿಗಳನ್ನು 104 ಕೋಟಿ ರೂಗಳ ಮೊತ್ತದಲ್ಲಿ ಕೈಗೊಳ್ಳಲಾಗಿದೆ. ಈ ಕಾಮಗಾರಿಗಳನ್ನು 2020ರ ಮಧ್ಯ ಭಾಗದಲ್ಲಿ ಪೂರ್ಣಮಾಡಲಾಗುವುದು.
- ಸಾರಕ್ಕಿ ಕೆರೆಯ ಬಳಿ ದಿನಂಪ್ರತಿ 5 ದಶಲಕ್ಷ ಲೀಟರ್ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣ ಘಟಕವನ್ನು 14.49 ಕೋಟಿ ರೂಗಳ ಮೊತ್ತದಲ್ಲಿ ಕೈಗೊಳ್ಳಲಾಗಿದೆ. ಈ ಕಾಮಗಾರಿಯನ್ನು ನವೆಂಬರ್ 2019ರಲ್ಲಿ ಪೂರ್ಣಮಾಡಿ ಕಾರ್ಯಚಾಲನೆ ಮಾಡಲಾಗಿದೆ.
- ಚಿಕ್ಕಬೇಗೂರು ಕೆರೆಯ ಬಳಿ ದಿನಂಪ್ರತಿ 5 ದಶಲಕ್ಷ ಲೀಟರ್ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣ ಘಟಕವನ್ನು 13.89 ಕೋಟಿ ರೂಗಳ ಮೊತ್ತದಲ್ಲಿ ಕೈಗೊಳ್ಳಲಾಗಿದೆ. ಈ ಕಾಮಗಾರಿಯನ್ನು 2020ರ ಮಧ್ಯಭಾಗದಲ್ಲಿ ಪೂರ್ಣಮಾಡಲಾಗುವುದು.
- ಹುಳಿಮಾವು ಕೆರೆಯ ಬಳಿ ದಿನಂಪ್ರತಿ 10 ದಶಲಕ್ಷ ಲೀಟರ್ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣ ಘಟಕವನ್ನು 20.25 ಕೋಟಿ ರೂಗಳ ಮೊತ್ತದಲ್ಲಿ ಕೈಗೊಳ್ಳಲಾಗಿದೆ. ಈ ಕಾಮಗಾರಿಯನ್ನು ಮಾರ್ಚ್ 2020 ರಲ್ಲಿ ಪೂರ್ಣಮಾಡಲಾಗುವುದು.
- ಅಗರಂ ಕೆರೆಯ ಬಳಿ ದಿನಂಪ್ರತಿ 35 ದಶಲಕ್ಷ ಲೀಟರ್ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣ ಘಟಕವನ್ನು 53.63 ಕೋಟಿ ರೂಗಳ ಮೊತ್ತದಲ್ಲಿ ಕೈಗೊಳ್ಳಲಾಗಿದೆ. ಈ ಕಾಮಗಾರಿಯನ್ನು ಮಾರ್ಚ್ 2020 ರಲ್ಲಿ ಪೂರ್ಣಮಾಡಲಾಗುವುದು.

- ಕೆ.ಆರ್.ಪುರಂ ಬಳಿ ದಿನಂಪ್ರತಿ 20 ದಶಲಕ್ಷ ಲೀಟರ್ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣ ಘಟಕಗವನ್ನು ಅಮೃತ್ ಯೋಜನೆಯಡಿಯಲ್ಲಿ 28.39 ಕೋಟಿ ರೂಗಳ ಮೊತ್ತದಲ್ಲಿ ಕೈಗೊಳ್ಳಲಾಗಿದೆ. ಈ ಕಾಮಗಾರಿಯನ್ನು 2020ರ ಮಧ್ಯಭಾಗದಲ್ಲಿ ಪೂರ್ಣಮಾಡಲಾಗುವುದು.

ಇತರೆ ಕಾಮಗಾರಿಗಳು

- ಯಲಹಂಕ ಬಳಿಯಲ್ಲಿರುವ ಪುಟ್ಟೇನಹಳ್ಳಿಯಲ್ಲಿ ರೂ.24.51 ಕೋಟಿ ಮೊತ್ತದಲ್ಲಿ ದಿನಂಪ್ರತಿ 7 ದಶಲಕ್ಷ ಲೀಟರ್ ಸಾಮರ್ಥ್ಯದ ತಾಜ್ಯನೀರು ಸಂಸ್ಕರಣ ಘಟಕವನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿರವರ ಅನುದಾನ ಪಡೆದು ನಿರ್ಮಿಸಲಾಗುವುದು. ಈ ಕಾಮಗಾರಿಯನ್ನು 2021 ರ ಅಂತ್ಯದಲ್ಲಿ ಪೂರ್ಣಮಾಡಲಾಗುವುದು.
- ಕಗ್ಗದಾಸಪುರ ಕೆರೆಯ ಬಳಿ ರೂ.17.90 ಕೋಟಿ ಮೊತ್ತದಲ್ಲಿ ದಿನಂಪ್ರತಿ 5 ದಶಲಕ್ಷ ಲೀಟರ್ ಸಾಮರ್ಥ್ಯದ ತಾಜ್ಯನೀರು ಸಂಸ್ಕರಣ ಘಟಕವನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿರವರ ಅನುದಾನ ಪಡೆದು ನಿರ್ಮಿಸಲಾಗುವುದು. ಈ ಕಾಮಗಾರಿಯನ್ನು 2021ರ ಅಂತ್ಯದಲ್ಲಿ ಪೂರ್ಣಮಾಡಲಾಗುವುದು.
- ಹೆಸರಘಟ್ಟದಲ್ಲಿ ರೂ.11.99 ಕೋಟಿ ಮೊತ್ತದಲ್ಲಿ ದಿನಂಪ್ರತಿ 3 ದಶಲಕ್ಷ ಲೀಟರ್ ಸಾಮರ್ಥ್ಯದ ತಾಜ್ಯನೀರು ಸಂಸ್ಕರಣ ಘಟಕವನ್ನು ಕರ್ನಾಟಕ ಸರ್ಕಾರದ ಅನುದಾನದಡಿಯಲ್ಲಿ ಕೈಗೊಂಡಿದೆ. ಈ ಕಾಮಗಾರಿಯನ್ನು 2021 ರ ಮಧ್ಯಭಾಗದಲ್ಲಿ ಪೂರ್ಣಮಾಡಲಾಗುವುದು.
- ಬೆಳ್ಳಂದೂರು ಅಮಾನಿಕೆರೆಯ ಬಳಿ ರೂ.15.99 ಕೋಟಿ ಮೊತ್ತದಲ್ಲಿ 32.5 ದಶಲಕ್ಷ ಲೀಟರ್ ದಿನಂಪ್ರತಿ ಸಾಮರ್ಥ್ಯದ ತ್ಯಾಜ್ಯ ನೀರಿನ ವೆಟ್‌ವೆಲ್ ಹಾಗೂ ರೇಚಕಯಂತ್ರ ಹಾಗೂ ಕೊಳವೆ ಮಾರ್ಗ ಅಳವಡಿಸುವ ಕಾಮಗಾರಿಯನ್ನು ಮಂಡಳಿಯು ಕೈಗೊಂಡಿದೆ. ಈ ಕಾಮಗಾರಿಯನ್ನು ಮಾರ್ಚ್2021 ರಲ್ಲಿ ಪೂರ್ಣಮಾಡಲಾಗುವುದು.

ಮುಖ್ಯ ಅಭಿಯಂತರರು (ವಿನ್ಯಾಸ) ಮತ್ತು ಮುಖ್ಯ ಅಭಿಯಂತರರು (ಯೋಜನೆ) :

110 ಹಳ್ಳಿಗಳ ಪ್ರದೇಶಗಳಿಗೆ ಕುಡಿಯುವ ನೀರು ಕಲ್ಪಿಸುವ ಯೋಜನೆ:

ಕರ್ನಾಟಕ ಸರ್ಕಾರವು 110 ಹಳ್ಳಿಗಳಿಗೆ ನೀರು ಸರಬರಾಜು ಮಾಡುವ ಯೋಜನೆ ಹಾಗೂ ಮೂಲ ಬೆಂಗಳೂರು ಪ್ರದೇಶದ ಲೆಕ್ಕಕ್ಕೆ ಸಿಗದ ನೀರನ್ನು (UFW) ಕಡಿಮೆಗೊಳಿಸುವ ವಿಸ್ತೃತ ಯೋಜನಾ ವರದಿಗೆ ರೂ.1500.00 ಕೋಟಿಗಳಿಗೆ ಅನುಮೋದನೆ ನೀಡಿದ್ದು, ಇದರಲ್ಲಿ 2/3 ಭಾಗವನ್ನು (ರೂ.1000.00 ಕೋಟಿಗಳು) ಕರ್ನಾಟಕ ಸರ್ಕಾರವು ಮತ್ತು 1/3 ಭಾಗವನ್ನು (ರೂ.500.00 ಕೋಟಿಗಳು) ಬೆಂಗಳೂರು ಜಲಮಂಡಳಿಯು ಭರಿಸಬೇಕಾಗಿರುತ್ತದೆ.

110 ಹಳ್ಳಿಗಳಿಗೆ ನೀರು ಸರಬರಾಜು ಮಾಡುವ ಯೋಜನೆಯ ಕಾಮಗಾರಿಗಳನ್ನು ದರಖಾಸ್ತು ಪ್ರಕ್ರಿಯೆಯ ಮೂಲಕ ಒಟ್ಟು ರೂ.982.77 ಕೋಟಿಗಳಿಗೆ ನೀಡಲಾಗಿದ್ದು, ಕಾಮಗಾರಿಗಳು ಮೇ 2017ರಲ್ಲಿ ಪ್ರಾರಂಭಿಸಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ ಹಾಗೂ ಮೇ 2020ರಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ. ಒಟ್ಟಾರೆಯಾಗಿ ಫೆಬ್ರವರಿ 2020ರ ಅಂತ್ಯಕ್ಕೆ 2773 ಕಿಮೀಗಳಲ್ಲಿ 2635.50

ಕಿಮೀನಷ್ಟು ಭೌತಿಕ ಪ್ರಗತಿಯಾಗಿರುತ್ತದೆ.

ಮೇಲ್ಮಟ್ಟದ (OHT) ಹಾಗೂ ನೆಲಮಟ್ಟದ (GLR) ಜಲಸಂಗ್ರಹಗಾರದ ನಿರ್ಮಾಣದ ಕಾಮಗಾರಿಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಯಾಗಿರುವ 110 ಗ್ರಾಮಗಳ ವ್ಯಾಪ್ತಿಯಲ್ಲಿ ರೂ.94.29 ಕೋಟಿಗಳ ವೆಚ್ಚದಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಂಡಿದ್ದು, ಕಾಮಗಾರಿಗಳು ಪ್ರಗತಿಯಲಿದ್ದು, ಮೇ 2021ಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಸೇರ್ಪಡೆಯಾದ 110 ಹಳ್ಳಿಗಳ ವ್ಯಾಪ್ತಿಯಲ್ಲಿ ಬರುವ ಗೊಟ್ಟಿಗೆರೆಯಲ್ಲಿ 50ಎಂಎಲ್ ಸಾಮರ್ಥ್ಯದ ನೆಲ ಮಟ್ಟದ ಜಲಾಗಾರವನ್ನು ಮತ್ತು ಜಂಬೂ ಸವಾರಿ ಗುಡ್ಡದಲ್ಲಿರುವ ನೆಲ ಮಟ್ಟದ ಜಲಾಗಾರ ಆವರಣದಲ್ಲಿ ಪಂಪಿಂಗ್ ಮತ್ತು ಇತರೆ ವ್ಯವಸ್ಥೆಗಳನ್ನು ಒದಗಿಸುವ ಕಾಮಗಾರಿಯನ್ನು ರೂ.73.44 ಕೋಟಿಗಳ ವೆಚ್ಚದಲ್ಲಿ ಕೈಗೆತ್ತಿಕೊಂಡಿದ್ದು, ಕಾಮಗಾರಿಯು ಪ್ರಗತಿಯಲಿದ್ದು, ಸೆಪ್ಟೆಂಬರ್ 2020ಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಬೆಂಗಳೂರು ಜಲಮಂಡಳಿಯು ನೀರು ಸರಬರಾಜು ವ್ಯವಸ್ಥೆಯನ್ನು ಉತ್ತಮಗೊಳಿಸುವ ಕಾಮಗಾರಿ, ಲೆಕ್ಕಕ್ಕೆ ಸಿಗದ ನೀರನ್ನು ಕಡಿಮೆಗೊಳಿಸುವ ಯೋಜನೆಯನ್ನು ಹಾಗೂ ನೀರು ಸೋರಿಕೆಯನ್ನು ನಿಯಂತ್ರಿಸುವ ಕಾಮಗಾರಿಯನ್ನು ಓ2, ಓ3, ಅ2 & ಋ2 ಉಪವಿಭಾಗದ ವ್ಯಾಪ್ತಿಯಲ್ಲಿ ರೂ.203 ಕೋಟಿಗಳ ವೆಚ್ಚದಲ್ಲಿ ಮಾರ್ಚ್ 2018ರಲ್ಲಿ ಕೈಗೆತ್ತಿಕೊಂಡಿದ್ದು, ಶೇ35 ರಷ್ಟು ಕಾಮಗಾರಿಯು ಪೂರ್ಣಗೊಂಡಿದ್ದು, ಮಾರ್ಚ್ 2021ಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಮಲ್ಲೇಶ್ವರಂನಲ್ಲಿರುವ ಸಿಜೆಎಫ್‌ನಲ್ಲಿ 25 ಎಂಎಲ್ ಸಾಮರ್ಥ್ಯದ ಹೊಸ ಎರಡು ಹಂತಸ್ತಿನ ಆರ್‌ಸಿಸಿ ನೆಲ ಮಟ್ಟದ ಜಲ ಸಂಗ್ರಹಾಗಾರವನ್ನು ನಿರ್ಮಿಸುವ ಕಾಮಗಾರಿಯನ್ನು ರೂ.24.02 ಕೋಟಿಗಳ ವೆಚ್ಚದಲ್ಲಿ ಜುಲೈ 2019ರಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ಶೇ05ರಷ್ಟು ಕಾಮಗಾರಿಯು ಪೂರ್ಣಗೊಂಡಿದ್ದು, ಜುಲೈ 2021ಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಸದರಿ ಯೋಜನೆಗೆ ಒಟ್ಟಾರೆಯಾಗಿ ಫೆಬ್ರವರಿ 2020ರ ಅಂತ್ಯಕ್ಕೆ ರೂ.992.96 ಕೋಟಿಗಳಷ್ಟು ಆರ್ಥಿಕ ಪ್ರಗತಿಯಾಗಿರುತ್ತದೆ.

110 ಹಳ್ಳಿಗಳ ಪ್ರದೇಶಗಳಿಗೆ ಒಳಚರಂಡಿ (ಲ್ಯಾಟರಲ್ಸ್) ಯೋಜನೆ:

ಕರ್ನಾಟಕ ಸರ್ಕಾರವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿರುವ 110 ಹಳ್ಳಿಗಳಿಗೆ ರೂ.1000 ಕೋಟಿ ಅಂದಾಜು ವೆಚ್ಚದ ಒಳಚರಂಡಿ ಕಲ್ಪಿಸುವ ಯೋಜನೆಗೆ ತನ್ನ ಅನುಮೋದನೆಯನ್ನು ನೀಡಿರುತ್ತದೆ. ಸದರಿ ಕಾಮಗಾರಿಯ ಹಣಕಾಸಿನ ವಿವರಗಳು ಈ ಕೆಳಕಂಡಂತಿವೆ.

- ಬೆಂಗಳೂರು ಜಲಮಂಡಲಿಯ ಸ್ವಂತ ವೆಚ್ಚ – ರೂ.500.00 ಕೋಟಿ.
- ಕರ್ನಾಟಕ ಸರ್ಕಾರದ ಅನುದಾನ – ರೂ.250.00 ಕೋಟಿ.
- ಕರ್ನಾಟಕ ಸರ್ಕಾರವು ಸಾಲದ ರೂಪದಲ್ಲಿ ನೀಡುವ ಹೆಚ್ಚುವರಿ ಹಣ – ರೂ.250.00 ಕೋಟಿ

<table>
<tr><td></td><td></td><td>ಈ ಯೋಜನೆಯನ್ನು ದರಖಾಸ್ತು ಪ್ರಕ್ರಿಯೆ ಮೂಲಕ ಮಾರ್ಚ್ 2018ರಲ್ಲಿ ಒಟ್ಟು ರೂ.925.06 ಕೋಟಿಗಳಿಗೆ ಗುತ್ತಿಗೆದಾರರಿಗೆ ವಹಿಸಲಾಗಿದೆ. ಈ ಕಾಮಗಾರಿಯನ್ನು ಮಾರ್ಚ್ 2021ರಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ ಒಟ್ಟಾರೆಯಾಗಿ ಫೆಬ್ರವರಿ 2020ರ ಅಂತ್ಯಕ್ಕೆ 829 ಕಿಮೀನಷ್ಟು ಭೌತಿಕ ಪ್ರಗತಿಯಾಗಿರುತ್ತದೆ ಮತ್ತು ಒಟ್ಟಾರೆಯಾಗಿ ಫೆಬ್ರವರಿ 2020ರ ಅಂತ್ಯಕ್ಕೆ ರೂ.276.85 ಕೋಟಿಗಳಷ್ಟು ಆರ್ಥಿಕ ಪ್ರಗತಿಯಾಗಿರುತ್ತದೆ.</td></tr>
<tr><td>ಇ)</td><td>ಶಾಂತಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ತುರ್ತಾಗಿ ನೀರು ಸರಬರಾಜು ಹಾಗೂ ಒಳಚರಂಡಿ ವ್ಯವಸ್ಥೆಯ ಕುರಿತು ಬಾಕಿ ಇರುವ ಅಥವಾ ಪುನರ್ ವ್ಯವಸ್ಥೆಗೊಳಿಸಬೇಕಾಗಿರುವ ಕಾಮಗಾರಿಗಳನ್ನು ಗುರುತಿಸಲಾಗಿದೆಯೇ? (ವಿವರ ನೀಡುವುದು)</td><td>ಬೆಂಗಳೂರು ಜಲಮಂಡಳಿಯಿಂದ ಶಾಂತಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ತುರ್ತಾಗಿ ನೀರು ಸರಬರಾಜು ಹಾಗೂ ಒಳಚರಂಡಿ ವ್ಯವಸ್ಥೆಯ ಕುರಿತು UFW ಯೋಜನೆ ಅಡಿಯಲ್ಲಿ 33 ಕಿ.ಮೀ. ಉದ್ದದ ಕುಡಿಯುವ ನೀರಿನ ಕೊಳವೆಗಳನ್ನು ಬದಲಾಯಿಸುವ / ಅಳವಡಿಸಲು ಯೋಜಿಸಲಾಗಿದ್ದು, ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
<table>
<tr><th>ಕ್ರ. ಸಂ</th><th>ವಾರ್ಡ್‌ಸಂಖ್ಯೆ ಹಾಗೂ ಹೆಸರು</th><th>ಕೊಳವೆ ಮಾರ್ಗದ ಉದ್ದ ಕಿ.ಮೀ. ನಲ್ಲಿ</th><th>ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)</th></tr>
<tr><td>1</td><td>ದೊಮ್ಮಲೂರು-112</td><td>14.0</td><td>420</td></tr>
<tr><td>2</td><td>ಶಾಂತಿನಗರ-111</td><td>8.50</td><td>255</td></tr>
<tr><td>3</td><td>ಜೋಗುಪಾಳ್ಯ-89</td><td>10.50</td><td>315</td></tr>
<tr><td></td><td>ಒಟ್ಟು</td><td>33.0</td><td>990</td></tr>
</table>
ಸದರಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ನೀರು ಸರಬರಾಜು ವ್ಯವಸ್ಥೆಯಲ್ಲಿ ಕುಂದುಕೊರತೆಗಳಿರುವ ಪ್ರದೇಶಗಳನ್ನು ಗುರುತಿಸಿದ್ದು, ಸದರಿ ಪ್ರದೇಶದಲ್ಲಿನ ಕಾಮಗಾರಿಗಳನ್ನು 2020-21ರ ಕ್ರಿಯಾ ಯೋಜನೆಯಲ್ಲಿ ಕೈಗೊಳ್ಳಲು ಯೋಜಿಸಲಾಗಿದೆ.</td></tr>
</table>

ಸಂಖ್ಯೆ: ನಅಇ51ಯುಎಂಎಸ್ 2020

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 44 ಯುಎಂಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ 13-03-2020

30
13/3/20

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಬಂಡೆಪ್ಪ ಖಾಶೆಂಪ್ಪೂರ್ (ಬೀದರ್ ದಕ್ಷಿಣ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1932ಕ್ಕೆ ಉತ್ತರ ನೀಡುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಬಂಡೆಪ್ಪ ಖಾಶೆಂಪ್ಪೂರ್ (ಬೀದರ್ ದಕ್ಷಿಣ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1932ಕ್ಕೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಎಸ್.ದಿವಾಕರ್)
ಶಾಖಾಧಿಕಾರಿ
ಮಂಡಳಿ ಶಾಖೆ
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1932
ಸದಸ್ಯರ ಹೆಸರು	:	ಶ್ರೀ. ಬಂಡೆಪ್ಪ ಖಾಶೆಂಪುರ್ (ಬೀದರ್ ದಕ್ಷಿಣ)
ಉತ್ತರಿಸಬೇಕಾದ ದಿನಾಂಕ	:	13-03-2020.
ಉತ್ತರಿಸಬೇಕಾದವರು	:	ನಗರಾಭಿವೃದ್ಧಿ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿರುವ ಒಟ್ಟು ಪುರಸಭೆಗಳೆಷ್ಟು ಹಾಗೂ ಅವು ಯಾವುವು;	ರಾಜ್ಯದಲ್ಲಿ ಒಟ್ಟು 117 ಪುರಸಭೆಗಳಿರುತ್ತವೆ ವಿವರಗಳನ್ನು ಅನುಬಂಧ – 1 ರಲ್ಲಿ ನೀಡಲಾಗಿದೆ.
ಆ)	ರಾಜ್ಯಾದ್ಯಂತ ಎಲ್ಲಾ ಪುರಸಭೆಗಳಿಗೆ ಒಳಚರಂಡಿ (ಯು.ಜಿ.ಡಿ) ವ್ಯವಸ್ಥೆಯನ್ನು ಕಲ್ಪಿಸಲಾಗಿದೆಯೇ;	ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ವತಿಯಿಂದ ರಾಜ್ಯದಲ್ಲಿನ ಒಟ್ಟು 35 ಪುರಸಭೆಗಳಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮದ ವತಿಯಿಂದ ಏಷಿಯನ್ ಡೆವಲೆಪಮೆಂಟ್ ಬ್ಯಾಂಕ್ (ಎಡಿಬಿ) ನೆರವಿನಡಿಯಲ್ಲಿ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣಾ ಹೂಡಿಕೆ ಕಾರ್ಯಕ್ರಮದಡಿಯಲ್ಲಿ (ಕೆಐಯುಡಬ್ಲ್ಯೂಎಂಐಪಿ) ರಾಜ್ಯದ 8 ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು. ಸದರಿ ಕಾರ್ಯಕ್ರಮದಡಿಯಲ್ಲಿ ಬ್ಯಾಡಗಿ ಪುರಸಭೆ ವ್ಯಾಪ್ತಿಯಲ್ಲಿ ಒಳಚರಂಡಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ. ವಿಶ್ವ ಬ್ಯಾಂಕ್ ನೆರವಿನ ಕರ್ನಾಟಕ ಪೌರ ಸುಧಾರಣ ಯೋಜನೆಯ (ಕೆಎಮ್‌ಆರ್‌ಪಿ) ಪೌರಬಂಡವಾಳ ಹೂಡಿಕೆ ಘಟಕದಡಿ ಹುಮನಾಬಾದ್ ನಗರದಲ್ಲಿ ಒಳಚರಂಡಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ.
ಇ)	ಪುರಸಭೆಗಳಲ್ಲಿ ಒಳಚರಂಡಿ ತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದಂತೆ ಯಾವ ರೀತಿಯ ವ್ಯವಸ್ಥೆಗಳನ್ನು ಕೈಗೊಳ್ಳಲಾಗಿದೆ;	ಪೌರಾಡಳಿತ ನಿರ್ದೇಶನಾಲಯದ ವತಿಯಿಂದ ಒಳಚರಂಡಿ ಇರುವ ಪುರಸಭೆಗಳಲ್ಲಿ ತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದಂತೆ 33 ಎಸ್.ಟಿ.ಪಿ ಘಟಕಗಳನ್ನು ಸ್ಥಾಪಿಸಲಾಗಿರುತ್ತದೆ. ಒಳಚರಂಡಿ ಇಲ್ಲದ ಪುರಸಭೆಗಳಲ್ಲಿ ವೈಯಕ್ತಿಕವಾಗಿ ಸೆಪ್ಟಿಕ್ ಟ್ಯಾಂಕ್ ಅಳವಡಿಸಿಕೊಂಡಿರುತ್ತಾರೆ. 50,000ಕ್ಕಿಂತ ಕಡಿಮೆ ಜನಸಂಖ್ಯೆಯಿರುವ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ, ಒಳಚರಂಡಿ ತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದಂತೆ ಕಲ್ಮಷತ್ಯಾಜ್ಯ ಸಂಸ್ಕರಿಸುವ ಘಟಕಗಳನ್ನು (Faecal Sludge Treatment Plant) ಸ್ಥಾಪಿಸಲು ಕ್ರಮಕೈಗೊಳ್ಳಲಾಗುತ್ತಿದೆ.
ಈ)	ಪುರಸಭೆಗಳಲ್ಲಿನ ಒಳಚರಂಡಿ ತ್ಯಾಜ್ಯವನ್ನು ವಿಲೇ ಮಾಡಲು ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲಾಗಿದೆಯೇ (ಮಾಹಿತಿಯನ್ನು ಒದಗಿಸುವುದು);	ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ವತಿಯಿಂದ ಒಳಚರಂಡಿ ವ್ಯವಸ್ಥೆ ಕಲ್ಪಿಸಿರುವ 35 ಪುರಸಭೆಗಳಲ್ಲಿ ಮಲಿನ ನೀರಿನ ಶುದ್ಧೀಕರಣ ಘಟಕಗಳನ್ನು ಮತ್ತು 4 ಪುರಸಭೆಗಳಲ್ಲಿ ಮಲಿನ ನೀರಿನ ಶುದ್ಧೀಕರಣ ಘಟಕಗಳನ್ನು ನಿರ್ಮಿಸಲಾಗುತ್ತಿದೆ ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.
ಉ)	ಇಲ್ಲದಿದ್ದಲ್ಲಿ, ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು ಸರ್ಕಾರಕ್ಕಿರುವ ತೊಂದರೆಗಳೇನು ಹಾಗೂ ಯಾವ	

	ಕಾಲಮಿತಿಯೊಳಗೆ ಘಟಕಗಳನ್ನು ಸ್ಥಾಪಿಸಲಾಗುವುದು (ಮಾಹಿತಿಯನ್ನು ಒದಗಿಸುವುದು);	ಪೌರಾಡಳಿತ ನಿರ್ದೇಶನಾಲಯದ ವತಿಯಿಂದ ರಾಜ್ಯದ 50 ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕಲ್ಮಷ ತ್ಯಾಜ್ಯ ಸಂಸ್ಕರಿಸುವ ಘಟಕಗಳನ್ನು (Faecal Sludge Treatment Plant) ಸ್ಥಾಪಿಸಲು ಯೋಜಿಸಲಾಗಿದ್ದು (ವಿವರಗಳನ್ನು ಅನುಬಂಧ-3 ರಲ್ಲಿ ನೀಡಲಾಗಿದೆ) ಕೇಂದ್ರಿಕೃತವಾದ ಟೆಂಡರ್‌ನ್ನು ಕರೆದು ವಿಸ್ತೃತ ಯೋಜನಾ ವರದಿಗಳನ್ನು ತಯಾರಿಸಲು ಪಿ.ಎಮ್.ಸಿ ಏಜೆನ್ಸಿಗಳನ್ನು ಆಯ್ಕೆಮಾಡಲಾಗಿದೆ. ಸದರಿ ಘಟಕಗಳನ್ನು ಮಾರ್ಚ್-2021ರೊಳಗಾಗಿ ಸ್ಥಾಪಿಸಲು ಯೋಜಿಸಲಾಗಿದೆ. ಸಂಸ್ಕರಣಾ ಘಟಕಗಳಿಲ್ಲದ ಪುರಸಭೆಗಳಲ್ಲಿ ಸಂಸ್ಕರಣಾ ಘಟಕಗಳನ್ನು ಹಣಕಾಸು ಲಭ್ಯತೆ ಆಧಾರದ ಮೇಲೆ ಹಂತ ಹಂತವಾಗಿ ಕೈಗೊಳ್ಳಲಾಗುವುದು.
ಊ)	ಹಾಗಿದ್ದಲ್ಲಿ, ಒಳಚರಂಡಿ ತ್ಯಾಜ್ಯ ಸಂಸ್ಕರಣಾ ಘಟಕಗಳಿಂದ ಹೊರಬರುವ ತ್ಯಾಜ್ಯವನ್ನು ಸಂಸ್ಕರಣೆ ಮಾಡಲು ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ (ಮಾಹಿತಿಯನ್ನು ಒದಗಿಸುವುದು)?	ಕಲ್ಮಷತ್ಯಾಜ್ಯ ಸಂಸ್ಕರಿಸುವ ಘಟಕಗಳಿಂದ ಹೊರಬರುವ ತ್ಯಾಜ್ಯವನ್ನು ಹಸಿ ತರಕಾರಿ ತ್ಯಾಜ್ಯದೊಂದಿಗೆ ಮಿಶ್ರಣ ಮಾಡಿ ಗೊಬ್ಬರವನ್ನು ತಯಾರಿಸಲು ಯೋಜಿಸಲಾಗಿದೆ. ಮಲಿನ ನೀರಿನ ಶುದ್ಧೀಕರಣ ಘಟಕದಲ್ಲಿ Primary ಮತ್ತು Secondary treatment ನಂತರ ಶುದ್ಧೀಕರಿಸಿದ ಮಲಿನ ನೀರನ್ನು ಹೊರಬಿಡಲಾಗುತ್ತಿದೆ. ಸಂಸ್ಕರಣಾ ಘಟಕಗಳಿಂದ ಹೊರಬರುವ ಈ ಶುದ್ಧೀಕರಿಸಿದ ಮಲಿನ ನೀರನ್ನು ಸಂಸ್ಕರಣೆ ಮಾಡುವ ಪ್ರಸ್ತಾವನೆ ಸದ್ಯಕ್ಕೆ ಇರುವುದಿಲ್ಲ.

ಸಂಖ್ಯೆ: ನಅಇ 44 ಯುಎಂಎಸ್ 2020

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

ಅನುಬಂಧ-1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ - 1932

ಪುರಸಭೆಗಳು-117

ಕ್ರ.ಸ.	ಜಿಲ್ಲೆ	ಕ್ರ.ಸ.	ಪುರಸಭೆಗಳು
1	ಬೆಂಗಳೂರು ನಗರ	1	ಆನೇಕಲ್
		2	ಬೊಮ್ಮಸಂದ್ರ
		3	ಜಿಗಣಿ
		4	ಚಂದಾಪುರ
		5	ಅತ್ತಿಬೆಲೆ
		6	ಕೋನಪ್ಪನ ಅಗ್ರಹಾರ
		7	ಮಾದನಾಯಕನಹಳ್ಳಿ
2	ಬೆಂಗಳೂರು ಗ್ರಾಮಾಂತರ	8	ವಿಜಯಪುರ
		9	ದೇವನಹಳ್ಳಿ
3	ಬಾಗಲಕೋಟೆ	10	ಹುನಗುಂದ
		11	ಬಾದಾಮಿ
		12	ಗುಳೇದಗುಡ್ಡ
		13	ಮಹಾಲಿಂಗಪುರ
		14	ತೇರದಾಳ
4	ಬಳ್ಳಾರಿ	15	ಹೂವಿನಹಡಗಲಿ
		16	ಕಂಪ್ಲಿ
		17	ಸಂಡೂರು
		18	ಹಗರಿಬೊಮ್ಮನಹಳ್ಳಿ
		19	ಕುರೇಕುಪ್ಪ
		20	ಕುರುಗೋಡು
5	ಬೆಳಗಾವಿ	21	ಅಥಣಿ
		22	ಬೈಲಹೊಂಗಲ
		23	ಚಿಕ್ಕೋಡಿ
		24	ರಾಮದುರ್ಗ
		25	ಸಂಕೇಶ್ವರ
		26	ಸವದತ್ತಿ
		27	ಮೂಡಲಗಿ
		28	ಮುಗಳಖೋಡ
		29	ಮುನವಳ್ಳಿ
		30	ಉಗಾರ ಖುರ್ದ್
		31	ಹಾರುಗೇರಿ
		32	ಹುಕ್ಕೇರಿ
		33	ಕುಡಚಿ
		34	ಸದಲಗ
		35	ಕೊಣ್ಣೂರು
6	ಬೀದರ್	36	ಭಾಲ್ಕಿ
		37	ಚಿಟಗುಪ್ಪ
		38	ಹುಮ್ನಾಬಾದ್
		39	ಹಳ್ಳಿಖೇಡ
7	ಚಾಮರಾಜನಗರ	40	ಗುಂಡ್ಲುಪೇಟೆ
8	ಚಿಕ್ಕಬಳ್ಳಾಪುರ	41	ಬಾಗೇಪಲ್ಲಿ
9	ಚಿಕ್ಕಮಗಳೂರು	42	ಬೀರೂರು
		43	ಕಡೂರು
		44	ತರೀಕೆರೆ
10	ಚಿತ್ರದುರ್ಗ	45	ಹೊಸದುರ್ಗ
11	ದಕ್ಷಿಣ ಕನ್ನಡ	46	ಬಂಟ್ವಾಳ
		47	ಮೂಡಬಿದಿರೆ
		48	ಸೋಮೇಶ್ವರ

12	ದಾವಣಗೆರೆ	49	ಹರಪನಹಳ್ಳಿ
		50	ಚನ್ನಗಿರಿ
		51	ಮಲೇಬೆನ್ನೂರು
13	ಧಾರವಾಡ	52	ಅಣ್ಣೀಗೇರಿ
		53	ನವಲಗುಂದ
14	ಗದಗ	54	ಗಜೇಂದ್ರಘಡ
		55	ಲಕ್ಷ್ಮೇಶ್ವರ
		56	ಮುಂಡರಗಿ
		57	ನರಗುಂದ
		58	ರೋಣ
15	ಹಾಸನ	59	ಬೇಲೂರು
		60	ಚನ್ನರಾಯಪಟ್ಟಣ
		61	ಹೊಳೆನರಸೀಪುರ
		62	ಸಕಲೇಶಪುರ
16	ಹಾವೇರಿ	63	ಬಂಕಾಪುರ
		64	ಬ್ಯಾಡಗಿ
		65	ಹಾನಗಲ್
		66	ಸವಣೂರು
		67	ಶಿಗ್ಗಾಂವ್
17	ಕಲಬುರಗಿ (ಗುಲ್ಬರ್ಗಾ)	68	ವಾಡಿ
		69	ಆಳಂದ
		70	ಚಿಂಚೋಳಿ
		71	ಚಿತ್ತಾಪುರ
		72	ಸೇಡಂ
		73	ಜೇವರ್ಗಿ
		74	ಅಫಜಲ್‌ಪುರ
18	ಕೋಲಾರ	75	ಬಂಗಾರಪೇಟೆ
		76	ಮಾಲೂರು
		77	ಶ್ರೀನಿವಾಸಪುರ
19	ಕೊಪ್ಪಳ	78	ಕುಷ್ಟಗಿ
		79	ಕಾರಟಗಿ
20	ಮಂಡ್ಯ	80	ಕೆ.ಆರ್.ಪೇಟೆ
		81	ಮದ್ದೂರು
		82	ಮಳವಳ್ಳಿ
		83	ಶ್ರೀರಂಗಪಟ್ಟಣ
		84	ಪಾಂಡವಪುರ
		85	ನಾಗಮಂಗಲ
21	ಮೈಸೂರು	86	ಬನ್ನೂರು
		87	ಕೆ.ಆರ್.ನಗರ
		88	ಪಿರಿಯಾಪಟ್ಟಣ
		89	ಟಿ.ನರಸೀಪುರ
		90	ಹೆಚ್.ಡಿ. ಕೋಟೆ
22	ರಾಯಚೂರು	91	ದೇವದುರ್ಗ
		92	ಲಿಂಗಸುಗೂರು
		93	ಮಾನ್ವಿ
		94	ಮುದಗಲ್
		95	ಮಸ್ಕಿ

23	ರಾಮನಗರ	96	ಮಾಗಡಿ
		97	ಬಿಡದಿ
24	ಶಿವಮೊಗ್ಗ	98	ಶಿಕಾರಿಪುರ
25	ತುಮಕೂರು	99	ಚಿಕ್ಕನಾಯಕನಹಳ್ಳಿ
		100	ಕುಣಿಗಲ್
		101	ಮಧುಗಿರಿ
		102	ಪಾವಗಡ
26	ಉಡುಪಿ	103	ಕಾರ್ಕಳ
		104	ಕುಂದಾಪುರ
		105	ಕಾಪು
27	ಉತ್ತರ ಕನ್ನಡ	106	ಭಟ್ಕಳ
		107	ಕುಮುಟ
		108	ಹಳಿಯಾಳ
		109	ಅಂಕೋಲ
28	ಬಿಜಾಪುರ	110	ಬಸವನಬಾಗೇವಾಡಿ
		111	ಇಂಡಿ
		112	ಮುದ್ದೇಬಿಹಾಳ
		113	ಸಿಂಧಗಿ
		114	ತಾಳಿಕೋಟೆ
29	ಯಾದಗಿರಿ	115	ಗುರುಮಿಟ್‌ಕಲ್
		116	ಕಕ್ಕೇರಾ
		117	ಕೆಂಭಾವಿ
ಒಟ್ಟು – 117			

ಅನುಬಂಧ-2

Statement showing the list of Town Municipals in Karnataka and details of capacity of existing and ongoing Sewage Treatment plant

Sl. No.	Name of the Urban Local Bodies	Population as per 2011 Census	Designed capacity of Sewage Treatment Plant Constructed (in MLD)	Designed capacity of Ongoing Sewage Treatment Plant (in MLD)
1	Anekal	44260	6.40	
2	Badami	30943	6.30	
3	Bailahongal	49182	2.28	
4	Bannur	21896	3.31	
5	Basavana Bagewadi	33198	4.20	
6	Belur	22484	2.70	
7	Bhatkal	32000	3.50	
8	Birur	22484	2.64	
9	Channarayanapatna	40417	4.60	---
10	Chikkodi	38307	5.80	
11	Chittapura	31299	5.10	---
12	Guledagudda	33382	1.00	---
13	Gundlupete	28105	2.50	---
14	Gurumitkal	20614	3.00	---
15	Harapanahalli	47039	7.92	---
16	Holenarsipura	29974	3.00	---
17	Hoovinda Hadagalli	27967	4.27	---
18	Hosadurga	28370	---	3.30
19	Hunagund	20877	3.50	---
20	Indi	38217	4.00	---
21	Jewargi	25686	3.25	---
22	K.R.Nagar	35805	2.89	---
23	K.R.Pet	25946	5.00	---
24	Karkala	25800	2.95	---
25	Lakshmeshwara	36754	5.50	---
26	Maddur	28754	3.50	---
27	Magadi	27605	3.70	---
28	Malavalli	37601	5.65	---
29	Malur	40050	4.00	---
30	Muddebihal	34217	---	5.20
31	Naragunda	36291	5.50	---
32	Periyapatna	16685	---	3.50
33	Ramdurga	34800	---	4.54
34	Sadalga	23790	3.80	---
35	Shikaripura	36015	5.00	---

Sl. No.	Name of the Urban Local Bodies	Population as per 2011 Census	Designed capacity of Sewage Treatment Plant Constructed (in MLD)	Designed capacity of Ongoing Sewage Treatment Plant (in MLD)
36	Srinivasapura	26793	3.00	---
37	Srirangapatna	25061	1.39	---
38	T.Narasipura	9980	5.50	---
39	Talikote	31693	4.00	---
	Total	**1200341**	**140.65**	**16.54**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1932

ಅನುಬಂಧ-3

Annexure – 3

ULB wise Census data				Population Projection 2031
Sl. No./Division/District Name	Name of the ULB	Category of ULB	Population 2011	
1	2	3	4	5
Bengaluru Division		11		
Bengaluru Urban				
1	Jigani	TMC	20,276	69,243
	Total		20,276	69,243
Bengaluru Rural				
2	Vijaypura	TMC	34,866	50,240
	Total		34,866	50,240
Tumakuru				
3	Chikkanayakanahalli	TMC	23,206	28,019
4	Pavagada	TMC	28,486	33,362
	Total		51,692	61,381
Kolar				
5	Bangarpete	TMC	44,849	67,694
	Total		44,849	67,694
Chikkaballapura				
6	Gowribidanuru	TMC	51,556	56,196
	Total		51,556	56,196
Chitradurga				
7	Holalkere	TP	15,783	20,024
	Total		15,783	20,024
Davanagere				
8	Malebennuru	TMC	22,512	29,265
	Total		22,512	29,265
Shivamogga				
9	Hosanagara	TP	5,839	7,352
10	Thirthahalli	TP	14,528	16,011
	Total		20,367	23,363
Mysuru Division				
Mysore				

11	H D Kole	TMC	14,313	24,508
	Total		14,313	24,508
Mandya				
12	Srirangapattana	TMC	25,061	28,605
	Total		25,061	28,605
Chamarajanagara				
13	Hanur	TP	11,066	15,827
	Total		11,066	15,827
Kodagu				
14	Somavarpet	TP	6,729	7,205
15	Virajapete	TP	17,246	22,623
	Total		23,975	29,828
Hassan				
16	Sakaleshpura	TMC	23,350	25,336
17	Alur	TP	6,541	8,284
	Total		29,891	33,620
Chikkamagaluru				
18	Tarikere	TMC	35,942	46,502
19	Narsimharajpura	TP	7548	7619
	Total		43,490	54,121
Dakshina Kannada				
20	Puttur	CMC	53,061	74,865
21	Vitla	TP	17,618	40,573
	Total		70,679	1,15,438
Udupi				
22	Karkala	TMC	25,800	27,571
	Total		25,800	27,571
Belagavi Division				
Belagavi				
23	Athani	TMC	47,842	70,780
24	Nippani	CMC	62,865	76,274
25	Koanur	TP	23,154	28,181
26	Mudalgi	TMC	29,895	32,514
27	Kallolli	TP	27,462	48,415
28	P G Mallapur	TP	16,062	24,093
29	Naganur	TP	16,195	24,293

30	Arabavi	TP	9,179	13,768
31	Boragaon	TP	16,010	24,015
32	Raibagh	TP	18,736	28,052
	Total		267,398	370,385
Bagalakote				
33	Karur	TP	19,731	25,608
34	Terdal	TMC	26,088	37,240
	Total		45,819	62,848
Haveri				
35	Savanuru	TMC	40,567	55,153
36	Hanagal	TMC	28,159	37,710
	Total		68,726	92,863
Dharwad				
37	Alnavar	TP	17,228	20,270
	Total		17,228	20,270
Gadag-Betageri				
38	Mulagunda	TP	18,781	21,636
	Total		18,781	21,636
Uttara Kannada				
39	Sirasi	CMC	62,882	76,532
40	Mundagod	TP	18,866	25,232
	Total		81,748	1,01,764
Kalaburagi Division				
Kalaburagi				
41	Shahabad	CMC	47,582	56,801
42	Afzalpur	TMC	27,088	60,540
43	Chincholi	TMC	20,897	39,127
	Total		95,567	1,56,476
Yadagiri				
44	Shahapur	CMC	53,366	1,13,959
	Total		53,366	1,13,959
Raichur				
45	Manvi	TMC	46,465	76,445
	Total		46,465	76,445
Koppal				
46	Kustagi	TMC	24,878	40,686
	Total		24,878	40,686
Bidar				

47	Basavakalyana	CMC	69,717	1,11,410
48	Aurad	TP	19,849	31,306
	Total		89,566	1,42,716
Ballari				
49	Siruguppa	CMC	52,492	86,900
50	Tekkalakote	TP	26,244	35,835
	Total		78,736	1,22,735

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ47ಬಿಎಂಎಸ್2020

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 13-03-2020

64
US
13/3/2020

ಇವರಿಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ/~~ಪರಿಷತ್ತು~~
ವಿಧಾನಸೌಧ, ಬೆಂಗಳೂರು.

ಮಾನ್ಯರೆ,

ವಿಷಯ: ವಿಧಾನ ಸಭೆ/~~ವಿಧಾನ ಪರಿಷತ್ತಿನ~~ ಮಾನ್ಯ ಸದಸ್ಯರಾದ ಶ್ರೀ ಮಂಜುನಾಥ್ . ಎ ಇವರು ಮಂಡಿಸಿರುವ ಚುಕ್ಕೆ ~~ಗುರುತಿನ~~/ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1613 ಕ್ಕೆ ಉತ್ತರವನ್ನು ಕಳುಹಿಸಿಕೊಡುವ ಬಗ್ಗೆ.

* * * * *

ವಿಧಾನ ಸಭೆ/~~ವಿಧಾನ ಪರಿಷತ್ತಿನ~~ ಮಾನ್ಯ ಸದಸ್ಯರಾದ ಶ್ರೀ ಮಂಜುನಾಥ್ . ಎ ಇವರು ಮಂಡಿಸಿರುವ ಚುಕ್ಕೆ ~~ಗುರುತಿನ~~/ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1613 ಕ್ಕೆ ಉತ್ತರಗಳ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ತಮಗೆ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ನಿಮ್ಮ ನಂಬುಗೆಯ,

(ಲಕ್ಷ್ಮೀಸಾಗರ್.ಎನ್.ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ)

ಕರ್ನಾಟಕ ವಿಧಾನ ಸಭೆ

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1613
2 ಸದಸ್ಯರ ಹೆಸರು : ಶ್ರೀ ಮಂಜುನಾಥ್.ಎ (ಮಾಗಡಿ)
3 ಉತ್ತರಿಸುವ ದಿನಾಂಕ : 13-03-2020
4 ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಸರ್ಕಾರದ ಆದೇಶ ಸಂಖ್ಯೆ: ನಅಇ 57 ಎಂಎನ್‌ವೈ 2019, ದಿನಾಂಕ: 19-07-2019 ರಂದು ಮುಖ್ಯಮಂತ್ರಿಗಳ ನವ ಬೆಂಗಳೂರು ಯೋಜನೆಯಡಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನದಲ್ಲಿ ಮಾಗಡಿ ವಿಧಾನಸಭಾ ಕ್ಷೇತ್ರಕ್ಕೆ ಬಿ.ಬಿ.ಎಂ.ಪಿ. ಘನತ್ಯಾಜ್ಯ ವಿಲೇವಾರಿಯಿಂದ ಬಾದಿತ ಪ್ರದೇಶಗಳ ಅಭಿವೃದ್ಧಿಗೆ ರೂ.30.00 ಕೋಟಿ ಅನುದಾನ ನಿಗಧಿಪಡಿಸಿರುವುದನ್ನು ಹಿಂಪಡೆ ಯಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಮಾಗಡಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬಿಬಿಎಂಪಿಯ ಯಾವುದೇ ಘನತ್ಯಾಜ್ಯ ವಿಲೇವಾರಿ ಘಟಕವನ್ನು ಸ್ಥಾಪಿಸಿರುವುದಿಲ್ಲ.
ಆ)	ಹಾಗಿದ್ದಲ್ಲಿ, ಮಂಜೂರಾಗಿದ್ದ ಅನುದಾನವನ್ನು ತಡೆಹಿಡಿಯಲು ಕಾರಣಗಳೇನು; ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಉಂಟಾಗಿರುವ ಘನತ್ಯಾಜ್ಯ ವಿಲೇವಾರಿಯಿಂದ ಬಾದಿತಗೊಳ್ಳುವ ಪ್ರದೇಶ ಗಳಲ್ಲಿ ವಾಸಿಸುತ್ತಿರುವ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಮಾಗಡಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬಿಬಿಎಂಪಿಯ ಯಾವುದೇ ಘನತ್ಯಾಜ್ಯ ವಿಲೇವಾರಿ ಘಟಕ ಅಸ್ಥಿತ್ವದಲ್ಲಿರುವುದಿಲ್ಲ. ಈ ಹಿನ್ನೆಲೆಯಲ್ಲಿ ದಿನಾಂಕ: 01-02-2019ರ ಮುಖ್ಯಮಂತ್ರಿಗಳ ನವ ಬೆಂಗಳೂರು ಕ್ರಿಯಾ ಯೋಜನೆಯನ್ನು ಮರು ಪರಿಶೀಲಿಸಿ, ಪರ್ಯಾಯವಾಗಿ "ಮುಖ್ಯಮಂತ್ರಿಗಳ ನವ ನಗರೋತ್ಥಾನ" ಕ್ರಿಯಾ ಯೋಜನೆಗೆ ಅನುಮೋದನೆಯನ್ನು ನೀಡಲಾಗಿದ್ದು, ಸರ್ಕಾರದ ಆದೇಶ ಸಂಖ್ಯೆ: ನಅಇ 57 ಎಂಎನ್‌ವೈ 2019, ದಿನಾಂಕ: 19-07-2019 ರನ್ವಯ ಮುಖ್ಯಮಂತ್ರಿಗಳ ನವ ಬೆಂಗಳೂರು ಯೋಜನೆಯಡಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸರ್ಕಾರದಿಂದ ಬಿಡುಗಡೆಯಾದ ರೂ.30.00 ಕೋಟಿಗಳ ಅನುದಾನವನ್ನು ಹಿಂಪಡೆದು, ಘನತ್ಯಾಜ್ಯ ವಿಲೇವಾರಿ ಘಟಕಗಳು ಕಾರ್ಯನಿರ್ವಹಿಸುತ್ತಿರುವ ಸ್ಥಳಗಳ ಸುತ್ತ ಮುತ್ತಲಿನ ಗ್ರಾಮಗಳ ಅಭಿವೃದ್ಧಿಗಾಗಿ ಅನುದಾನವನ್ನು ಮರು ಹಂಚಿಕೆ ಮಾಡಲಾಗಿರುತ್ತದೆ.
ಇ)	ಸದರಿ ಅನುದಾನವನ್ನು ಬಿಡುಗಡೆ ಮಾಡಲು ಇರುವ ತೊಂದರೆಗಳೇನು? (ಸಂಪೂರ್ಣ ಮಾಹಿತಿ ನೀಡುವುದು)	ಉದ್ಭವಿಸುವುದಿಲ್ಲ.

ಸಂಖ್ಯೆ: ನಅಇ 47 ಎಂಎನ್‌ವೈ 2020

(ಬಿ.ಎಸ್. ಯಡಿಯೂರಪ್ಪ.)
ಮುಖ್ಯಮಂತ್ರಿ

ಕರ್ನಾಟಕ ಸರ್ಕಾರ

ಸಂಖ್ಯೆ:ನಅಇ 49 ಯುಎಂಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:13.03.2020

10
415
13/3/20

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಅಜಯ್ ಧರ್ಮ ಸಿಂಗ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1892 ಕ್ಕೆ ಉತ್ತರಿಸುವ ಬಗ್ಗೆ

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಅಜಯ್ ಧರ್ಮ ಸಿಂಗ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1892 ಕ್ಕೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಎಸ್.ದಿವಾಕರ್)
ಶಾಖಾಧಿಕಾರಿ,
ಮಂಡಳಿ ಶಾಖೆ
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1892
ಸದಸ್ಯರ ಹೆಸರು	:	ಶ್ರೀ ಅಜಯ್ ಧರ್ಮ ಸಿಂಗ್ ಡಾ॥ (ಜೇವರ್ಗಿ)
ಉತ್ತರಿಸಬೇಕಾದ ದಿನಾಂಕ	:	13.03.2020
ಉತ್ತರಿಸಬೇಕಾದ ಸಚಿವರು	:	ನಗರಾಭಿವೃದ್ಧಿ ಸಚಿವರು.

****

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ನೂತನ ಯಡ್ರಾಮಿ ತಾಲೂಕಿನಲ್ಲಿ ಪಟ್ಟಣ ಪಂಚಾಯತಿ ಕಾರ್ಯಾಲಯ ಯಾವಾಗ ಪ್ರಾರಂಭವಾಗುತ್ತದೆ;	ಯಡ್ರಾಮಿ ತಾಲ್ಲೂಕಿನ ಯಡ್ರಾಮಿ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ. ಯಡ್ರಾಮಿ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೇರಿಸಿದ ನಂತರ ಪಟ್ಟಣ ಪಂಚಾಯಿತಿ ಕಾರ್ಯಾಲಯ ಪ್ರಾರಂಭವಾಗುತ್ತದೆ. ಮುಂದುವರೆದು, ಕೇಂದ್ರ ಜನಗಣತಿ ನಿರ್ದೇಶನಾಲಯ, ಭಾರತ ಸರ್ಕಾರದ ದಿನಾಂಕ:16.09.2019ರ ಪತ್ರದನ್ವಯ 2021ರ ಜನಗಣತಿ ಕಾರ್ಯಾಚರಣೆಯ ಅವಧಿಯಾದ ದಿನಾಂಕ:01.01.2020 ರಿಂದ 31.03.2021ರವರೆಗೆ ಹಾಲಿ ಅಸ್ತಿತ್ವದಲ್ಲಿರುವ ತಾಲ್ಲೂಕುಗಳ, ಗ್ರಾಮ ಪಂಚಾಯಿತಿಗಳ, ಮುನಿಸಿಪಾಲಿಟಿಗಳ ಆಡಳಿತಾತ್ಮಕ ಗಡಿಗಳನ್ನು (Administrative Boundaries) ಮಾರ್ಪಾಡು ಮಾಡದಂತೆ ರಾಜ್ಯ ಸರ್ಕಾರಕ್ಕೆ ಸೂಚಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ಪ್ರಸ್ತುತ ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಗಳನ್ನಾಗಿ ಮೇಲ್ದರ್ಜೆಗೇರಿಸಲು ಸಾಧ್ಯವಾಗಿರುವುದಿಲ್ಲ.
ಆ)	ಸದರಿ ತಾಲ್ಲೂಕಿನಲ್ಲಿ ಸಮರ್ಪಕ ಒಳಚರಂಡಿ ವ್ಯವಸ್ಥೆಗೆ ಸರ್ಕಾರ ಕೈಗೊಂಡ ಕ್ರಮವೇನು;	ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸದೇ ಇರುವುದರಿಂದ ಅನ್ವಯಿಸುವುದಿಲ್ಲ.
ಇ	ಜೇವರ್ಗಿ ತಾಲ್ಲೂಕಿನಲ್ಲಿ ಇಲ್ಲಿಯವರೆಗೆ ಸಮರ್ಪಕವಾಗಿ ಒಳಚರಂಡಿ ವ್ಯವಸ್ಥೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದಿಯೇ; ಇಲ್ಲದಿದ್ದಲ್ಲಿ, ಇದಕ್ಕೆ ಸರ್ಕಾರ ಕೈಗೊಂಡ ಕ್ರಮವೇನು?	ಜೇವರ್ಗಿ ತಾಲ್ಲೂಕಿನ ಜೇವರ್ಗಿ ಪಟ್ಟಣಕ್ಕೆ ಒಳಚರಂಡಿ ಯೋಜನೆಯನ್ನು ಸರ್ಕಾರದ ಆದೇಶ ಸಂಖ್ಯೆ ಯು.ಡಿ.ಡಿ/22/ಯು.ಡಿ.ಎಸ್./2004 ದಿನಾಂಕ: 28-02-2004 ರನ್ವಯ ರೂ.370.00 ಲಕ್ಷಗಳಲ್ಲಿ ಕೈಗೊಂಡು, ಸದರಿ ಯೋಜನೆಯನ್ನು 2012ರಲ್ಲಿ ಪೂರ್ಣಗೊಳಿಸಿ ಮುಂದಿನ ನಿರ್ವಹಣೆಗೆಗಾಗಿ ಪುರಸಭೆ ಜೇವರ್ಗಿ ಇವರಿಗೆ ವಹಿಸಿಕೊಡಲಾಗಿದೆ. ಈ ಯೋಜನೆಯಡಿಯಲ್ಲಿ 21.40 ಕಿ.ಮೀ. ಉದ್ದದ ಒಳಚರಂಡಿ ಕೊಳವೆ ಮಾರ್ಗ, 607 ಮ್ಯಾನಹೋಲ್

		ಚೆಂಬರಗಳನ್ನು ಹಾಗೂ 3.25 ಎಮ್.ಎಲ್.ಡಿ. ಸಾಮರ್ಥ್ಯದ ಡಬ್ಲ್ಯೂ.ಎಸ್.ಪಿ. ತಂತ್ರಜ್ಞಾನದ ಮಲಿನ ನೀರು ಸಂಸ್ಕರಣಾ ಘಟಕ ಹಾಗೂ 3 ಸೆಪ್ಟಿಕ ಟ್ಯಾಂಕಗಳನ್ನು ನಿರ್ಮಿಸಲಾಗಿರುತ್ತದೆ. ಜೇವರ್ಗಿ ಪಟ್ಟಣದಲ್ಲಿ ಬಾಕಿ ಉಳಿದ ಪ್ರದೇಶಗಳಿಗೆ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲು ರಾಷ್ಟ್ರೀಯ ಹಸಿರು ಮಂಡಳಿ (NGT) ಆದೇಶದ ಮೇರೆಗೆ ರೂ. 50.21 ಲಕ್ಷಗಳಿಗೆ ಪೂರ್ವಭಾವಿ ಅಂದಾಜು ಪಟ್ಟಿಯನ್ನು ತಯಾರಿಸಿ, ವ್ಯವಸ್ಥಾಪಕ ನಿರ್ದೇಶಕರು, ಕ.ನ.ನೀ.ಸ ಮತ್ತು ಒಚ ಮಂಡಳಿ, ಬೆಂಗಳೂರು ರವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಸರ್ಕಾರದ ಆದೇಶ ಸಂಖ್ಯೆ: ನಅಇ 39 ಎಸ್.ಎಫ್.ಸಿ. 2020, ದಿನಾಂಕ: 14.02.2020 ರಲ್ಲಿ ರೂ.21.80 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿದ್ದು, ಇನ್ನುಳಿದ ಮೊತ್ತದ ಕುರಿತು ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಸಂಖ್ಯೆ: ನಅಇ 49 ಯುಎಂಎಸ್ 2020

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ನಅಇ 50 ಯುಎಂಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:13.03.2020

99
4/5
13/3/20

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀಮತಿ ಪೂರ್ಣಿಮಾ .ಕೆ. ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1848 ಕ್ಕೆ ಉತ್ತರಿಸುವ ಬಗ್ಗೆ

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀಮತಿ ಪೂರ್ಣಿಮಾ ಕೆ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1848 ಕ್ಕೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಎಸ್.ದಿವಾಕರ್)
ಶಾಖಾಧಿಕಾರಿ,
ಮಂಡಳಿ ಶಾಖೆ
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1848
ಸದಸ್ಯರ ಹೆಸರು	:	ಶ್ರೀಮತಿ ಪೂರ್ಣಿಮಾ ಕೆ. (ಹಿರಿಯೂರು)
ಉತ್ತರಿಸಬೇಕಾದ ದಿನಾಂಕ	:	13.03.2020
ಉತ್ತರಿಸಬೇಕಾದ ಸಚಿವರು	:	ನಗರಾಭಿವೃದ್ಧಿ ಸಚಿವರು.

****

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಹಿರಿಯೂರು ನಗರಸಭೆ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಉದ್ದೇಶ ಸರ್ಕಾರಕ್ಕಿದೆಯೇ; ಹಾಗಿದ್ದಲ್ಲಿ, ಇದು ಯಾವ ಹಂತದಲ್ಲಿದೆ;	ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಹಿರಿಯೂರು ನಗರಕ್ಕೆ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಯೋಜನೆಗೆ ವಿಸ್ತೃತ ಯೋಜನಾ ವರದಿಯನ್ನು ರೂ.206.00 ಕೋಟಿಗಳಿಗೆ ಸಿದ್ಧಪಡಿಸಲಾಗಿದ್ದು, ಮಂಡಳಿಯ ಹಂತದಲ್ಲಿ ಪರಿಶೀಲನೆಯಲ್ಲಿದೆ.
ಆ)	ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಸರ್ಕಾರ ಎಷ್ಟು ಅನುದಾನವನ್ನು ನೀಡುತ್ತಿದೆ (ಪೂರ್ಣ ಮಾಹಿತಿ ನೀಡುವುದು);	2019-20 ನೇ ಸಾಲಿನಲ್ಲಿ ರಾಜ್ಯ ಯೋಜನಾ ಕಾರ್ಯಕ್ರಮದಡಿಯಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ರೂ.180.06 ಕೋಟಿಗಳ ಅನುಧಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.
ಇ)	ಇದುವರೆಗೂ ಒಳಚರಂಡಿ ಕಾಮಗಾರಿಗಳಿಗೆ ಎಷ್ಟು ಅನುದಾನ ಮಂಜೂರು ಮಾಡಲಾಗಿದೆ;	
ಈ)	ರಾಜ್ಯದಲ್ಲಿರುವ ನಗರಸಭೆಗಳ ಸಂಖ್ಯೆ ಎಷ್ಟು; ಸದರಿ ನಗರಸಭೆಗಳಿಗೆ ಒಳಚರಂಡಿ ಕಾಮಗಾರಿಗಾಗಿ ಎಷ್ಟು ಅನುದಾನ ಮಂಜೂರು ಮಾಡಲಾಗಿದೆ (ವಿವರ ನೀಡುವುದು)?	ರಾಜ್ಯದಲ್ಲಿರುವ ನಗರಸಭೆಗಳ ಸಂಖ್ಯೆ : 59 ಪೌರಾಡಳಿತ ನಿರ್ದೇಶನಾಲಯದ ವತಿಯಿಂದ ಸದರಿ ನಗರಸಭೆಗಳಲ್ಲಿ ಕೇಂದ್ರ ಪುರಸ್ಕೃತ ಅಮೃತ್ ಯೋಜನೆಯಡಿ ಆಯ್ಕೆಯಾದ 15 ನಗರಸಭೆಗಳಲ್ಲಿ 11 ನಗರಸಭೆಗಳಿಗೆ ಒಳಚರಂಡಿ ಯೋಜನೆಗೆ ಮಂಜೂರು ಮಾಡಿರುವ ಅನುದಾನ ಒಟ್ಟು ರೂ.802.36 ಕೋಟಿ ಮತ್ತು ಬಿಡುಗಡೆಗೊಳಿಸಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅನುದಾನ (ಜನವರಿ ಅಂತ್ಯದವರೆಗೆ) ಒಟ್ಟು ರೂ.456.69 ಕೋಟಿ. ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ 59 ನಗರಸಭೆಗಳ ಪೈಕಿ 22 ನಗರಸಭೆಗಳಲ್ಲಿ ಒಳಚರಂಡಿ ಕಾಮಗಾರಿ ಕೈಗೊಂಡಿದ್ದು ಈ ಕಾಮಗಾರಿಗಳಿಗಾಗಿ ರೂ.100696.84 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ವಿವರವನ್ನು ಅನುಬಂಧ-2 ರಲ್ಲಿ ನೀಡಲಾಗಿದೆ. ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆಯ ವತಿಯಿಂದ ಕೆಎಂಆರ್‌ಪಿ ಯೋಜನೆಯ ಪೌರಬಂಡವಾಳ ಹೂಡಿಕೆ ಘಟಕದಡಿ ರಾಜ್ಯದ ಆಯ್ದ 7 ನಗರಸಭೆಗಳಲ್ಲಿ ಒಳಚರಂಡಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದ್ದು, ವಿವರವನ್ನು ಅನುಬಂಧ-3 ರಲ್ಲಿ ನೀಡಲಾಗಿದೆ.

ಸಂಖ್ಯೆ: ನಅಇ 50 ಯುಎಂಎಸ್ 2020

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 40 ಯುಎಂಎಸ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ 13-03-2020

80
U/S
13/3/20

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಮಹದೇವ ಕೆ. (ಪಿರಿಯಾಪಟ್ಟಣ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1878ಕ್ಕೆ ಉತ್ತರ ನೀಡುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಮಹದೇವ ಕೆ. (ಪಿರಿಯಾಪಟ್ಟಣ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1878ಕ್ಕೆ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಎಸ್.ದಿವಾಕರ್)
ಶಾಖಾಧಿಕಾರಿ
ಮಂಡಳಿ ಶಾಖೆ
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1878
ಸದಸ್ಯರ ಹೆಸರು	:	ಶ್ರೀ ಮಹದೇವ ಕೆ. (ಪಿರಿಯಾಪಟ್ಟಣ)
ಉತ್ತರಿಸಬೇಕಾದ ದಿನಾಂಕ	:	13.03.2020
ಉತ್ತರಿಸಬೇಕಾದ ಸಚಿವರು	:	ನಗರಾಭಿವೃದ್ಧಿ ಸಚಿವರು.

****

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಪಿರಿಯಾಪಟ್ಟಣ ನಗರಕ್ಕೆ ಹಾಲಿ ಕುಡಿಯುವ ನೀರು ಯೋಜನೆಯಿಂದ ಸಮರ್ಪಕವಾಗಿ ಸಾರ್ವಜನಿಕರಿಗೆ ನೀರು ಪೂರೈಸಲು ಸಾಧ್ಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ದಿನಾಂಕ: 15.05.2015 ರಲ್ಲಿ ಪಿರಿಯಾಪಟ್ಟಣ ಪಟ್ಟಣ ಪಂಚಾಯಿತಿಯು ಪುರಸಭೆಯಾಗಿ ಮೇಲ್ದರ್ಜೆಗೇರಿದ್ದು, ಪ್ರಸ್ತುತ 22,000 ಜನಸಂಖ್ಯೆ ಇರುತ್ತದೆ. ಈ ಹಿಂದೆ ಕರ್ನಾಟಕ ನೀರು ಸರಬರಾಜು ಒಳಚರಂಡಿ ಮಂಡಳಿಯವರಿಂದ ಪುರಸಭೆಯ ಜನಸಂಖ್ಯೆಗೆ ಅನುಗುಣವಾಗಿ ನೀರು ಸರಬರಾಜು ಯೋಜನೆ ನಿರ್ಮಾಣಗೊಂಡಿದ್ದು, ಪುರಸಭೆಯಾಗಿ ಮೇಲ್ದರ್ಜೆಗೊಂಡ ನಂತರ ಪಟ್ಟಣದ ವ್ಯಾಪ್ತಿಯು ವಿಸ್ತಾರಗೊಂಡಿದ್ದು, 5000 ಕ್ಕೂ ಹೆಚ್ಚು ಜನಸಂಖ್ಯೆ ಸೇರ್ಪಡೆಯಾಗಿರುವುದರಿಂದ ನೀರಿನ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿರುತ್ತದೆ. ಕಾವೇರಿ ನದಿ ಮೂಲದಿಂದ ಬೇಸಿಗೆ ಸಮಯದಲ್ಲಿ ನೀರಿನ ಹರಿವಿನ ಪ್ರಮಾಣ ಕಡಿಮೆಯಾಗಿದ್ದು, ಜೊತೆಗೆ ಬೋರ್‌ವೆಲ್‌ಗಳಲ್ಲಿ ಅಂತರ್ಜಲದ ಮಟ್ಟ ಕಡಿಮೆಯಾಗಿ ನೀರು ಸರಬರಾಜಿನಲ್ಲಿ ತೊಂದರೆ ಉಂಟಾಗುತ್ತಿರುತ್ತದೆ. ಆದ್ದರಿಂದ ಹಾಲಿ ಇರುವ ಜನಸಂಖ್ಯೆಗನುಗುಣವಾಗಿ ವಿನ್ಯಾಸ ಸಿದ್ದಪಡಿಸಿ ಎರಡನೇ ಹಂತದ ಯೋಜನೆಯನ್ನು ಕೈಗೊಳ್ಳಬೇಕಾಗಿರುತ್ತದೆ.
ಆ)	ಬಂದಿದ್ದಲ್ಲಿ, ಸದರಿ ಉದ್ದೇಶದಿಂದ ಕಾವೇರಿ ನದಿಯಿಂದ 2ನೇ ಹಂತದ ನೀರು ಸರಬರಾಜು ಯೋಜನೆಗೆ ಸರ್ಕಾರವು ಆಡಳಿತಾತ್ಮಕ ಅನುಮತಿ ನೀಡಲಾಗುವುದೇ;	ಅದರಂತೆ ಪಿರಿಯಾಪಟ್ಟಣಕ್ಕೆ ಕಾವೇರಿ ನದಿ ಮೂಲದಿಂದ 2ನೇ ಹಂತದ ನೀರು ಸರಬರಾಜು ಯೋಜನೆಯ ರೂ.67.30 ಕೋಟಿಗಳ ಅಂದಾಜು ಪಟ್ಟಿಗೆ ಅನುಮೋದನೆ ಕೋರಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಸ್ವೀಕೃತವಾಗಿದ್ದ ಪ್ರಸ್ತಾವನೆಯನ್ನು ಪರಿಶೀಲಿಸಿ ಮಂಡಳಿಯಲ್ಲಿ ಅನುದಾನದ ಕೊರತೆ ಇದ್ದ ಕಾರಣ ಮುಂದಿನ 2 ಆರ್ಥಿಕ ವರ್ಷಗಳವರೆಗೆ ಯಾವುದೇ ಹೊಸ ಯೋಜನೆಗಳನ್ನು ಕೈಗೆತ್ತಿಕೊಳ್ಳದಂತೆ ತಿಳಿಸಿ ಪ್ರಸ್ತಾವನೆಯನ್ನು ಮಂಡಳಿಗೆ ಹಿಂದಿರುಗಿಸಲಾಗಿರುತ್ತದೆ.
ಇ)	ಈ ಕಾಮಗಾರಿಯನ್ನು ಸರ್ಕಾರದಿಂದ ಕೂಡಲೇ ಪ್ರಾರಂಭ ಮಾಡಲಾಗುವುದೇ?	

ಸಂಖ್ಯೆ: ನಅಇ 40 ಯುಎಂಎಸ್ 2020

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ಸರ್ಕಾರ

ಸಂ:ಹೆಚ್‌ಡಿ 54 ಎಸ್‌ಎಸ್‌ಟಿ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ:17.03.2020

ಇವರಿಂದ:-
ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು,
ಒಳಾಡಳಿತ ಇಲಾಖೆ.

127
13/3/20

ಇವರಿಗೆ:-
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ
ವಿಧಾನ ಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ:- ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಶಿವಕುಮಾರ್ ಡಿ.ಕೆ. (ಕನಕಪುರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:977ಕ್ಕೆ ಉತ್ತರ ಒದಗಿಸುವ ಬಗ್ಗೆ.

-- -- --

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ಶಿವಕುಮಾರ್ ಡಿ.ಕೆ. (ಕನಕಪುರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:977ಕ್ಕೆ ಉತ್ತರದ 350 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿತಳಾಗಿದ್ದೇನೆ.

ತಮ್ಮ ವಿಶ್ವಾಸಿ

(ಕೆ.ಪದ್ಮಿನಿದೇವಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ, (ಕಾನೂನು ಮತ್ತು ಸುವ್ಯವಸ್ಥೆ)
☎2203 3254, e-mail:uslo-home@karnataka.gov.in

Letters_LALC_Qtns

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 977
ಸದಸ್ಯರ ಹೆಸರು : ಶ್ರೀ ಶಿವಕುಮಾರ್.ಡಿ.ಕೆ
ಉತ್ತರಿಸಬೇಕಾದ ದಿನಾಂಕ : 13.03.2020
ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಸರ್ಕಾರಿ ಜಮೀನಿನಲ್ಲಿ ಅನಧಿಕೃತವಾಗಿ ನಿರ್ಮಾಣಗೊಂಡಿರುವ ದೇವಸ್ಥಾನಗಳು, ಚರ್ಚ್‌ಗಳು, ಮಸೀದಿಗಳು ಹಾಗೂ ಇತರೆ ಧಾರ್ಮಿಕ ಸಂಸ್ಥೆಗಳೆಷ್ಟು; (ಮಾಹಿತಿ ಒದಗಿಸುವುದು)	ಮಾನ್ಯ ಸರ್ವೋಚ್ಚ ನ್ಯಾಯಾಲಯದ ಎಸ್.ಎಲ್.ಪಿ.(ಸಿವಿಲ್) ಸಂಖ್ಯೆ:8519/2006ರಲ್ಲಿನ ದಿನಾಂಕ:29.09.2009 ಮತ್ತು 07.12.2009ರ ನಿರ್ದೇಶನದಂತೆ ಸರ್ಕಾರಿ ಜಮೀನಿನಲ್ಲಿ ನಿರ್ಮಾಣಗೊಂಡ ಅನಧಿಕೃತ ಧಾರ್ಮಿಕ ಕಟ್ಟಡಗಳನ್ನು ತೆರವುಗೊಳಿಸಲಾಗುತ್ತಿದೆ. ಮುಂದುವರೆದು, ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ಸ್ವಯಂಪ್ರೇರಿತ ರಿಟ್ ಅರ್ಜಿ ಸಂಖ್ಯೆ:27551/2019ರಲ್ಲಿನ ನಿರ್ದೇಶನದಂತೆ ಸರ್ಕಾರವು ಇಂತಹ ಅನಧಿಕೃತ ಧಾರ್ಮಿಕ ಕಟ್ಟಡಗಳನ್ನು ದಿನಾಂಕ:31.03.2020 ರೊಳಗೆ ಗುರುತಿಸಿ, ಪಟ್ಟಿ ಮಾಡಲು ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿರುತ್ತದೆ. ಸರ್ವೆ ಕೆಲಸ ಪ್ರಗತಿಯಲ್ಲಿ ಇದೆ. ಈ ಕುರಿತು ಎಲ್ಲಾ ಜಿಲ್ಲಾಧಿಕಾರಿಗಳಿಂದ ಪಡೆದಿರುವ ಇತ್ತೀಚಿನ ಹಂತದ ಮಾಹಿತಿಯಂತೆ ರಾಜ್ಯದಲ್ಲಿ ಇಲ್ಲಿಯವರೆಗೆ ಗುರುತಿಸಿರುವ ಅನಧಿಕೃತ ಧಾರ್ಮಿಕ ಕಟ್ಟಡಗಳ ಸಂಖ್ಯೆ:6451, ಇದರಲ್ಲಿ 3079 ಕಟ್ಟಡಗಳನ್ನು ಇಲ್ಲಿಯವರೆಗೆ ತೆರವುಗೊಳಿಸಿದೆ.
ಆ)	ಹಾಗಿದ್ದಲ್ಲಿ, ಸರ್ಕಾರವು ತೆರವುಗೊಳಿಸುವ ಬಗ್ಗೆ ಹಾಗೂ ಸಕ್ರಮಗೊಳಿಸುವ ಬಗ್ಗೆ ಕಾನೂನು ರೀತ್ಯಾ ಯಾವ ಕ್ರಮ ಕೈಗೊಳ್ಳಲಾಗಿದೆ? (ಜಿಲ್ಲಾವಾರು ಹಾಗೂ ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು)	

ಹೆಚ್‌ಡಿ 54 ಎಸ್‌ಎಸ್‌ಟಿ 2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ನಅಇ 94 ಎಸ್‌ಎಫ್ ಸಿ 2020

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 12-03-2020.

51
U/S
13/03/2020

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ಬೆಂಗಳೂರು.

ಇವರಿಗೆ,

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ,
ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನಸಭೆ ಸದಸ್ಯರಾದ ಶ್ರೀ ತನ್ವೀರ್ ಸೇಠ್ (ನರಸಿಂಹರಾಜ) ರವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1161ಕ್ಕೆ ಉತ್ತರಿಸುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನಸಭೆ ಸದಸ್ಯರಾದ ಶ್ರೀ ತನ್ವೀರ್ ಸೇಠ್ (ನರಸಿಂಹರಾಜ) ರವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1161ಕ್ಕೆ ಉತ್ತರದ 350 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

ಲಲಿತಾಬಾಯಿ.ಕೆ

(ಲಲಿತಾಬಾಯಿ ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

ಪ್ರತಿ ಅಗತ್ಯ ಕ್ರಮಕ್ಕಾಗಿ:

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
2) ಸರ್ಕಾರದ ಅಧೀನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ (ಸಮನ್ವಯ).

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1161
ಸದಸ್ಯರ ಹೆಸರು	:	ಶ್ರೀ ತನ್ವೀರ್ ಸೇಠ್ (ನರಸಿಂಹರಾಜ)
ಉತ್ತರಿಸಬೇಕಾದ ದಿನಾಂಕ	:	13-03-2020
ಉತ್ತರಿಸುವ ಸಚಿವರು	:	ಮಾನ್ಯ ನಗರಾಭಿವೃದ್ಧಿ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	2018-19 ಹಾಗೂ 2019-20ನೇ ಸಾಲಿನಲ್ಲಿ ನರಸಿಂಹರಾಜ ವಿಧಾನಸಭಾಕ್ಷೇತ್ರಕ್ಕೆ ಎಸ್ಎಫ್‌ಸಿ ಯೋಜನೆಯಡಿ ವಿಶೇಷ ಅನುದಾನ ಬಿಡುಗಡೆ ಮಾಡಲಾಗಿದೆಯೇ; ಮಾಡದಿದ್ದಲ್ಲಿ ಕಾರಣಗಳೇನು; ಯಾವಾಗ ಬಿಡುಗಡೆ ಮಾಡಲಾಗುವುದು? (ವಿಧಾನಸಭಾಕ್ಷೇತ್ರವಾರು ವಿವರ ನೀಡುವುದು)	ಸರ್ಕಾರವು 2018-19 ಹಾಗೂ 2019-20ನೇ ಸಾಲಿನಲ್ಲಿ ನರಸಿಂಹರಾಜ ವಿಧಾನಸಭಾಕ್ಷೇತ್ರಕ್ಕೆ ಎಸ್.ಎಫ್.ಸಿ ವಿಶೇಷ ಅನುದಾನ ಮಂಜೂರು ಮಾಡಿರುವುದಿಲ್ಲ. ಸಧ್ಯಕ್ಕೆ ಸರ್ಕಾರದ ಬಳಿ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಕಡತ ಸಂಖ್ಯೆ: ನಅಇ 94 ಎಸ್.ಎಫ್.ಸಿ 2020

(ಬಿ.ಎ ಬಸವರಾಜ)
ನಗರಾಭಿವೃದ್ಧಿ ಸಚಿವರು.

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 25 ಎಲ್‌ಎಕ್ಯೂ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ 13.03.2020

09
9/5
13/3/20

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ಇವರಿಗೆ:
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಪರಿಷತ್,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ:- ಕರ್ನಾಟಕ ವಿಧಾನ ಸಭೆ ಸದಸ್ಯರಾದ ಶ್ರೀ ಐಹೋಳೆ ಡಿ.ಮಹಾಲಿಂಗಪ್ಪ (ರಾಯಭಾಗ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1420ಕ್ಕೆ ಉತ್ತರ ನೀಡುವ ಬಗ್ಗೆ.

.----

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ ಐಹೋಳೆ ಡಿ.ಮಹಾಲಿಂಗಪ್ಪ (ರಾಯಭಾಗ) ಇವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1420ಕ್ಕೆ ಉತ್ತರವನ್ನು ತಯಾರಿಸಿದ್ದು, ಇದರ 100 ಪ್ರತಿಗಳನ್ನು ಇದರೊಂದಿಗೆ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,
A. Vijayakumar
13.03.2020
(ಎ.ವಿಜಯಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**1420**
ಸದಸ್ಯರ ಹೆಸರು	:	ಶ್ರೀ ಐಹೋಳೆ ಡಿ. ಮಹಾಲಿಂಗಪ್ಪ(ರಾಯಭಾಗ)
ಉತ್ತರಿಸುವ ದಿನಾಂಕ	:	**13.03.2020**
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕ್ರ ಸಂ.	ಪ್ರಶ್ನೆಗಳು	ಉತ್ತರಗಳು
ಅ)	ಬೆಳಗಾವಿ ಜಿಲ್ಲೆಯ ಕಂಕನವಾಡಿ ಪಟ್ಟಣ ಪಂಚಾಯ್ತಿಯ ಸರ್ಕಾರಿ ಗಾರಾಯಣ ಜಮೀನಿಗೆ ಖಾಸಗಿ ವ್ಯಕ್ತಿಗಳ ಹೆಸರಿನಲ್ಲಿ ನಕಲಿ ದಾಖಲೆ ಸೃಷ್ಟಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಆ)	ಬಂದಿದ್ದಲ್ಲಿ ಸದರಿ ನಕಲಿ ದಾಖಲೆಗಳನ್ನು ರದ್ದುಪಡಿಸಲು ಸರ್ಕಾರ ಕ್ರಮಕೈಗೊಳ್ಳುವುದೇ ಈ ನಕಲಿ ದಾಖಲೆಗಳನ್ನು ಸೃಷ್ಟಿಸಿದ ಪಟ್ಟಣ ಪಂಚಾಯತಿಯ ಅಧಿಕಾರಿಗಳ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳುವುದೇ? (ಸಂಪೂರ್ಣ ವಿವರ ನೀಡುವುದು)	ಕಂಕಣವಾಡಿ ಪಟ್ಟಣ ಪಂಚಾಯತಿ ವ್ಯಾಪ್ತಿಯ ರಿ.ಸ.ನಂ.3/1 ಹಾಗೂ 94/ಅ ರಲ್ಲಿನ ಸರ್ಕಾರಿ ಗಾರಾಯಣ ಜಮೀನಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿ ಅವಧಿಯಲ್ಲಿ ಹಾಗೂ ಪಟ್ಟಣ ಪಂಚಾಯತಿಯಾಗಿ ಮೇಲ್ದರ್ಜೆಗೇರಿಸಿದ ನಂತರ ಖಾಸಗಿ ವ್ಯಕ್ತಿಗಳ ಹೆಸರಿನಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ, ಸರ್ಕಾರಿ ಗಾರಾಯಣ ಜಮೀನನ್ನು ಖಾಸಗಿ ವ್ಯಕ್ತಿಗಳ ಹೆಸರಿನಲ್ಲಿ ಖಾತಾ ಮಾಡಿರುವುದಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳಿಂದ ವರದಿ ಪಡೆದು, ಪರಿಶೀಲಿಸಿ, ತಪ್ಪಿತಸ್ಥ ಅಧಿಕಾರಿ/ನೌಕರರ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲು ಹಾಗೂ ನಕಲಿ ದಾಖಲೆಗಳನ್ನು ರದ್ದುಪಡಿಸುವ ಕುರಿತು ಕ್ರಮವಹಿಸಲಾಗವುದು.

ಸಂಖ್ಯೆ: ನಅಇ 25 ಎಲ್ಎಕ್ಯೂ 2020

(ಡಾ. ನಾರಾಯಣ ಗೌಡ)
ಮಾನ್ಯ ಪೌರಾಡಳಿತ, ತೋಟಗಾರಿಕೆ ಮತ್ತು
ರೇಷ್ಮೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 34 ಜಿಇಎಲ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 13/03/2020

68

'ಜರೂರು'

13/3/2020

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಇವರಿಗೆ:
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ **ಶ್ರೀ ಯು.ಟಿ ಖಾದರ್ (ಮಂಗಳೂರು)** ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 982**ಕ್ಕೆ** ಉತ್ತರ ಕಳುಹಿಸುವ ಬಗ್ಗೆ.

** ** **

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆ ಸದಸ್ಯರಾದ **ಶ್ರೀ ಯು.ಟಿ ಖಾದರ್ (ಮಂಗಳೂರು)** ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 982**ಕ್ಕೆ** ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

(ಎಸ್.ವೀಣಾ)

ಸರ್ಕಾರದ ಅಧೀನ ಕಾರ್ಯದರ್ಶಿ
(ಪೌರಾಡಳಿತ-2 & ಮಂಡಳಿ)
ನಗರಾಭಿವೃದ್ಧಿ ಇಲಾಖೆ.

ಪ್ರತಿಯನ್ನು:

1) ಮಾನ್ಯ ಪೌರಾಡಳಿತ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2) ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ (ಸಮನ್ವಯ).

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 982
ಸದಸ್ಯರ ಹೆಸರು: ಶ್ರೀ ಯು.ಟಿ ಖಾದರ್ (ಮಂಗಳೂರು)
ಉತ್ತರಿಸಬೇಕಾದ ದಿನಾಂಕ: 13.03.2020
ಉತ್ತರಿಸುವವರು: ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ ನಗರಸಭೆಯಲ್ಲಿ ಹುದ್ದೆಗಳು ಖಾಲಿಯಿದ್ದು, ನಗರಸಭೆಯ ಕಾರ್ಯನಿರ್ವಹಣೆಗೆ ಸಮಸ್ಯೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು,
(ಆ)	ಬಂದಿದ್ದಲ್ಲಿ, ಮಂಜೂರಾದ ಹುದ್ದೆಗಳು ಹಾಗೂ ಖಾಲಿಯಿರುವ ಹುದ್ದೆಗಳೆಷ್ಟು; ಮತ್ತು ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?	ಉಳ್ಳಾಲ ನಗರಸಭೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಾವಳಿಯ ರೀತ್ಯಾ ಒಟ್ಟು 236 ಹುದ್ದೆಗಳು (ಪೌರಕಾರ್ಮಿಕರು ಒಳಗೊಂಡಂತೆ) ಮಂಜೂರಾಗಿರುತ್ತದೆ. ಅದರಲ್ಲಿ 26 ಖಾಯಂ ಅಧಿಕಾರಿ / ನೌಕರರು, 64 ನೌಕರರು ನೇರ ಪಾವತಿ / ಹೊರಗುತ್ತಿಗೆಯಲ್ಲಿ ಹಾಗೂ 2 ನೌಕರರು ಸಮಾನ ಕೆಲಸಕ್ಕೆ ಸಮಾನ ವೇತನ / ಗುತ್ತಿಗೆ ಆಧಾರದಲ್ಲಿ ಒಟ್ಟು 92 ಅಧಿಕಾರಿ / ನೌಕರರು ಕರ್ತವ್ಯ ನಿರ್ವಹಿಸುತ್ತಿದ್ದು, 144 ಹುದ್ದೆಗಳು ಖಾಲಿಯಿರುತ್ತದೆ. ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೇರ ನೇಮಕಾತಿ ಅಡಿಯಲ್ಲಿ ಖಾಲಿಯಿರುವ ಈ ಕೆಳಕಂಡ 'ಸಿ' ವೃಂದದ ಹುದ್ದೆಗಳ ಭರ್ತಿಗೆ ಸಂಬಂಧಿಸಿದಂತೆ ಈಗಾಗಲೇ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಕಳುಹಿಸಲು ಪ್ರಸ್ತಾವನೆಯನ್ನು ಕಳುಹಿಸಲಾಗಿದ್ದು, ವಿವರಗಳು ಈ ಕೆಳಗಿನಂತಿವೆ. ಪ್ರಥಮ ದರ್ಜೆ ಸಹಾಯಕರು– 62 ಕಿರಿಯ ಆರೋಗ್ಯ ನಿರೀಕ್ಷಕರು– 70 ದ್ವಿತೀಯ ದರ್ಜೆ ಸಹಾಯಕರು– 182 ಕಿರಿಯ ಅಭಿಯಂತರರು– 91 ಎಲೆಕ್ಟ್ರೀಷಿಯನ್–1– 06 ಎಲೆಕ್ಟ್ರೀಷಿಯನ್–2– 10

		ಕರ್ನಾಟಕ ಲೋಕಸೇವಾ ಆಯೋಗದಿಂದ ಅರ್ಹ ಅಭ್ಯರ್ಥಿಗಳ ಆಯ್ಕೆ ಪಟ್ಟಿ ಸ್ವೀಕೃತವಾದ ನಂತರ ನಿಯಮಾನುಸಾರ ಖಾಲಿಯಿರುವ 'ಸಿ' ವೃಂದದ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುವುದು. ಅವಶ್ಯಕತೆಯಿರುವ ಮುಂಬಡ್ತಿ ಖೋಟಾದಡಿಯಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಹಾಗೂ ಅವಶ್ಯಕತೆಯಿರುವ 'ಡಿ' ವೃಂದದಲ್ಲಿ ಖಾಲಿಯಿರುವ 50 ಪೌರಕಾರ್ಮಿಕರ ಹುದ್ದೆಗಳನ್ನು ಹಾಗೂ 16 ಲೋಡರ್ ಹುದ್ದೆಗಳನ್ನು ಭರ್ತಿ ಮಾಡಲು ನಿಯಮಾನುಸಾರ ಕ್ರಮವಹಿಸಲಾಗುವುದು.

ಸಂಖ್ಯೆ: ನಅಇ 34 ಜಿಇಎಲ್ 2020

(ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 32 ಜಿಇಎಲ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 13/03/2020

166

'ಜರೂರು'

4/5
13/3/2020

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಇವರಿಗೆ:
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭೆಯ ಸದಸ್ಯರಾದ **ಶ್ರೀ ವೆಂಕಟರಮಣಯ್ಯ ಟಿ. (ದೊಡ್ಡಬಳ್ಳಾಪುರ)** ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1151**ಕ್ಕೆ** ಉತ್ತರ ಕಳುಹಿಸುವ ಬಗ್ಗೆ.

** ** **

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆ ಸದಸ್ಯರಾದ **ಶ್ರೀ ವೆಂಕಟರಮಣಯ್ಯ ಟಿ. (ದೊಡ್ಡಬಳ್ಳಾಪುರ)** ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1151**ಕ್ಕೆ** ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

(ಎಸ್.ವೀಣಾ)

ಸರ್ಕಾರದ ಅಧೀನ ಕಾರ್ಯದರ್ಶಿ
(ಪೌರಾಡಳಿತ-2 & ಮಂಡಳಿ)
ನಗರಾಭಿವೃದ್ಧಿ ಇಲಾಖೆ.

<u>ಪ್ರತಿಯನ್ನು:</u>

1) ಮಾನ್ಯ ಪೌರಾಡಳಿತ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2) ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ (ಸಮನ್ವಯ).

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1151
ಸದಸ್ಯರ ಹೆಸರು : ಶ್ರೀ ವೆಂಕಟರಮಣಯ್ಯ ಟಿ. (ದೊಡ್ಡಬಳ್ಳಾಪುರ)
ಉತ್ತರಿಸಬೇಕಾದ ದಿನಾಂಕ : 13.03.2020
ಉತ್ತರಿಸುವವರು : ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

ಕ್ರ.ಸಂ	ಪ್ರಶ್ನೆಗಳು	ಉತ್ತರ
ಅ	ದೊಡ್ಡಬಳ್ಳಾಪುರ ನಗರ ಸಭೆಯು ಈ ಹಿಂದೆ ಪುರಸಭೆಯಾಗಿದ್ದಾಗ ಹೊಂದಿದ್ದ 31 ವಾರ್ಡ್‌ಗಳಲ್ಲಿನ ಜನ ಸಂಖ್ಯೆಯು 20 ಸಾವಿರಯಿದ್ದಿದ್ದು, ಪ್ರಸ್ತುತ 1 ಲಕ್ಷ ಮೀರಿರುವುದರಿಂದ ಈ ವಾರ್ಡ್‌ಗಳಲ್ಲಿನ ಕಿರಿದಾದ ರಸ್ತೆಗಳು ಅಗಲೀಕರಣ ಮಾಡಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು. ಗಮನಕ್ಕೆ ಬಂದಿರುತ್ತದೆ.
ಆ	ಹಾಗಿದ್ದಲ್ಲಿ, ರಸ್ತೆಗಳ ಅಗಲೀಕರಣಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ರಸ್ತೆ ಅಗಲೀಕರಣದ ಬಗ್ಗೆ ರೂ–2194.64/– ಲಕ್ಷ ಮೊತ್ತದ ಅನುದಾನ ನೀಡುವಂತೆ ಕೋರಿ ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ ಇವರಿಂದ ದಿನಾಂಕ:08.08.2012ರಲ್ಲಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. ಸದರಿ ಪ್ರಸ್ತಾವನೆಯ ಬಗ್ಗೆ ಸರ್ಕಾರದಿಂದ ಯಾವುದೇ ತೀರ್ಮಾನ ಆಗಿರುವುದಿಲ್ಲ. ಸದರಿ ವಿಷಯದ ಬಗ್ಗೆ ಪುನಃ ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ ಇವರಿಂದ ಪ್ರಸ್ತಾವನೆ ಬಂದಲ್ಲಿ ಅನುದಾನದ ಲಭ್ಯತೆ ಅನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ನಅಇ 32 ಜಿಇಎಲ್ 2020

(ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ವೆಂಕಟ್‌ರಾವ್ ನಾಡಗೌಡ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1747
ಉತ್ತರಿಸಬೇಕಾದ ದಿನಾಂಕ : 13.03.2020

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಕಳೆದ ಸಾಲಿನಲ್ಲಿ ಸಹಕಾರ ಬ್ಯಾಂಕುಗಳಲ್ಲಿ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ರೈತರ ಸಾಲ ಮನ್ನಾ ಮಾಡಲಾಗಿದ್ದು, ಜಿಲ್ಲಾವಾರು ಬೆಳೆ ಸಾಲ ಮನ್ನಾ ಆಗಿರುವ ರೈತರ ಸಂಖ್ಯೆ ಎಷ್ಟು; ಹಾಗೂ ಮೊತ್ತವೆಷ್ಟು (ವಿವರ ನೀಡುವುದು)	**ಸಹಕಾರ ಬ್ಯಾಂಕುಗಳಿಗೆ ಸಂಬಂಧಿಸಿದಂತೆ** ಸಹಕಾರ ಸಂಘಗಳ ರೂ.1.00 ಲಕ್ಷಗಳ ಸಾಲ ಮನ್ನಾ ಯೋಜನೆಯಲ್ಲಿ ಸಹಕಾರ ಸಂಘಗಳು ಸಾಲ ಮನ್ನಾ ತಂತ್ರಾಂಶದಲ್ಲಿ ಅಳವಡಿಸಿರುವ 18.32 ಲಕ್ಷ ರೈತರ ಪೈಕಿ ಈಗಾಗಲೇ 16.01 ಲಕ್ಷ ರೈತರಿಗೆ ರೂ.7434.21 ಕೋಟಿ ಸಾಲ ಮನ್ನಾ ನೀಡಲು ಅರ್ಹತೆಯನ್ನು ಗುರುತಿಸಲಾಗಿದೆ. ಜಿಲ್ಲಾವಾರು ವಿವರವನ್ನು **ಅನುಬಂಧ-01** ರಲ್ಲಿ ನೀಡಲಾಗಿದೆ. **ವಾಣಿಜ್ಯ ಬ್ಯಾಂಕುಗಳಿಗೆ ಸಂಬಂಧಿಸಿದಂತೆ** ರಾಜ್ಯದಲ್ಲಿ ವಾಣಿಜ್ಯ ಮತ್ತು ಗ್ರಾಮೀಣ ಬ್ಯಾಂಕುಗಳಿಗೆ ಸಂಬಂಧಿಸಿದಂತೆ 9,16,592 ರೈತರಿಗೆ, ಕುಟುಂಬವೊಂದಕ್ಕೆ ಗರಿಷ್ಠ ರೂ.2.00 ಲಕ್ಷದವರೆಗೆ ರೂ.6859.70 ಕೋಟಿ ಸಾಲ ಮನ್ನಾ ಮಾಡಲಾಗಿದೆ. ಜಿಲ್ಲಾವಾರು ವಿವರವನ್ನು **ಅನುಬಂಧ-01 (ಎ)** ರಲ್ಲಿ ಲಗತ್ತಿಸಿದೆ.
ಆ)	ಈ ಪೈಕಿ ಸರ್ಕಾರದಿಂದ ಜಿಲ್ಲಾ ಬ್ಯಾಂಕುಗಳು/ರಾಷ್ಟ್ರೀಕೃತ ಬ್ಯಾಂಕುಗಳಿಗೆ ಹಾಗೂ ರೈತರಿಗೆ ಬಿಡುಗಡೆ ಮಾಡಲಾದ ಮೊತ್ತವೆಷ್ಟು (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)	**ಸಹಕಾರ ಬ್ಯಾಂಕುಗಳಿಗೆ ಸಂಬಂಧಿಸಿದಂತೆ** ಈ ಪೈಕಿ ಇದುವರೆಗೆ 15.70 ಲಕ್ಷ ರೈತರಿಗೆ ರೂ.7257.40 ಕೋಟಿಗಳನ್ನು NEFT ಮೂಲಕ ರೈತರ ಉಳಿತಾಯ ಖಾತೆಗೆ ಬಿಡುಗಡೆ ಮಾಡಲಾಗಿದೆ. ಜಿಲ್ಲಾವಾರು ವಿವರವನ್ನು **ಅನುಬಂಧ-01** ರಲ್ಲಿ ನೀಡಲಾಗಿದೆ. **ವಾಣಿಜ್ಯ ಬ್ಯಾಂಕುಗಳಿಗೆ ಸಂಬಂಧಿಸಿದಂತೆ** ರಾಜ್ಯದಲ್ಲಿ ವಾಣಿಜ್ಯ ಮತ್ತು ಗ್ರಾಮೀಣ ಬ್ಯಾಂಕುಗಳಿಗೆ ಸಂಬಂಧಿಸಿದಂತೆ 9,16,592 ರೈತರಿಗೆ, ಕುಟುಂಬವೊಂದಕ್ಕೆ ಗರಿಷ್ಠ ರೂ.2.00 ಲಕ್ಷದವರೆಗೆ ರೂ.6859.70 ಕೋಟಿ ಸಾಲ ಮನ್ನಾ ಹಣವನ್ನು ನೇರವಾಗಿ ರೈತರ ಸಾಲ ಖಾತೆಗಳಿಗೆ ಪಾವತಿ ಮಾಡಲಾಗಿದೆ. ಜಿಲ್ಲಾವಾರು ವಿವರವನ್ನು **ಅನುಬಂಧ-01 (ಎ)** ರಲ್ಲಿ ಲಗತ್ತಿಸಿದೆ.
ಇ)	ಜಿಲ್ಲಾ ಬ್ಯಾಂಕುಗಳ/ರಾಷ್ಟ್ರೀಕೃತ ಬ್ಯಾಂಕುಗಳಿಗೆ ಬಿಡುಗಡೆ ಮಾಡದೇ ಬಾಕಿಯಿರುವ ಸಾಲಮನ್ನಾ ಮೊತ್ತವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)	**ಸಹಕಾರ ಬ್ಯಾಂಕುಗಳಿಗೆ ಸಂಬಂಧಿಸಿದಂತೆ** ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳಲ್ಲಿ ಉಳಿತಾಯ ಖಾತೆಗಳನ್ನು ಹೊಂದಿರುವ ರೈತರಿಗೆ ರೂ.176.82 ಕೋಟಿಗಳು ಬಿಡುಗಡೆಗೆ ಬಾಕಿ ಇರುತ್ತವೆ. **ವಾಣಿಜ್ಯ ಬ್ಯಾಂಕುಗಳಿಗೆ ಸಂಬಂಧಿಸಿದಂತೆ** ವಾಣಿಜ್ಯ ಬ್ಯಾಂಕುಗಳಿಗೆ ರೂ.7300/- ಕೋಟಿಗಳನ್ನು ಸರ್ಕಾರದಿಂದ ಬಿಡುಗಡೆ ಮಾಡಲಾಗಿದ್ದು, ಈ ಪೈಕಿ ಬ್ಯಾಂಕುಗಳು / ರೈತರು ಸಲ್ಲಿಸಿರುವ ಮಾಹಿತಿ ಪರಿಶೀಲಿಸಿ ಅರ್ಹವಿರುವ ಒಟ್ಟು 9,16,592 ರೈತರ ಖಾತೆಗಳಿಗೆ ರೂ.6859.70 ಕೋಟಿಗಳನ್ನು ಬಿಡುಗಡೆಗೊಳಿಸಿದೆ.

ಈ)	ಬಾಕಿ ಇರುವ ಸಾಲದ ಮೊತ್ತವನ್ನು ರೈತರಿಗೆ ಬಿಡುಗಡೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)	<u>ಸಹಕಾರ ಬ್ಯಾಂಕುಗಳಿಗೆ ಸಂಬಂಧಿಸಿದಂತೆ</u> ಡಿಸಿಸಿ ಬ್ಯಾಂಕುಗಳು ರೈತರ ಉಳಿತಾಯ ಖಾತೆಗಳ ಸಂಖ್ಯೆಯನ್ನು ತಪ್ಪಾಗಿ ನಮೂದಿಸಿದ್ದರಿಂದ ರೂ.176.82 ಕೋಟಿಗಳು ಅಪೆಕ್ಸ್ ಬ್ಯಾಂಕಿಗೆ NEFT ಮೂಲಕ ವಾಪಸ್ ಆಗಿದ್ದು, ಸಂಘಗಳು ಸರಿಯಾದ ಉಳಿತಾಯ ಖಾತೆಗಳನ್ನು ನೀಡಲು ಕ್ರಮವಹಿಸಲಾಗಿದ್ದು, ಸರಿಪಡಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ. ಅರ್ಹತೆಯನ್ನು ಗುರುತಿಸಲು ಬಾಕಿ ಇರುವ 2,30,990 ರೈತರ ಪೈಕಿ 70,497 ರೈತರು ಅರ್ಹತೆ ಹೊಂದುವ ದಾಖಲಾತಿಗಳನ್ನು ಸಲ್ಲಿಸಿದ್ದು, ಸಾಲ ಮನ್ನಾ ನಿಗದಿಪಡಿಸಿ ಅನುದಾನ ಬಿಡುಗಡೆ ಮಾಡಲು ಕ್ರಮ ಜರುಗಿಸಲಾಗುತ್ತಿದೆ. ಉಳಿದ 1,60,493 ರೈತರ ಪೈಕಿ 41,867 ರೈತರುಗಳು ಸಾಲಮನ್ನಾ ಯೋಜನೆಯಡಿ ನಿಗಧಿಪಡಿಸಿದ್ದ ಮಾನದಂಡಗಳನ್ವಯ ಅನರ್ಹಗೊಂಡಿರುತ್ತಾರೆ. ಬಾಕಿ ಉಳಿದ 1,18,626 ರೈತರುಗಳ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸಿದ ನಂತರ ಪರಿಶೀಲಿಸಿ ಸಾಲ ಮನ್ನಾ ಬಿಡುಗಡೆ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ. <u>ವಾಣಿಜ್ಯ ಬ್ಯಾಂಕುಗಳಿಗೆ ಸಂಬಂಧಿಸಿದಂತೆ</u> ರೈತರು ತಮ್ಮ ಆಧಾರ್ ಕಾರ್ಡ್, ರೇಷನ್ ಕಾರ್ಡ್ ಹಾಗೂ ಸರ್ವೆ ನಂ. ಸಲ್ಲಿಸಿದ ನಂತರ ನಿಯಮಾನುಸಾರ ಪರಿಶೀಲಿಸಿ, ಅರ್ಹ ರೈತರನ್ನು ಗುರುತಿಸಿದ ನಂತರ ಸಾಲ ಮನ್ನಾ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ಸಿಒ 118 ಸಿಎಲ್ಎಸ್ 2020

ಎಸ್.ಟಿ. ಸೋಮಶೇಖರ್

(ಎಸ್.ಟಿ ಸೋಮಶೇಖರ್)
ಸಹಕಾರ ಸಚಿವರು)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ-1747

ಅನುಬಂಧ-1

ಸಹಕಾರ ಸಂಘಗಳ ರೂ.1 ಲಕ್ಷಗಳ ವರೆಗಿನ ಬೆಳೆ ಸಾಲ ಮನ್ನಾ ಯೋಜನೆಯಲ್ಲಿ ಅರ್ಹತೆ ಗುರುತಿಸಿದ ಮತ್ತು ಅನುದಾನ ಬಿಡುಗಡೆ ಮಾಡಿದ ವಿವರ (ರೂ.ಕೋಟಿಗಳಲ್ಲಿ)

ಕ್ರ ಸಂ	ಜಿಲ್ಲೆಯ ಹೆಸರು	ದಿ.10-7-2018 ಕ್ಕೆ ರೈತರು ಹೊಂದಿದ ಬೆಳೆ ಸಾಲದ ಹೊರಬಾಕಿ		ಈ ಪೈಕಿ ರೂ.1 ಲಕ್ಷಗಳ ವರೆಗಿನ ಸಾಲದ ಮೊತ್ತ	ಇದುವರೆಗೆ ಗುರುತಿಸಿದ ಅರ್ಹ ರೈತರ ವಿವರ		ಸಾಲ ಮನ್ನಾ ಬಿಡುಗಡೆ ಮಾಡಿದ ಮೊತ್ತ		ಬಿಡುಗಡೆಗೆ ಬಾಕಿ ಇರುವ ಮೊತ್ತ	
		ಸಂಖ್ಯೆ	ಮೊತ್ತ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ
1	ಬಾಗಲಕೋಟೆ	140694	837.07	755.50	116343	616.50	115388	610.81	955	5.69
2	ಬೆಂಗಳೂರು ಗ್ರಾ.	17283	85.53	81.39	15904	74.45	15851	74.19	53	0.26
3	ಬೆಂಗಳೂರು ನಗರ	8149	46.29	42.05	7082	35.92	6902	34.46	180	1.46
4	ಬೆಳಗಾವಿ	278772	1251.72	1117.78	255748	1001.27	254536	994.86	1212	6.40
5	ಬಳ್ಳಾರಿ	67729	491.06	401.88	58965	338.45	58182	332.20	783	6.26
6	ಬೀದರ್	108920	556.54	460.46	94790	387.98	94364	386.09	426	1.89
7	ವಿಜಯಪುರ	160594	748.30	665.09	135624	551.61	134629	547.50	995	4.11
8	ಚಾಮರಾಜನಗರ	18438	138.89	114.75	15718	95.71	15664	95.38	54	0.33
9	ಚಿಕ್ಕಬಳ್ಳಾಪುರ	11280	117.65	88.16	10936	85.13	10893	84.82	43	0.32
10	ಚಿಕ್ಕಮಗಳೂರು	28412	287.81	188.27	24776	160.79	24687	160.07	89	0.72
11	ಚಿತ್ರದುರ್ಗ	36443	187.32	168.71	33236	149.65	33105	149.05	131	0.61
12	ದಕ್ಷಿಣ ಕನ್ನಡ	67713	830.93	512.11	56770	419.38	52196	378.24	4574	41.14
13	ದಾವಣಗೆರೆ	63875	236.48	220.46	55754	186.56	54401	181.49	1353	5.07
14	ಧಾರವಾಡ	14179	65.43	59.32	12791	52.02	12679	51.61	112	0.42
15	ಗದಗ	17354	69.27	67.63	15167	58.42	14884	57.36	283	1.06
16	ಕಲಬುರಗಿ	49775	143.56	138.42	36128	96.91	35386	94.83	742	2.08
17	ಹಾಸನ	118367	532.32	489.53	108873	442.99	107812	437.95	1061	5.04
18	ಹಾವೇರಿ	21454	70.51	69.69	20123	64.68	19988	64.24	135	0.44
19	ಕೊಡಗು	33008	491.91	261.60	25557	197.49	25217	194.76	340	2.74
20	ಕೋಲಾರ	10133	134.13	90.69	9390	83.87	9359	83.61	31	0.26
21	ಕೊಪ್ಪಳ	23407	117.74	99.99	21268	87.13	20037	79.40	1231	7.73
22	ಮಂಡ್ಯ	111812	582.36	525.42	101412	469.24	101104	467.60	308	1.64
23	ಮೈಸೂರು	54897	482.66	367.11	46954	306.65	45887	299.06	1067	7.59
24	ರಾಯಚೂರು	50639	293.22	242.73	44009	201.40	39346	168.65	4663	32.75
25	ರಾಮನಗರ	37509	175.97	172.63	34806	159.48	34717	159.10	89	0.38
26	ಶಿವಮೊಗ್ಗ	33352	167.12	137.78	29923	119.67	29493	117.40	430	2.26
27	ತುಮಕೂರು	123917	452.21	443.26	105518	367.12	96990	338.48	8528	28.64
28	ಉಡುಪಿ	24113	257.61	169.60	20503	140.34	19554	132.78	949	7.56
29	ಉತ್ತರ ಕನ್ನಡ	86612	725.11	525.94	76611	460.47	76399	458.97	212	1.50
30	ಯಾದಗಿರಿ	13222	30.74	30.24	10382	22.92	10171	22.43	211	0.49
		1832052	10607.45	8708.19	1601061	7434.21	1569821	7257.40	31240	176.82

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ. [illegible]ಕ್ಕೆ ಅನುಬಂಧ-1A

Annexure-1 CLWS Bank pay as on 27022020

SLNO	District	NoOfLoanse	Amount
1	BAGALKOTE	6962	600378940.92
2	BALLARY	46226	3633286397.21
3	BANGALORE RURAL	5362	488420338.49
4	BANGALORE URBAN	885	67631130.62
5	BELAGAVI	45024	3293346370.89
6	BIDAR	15460	1235429919.01
7	BIJAPUR	22315	1839867367.53
8	CHAMARAJANAGAR	16802	1632436527.92
9	CHIKKABALLAPURA	18244	1789766009.29
10	CHIKMAGALUR	25834	1996155002.19
11	CHITRADURGA	46176	3454477507.19
12	DAKSHINA KANNADA	2836	150919735.34
13	DAVANAGERE	37949	2777763817.53
14	DHARWAD	46720	3617292732.83
15	GADAG	47541	3686841756.15
16	GULBARGA	97638	6150057009.73
17	HASSAN	42113	3396308571.96
18	HAVERI	72960	5260367600.67
19	KODAGU	4242	293725122.10
20	KOLAR	18736	1894354125.68
21	KOPPAL	40692	2825154970.22
22	MANDYA	18349	1431052825.82
23	MYSORE	39906	3128362193.04
24	RAICHUR	63015	4525105947.99
25	RAMANAGARA	3998	380917291.97
26	SHIMOGA	32660	2004335425.28
27	TUMKUR	43529	3894244035.46
28	UDUPI	2386	110012442.39
29	UTTARA KANNADA	1405	56800973.28
30	YADGIR	50606	3081204917.67
	TOTAL	916592	68597017006.37

ಕರ್ನಾಟಕ ವಿಧಾನ ಸಭೆ

1	ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ	:	1617
2	ಸದಸ್ಯರ ಹೆಸರು	:	ಶ್ರೀ ಮಂಜುನಾಥ್.ಎ
3	ಉತ್ತರಿಸುವ ದಿನಾಂಕ	:	13-02-2020
4	ಉತ್ತರಿಸುವವರು	:	ಮಾನ್ಯ ಮುಖ್ಯಮಂತ್ರಿಗಳು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಕೊಡಿಯಾಲಕರೇನಹಳ್ಳಿ ಗ್ರಾಮದ ವಿವಿಧ ಸರ್ವೆ ಸಂಖ್ಯೆಗಳಲ್ಲಿ ಒಟ್ಟು 36ಎಕರೆ ಪ್ರದೇಶದ ಜಮೀನಿನಲ್ಲಿ ಬಿ.ಬಿ.ಎಂ.ಪಿಯು ಕಸ ವಿಲೇವಾರಿ ಘಟಕ ನಿರ್ಮಾಣ ಮಾಡುವುದರಿಂದ, ಈ ಪ್ರದೇಶದ ಸುತ್ತಮುತ್ತಲಿನ ಗ್ರಾಮಗಳು ಬಾದಿತ ಪ್ರದೇಶಗಳಾಗುವುದರಿಂದ, ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ	ರಾಮನಗರ ತಾಲ್ಲೂಕು ಬಿಡದಿ ಹೋಬಳಿ ಕೊಡಿಯಾಲಕರೇನಹಳ್ಳಿ ಗ್ರಾಮದ ವಿವಿಧ ಸರ್ವೆ ನಂ.ಗಳಲ್ಲಿ ಒಟ್ಟು 36 ಎಕರೆ ಪ್ರದೇಶದ ಜಮೀನಿನಲ್ಲಿ ಬಿ.ಬಿ.ಎಂ.ಪಿ.ಯು ಕಸ ವಿಲೇವಾರಿ ಘಟಕ ನಿರ್ಮಾಣ ಮಾಡಿರುವುದಿಲ್ಲ.
ಆ)	ಘನತ್ಯಾಜ್ಯ ವಿಲೇವಾರಿಗಾಗಿ ಸ್ವಾಧೀನಪಡಿಸಿಕೊಂಡ ಜಮೀನಿನ ಮಾಲೀಕರಿಗೆ ಮಾರ್ಗಸೂಚಿಯನ್ವಯ ಪರಿಹಾರದ ಮೊತ್ತವನ್ನು ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ	ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.
ಇ)	ಸದರಿ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಅನುದಾನ ನಿಗದಿಪಡಿಸಲಾಗಿದೆಯೇ	ಅನ್ವಯಿಸುವುದಿಲ್ಲ.

ಸಂಖ್ಯೆ: ನಅಇ 80 ಎಂಎನ್‌ಜಿ 2020

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿಗಳು

ಅನುಬಂಧ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿ.ಬಿ.ಎಂ.ಪಿ)ಯು ತ್ಯಾಜ್ಯ ವಿಲೇವಾರಿ ಮತ್ತು ಸಂಸ್ಕರಣಾ ಘಟಕ ಸ್ಥಾಪಿಸಲು ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕು, ಕೊಡಿಯಾಲಕರೇನಹಳ್ಳಿ ಗ್ರಾಮದ ವಿವಿಧ ಸರ್ವೆ ಸಂಖ್ಯೆ ಜಮೀನುಗಳ ಒಟ್ಟಾರೆ 40 ಎಕರೆ 09 ಗುಂಟೆ ಪ್ರದೇಶವನ್ನು ಟಿ.ಡಿ.ಆರ್ ಯೋಜನೆಯಡಿಯಲ್ಲಿ ಭೂ ಸ್ವಾಧೀನಪಡಿಸಿಕೊಳ್ಳಲು ದಿನಾಂಕ:08-06-2011 ರಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತದೆ.

1. ಸರ್ಕಾರದ ಆದೇಶ ಸಂಖ್ಯೆ: ನಅಇ 280 ಎಂಎನ್‌ಜಿ 2011, ದಿನಾಂಕ:03-01-2013 ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿ.ಬಿ.ಎಂ.ಪಿ)ಯು ತ್ಯಾಜ್ಯ ವಿಲೇವಾರಿ ಘಟಕ ಸ್ಥಾಪಿಸಲು ಸರ್ವೆ ಸಂಖ್ಯೆ: 532ರ 05 ಎಕರೆ- 9 ಗುಂಟೆ, 385/2ರ 01 ಎಕರೆ-15 ಗುಂಟೆ, 386/2ರ 0ಎ-2 ಗುಂಟೆ, 385/1ರ 01 ಎಕರೆ-11ಗುಂಟೆ, 385/3ರ 01ಎಕರೆ-13ಗುಂಟೆ, 386/1ರ 0ಎ-4ಗುಂಟೆ, 384ರ 03ಎಕರೆ-30ಗುಂಟೆ, 537ರ 02ಎಕರೆ-16ಗುಂಟೆ, 544ರ 03ಎಕರೆ-36ಗುಂಟೆ, 543ರ 06ಎಕರೆ-20ಗುಂಟೆ, 545ರ 5ಎಕರೆ-10ಗುಂಟೆ, 546ರ 06ಎಕರೆ- 22ಗುಂಟೆ, 538ರ 02ಎಕರೆ-17ಗುಂಟೆ ಜಮೀನುಗಳ ಒಟ್ಟು ವಿಸ್ತೀರ್ಣ 40ಎಕರೆ-09ಗುಂಟೆ ಪ್ರದೇಶವನ್ನು ಈ ಕೆಳಕಂಡ ಷರತ್ತುಗಳಿಗೊಳಪಡಿಸಿ ಟಿ.ಡಿ.ಆರ್ ಯೋಜನೆಯಡಿಯಲ್ಲಿ ಭೂ ಸ್ವಾಧೀನಪಡಿಸಿಕೊಳ್ಳಲು ಸರ್ಕಾರದ ಅಧಿಸೂಚನೆ ಸಂಖ್ಯೆ: ಯುಡಿಡಿ 154 ಬೆಂರೂಪ್ರಾ 2004, ದಿನಾಂಕ:18-01-2005ರಲ್ಲಿ ವಿಧಿಸಿರುವ ಷರತ್ತುಗಳನ್ನು ಸಡಿಲಿಸಿ ವಿಶೇಷ ಪ್ರಕರಣವೆಂದು ಪರಿಗಣಿಸಿ ಅನುಮತಿ ನೀಡಿರುತ್ತದೆ.

i. ಮೇಲೆ ವಿವರಿಸಿರುವ ಸರ್ವೆ ನಂಬರುಗಳ ಸ್ವತ್ತುಗಳಿಗೆ ಕರ್ನಾಟಕ ನಗರ ಹಾಗೂ ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 14-ಬಿ ರನ್ವಯ ಬಿ.ಎಂ.ಐ.ಸಿ.ಎ.ಪಿ.ಎ ವತಿಯಿಂದ ಪರಿತ್ಯಜಿಸಿದ ಭೂಮಿಯ ವಿಸ್ತೀರ್ಣದ 1.5 ರಷ್ಟು (1 1/2) Development Rights Certificate ನೀಡಲು .

ii. ಬಿ.ಎಂ.ಐ.ಸಿ.ಎ.ಪಿ.ಎ ಯು ಸದರಿ ಜಮೀನುಗಳನ್ನು ಬಿ.ಬಿ.ಎಂ.ಪಿ.ಗೆ ಉಚಿತವಾಗಿ ಹಸ್ತಾಂತರಿಸುವುದು.

iii. ಸದರಿ Development Rights Certificate ಅನ್ನು ಪ್ರಶ್ನಿತ ಪ್ರದೇಶದ 25 ಕಿ.ಮೀ (ಇಪ್ಪತ್ತೈದು) ವ್ಯಾಪ್ತಿಯಲ್ಲಿ ಮಾತ್ರ ಬಳಸುವುದು.

.2. . .

2. ಸರ್ಕಾರದ ಆದೇಶವನ್ನು ಉಲ್ಲೇಖಿಸಿ ಬಿ.ಬಿ.ಎಂ.ಪಿ ಯು ಕಸ ವಿಲೇವಾರಿ ಘಟಕ ನಿರ್ಮಾಣ ಕಾಮಗಾರಿಗಾಗಿ ಒಟ್ಟು 40 ಎಕರೆ -05ಗುಂಟೆ ಜಮೀನು ಅವಶ್ಯವಿರುವುದಾಗಿ, ಸದರಿ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳುವ ಸಲುವಾಗಿ ಪ್ರಜಾವಾಣಿ ಮತ್ತು ವಿಜಯ ಕರ್ನಾಟಕ ದಿನ ಪತ್ರಿಕೆಗಳಲ್ಲಿ ಪ್ರಕಟಣೆ ಹೊರಡಿಸಿ, ಅದರಂತೆ ಬಿ.ಬಿ.ಎಂ.ಪಿ ಯು ಸದರಿ ಜಮೀನಿನ ಭೂ ಮಾಲೀಕರಾದ ಶ್ರೀ ಸಿ.ಟಿ ತಿಮ್ಮಯ್ಯ ಮತ್ತು ಶ್ರೀ ಸಿ.ಟಿ ಮರಿರಾಜು ರವರ ಪರವಾಗಿ ಜಿ.ಪಿ.ಎ.ದಾರರಿಂದ ಪ್ರಸ್ತಾಪಿತ ಜಮೀನಿನ ಪೈಕಿ ರಸ್ತೆ ಸಂಪರ್ಕ ಹೊಂದಿದ್ದ 36 ಎಕರೆ ಪ್ರದೇಶವನ್ನು ದಿನಾಂಕ:11-03-2013ರಂದು ನೊಂದಾಯಿಸಿರುವ Relinquishment Deed ಮುಖೇನ ಬಿ.ಬಿ.ಎಂ.ಪಿ ಗೆ ಹಸ್ತಾಂತರಿಸಿಕೊಂಡು ದಿನಾಂಕ:12-03-2013ರಂದು ಸದರಿ ಭೂ ಮಾಲೀಕರ ಹೆಸರಿನಲ್ಲಿ ನೀಡಿರುವ ಅಭಿವೃದ್ಧಿ ಹಕ್ಕು ಪ್ರಮಾಣ ಪತ್ರ (ಡಿ.ಆರ್.ಸಿ) ಗಳನ್ನು ಭೂ ಮಾಲೀಕರ ಜಿ.ಪಿ.ಎ. ದಾರರಿಗೆ ವಿತರಿಸಲಾಗಿರುತ್ತದೆ.

3. ಸರ್ಕಾರದ ಆದೇಶದಂತೆ ಬಿ.ಬಿ.ಎಂ.ಪಿ ಯು ಪ್ರಶ್ನಿತ ಜಮೀನಿನ ಭೂ ಮಾಲೀಕರ ಹೆಸರಿನಲ್ಲಿ ನೀಡಿದ್ದ ಡಿ.ಆರ್.ಸಿ ಗಳನ್ನು ಭೂ ಮಾಲೀಕರು ದಿನಾಂಕ:21-03-2013 ರಂದು ನೊಂದಾಯಿಸಿರುವ Deed of Conveyance of DRC ಮುಖೇನ ಮೆ|| ವೆಂಕಟೇಶ್ವರ ಡೆವಲಪರ್ಸ್ ಮತ್ತು ಮೆ|| ಬಾಲಾಜಿ ಇನ್‌ಫ್ರಾಸ್ಟ್ರಕ್ಚರ್ಸ್ ಮತ್ತು ಡೆವಲಪರ್ಸ್ ರವರಿಗೆ ವರ್ಗಾಯಿಸಿದ್ದು, ಸದರಿ ವರ್ಗಾವಣೆಯನ್ನು ಗಣನೆಗೆ ತೆಗೆದುಕೊಂಡು ದೃಢೀಕರಣಕ್ಕಾಗಿ ಡಿ.ಆರ್.ಸಿ ಖರೀದಿದಾರರು ಬಿ.ಬಿ.ಎಂ.ಪಿ ಯನ್ನು ಸಂಪರ್ಕಿಸಿದಾಗ, ಸದರಿ ಹಂತದವರೆಗೆ ಕೈಗೊಂಡಿರುವ ಎಲ್ಲಾ ಕ್ರಮಗಳು ಸರ್ಕಾರದ ಆದೇಶದನ್ವಯ ಪೂರಕವಾಗಿಲ್ಲವೆಂಬ ಅಂಶವನ್ನು ಗಮನಿಸಿ, ಆಯುಕ್ತರು, ಬಿ.ಬಿ.ಎಂ.ಪಿ ರವರು ಸದರಿ ಪ್ರಕರಣವನ್ನು ತಡೆ ಹಿಡಿದು ದಿನಾಂಕ:02-04-2013 ರಂದು ಡಿ.ಆರ್.ಸಿ ಅನ್ನು ರದ್ದುಪಡಿಸಿರುತ್ತಾರೆ.

4. ಬಿ.ಬಿ.ಎಂ.ಪಿ ಯು ಡಿ.ಆರ್.ಸಿ ನೀಡುವಲ್ಲಿ ಕೈಗೊಂಡಿರುವ ಕ್ರಮವನ್ನು ಸ್ಥಗಿತಗೊಳಿಸಿದ ಆಯುಕ್ತರ ಕ್ರಮವನ್ನು ಪ್ರಶ್ನಿಸಿ ಡಿ.ಆರ್.ಸಿ ಖರೀದಿದಾರರು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದ ಮುಂದೆ ರಿಟ್ ಪಿಟಿಷನ್ ಸಂ.30279-282/2013(LA-RES) ರಲ್ಲಿ ಮೊಕದ್ದಮೆ ಹೂಡಿದ್ದರು. ಮಾನ್ಯ ನ್ಯಾಯಾಲಯವು ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ W.P.30279-30282/2013 (LA-RES), ದಿನಾಂಕ:20-01-2014ರಲ್ಲಿ ಪ್ರಶ್ನಿತ ಜಮೀನುಗಳು ಈಗಾಗಲೇ ಬಿ.ಬಿ.ಎಂ.ಪಿ ಸ್ವಾಧೀನದಲ್ಲಿರುವುದರಿಂದ ಈಗಾಗಲೇ ವಿತರಿಸಿರುವ ಡಿ.ಆರ್.ಸಿ

ಗಳನ್ನು ಬಿ.ಬಿ.ಎಂ.ಪಿ.ಗೆ ಹಿಂತಿರುಗಿಸುವಂತೆ, ಸದರಿ ಪ್ರಕರಣವನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಬಿಎಂಐಸಿಎಪಿಎ ವತಿಯಿಂದ ಹೊಸದಾಗಿ ಡಿ.ಆರ್.ಸಿ ಗಳನ್ನು ನೀಡುವಂತೆ ಹಾಗೂ ಮೆ|| ವೆಂಕಟೇಶ್ವರ ಡೆವಲಪರ್ಸ್ ಮತ್ತು ಬಾಲಾಜಿ ಇನ್‌ಫ್ರಾಸ್ಟ್ರಕ್ಚರ್ಸ್ & ಡೆವಲಪರ್ಸ್ ರವರು ಸದರಿ ಡಿ.ಆರ್.ಸಿ ಅನ್ನು ಪ್ರಶ್ನಿತ ಜಮೀನಿನಿಂದ 25 ಕಿ.ಮೀ.ಗಳ ಪರಿವಿಧಿಯಲ್ಲಿ ಅಂದರೆ ಬಿಎಂಐಸಿಎಪಿಎ ಹಾಗು ಬಿ.ಬಿ.ಎಂ.ಪಿ ವ್ಯಾಪ್ತಿಯೊಳಗೆ ಉಪಯೋಗಿಸಿಕೊಳ್ಳಬಹುದೆಂದು ಆದೇಶಿಸಿರುತ್ತದೆ.

ಸದರಿ ಆದೇಶದಂತೆ ಪ್ರಾಧಿಕಾರವು ಕ್ರಮ ಜರುಗಿಸುವ ಸಂಬಂಧ ವಿಷಯವನ್ನು ದಿನಾಂಕ: 11-02-2014 ರಂದು ಜರುಗಿದ ಪ್ರಾಧಿಕಾರದ 39ನೇ ಸಾಮಾನ್ಯ ಸಭೆಯ ಹೆಚ್ಚುವರಿ ವಿಷಯ ಸಂಖ್ಯೆ 39.11.1ರಡಿ ಮಂಡಿಸಲಾಗಿ, ಸಭೆಯು ಕೆಳಕಂಡಂತೆ ಕ್ರಮ ವಹಿಸಲು ಸರ್ವಾನುಮತದಿಂದ ನಿರ್ಣಯಿಸಿರುತ್ತದೆ.

- ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನಂತೆ ಪ್ರಶ್ನಿತ ಜಮೀನು (ಈಗಾಗಲೇ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಟಿ.ಡಿ.ಆರ್ ನೀಡಿರುವ ವಿಸ್ತೀರ್ಣಕ್ಕೆ ಸೀಮಿತವಾದಂತೆ) ಈಗಾಗಲೇ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ವಾಧೀನದಲ್ಲಿರುವುದರಿಂದ ನ್ಯಾಯಾಲಯದ ಆದೇಶದಂತೆ ಈಗಾಗಲೇ ಪಾಲಿಕೆಯ ಸ್ವಾಧೀನಾನುಭವದಲ್ಲಿರುವ ಅಂಶವನ್ನು ಪರಿಗಣಿಸಿ ಜಮೀನಿನ ಸ್ವಾಧೀನತೆಯನ್ನು ಪಾಲಿಕೆಯಲ್ಲಿ ಮುಂದುವರಿಸಿಕೊಳ್ಳಲು ನೊಂದಾಯಿತ ತಿದ್ದುಪಡಿ ಪತ್ರದ ಮೂಲಕ ಸಹಮತವನ್ನು ನೀಡುವುದು.

- ನ್ಯಾಯಾಲಯದ ಆದೇಶದಂತೆ ಈ ಪ್ರಾಧಿಕಾರದ ವತಿಯಿಂದ ಟಿ.ಡಿ.ಆರ್ ಅನ್ನು ಅರ್ಜಿದಾರರಿಗೆ ನೀಡುವುದು.

- ಟಿ.ಡಿ.ಆರ್ ನೀಡಿದ ನಂತರ ಆಗುವ ವರ್ಗಾವಣೆ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ, ಎಲ್ಲಾ ಲೆಕ್ಕಾಚಾರದ ದಾಖಲೆಗಳನ್ನು ಪಾಲಿಕೆಯ ವತಿಯಿಂದ ನಿರ್ವಹಿಸುವುದು. ಒಂದು ವೇಳೆ ಬೆಂಗಳೂರು ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನಾ ಪ್ರದೇಶದಲ್ಲಿ ಟಿ.ಡಿ.ಆರ್ ಬಳಕೆಯಾಗುವ ಸಂದರ್ಭ ಬಂದಲ್ಲಿ, ಎರಡೂ ಸಂಸ್ಥೆಗಳಲ್ಲಿ ಟಿ.ಡಿ.ಆರ್ ದಾಖಲೆ ನಿರ್ವಹಿಸಿದಾಗ

ಆಗಬಹುದಾದ ಗೊಂದಲ ಮತ್ತು ದುರುಪಯೋಗವನ್ನು ತಡೆಗಟ್ಟುವ ಹಿನ್ನೆಲೆಯಲ್ಲಿ ಈ ಪ್ರಾಧಿಕಾರದ ನಿರಾಕ್ಷೇಪಣಾ ಪತ್ರದೊಂದಿಗೆ ಒಂದೇ ಸಂಸ್ಥೆಯಲ್ಲಿ ಅಂದರೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಎಲ್ಲಾ ಲೆಕ್ಕಾಚಾರಗಳನ್ನು ಹಾಗೂ ದಾಖಲೆಗಳನ್ನು ನಿರ್ವಹಿಸಲು ಪಾಲಿಕೆಯನ್ನು ಕೋರುವುದು.

ದಿನಾಂಕ:20-01-2014ರ ಮಾನ್ಯ ಉಚ್ಚ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಬಿ.ಬಿ.ಎಂ.ಪಿ.ಯು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ W.A.2272/2014, 2273/2014 & 1758-59/2015 (LA-RES) C/W W.A. 600-601/2014 & 1426-27/2014 (LA-RES) ದಾಖಲಿಸಿರುತ್ತದೆ. ಮಾನ್ಯ ನ್ಯಾಯಾಲಯವು ದಿನಾಂಕ: 13-08-2015ರಲ್ಲಿ ಬಿಬಿಎಂಪಿ & ಬಿಎಂಐಸಿಎಪಿಎ ಯು ಸೇರಿ ಪ್ರಕರಣದ ಬಗ್ಗೆ ಸೂಕ್ತ ಕ್ರಮ ಜರುಗಿಸುವಂತೆ ಸೂಚಿಸಿ ಸದರಿ ಅಪೀಲನ್ನು ಮುಕ್ತಾಯಗೊಳಿಸಿರುತ್ತದೆ. ಸದರಿ ಆದೇಶದ ವಿರುದ್ಧ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುತ್ತದೆ. ಮಾನ್ಯ ನ್ಯಾಯಾಲಯವು "We do not find any merit in these SLP, The same are accordingly dismissed" ಎಂದು ಆದೇಶಿಸಿರುತ್ತದೆ.

5. ಮೆ|| ವೆಂಕಟೇಶ್ವರ ಡೆವಲಪರ್ಸ್ ಹಾಗೂ ಮೆ|| ಬಾಲಾಜಿ ಇನ್‌ಫ್ರಾಸ್ಟ್ರಕ್ಚರ್ಸ್ ಮತ್ತು ಡೆವಲಪರ್ಸ್ ರವರು ಡಿ.ಆರ್.ಸಿ ನೀಡದಿರುವ ಬಗ್ಗೆ ದಿನಾಂಕ:26-07-2017ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಂಖ್ಯೆ: CCC No: 416/2017 ರಂತೆ Contempt Petition ದಾಖಲಿಸಿರುತ್ತಾರೆ.

ಬಿ.ಎಂ.ಐ.ಸಿ.ಎ.ಪಿ.ಎ ಯಿಂದ ಡಿ.ಆರ್.ಸಿ ನೀಡುವ ಬಗ್ಗೆ ವಿಷಯವನ್ನು ದಿನಾಂಕ: 01-08-2017 ರಂದು ಜರುಗಿರುವ ಪ್ರಾಧಿಕಾರದ 8ನೇ ವಿಶೇಷ ಸಭೆಯಲ್ಲಿ ಮಂಡಿಸಲಾಗಿದ್ದು, ಸಭೆಯು "ಟಿ.ಡಿ.ಆರ್ ನೀಡುವ ಕುರಿತು ಕ್ರಮಕೈಗೊಳ್ಳದಿದ್ದಲ್ಲಿ ನ್ಯಾಯಾಂಗ ನಿಂದನೆ ಆಗುವುದರಿಂದ, ಅಲ್ಲದೇ ನಿಂದನಾ ಪ್ರಕರಣವು ದಿನಾಂಕ:07-08-2017 ರಂದು ನ್ಯಾಯಾಲಯದಲ್ಲಿ ವಿಚಾರಣೆಗೆ ಬರುತ್ತಿರುವುದರಿಂದ, ಪ್ರಾಧಿಕಾರವು ಅತೀ ಜರೂರಾಗಿ ಸರ್ಕಾರದ ಅನುಮತಿ ಪಡೆದು, ಟಿ.ಡಿ.ಆರ್ ನೀಡುವುದು ಸೂಕ್ತವೆಂದು ನಿರ್ಣಯಿಸಿತು

.5...

ಹಾಗೂ ಸದರಿ ನಿರ್ಣಯವನ್ನು ಮಾನ್ಯ ನ್ಯಾಯಾಲಯದ ಗಮನಕ್ಕೆ ತಂದು ಪ್ರಕರಣವನ್ನು ಇತ್ಯರ್ಥಗೊಳಿಸಲು 15 ದಿನಗಳ ಕಾಲಾವಕಾಶ ಕೋರಲು ಸಹ ಸಭೆಯು ಸರ್ವಾನುಮತದಿಂದ ತೀರ್ಮಾನಿಸಿರುತ್ತದೆ ".

6. ಅದರಂತೆ, ದಿನಾಂಕ:02-08-2017 ರಂದು ಸರ್ಕಾರಕ್ಕೆ ಪತ್ರ ಬರೆಯಲಾಗಿ, ಸರ್ಕಾರವು ದಿನಾಂಕ:19-08-2017ರ ಪತ್ರದಲ್ಲಿ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 30279-282/2013 ರಲ್ಲಿ ದಿನಾಂಕ:20-01-2014ರಂದು ನೀಡಿರುವ ಆದೇಶವನ್ನು ಅನುಷ್ಠಾನಗೊಳಿಸುವಂತೆ ನಿರ್ದೇಶಿಸಿದ್ದ ಹಿನ್ನಲೆಯಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಪ್ರಸ್ತಾಪಿತ ಜಮೀನಿನ ಪೈಕಿ ರಸ್ತೆ ಸಂಪರ್ಕ ಹೊಂದಿದ್ದ 36ಎಕರೆ ಪ್ರದೇಶವನ್ನು (ಬಿ.ಬಿ.ಎಂ.ಪಿ ರವರು ಈಗಾಗಲೇ ಡಿ.ಆರ್.ಸಿ ನೀಡಿದ್ದ ಜಮೀನುಗಳು) ಮೆ|| ವೆಂಕಟೇಶ್ವರ ಡೆವಲಪರ್ಸ್ ಮತ್ತು ಮೆ|| ಬಾಲಾಜಿ ಇನ್‌ಫ್ರಾಸ್ಟ್ರಕ್ಚರ್ಸ್ ಮತ್ತು ಡೆವಲಪರ್ಸ್ ರವರಿಂದ Rectified Relinquishment Deed ಮುಖೇನ ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಂಡು ಸದರಿ ಜಮೀನಿಗೆ ಪ್ರಾಧಿಕಾರವು ದಿನಾಂಕ:19-08-2017ರಂದು ಡಿ.ಆರ್.ಸಿ ನೀಡಿರುತ್ತದೆ. ಉಳಿದಂತೆ 03ಎ-39ಗು ಜಮೀನಿಗೆ ರಸ್ತೆ ಸಂಪರ್ಕ ಒದಗಿಸದೆ ಇದ್ದ ಹಿನ್ನಲೆಯಲ್ಲಿ ಸದರಿ ವಿಸ್ತೀರ್ಣಕ್ಕೆ ಡಿ.ಆರ್.ಸಿ ನೀಡಿರುವುದಿಲ್ಲ. ನಂತರ, ಸದರಿ ಜಮೀನಿನ ಭೂ ಮಾಲೀಕರಾದ ಶ್ರೀ ಚಿರಾಗ್ ಜೆ. ಷಾ ರವರು ರಸ್ತೆ ಸಂಪರ್ಕ ಕಲ್ಪಿಸುವ ಉದ್ದೇಶದಿಂದ ಸರ್ವೆ ಸಂಖ್ಯೆ:385/4ರ 0ಎ-10ಗು ಜಮೀನನ್ನು ನೊಂದಾಯಿತ ಜಿಪಿಎ ಮುಖೇನ ಪಡೆದು ಡಿ.ಆರ್.ಸಿ ನೀಡುವಂತೆ ಕೋರಿದ್ದ ಹಿನ್ನಲೆಯಲ್ಲಿ ಪ್ರಾಧಿಕಾರದಿಂದ 03ಎ-39ಗು ಜಮೀನಿಗೆ ಡಿ.ಆರ್.ಸಿ ನೀಡುವ ಕುರಿತು ವಿಷಯವನ್ನು ದಿನಾಂಕ:01-02-2019 ರಂದು ಜರುಗಿದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ:59ರಲ್ಲಿ ಮಂಡಿಸಲಾಗಿ, ಸಭೆಯು "ಶ್ರೀ ಚಿರಾಗ್.ಜೆ.ಷಾ ರವರಿಗೆ ಕೊಡಿಯಾಲಕರೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:385/4ರ 0ಎ-10ಗು ಜಮೀನನ್ನು ಪ್ರಾಧಿಕಾರಕ್ಕೆ ಸರ್ಕಾರದ ಆದೇಶ ಸಂಖ್ಯೆ:ನಅಇ 280 ಎಂಎನ್‌ಜಿ 2011, ದಿನಾಂಕ: 03-01-2013ರ ಆದೇಶದಲ್ಲಿನ ಷರತ್ತು ಸಂಖ್ಯೆ:(i) ರನ್ವಯ ಸರ್ಕಾರದ ಅಧಿಸೂಚನೆ ಸಂಖ್ಯೆ:UDD 154 BEMRUPRA 2004, ದಿನಾಂಕ:18-01-2005ರಲ್ಲಿನ ಷರತ್ತುಗಳನ್ನು ಅನುಸರಿಸಿ ಪರಿತ್ಯಜನಾ ಪತ್ರದ ಮೂಲಕ ಹಸ್ತಾಂತರಿಸಲು ಜಿಪಿಎ ಹೊಂದಿರುವುದರಿಂದ,

ಪ್ರಾಧಿಕಾರವು ಸದರಿ ಜಮೀನನ್ನು ಪರಿತ್ಯಜನಾ ಪತ್ರದ ಮೂಲಕ ಪಡೆದುಕೊಂಡು ಸರ್ವೆ ಸಂಖ್ಯೆ:385/1ರ 01ಎ-11ಗು, 385/2ರ 01ಎ-15ಗು ಮತ್ತು ಸರ್ವೆ ಸಂಖ್ಯೆ:385/3ರ 01ಎ-13ಗು ಒಟ್ಟು 03ಎ-39ಗು ಜಮೀನಿಗೆ Terms and conditions for the grant of Transferable Development rights ರಲ್ಲಿನ ಷರತ್ತಿನಂತೆ ಡಿ.ಆರ್.ಸಿ ನೀಡಲು ಹಾಗೂ ಉಚ್ಚ ನ್ಯಾಯಾಲಯದ ತೀರ್ಪಿನಂತೆ ಸದರಿ ಜಮೀನುಗಳನ್ನು ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರಿಗೆ ಹಸ್ತಾಂತರಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿರುತ್ತದೆ". ಈ ಮಧ್ಯೆ ಡಿ.ಆರ್.ಸಿ. ಮತ್ತು ಟಿ.ಡಿ.ಆರ್ ನೀಡುವ ಕುರಿತು W.P No.21682/2019ರಂತೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಾಗಿ, ನಂತರ ದಿ:06-02-2020ರಂದು ವಜಾಗೊಂಡಿರುತ್ತದೆ. ಅದರಂತೆ ಬಿ.ಎಂ.ಐ.ಸಿ.ಎ.ಪಿ.ಎ ಯು 03ಎ-39ಗು ಜಮೀನಿಗೆ ಡಿ.ಆರ್.ಸಿ. ನೀಡುವ ಕುರಿತು ಮುಂದಿನ ಕ್ರಮವಹಿಸಲು ಸರ್ವೆ ನಕ್ಷೆ ಮತ್ತು ಇತರೆ ದಾಖಲೆಗಳನ್ನು ಒದಗಿಸುವಂತೆ ಭೂ ಮಾಲೀಕರಾದ ಶ್ರೀ ಚಿರಾಗ್ ಜೆ ಷಾ ರವರಿಗೆ ದಿನಾಂಕ:17-02-2020 ರಂದು ತಿಳಿಸಲಾಗಿರುತ್ತದೆ. ಸದರಿ ದಾಖಲೆಗಳನ್ನು ಒದಗಿಸಿದ ನಂತರ ಪರಶೀಲಿಸಿ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಬಿ.ಎಂ.ಐ.ಸಿ.ಎ.ಪಿ.ಎ ಯು ಡಿ.ಆರ್.ಸಿ ಕೋರಿರುವ 03ಎ-39ಗು ಜಮೀನನ್ನು ಮತ್ತು ರಸ್ತೆ ಸಂಪರ್ಕ ಕಲ್ಪಿಸುವ 10ಗು ಜಮೀನನ್ನು ಹಸ್ತಾಂತರ ಮಾಡಿಕೊಂಡು, ತದನಂತರ ಬಿ.ಎಂ.ಐ.ಸಿ.ಎ.ಪಿ.ಎ ವತಿಯಿಂದ ಡಿ.ಆರ್.ಸಿ. ನೀಡುವ ಕುರಿತು ಪರಿಶೀಲಿಸಲಾಗುವುದು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	680
ಸದಸ್ಯರ ಹೆಸರು	:	ಶ್ರೀ ಬಸವನಗೌಡ ದದ್ದಲ (ರಾಯಚೂರು ಗ್ರಾಮಾಂತರ)
ಉತ್ತರಿಸಬೇಕಾದ ದಿನಾಂಕ	:	13.03.2020
ಉತ್ತರಿಸಬೇಕಾದ ಸಚಿವರು	:	ನಗರಾಭಿವೃದ್ಧಿ ಸಚಿವರು.

****

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಯಚೂರು ನಗರದ ಮಂಚಲಾಪುರ ಮತ್ತು ಮರ್ಚಾಡ ಕೆರೆಗಳಿಗೆ ಕೊಳಚೆ ನೀರು ಹರಿದು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಹಾಗಿದ್ದಲ್ಲಿ, ಕೊಳಚೆ ನೀರನ್ನು ನೇರವಾಗಿ ಕೆರೆಗಳಿಗೆ ಹರಿಸುವುದರಿಂದ ಮಾಲಿನ್ಯ ಉಂಟಾಗಿ ನೀರು ಕಲುಷಿತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರವಾದ ಮಾಹಿತಿ ನೀಡುವುದು)	ಕೆರೆಗಳಿಗೆ ಕೊಳಚೆ ನೀರು ಹರಿಯುವುದರಿಂದ, ಮಾಲಿನ್ಯ ಉಂಟಾಗಿ ಕೆರೆಯ ನೀರು ಅಲ್ಪಪ್ರಮಾಣದಲ್ಲಿ ಕಲುಷಿತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ಕೆರೆಯ ಮೇಲ್ಭಾಗದ ಎಡಿಬಿ ನೆರವಿನ ಉತ್ತರ ಕರ್ನಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮದಡಿ ಎಕ್ಲಾಸ್‌ಪುರ ಪ್ರದೇಶದಲ್ಲಿ ಸುಮಾರು 70 ಕಿ.ಮೀ ಒಳಚರಂಡಿ ಕೊಳವೆ ಜಾಲವನ್ನು ಅಳವಡಿಸಿ 20 ಎಂ.ಎಲ್.ಡಿ ಜಲ ತ್ಯಾಜ್ಯ ಸಂಸ್ಕರಣ ಘಟಕ ನಿರ್ಮಿಸಿದೆ. ಈ ಪ್ರದೇಶದ ಬಾಗಶಃ ಜಲ ತ್ಯಾಜ್ಯವು ಎಸ್.ಟಿ.ಪಿ ಘಟಕಕ್ಕೆ ಹರಿದು ಬರುತ್ತದೆ. ತದನಂತರ, ಸಂಸ್ಕರಿಸಿದ ನೀರು ಮೇಲಿನ ಕೆರೆಗಳಿಗೆ ಹರಿದು ಸೇರುತ್ತದೆ. ಪೂರ್ಣ ಪ್ರಮಾಣದ ಜಲ ತ್ಯಾಜ್ಯವು ಸಂಸ್ಕರಣ ಘಟಕಕ್ಕೆ ಬರಬೇಕಾದರೆ ಇನ್ನು 100 ಕಿ.ಮೀ ಒಳಚರಂಡಿ ಕೊಳವೆ ಜಾಲವನ್ನು ನಿರ್ಮಿಸುವ ಅಗತ್ಯವಿರುತ್ತದೆ. ಹಣಕಾಸಿನ ಲಭ್ಯತೆಯ ಅನುಗುಣವಾಗಿ ಕ್ರಮ ಕೈಗೊಳ್ಳಲಾಗುವುದು.
ಇ)	ಬಂದಿದ್ದಲ್ಲಿ, ನೀರನ್ನು ಶುದ್ಧೀಕರಿಸಿ ಕೆರೆಗಳಿಗೆ ಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)	

ಸಂಖ್ಯೆ: ನಅಇ 47 ಯುಎಂಎಸ್ 2020

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

ಕರ್ನಾಟಕ ವಿಧಾನ ಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1727
2	ಸದಸ್ಯರ ಹೆಸರು	:	ಶ್ರೀ ಉಮಾನಾಥ. ಎ ಕೋಟ್ಯಾನ್ (ಮೂಡಬಿದ್ರೆ)
3	ಉತ್ತರಿಸುವ ದಿನಾಂಕ	:	13-03-2020
4	ಉತ್ತರಿಸುವವರು	:	ಮಾನ್ಯ ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಸರ್ಕಾರದ ಮುಖ್ಯಮಂತ್ರಿಯವರ ನವನಗರೋತ್ಥಾನ ಅನುಷ್ಠಾನದ ಯೋಜನೆಗಳಾವುವು; (ವಿವರ ನೀಡುವುದು)	ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎಸ್‌ವೈ 2018, ದಿನಾಂಕ: 20-09-2019 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಮುಖ್ಯಮಂತ್ರಿಗಳ ನವ ನಗರೋತ್ಥಾನ" ಯೋಜನೆಯಡಿ ರೂ.8015.37 ಕೋಟಿಗಳ ಅನುದಾನವನ್ನು ನಿಗಧಿಪಡಿಸಲಾಗಿರುತ್ತದೆ. ವಿವರಗಳು ಈ ಕೆಳಕಂಡಂತೆ ಇರುತ್ತವೆ.

SL No	Annexure No	Annexure Name	No of Works in Action Plan (GO)	Amount (Rs. In Crores)
1	1	Lakes Developments	68	317.25
2	2	Roads Developments	1953	4107.34
3	3	SWD Developments	171	1060.89
4	4	Constructions of Grade Separator	24	433.14
5	5	SWM	224	584.35
6	6	Buildings, Parks, Play Grounds, Hospital and etc.,	275	833.97
7	7	110 Villages, Roads Developments	101	364.09
8	8	ITPL 14th Roads Developments	14	80.00
9	9	NAL-Wind Tonal Road	1	65.00
10	10	Defense Land	8	74.00
11	11	Land Acquisition	1	50.00
12	12	BDA Works Handed over to BBMP	2	45.34
13	Additional Grants	Development of ORRCA Roads	-	250.00
14	Additional Grants	White topping of Selected Roads	-	50.00

15	Additional Grants	Purchase of Mechanical Sweeping Machines and Development of dry waste collection centres	-	25.00 + 3.50
		TOTAL	**2842**	**8343.87**

ಆ)	ಸದರಿ ಯೋಜನೆಯಡಿ ಪ್ರಥಮ ಹಂತದಲ್ಲಿ ಯೋಜನಾನುಷ್ಠಾನಕ್ಕೆ ಆಯ್ಕೆ ಮಾಡಿದ ನಗರಗಳಾವುವು;	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಪ್ರಥಮ ಹಂತದಲ್ಲಿ ಯೋಜನಾನುಷ್ಠಾನಕ್ಕೆ ಆಯ್ಕೆ ಮಾಡಲಾಗಿದೆ.
ಇ)	ನೂತನ ಯೋಜನಾನುಷ್ಠಾನದ ಪ್ರಗತಿ ಮತ್ತು ರಾಜ್ಯದ ಎಲ್ಲಾ ನಗರ ಪ್ರದೇಶಗಳ ಅಭಿವೃದ್ಧಿಯ ದಿಶೆಯಲ್ಲಿ ಮುನ್ನಡೆಸುವ ಕ್ರಿಯಾ ಯೋಜನೆಗಳಾವುವು? (ವಿವರ ನೀಡುವುದು)	(see below)

➢ **ನಗರೋತ್ಥಾನ (ಮುನಿಸಿಪಾಲಿಟಿ)-3ನೇ ಹಂತ:**

ನಗರೋತ್ಥಾನ (ಮುನಿಸಿಪಾಲಿಟಿ)-3ರ ಯೋಜನೆಯನ್ನು ರಾಜ್ಯದ 263 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅನುಷ್ಠಾನಗೊಳಿಸಲು ಒಟ್ಟು ರೂ.2890.00 ಕೋಟಿಗಳನ್ನು 2016-17ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಣೆ ಮಾಡಲಾಗಿದೆ. ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರದ ಆದೇಶ ಸಂಖ್ಯೆ: ನಅಇ/88/ಸಮಸ/2015, ದಿನಾಂಕ: 29-11-2016 ರಲ್ಲಿ ಹೊರಡಿಸಲಾಗಿರುವ ಮಾರ್ಗಸೂಚಿಗಳನ್ವಯ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

"ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆ"ಯಡಿ ರಾಜ್ಯದ 10 ಮಹಾನಗರ ಪಾಲಿಕೆಗಳಿಗೆ ಒಟ್ಟು ರೂ.1325.00 ಕೋಟಿಗಳ ಅನುದಾನವನ್ನು 2019-20ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಣೆ ಮಾಡಿರುತ್ತಾರೆ. ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರದ ಆದೇಶ ಸಂಖ್ಯೆ: ನಅಇ/47/ಎಸ್‌ಎಫ್‌ಸಿ/2019 ದಿನಾಂಕ: 07-08-2019 ರಲ್ಲಿ ಹೊರಡಿಸಲಾಗಿರುವ ಮಾರ್ಗಸೂಚಿಗಳನ್ವಯ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

➢ **15ನೇ ಹಣಕಾಸು ಆಯೋಗ:**

2020-21ನೇ ಸಾಲಿಗೆ ಕೇಂದ್ರ ಸರ್ಕಾರವು 15ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ರಾಜ್ಯಕ್ಕೆ ಒಟ್ಟು ರೂ.1549.00 ಕೋಟಿಗಳನ್ನು ಈ ಕೆಳಕಂಡಂತೆ ಹಂಚಿಕೆ ಮಾಡಿರುತ್ತದೆ.

(ರೂ. ಕೋಟಿಗಳಲ್ಲಿ)

ಸಾಲು	ಅನುದಾನ	ಬೃಹತ್ ಬೆಂಗಳೂರು ಮ.ನ.ಪಾ	ಇತರೆ ನಗರ ಸ್ಥಳೀಯ ಸಂಸ್ಥೆ	ಒಟ್ಟು
2020-21	15ನೇ ಹಣಕಾಸು ಅನುದಾನ	558.00	991.00	1549.00

		ನಗರ ಸ್ಥಳೀಯ ಸಂಸ್ಥೆಗಳಿಗೆ ಒಟ್ಟು ರೂ.1549.00 ಕೋಟಿಗಳನ್ನು ಹಂಚಿಕೆ ಮಾಡಲಾಗಿದ್ದು, ಸದರಿ ಅನುದಾನದಡಿ ನಗರಗಳ ಅವಶ್ಯಕತೆಗೆ ಅನುಗುಣವಾಗಿ ಮೂಲಸೌಕರ್ಯ ಕೊರತೆ ನೀಗಿಸಲು ಲಭ್ಯವಿರುವ ಅನುದಾನವನ್ನು ಬಳಸಿಕೊಂಡು ನಗರ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತದೆ. ➢ ಎಫ್.ಎಸ್.ಎಸ್.ಎಮ್(ಕಲ್ಮಷ ತ್ಯಾಜ್ಯ ವಿಲೇವಾರಿ) ಯೋಜನೆ: ಕಲ್ಮಷ ತ್ಯಾಜ್ಯ ಸಂಸ್ಕರಿಸುವ ಘಟಕಗಳನ್ನು (Faecal Sludge Treatment Plant) ರಾಜ್ಯದಲ್ಲಿ ಒಳಚರಂಡಿ ವ್ಯವಸ್ಥೆ ಹೊಂದಿರದ 07 ನಗರ ಸಭೆ, 21 ಪುರಸಭೆ ಹಾಗೂ 22 ಪಟ್ಟಣ ಪಂಚಾಯತ್‌ಗಳನ್ನು ಒಳಗೊಂಡಂತೆ ಆಯ್ದ ಐವತ್ತು (50) ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ಒಳಚರಂಡಿ ವ್ಯವಸ್ಥೆ ಹೊಂದಿರದ ಇನ್ನುಳಿದ ಪುರಸಭೆ ಮತ್ತು ಪಟ್ಟಣ ಪಂಚಾಯತ್‌ಗಳ ವ್ಯಾಪ್ತಿಯಲ್ಲಿ ಮೂರು ವರ್ಷಗಳಲ್ಲಿ ಹಂತ-ಹಂತವಾಗಿ ಅನುಷ್ಠಾನಗೊಳಿಸಲು ಯೋಜಿಸಲಾಗಿದೆ. ➢ ರಾಜ್ಯ ಹಣಕಾಸು ಆಯೋಗದ ಅನುದಾನ: ರಾಜ್ಯ ಹಣಕಾಸು ಆಯೋಗದ ಅನುದಾನದ ಯೋಜನೆಗಳನ್ನು ಮಾರ್ಗಸೂಚಿಯಂತೆ ವಾರ್ಷಿಕ ಕ್ರಿಯಾಯೋಜನೆಗಳನ್ನು ತಯಾರಿಸಿ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುವುದು.

ಸಂಖ್ಯೆ: ನಅಇ 48 ಎಂಎನ್‌ವೈ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	122
ಸದಸ್ಯರ ಹೆಸರು	:	ಶ್ರೀ ಬಾಲಕೃಷ್ಣ ಸಿ.ಎನ್ (ಶ್ರವಣಬೆಳಗೊಳ)
ಉತ್ತರಿಸಬೇಕಾದ ದಿನಾಂಕ	:	13-03-2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ಕಳೆದ ಸಾಲಿನಲ್ಲಿ ರಾಜ್ಯ ಸರ್ಕಾರ ಎಸ್.ಎಫ್.ಸಿ ಯಡಿ ನಿಗಧಿಪಡಿಸಿ ಬಿಡುಗಡೆ ಮಾಡಿದ ಅನುದಾನದ ಮೊತ್ತವೆಷ್ಟು; (ವಿಧಾನಸಭಾ ಕ್ಷೇತ್ರವಾರು ಸಂಪೂರ್ಣ ಮಾಹಿತಿ ನೀಡುವುದು)	2018-19ನೇ ಸಾಲಿನಲ್ಲಿ ಸರ್ಕಾರ ಎಸ್.ಎಫ್.ಸಿ ಮುಕ್ತನಿಧಿ, ಎಸ್.ಎಫ್.ಸಿ ಕುಡಿಯುವ ನೀರು ಹಾಗೂ ಎಸ್.ಎಫ್.ಸಿ ವಿಶೇಷ ಅನುದಾನಗಳಡಿ ನಿಗಧಿಪಡಿಸಿ ಬಿಡುಗಡೆ ಮಾಡಿದಅನುದಾನದ ವಿವರಗಳನ್ನು ನಗರ ಸ್ಥಳೀಯ ಸಂಸ್ಥೆವಾರು **(ಅನುಬಂಧ-1)**ರಲ್ಲಿ ಲಗತ್ತಿಸಿ ಸಲ್ಲಿಸಿದೆ.
(ಆ)	ಹಾಗಿದ್ದಲ್ಲಿ, ಎಷ್ಟು ಪ್ರಮಾಣದ ಅನುದಾನವನ್ನು ಬಿಡುಗಡೆ ಮಾಡಲಾಯಿತು;	ಎಸ್.ಎಫ್.ಸಿ ಮುಕ್ತನಿಧಿ ಅನುದಾನದಡಿ ಬಿಡುಗಡೆಗೊಳಸಲಾದ ಅನುದಾನದ ಪ್ರಮಾಣ - ಶೇ 75.56 ಎಸ್.ಎಫ್.ಸಿ ವಿಶೇಷ ಅನುದಾನದಡಿ ಬಿಡುಗಡೆಗೊಳಸಲಾದ ಅನುದಾನ ಪ್ರಮಾಣ - ಶೇ 12.43 ಎಸ್.ಎಫ್.ಸಿ ಕುಡಿಯುವ ನೀರುಅ ನದಾನದಡಿ ಬಿಡುಗಡೆಗೊಳಸಲಾದ ಅನುದಾನದ ಪ್ರಮಾಣ - ಶೇ 100
(ಇ)	ಹಾಗಿಲ್ಲದಿದ್ದಲ್ಲಿ ಎಸ್.ಎಫ್.ಸಿ ಯಡಿಯಲ್ಲಿ ನೀಡಿದ ಅನುದಾನವನ್ನು ತಡೆಹಿಡಿದಿರುವುದು ನಿಜವೇ; ಹಾಗಿದ್ದಲ್ಲಿ ಕಾರಣಗಳೇನು; (ವಿವರಗಳನ್ನು ನೀಡುವುದು)	ನಗರಾಭಿವೃದ್ಧಿ ಇಲಾಖೆಯಿಂದ ಮಂಜೂರಾಗಿರುವ ಎಸ್.ಎಫ್.ಸಿ ವಿಶೇಷ ಅನುದಾನದಡಿ ಕೈಗೊಳ್ಳುವ ಕಾಮಗಾರಿಗಳು ಇನ್ನೂ ಪ್ರಾರಂಭವಾಗಬೇಕಾಗಿರುವುದರ ಹಿನ್ನೆಲೆಯಲ್ಲಿ ಈಗಾಗಲೇ ಮಂಜೂರು ಮಾಡಲಾಗಿದ್ದ ಅನುದಾನದಲ್ಲಿ ಆರ್ಥಿಕ ಇಲಾಖೆಯು ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 551 ವೆಚ್ಚ-9, ದಿನಾಂಕ:04-09-2019 ರಲ್ಲಿ ನೀಡಿರುವ ನಿರ್ದೇಶದನ್ವಯ ರೂ.642.00ಕೋಟಿ ಅನುದಾನವನ್ನು ತಡೆಹಿಡಿದು ಆದೇಶಿಸಲಾಗಿದೆ. ಆದೇಶದ ಪ್ರತಿಗಳನ್ನು **(ಅನುಬಂಧ-2)**ರಲ್ಲಿ ಲಗತ್ತಿಸಿ ಸಲ್ಲಿಸಿದೆ.
(ಈ)	ಹಾಗಿದ್ದಲ್ಲಿ ತಡೆಹಿಡಿದಿರುವ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;	ತಡೆಹಿಡಿಯಲಾಗಿದ್ದ ರೂ.642.00 ಕೋಟಿ ಅನುದಾನದ ಪೈಕಿ ರೂ.215.50 ಕೋಟಿಗಳನ್ನು ಮುಂದುವರೆಸಿ ಆದೇಶಿಸಲಾಗಿರುತ್ತದೆ. ವಿವರಗಳನ್ನು **ಅನುಬಂಧ-3**ರಲ್ಲಿ ಲಗತ್ತಿಸಿದೆ. ಸದರಿ ಮೊತ್ತವನ್ನು ಕಾಮಗಾರಿಗಳ ಪ್ರಗತಿಯನುಸಾರ ಬಿಡುಗಡೆಗೊಳಸಲು ಕ್ರಮವಹಿಸಲಾಗುವುದು.
(ಉ)	ಯಾವ ಕಾಲ ಮಿತಿಯೊಳಗಾಗಿ ಬಿಡುಗಡೆ ಮಾಡಲಾಗುವುದು? (ವಿವರ ನೀಡುವುದು)	

ಕಡತ ಸಂಖ್ಯೆ: ನಅಇ 95 ಎಸ್.ಎಫ್.ಸಿ 2020

(ನಾರಾಯಣ ಗೌಡ)
ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು
ರೇಷ್ಮೆ ಸಚಿವರು.

Annexure - 01

ABSTRACT REPORT						
SFC UNTIED 2018-19 PROGRAMME						
Date=18-02-2020					Rs. in Lakhs	
SL.NO	District	Name Of the Town	ULB Type	YEAR	Grants Allocation	Grants Released
1	Bagalkote	Aminagad	TP	2018-19	62	38.5
2	Bagalkote	Badami	TMC	2018-19	129	104.5
3	Bagalkote	Bagalkote	CMC	2018-19	494	395.76
4	Bagalkote	Belagali	TP	2018-19	104	84.25
5	Bagalkote	Bilagi	TP	2018-19	52	32.5
6	Bagalkote	Guledagudda	TMC	2018-19	121	75
7	Bagalkote	Hunagunda	TP	2018-19	93	57.5
8	Bagalkote	Ilkal	CMC	2018-19	231	143.5
9	Bagalkote	Jamakhandi	CMC	2018-19	247	193.41
10	Bagalkote	Kamatagi	TP	2018-19	78	63
11	Bagalkote	Kerur	TP	2018-19	85	61.66
12	Bagalkote	Mahalingapura	TMC	2018-19	173	107.5
13	Bagalkote	Mudhol	TMC	2018-19	281	193.81
14	Bagalkote	RabkaviBanahatti	CMC	2018-19	300	186
15	Bagalkote	Terdal	TMC	2018-19	125	101.25
16	Ballari	Ballari	CC	2018-19	1645.42	1327.54
17	Ballari	Hagaribommanahalli	TMC	2018-19	266.42	165.5
18	Ballari	Harapanahalli	TMC	2018-19	207.32	128.5
19	Ballari	HoovindaHadagalli	TMC	2018-19	136.02	105.19
20	Ballari	Hosapete	CMC	2018-19	985	798
21	Ballari	Kamalapura	TP	2018-19	262.67	163
22	Ballari	Kampli	TMC	2018-19	237.34	192
23	Ballari	Kottur	TP	2018-19	213	172.43
24	Ballari	Kudathini	TP	2018-19	115.39	71.5
25	Ballari	Kudligi	TP	2018-19	229.83	185.93
26	Ballari	Kurekuppa	TMC	2018-19	141.65	115
27	Ballari	Kurugodu	TMC	2018-19	257.04	159.5
28	Ballari	Mariyammanahalli	TP	2018-19	100	62
29	Ballari	Sandoor	TMC	2018-19	224.21	181.42
30	Ballari	Siruguppa	CMC	2018-19	347.1	215.5
31	Ballari	Tekkalakote	TP	2018-19	288.93	234.25
32	Belagavi	Ainapur	TP	2018-19	125.71	102.25
33	Belagavi	Arabhavi	TP	2018-19	85	69

ABSTRACT REPORT						
SFC UNTIED 2018-19 PROGRAMME						
Date=18-02-2020					Rs. in Lakhs	
SL.NO	District	Name Of the Town	ULB Type	YEAR	Grants Allocation	Grants Released
34	Belagavi	Athani	TMC	2018-19	217.64	176.5
35	Belagavi	Bailahongal	TMC	2018-19	187	116
36	Belagavi	Belagavi	CC	2018-19	1468.12	1189.5
37	Belagavi	Boragaon	TP	2018-19	163.23	132
38	Belagavi	Chennamman Kittur	TP	2018-19	68.48	55.25
39	Belagavi	Chikkodi	TMC	2018-19	187.62	116.5
40	Belagavi	Chinchali	TP	2018-19	101.31	81.75
41	Belagavi	Examba	TP	2018-19	170.73	138.5
42	Belagavi	Gokak	CMC	2018-19	348.03	282
43	Belagavi	Harugeri	TMC	2018-19	281.43	227.75
44	Belagavi	Hukkeri	TP	2018-19	91	73.75
45	Belagavi	Kabbur	TP	2018-19	117.26	94.75
46	Belagavi	Kallolli	TP	2018-19	96	59.5
47	Belagavi	Kankanawadi	TP	2018-19	169.8	137.75
48	Belagavi	Khanapura	TP	2018-19	64.73	52.5
49	Belagavi	Konnur	TP	2018-19	141	114.25
50	Belagavi	Kudachi	TP	2018-19	88.18	71.25
51	Belagavi	M.K.Hubballi	TP	2018-19	75.05	46.5
52	Belagavi	Mallapur PG	TP	2018-19	88.18	71.25
53	Belagavi	Mudalagi	TMC	2018-19	135.09	109.25
54	Belagavi	Mugalkhod	TP	2018-19	227.96	141.5
55	Belagavi	Munavalli	TMC	2018-19	120.08	97.25
56	Belagavi	Naganur	TP	2018-19	156	97
57	Belagavi	Nippani	CMC	2018-19	247.66	200.75
58	Belagavi	Raibagh	TP	2018-19	85	69
59	Belagavi	Ramadurga	TMC	2018-19	143.53	112.66
60	Belagavi	Sadalga	TMC	2018-19	117.26	94.75
61	Belagavi	Sankeshwar	TMC	2018-19	129	98.02
62	Belagavi	Saundatti	TMC	2018-19	161.35	130.5
63	Belagavi	Shedbal	TP	2018-19	242.03	150.5
64	Belagavi	Ugar Khurd	TMC	2018-19	152.91	124
65	Bengaluru Rural	Devanahalli	TMC	2018-19	196	159
66	Bengaluru Rural	Doddaballapur	CMC	2018-19	233	188.75

ಅನುಬಂಧ - 2

ಕರ್ನಾಟಕ ಸರ್ಕಾರ

ಸಂಖ್ಯೆ:ನಅಇ 222 ಎಸ್‌ಎಫ್‌ಸಿ 2019

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 13-09-2019.

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ಬೆಂಗಳೂರು.

ಇವರಿಗೆ,
ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.

ಮಾನ್ಯರೇ,

ವಿಷಯ: ನಗರಾಭಿವೃದ್ಧಿ ಇಲಾಖೆಯಿಂದ ಮಂಜೂರಾಗಿರುವ ಎಸ್.ಎಫ್.ಸಿ ವಿಶೇಷ ಅನುದಾನದಡಿ ಇನ್ನೂ ಆರಂಭವಾಗಬೇಕಾಗಿರುವ ಕಾಮಗಾರಿಗಳನ್ನು ತಡೆಹಿಡಿಯುವ ಕುರಿತು.

ಉಲ್ಲೇಖ: ಆರ್ಥಿಕ ಇಲಾಖೆಯು ಅನಧಿಕೃತ ಟಿಪ್ಪಣಿ ಸಂಖ್ಯೆ:ಆಇ 651ವೆಚ್ಚ-9/2019, ದಿನಾಂಕ: 04-09-2019.

*****

ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳಿಗಾಗಿ ಮಂಜೂರು ಮಾಡಿರುವ ಎಸ್.ಎಫ್.ಸಿ ವಿಶೇಷ ಅನುದಾನ ರೂ.64265.50 ಲಕ್ಷಗಳಡಿ ಕೈಗೊಳ್ಳುವ ಕಾಮಗಾರಿಗಳು ಇನ್ನೂ ಪ್ರಾರಂಭವಾಗಬೇಕಾಗಿರುವುದರ ಹಿನ್ನೆಲೆಯಲ್ಲಿ ಸದರಿ ಅನುದಾನದಡಿ ಕೈಗೊಳ್ಳುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮುಂದಿನ ಆದೇಶದವರೆಗೆ ಯಾವುದೇ ಕ್ರಮಕೈಗೊಳ್ಳದಂತೆ ಉಲ್ಲೇಖಿತ ಅನಧಿಕೃತ ಟಿಪ್ಪಣಿಯಲ್ಲಿ ಆರ್ಥಿಕ ಇಲಾಖೆಯು ತಿಳಿಸಿರುತ್ತದೆ.

ಆರ್ಥಿಕ ಇಲಾಖೆಯ ನಿರ್ದೇಶನದನ್ವಯ ನಗರಾಭಿವೃದ್ಧಿ ಇಲಾಖೆಯಿಂದ ಈ ಕೆಳಕಂಡ ಪಟ್ಟಿಯ ಕಲಂ. 4ರಲ್ಲಿ ತಿಳಿಸಿರುವ ಸರ್ಕಾರದ ಆದೇಶ / ಪತ್ರಗಳಲ್ಲಿ ಮಂಜೂರು ಮಾಡಲಾಗಿರುವ ಎಸ್.ಎಫ್.ಸಿ ವಿಶೇಷ ಅನುದಾನವನ್ನು ತಡೆ ಹಿಡಿಯಲಾಗಿದೆ ಎಂದು ತಮಗೆ ತಿಳಿಸಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

(in Rs. Lakhs)

Sl. No.	Name of the ULB/Constituency	Approved Amt.	Order No/ UO Note NO	Government Order / letter No.
	1	2	3	4
1	Arasikere CMC	500.00	FD 780 Exp-9/18, dated:17-12-2018	ನಅಇ 225 ಎಸ್‌ಎಫ್‌ಸಿ 2018, ದಿ:07-01-2019
2	Dasarhalli Constituency	3000.00	FD 780 Exp-9/18, dated:17-12-2018	ನಅಇ 225 ಎಸ್‌ಎಫ್‌ಸಿ 2018, ದಿ:07-01-2019
3	Mahalaxmi layout Constituency	2500.00	FD 780 Exp-9/18, dated:17-12-2018	ನಅಇ 225 ಎಸ್‌ಎಫ್‌ಸಿ 2018, ದಿ:07-01-2019
4	Channarayapatna TMC	500.00	FD 10 Exp-9/19, dated:01-01-2019	ನಅಇ 03 ಎಸ್‌ಎಫ್‌ಸಿ 2019, ದಿನಾಂಕ:09-01-2019
5	Holenarasipura TMC	800.00	FD 43 Exp-9/19, dated:01-01-2019	ನಅಇ 03 ಎಸ್‌ಎಫ್‌ಸಿ 2019, ದಿನಾಂಕ:09-01-2019

6	Holenarasipura TMC	200.00	FD 666 Exp-9/18, dated:20-11-2018	[illegible]
